ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 30, 2013 ಪುಟ 20 ರೂ. 14/-



ಬಿದರಿ ನಡಿಗೆ ಕಾಂಗ್ರೆಸ್ ಕಡೆಗೆ




ಮುಳ್ಳಿನ ಗದ್ದುಗೆ





ಅಂಬಿಯ ಕಬಡ್ಡಿ ಕಪ್ಪು-ಚಿಪ್ಪು

ಮಕೂರು: ಜಾತಿ ರಾಜಕಾರಣದ ಬಳಸುಳಿ



ಕುಂದಾಪುರ

ಹಾಲಾಡಿ ಶೆಟ್ಟರ ಚಿತ್ತ ಎತ್ತ?

ಹಾವೇರಿ

ಯಡ್ಡಿ ಶಿಷ್ಯರಿಗೆ ಅತಂತ್ರ ಪರಿಸ್ಥಿತಿ



ಚನ್ನಪಟ್ಟಣ

ಯೋಗಿ ನಕಲಿ ತ್ಯಾಗಿ

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್

ಅರೌಕಾರಿಯಾ ಸಾವಿನೊಂದಿಗೆ ಸರಸ




ಇಂಗ್ಲೆಂಡಿನ ಪ್ರಖ್ಯಾತ ದಿನಪತ್ರಿಕೆ 'ದಿ ಗಾರ್ಡಿಯನ್'ನಲ್ಲಿ ಪದಬಂಧ ರಚಿಸುತ್ತಿರುವ ಅರೌಕಾರಿಯಾಗೆ ಈಗ ಕ್ಯಾನ್ಸರ್ ಆಗಿದೆ. ಕಳೆದ ಐವತ್ತು ವರ್ಷಗಳಿಂದ ಗಾರ್ಡಿಯನ್ ಓದುಗರಿಗೆ ಪದಬಂಧದ ಸವಾಲು ನೀಡುತ್ತಿದ್ದ ಅರೌಕಾರಿಯಾ ತನ್ನ ದೇಹದಲ್ಲಿ ಕಾಣಿಸಿಕೊಂಡಿರುವ ಕ್ಯಾನ್ಸರ್ ಬಗ್ಗೆ ಓದುಗರಿಗೆ ತಿಳಿಸಲು ಪದಬಂಧವನ್ನೇ ಆರಿಸಿಕೊಂಡು ಈಗ ಸುದ್ದಿಯಾಗಿದ್ದಾನೆ.

'ನಾನು ಇನ್ನು ಹೆಚ್ಚು ದಿನ ನಿಮ್ಮೊಂದಿಗೆ ಇರಲಾರೆ ಎನ್ನುವುದನ್ನು ತಿಳಿಸಲು ನನಗೆ ಇದಕ್ಕಿಂತ ಉತ್ತಮ ದಾರಿ ಇರಲಿಲ್ಲ' ಎಂದಿರುವ ಅರೌಕಾರಿಯಾಗೆ ಈಗ 91 ವರ್ಷ. ತನ್ನ ಪದಬಂಧದಲ್ಲಿ ತನ್ನನ್ನೇ ಕುರಿತ ಒಂದು ಪ್ರಶ್ನೆಗೆ 'ಕ್ಯಾನ್ಸರ್' ಪದ ಉತ್ತರವಾಗಿರುವಂತೆ ಮಾಡಿ ಓದುಗರೆಲ್ಲಾ ಕರಗಿ ದುಃಖ, ವಿಷಾದದ ಭಾವನೆ ತಳೆಯುವಂತೆ ಮಾಡಿರುವ ಈ ಅಜ್ಜ ನಿಶ್ಶಬ್ದದ ನಗೆ ಬೀರುತ್ತಾ "ನನಗೆ ಇನ್ನು ಕೆಲವು ತಿಂಗಳ ಬದುಕು ಮಾತ್ರ ಉಳಿದಿದೆ ಮಿತ್ರರೆ" ಎನ್ನುತ್ತಿದ್ದಾನೆ.

ತನ್ನ ಯೌವ್ವನದ ದಿನಗಳಲ್ಲಿ ಕ್ರಿಶ್ಚಿಯನ್ ಪಾದ್ರಿಯಾಗಿದ್ದು ನಂತರ 2ನೇ ವಿಶ್ವ ಯುದ್ಧದಲ್ಲಿ ಯುದ್ಧ ವಿಮಾನದ ಪೈಲೆಟ್ ಆಗಿ ವಿಭಿನ್ನ ಜೀವನಾನುಭವ ಪಡೆದ ಅರೌಕಾರಿಯಾನ ಅಸಲಿ ಹೆಸರು ರೆವರೆಂಡ್ ಜಾನ್ ಗ್ರಹಾಂ. ಓದಿದ್ದು ಬೋಧಿಸಿದ್ದು, ಧರ್ಮಶಾಸ್ತ್ರವಾದರೂ ಪದಗಳಲ್ಲಿ ಆಟವಾಡುವ ಕೆಲಸ ಆರಿಸಿಕೊಂಡ ಗ್ರಹಾಂ ಆಗಿನ ಎಲ್ಲಾ ಪದಬಂಧಕಾರರಂತೆಯೇ ಒಂದು **Pseudonym** ಆರಿಸಿಕೊಂಡು ಅರೌಕಾರಿಯಾ ಎಂದು ಹೆಸರಿಟ್ಟುಕೊಂಡ. ತನ್ನ ಕ್ರಾಸ್‌ವರ್ಡ್ ರಚನೆಯ ಕೆರಿಯರ್‌ನುದ್ದಕ್ಕೂ ಓದುಗರನ್ನು ಸೋಲಿಸುತ್ತಲೇ ಬಂದಿದ್ದ ಅರೌಕಾರಿಯಾ ಈಗ ತನ್ನದೇ ಬದುಕಿನ ಕೊನೆಯ ಸೋಲಿಗೆ ರೆಡಿಯಾಗುತ್ತಿದ್ದಾನೆ.

ತನಗಾಗಿರುವ ಅನಾರೋಗ್ಯ ಹಾಗೂ ಮನೆ ಬಾಗಿಲ ಬಳಿ ಬಂದು ನಿಂತಿರುವ ಸಾವನ್ನು ಕುರಿತು ಹೀಗೆ ಸ್ವಲ್ಪ ತಮಾಷೆಯಾಗಿ ನಿರೂಪಿಸುವ ಅನೌಕಾರಿಯಾನ ಮನೋಸ್ಥೈರ್ಯವನ್ನು ಮೆಚ್ಚಲೇಬೇಕು. ನಮ್ಮ ನೆಲದ ಪುರಾಣ ಕತೆಯಲ್ಲಿ ಬರುವ ಸಾವಿತ್ರಿ ತನ್ನ ಪತಿ ಸತ್ಯವಾನನನ್ನು ಬದುಕಿಸಿಕೊಳ್ಳಲು ಯಮನೊಂದಿಗೆ ನಡೆಸುವ ಪ್ರಶ್ನೋತ್ತರ ಪ್ರಸಂಗ ಹಾಗೂ ಅದರಲ್ಲಿ ಸಾವಿತ್ರಿಯೇ ಗೆಲ್ಲುವ ಕತೆಯನ್ನು ಇಲ್ಲಿ ಕಲ್ಪಿಸಿಕೊಂಡರೆ ಅರೌಕಾರಿಯಾಗೂ ಅಂತಹದ್ದೊಂದು ಅವಕಾಶ ಸಿಕ್ಕರೆ ಈ ಪದ ಪಂಡಿತ ಖಂಡಿತಾ ಸಾವಿನ ದೂತರನ್ನು ಸೋಲಿಸಿರುತ್ತಿದ್ದನೇನೊ!

ಖೇಣಿಗೆ ಏಟಿನ ಬೋಣಿ



ಅರವತ್ತು ಪ್ಲಸ್ ವರ್ಷವಾಗಿರಬಹುದಾದ ನೈಸ್ ಭೂಗಳ್ಳ ಅಶೋಕ್ ಖೇಣಿಗೆ ಮೊನ್ನೆ ಏಟು ಬಿದ್ದಿದೆ. ಈ ತರ ಖೇಣಿಗೆ ಲಾತ ಕೊಟ್ಟವರು ದೇವೇಗೌಡರ ಜನ ಅಂತಲೂ ಸುದ್ದಿಯಿದೆ.

ಆದಿಚುಂಚನಗಿರಿ ಮಠಾಧೀಶ ಬಾಲಗಂಗಾಧರನಾಥ ಸ್ವಾಮಿಯವರ ಬದುಕಿನ ಕೊನೆಯ ನಿಮಿಷಗಳಲ್ಲಿ ಅವರನ್ನು ನೋಡಲು ದೇವೇಗೌಡರು ಹೋಗಿದ್ದಾಗ ಅಲ್ಲೇ ಎದುರಿಗೆ ಸಿಕ್ಕ ಖೇಣಿ ಸುಮ್ಮನಿರಲಾಗದೆ "ಏನ್ ಗೌಡ್ರೆ, ಇಲ್ಲೂ ರಾಜಕೀಯ ಮಾಡಕ್ ಬಂದ್ರಾ?" ಅಂತಾ ಒಂದು ತರಲೆ ಮಾತಾಡಿದನಂತೆ.


ಯಾವ ಸಮಯದಲ್ಲಿ ಏನು ಮಾತಾಡಬೇಕು ಎನ್ನುವ ಸೂಕ್ಷ್ಮವನ್ನೇ ತಿಳಿಯದ ಪೆದ್ದು ಶಿಖಾಮಣಿ ಖೇಣಿಯ ಮಾತು ಕೇಳಿದರೆ ಯಾರಿಗೆ ತಾನೆ ಸಿಟ್ಟು ಬರುವುದಿಲ್ಲ ಹೇಳಿ?

ಯಥೇಚ್ಛವಾಗಿ ವಯಸ್ಸಾಗಿದ್ದರೂ ಇನ್ನೂ ಶಾಲಾ ಬಾಲಕನ IQ ಹೊಂದಿರುವಂತೆ ಕಾಣುವ ಖೇಣಿ ಬೆಂಗಳೂರಲ್ಲಿ ಒದೆ ತಿಂದಮೇಲೆ ತುಮಕೂರಿಗೆ ಹೋಗಿ 'ಮೀಸಲಾತಿ ಪದ್ಧತಿಯಿಂದ ಅಯೋಗ್ಯರಿಗೆಲ್ಲಾ ಉತ್ತಮ ಸ್ಥಾನ ಸಿಗುವಂತಾಗಿ ಹೋಗಿದೆ. ಇದು ಸರಿಯಲ್ಲ' ಎಂದು ಇನ್ನೊಮ್ಮೆ ಲಾತ ತಿನ್ನಬಹುದಾದ ಅಹಂಕಾರದ ಮಾತಾಡಿದ್ದಾನೆ. ಇದಕ್ಕೂ ಮುನ್ನ ಬೀದರ್‌ನಲ್ಲೊಂದು ಭಾಷಣ ಮಾಡುತ್ತಾ "ನಾನೊಂದು ಸಾರಿ ಸತ್ತುಹೋಗಿದ್ದೆ. ಆದರೆ ದೇವರಿಗೆ ಈ ವಿಚಾರ ಗೊತ್ತಾಗಿ ಅವನು ಬಂದು 'ನೀನು ಭೂಲೋಕದಲ್ಲಿ ಸಾಧಿಸಬೇಕಾದ್ದು ಇನ್ನೂ ತುಂಬಾ ಇದೆ' ಅಂತ ಹೇಳಿ 3 ದಿನದ ನಂತರ ವಾಪಸ್ ಕಳುಹಿಸಿದ" ಎಂದು ಹೇಳಿಕೊಂಡಿದ್ದ. ಪಾಪ ಆ ದೇವರು ಖೇಣಿಗೆ ಒದೆ ತಿನ್ನದಂತೆ ಬದುಕುವ ಹಾಗೂ ಮಾತನಾಡುವ ವಿಧಾನ ಕಲಿಸದೆ ವಾಪಸ್ ಕಳಿಸಿರುವುದು ವಿಷಾದನೀಯ.

ನಾವೆಲ್ಲಾ ಖೇಣಿಯ ಲಾತ ಪ್ರಕರಣವನ್ನು ಖಂಡಿಸಬೇಕಿದೆ. ಅಲ್ಲದೆ ಮುಂದೆ ಬೀಳಬಹುದಾದ ಏಟುಗಳನ್ನು ಈಗಲೇ ಖಂಡತುಂಡವಾಗಿ ಖಂಡಿಸುತ್ತಾ ಖೇಣಿ ನೀಡಬಹುದಾದ ರಂಜನೆಗಾಗಿ ಕಾಯಬೇಕಿದೆ.

ಮೌಲಾನಾ ಹುಸೇನ್ ಉಮರ್‌ಜಿಗೆ ವಿದಾಯ

ಗುಜರಾತಿನ ಪ್ರಖ್ಯಾತ ಮುಸ್ಲಿಂ ಧರ್ಮಗುರು ಮೌಲಾನಾ ಹುಸೇನ್ ಉಮರ್‌ಜಿ ಜನವರಿ 13 ರಂದು ಮೃತಪಟ್ಟ ಸುದ್ದಿ ಕರ್ನಾಟಕದ ಯಾವ



ಮಾಧ್ಯಮಗಳಲ್ಲೂ ಸುದ್ದಿಯಾಗಲಿಲ್ಲ.

ಆದರೆ ಹತ್ತು ವರ್ಷಗಳ ಹಿಂದೆ ಕನ್ನಡವೂ ಸೇರಿದಂತೆ ಭಾರತದ ಎಲ್ಲಾ ಮುಖ್ಯ ವಾಹಿನಿಗಳಲ್ಲೂ ಮೌಲಾನಾ ಉಮರ್‌ಜೀಯವರ ಬಗ್ಗೆ ಯಥೇಚ್ಛವಾಗಿ ಸುದ್ದಿಗಳು ಪ್ರಕಟವಾಗುತ್ತಿದ್ದವು.


2002 ರ ಫೆಬ್ರವರಿ 17 ರಂದು ಗೋಧ್ರಾ ರೈಲು ಬೋಗಿಗೆ ಬೆಂಕಿ ಬಿದ್ದು 59 ಜನ ಸತ್ತ ಘಟನೆಗೆ ಉಮರ್‌ಜೀಯೆ ಕಾರಣ ಎಂಬ ಆರೋಪವನ್ನು ನರೇಂದ್ರ ಮೋದಿ ಸರ್ಕಾರ ಹೊರಿಸಿದ್ದುದೇ ಇದಕ್ಕೆ ಕಾರಣವಾಗಿತ್ತು.

ಉಮರ್‌ಜಿ ಕೇವಲ ರೈಲು ಬೋಗಿಗೆ ಬೆಂಕಿ ಹಚ್ಚಿಸಿದ್ದೇ ಅಲ್ಲದೆ ಪಾಕಿಸ್ತಾನದ ಏಜೆಂಟ್, ಆಫ್ಘಾನಿಸ್ತಾನದ ಮುಲ್ಲಾ ಓಮರ್‌ನ ಬೆಂಬಲಿಗ ಎಂಬೆಲ್ಲಾ ಸುದ್ದಿಗಳನ್ನು ಆಗ ಪತ್ರಿಕೆ-ಟಿವಿಗಳು ಪ್ರಚಾರ ಮಾಡಿದ್ದವು.

ಆದರೆ ಇದ್ಯಾವುದೂ ನಿಜವಾಗಿರಲಿಲ್ಲ.

ಗುಜರಾತಿನ ಗೋಧ್ರಾ ಟೌನಿನ ಸ್ಥಳೀಯ ಮಸೀದಿಯ ಧರ್ಮಗುರುವಾಗಿದ್ದ ಮೌಲನಾ ಉಮರ್‌ಜೀ ಅತ್ಯಂತ ಸಹೃದಯ ಧರ್ಮಬೀರು ವ್ಯಕ್ತಿಯಾಗಿದ್ದರು. ಸಬರಮತಿ ಎಕ್ಸ್‌ಪ್ರೆಸ್ ರೈಲಿನ 5-6 ಬೋಗಿಗೆ ಬೆಂಕಿ ಬಿದ್ದು 59 ಜನ ಸತ್ತದ್ದನ್ನೇ ಒಂದು ನೆಪ ಮಾಡಿಕೊಂಡು ನರೇಂದ್ರ ಮೋದಿ ಸರ್ಕಾರ, ಸಂಘ ಪರಿವಾರ ಹಾಗೂ ಗುಜರಾತ್ ಪೊಲೀಸರು ಒಂದು ಏಕೀಕೃತ ಘಟಕವಾಗಿ ಮುಸ್ಲಿಂ ಸಮುದಾಯದ ವಿರುದ್ಧ ದಾಳಿ ಪ್ರಾರಂಭಿಸಿದಾಗ ಅಸಹಾಯಕ ಮುಸ್ಲಿಮರ ರಕ್ಷಣೆಗೆ ಬಂದವರೇ ಈ ಮೌಲಾನಾ ಉಮರ್‌ಜಿ.

ಗೋಧ್ರಾದಲ್ಲಿ ಪರಿಹಾರ ಶಿಬಿರ ಕಟ್ಟಿ ಸಾವಿರಾರು ನಿರಾಶ್ರಿತರಿಗೆ ಊಟ-ವಸತಿ ನೀಡಿ ರಕ್ಷಣೆ ನೀಡಿದ್ದಲ್ಲದೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ಕೇಂದ್ರ ಸರ್ಕಾರಕ್ಕೂ ದೌರ್ಜನ್ಯಗಳ ಬಗ್ಗೆ ದೂರು ನೀಡಿದ ಕಾರಣ ಮೋದಿ ಸರ್ಕಾರ ಮೌಲಾನಾರನ್ನೇ ಗೋಧ್ರಾ ಕೇಸಿನಲ್ಲಿ ಸಿಕ್ಕಿಸಿ ಬಂಧಿಸಿತು. ಮೌಲಾನಾರ ಮೇಲೆ ಕೊಲೆ, ದೊಂಬಿಗೆ ಪ್ರಚೋದನೆ ಹಾಗೂ ಆಗತಾನೆ ಜಾರಿಗೆ ಬಂದಿದ್ದ ಪೋಟಾ ಕಾಯ್ದೆಯಡಿ ಕೇಸುಗಳನ್ನು ಹಾಕಿ ಜೈಲಿಗೆ ತಳ್ಳಲಾಯಿತು. ಆ ನಂತರ ಮೌಲಾನಾರಿಗೆ ಎಂಟು ವರ್ಷ ಕಾಲ ಜಾಮೀನು ಸಹ ಸಿಗದೆ ಜೈಲಿನಲ್ಲೇ ಇದ್ದರು. ಈಗ್ಗೆ ಎರಡು ವರ್ಷಗಳ ಹಿಂದಷ್ಟೇ



ಮೌಲಾನಾ ನಿರ್ದೋಷಿಯೆಂದು ಬಿಡುಗಡೆಯಾಗಿದ್ದರು. ಅವರಷ್ಟೇ ಅಲ್ಲ ಗೋಧ್ರಾ ಪಿತೂರಿಕೋರರೆಂದು ಮೋದಿ ಸರ್ಕಾರ ಆರೋಪಿಸಿದ್ದ 94 ಮಂದಿಯಲ್ಲಿ ಇದುವರೆಗೂ 63 ಜನ ನಿರ್ದೋಷಿಗಳೆಂದು ಹೇಳಿ ಕೋರ್ಟ್ ಬಿಡುಗಡೆ ಮಾಡಿದೆ. ಮೌಲಾನಾ ಬಿಡುಗಡೆಯಾದಾಗ ಪುನಃ ಕೆಲ ಮಾಧ್ಯಮಗಳು 'ಭಯೋತ್ಪಾದಕನಿಗೆ ಬಿಡುಗಡೆಯೆ!' ಎಂದು ಬರೆದು ತಮ್ಮ ಅತೃಪ್ತಿ ತೋರಿಸಿದ್ದವು.

ತಮ್ಮ ಮೇಲೆ ಹೊರಿಸಲಾದ ಆರೋಪಗಳ ಬಗ್ಗೆ ನೊಂದಿದ್ದ ಮೌಲಾನಾ "ನನ್ನನ್ನು ದೇಶದ್ರೋಹಿ ಎಂದು ಮಾತ್ರ ಹೇಳಬೇಡಿ. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಸಾವಿರಾರು ಉಲೇಮಾಗಳು ನೇಣುಗಂಬ ಏರಿ ಪ್ರಾಣ ಕೊಟ್ಟಿದ್ದಾರೆ. ಸ್ವತಃ ನನ್ನ ಗುರುವನ್ನು ಬ್ರಿಟಿಷರು ಮಾಲ್ಟಾದ ಜೈಲಿನಲ್ಲಿಟ್ಟಿದ್ದರು. ಗಾಂಧಿಯ ಸಂಗಡ ಬಿಟ್ಟರೆ ಜೈಲಿನಿಂದ ಬಿಡುವುದಾಗಿ ಬ್ರಿಟಿಷರು ಆಮಿಷ ತೋರಿದ್ದನ್ನು ಗುರು ಒಪ್ಪದೆ ಜೈಲಿನಲ್ಲೇ ಉಳಿದರು" ಎಂದು ಹೇಳಿದ್ದರು.

ಗೋಧ್ರಾ ದುರ್ಘಟನೆಗೂ ಮುನ್ನ ಮೌಲಾನಾ ಏನು ಮುಖರಹಿತ ವ್ಯಕ್ತಿಯಾಗಿರಲಿಲ್ಲ. 1993 ರಲ್ಲಿ ಲಾತೂರ್ ಭೂಕಂಪವಾದಾಗ ಅಲ್ಲಿಗೆ ಹೋಗಿ ಪರಿಹಾರ ಶಿಬಿರ ಸ್ಥಾಪಿಸಿ ಸಾವಿರಾರು ಜನರಿಗೆ ನೆರವಾಗಿದ್ದರು. 2001 ರಲ್ಲಿ ಗುಜರಾತ್‌ನ ಕಚ್‌ನಲ್ಲಿ ಭೂಕಂಪವಾದಾಗಲೂ ಅಲ್ಲಿನ ಜನರ ನೆರವಿಗೆ ಮೌಲಾನಾ ಹೋಗಿದ್ದರು. 2002 ರಲ್ಲಿ ಗುಜರಾತ್‌ನಲ್ಲಿ ಮುಸ್ಲಿಮರ ಸಾಮೂಹಿಕ ಹತ್ಯೆಯಾಗುತ್ತಿದ್ದಾಗಲೂ ಅವರು ನಿರಾಶ್ರಿತರ ಶಿಬಿರ ಸ್ಥಾಪಿಸಿ ಅಸಹಾಯಕರಿಗೆ ನೆರವಾಗಿ ರಕ್ಷಿಸಿದ್ದರು. ಗೋಧ್ರಾ ರೈಲು ದುರಂತ ನಡೆದ ತಕ್ಷಣವೇ ಮುಸ್ಲಿಂ ಸಮುದಾಯದ ಪರವಾಗಿ ವಿಷಾದ ವ್ಯಕ್ತಪಡಿಸಿ ಕ್ಷಮೆ ಯಾಚಿಸಿದ್ದರು. ಆದರೆ ಯಾವಾಗ ಪ್ರತೀಕಾರದ ಹಿಂಸಾಚಾರ ಶುರುವಾಯಿತೊ ಆಗ ಮೌಲಾನಾ ಸುಮ್ಮನಿರದೆ ಮೋದಿ ಸರ್ಕಾರದ ವಿರುದ್ಧ ಹೇಳಿಕೆ ನೀಡಿದರು. ಅದಕ್ಕೂ ಮುನ್ನ ನಡೆದಿದ್ದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮೌಲಾನಾ ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡಿದ್ದರು. ಅವರೇನು ರಾಜಕಾರಣಿಯಾಗಿರಲಿಲ್ಲ. ಆದರೆ ಬಿಜೆಪಿ ಗೆಲ್ಲಬಾರದೆಂಬುದೇ ಅವರ ಕಾಳಜಿಯಾಗಿತ್ತು. ಇದೆಲ್ಲಾ ನೋಡಿ ರೊಚ್ಚಿಗೆದ್ದ ಮೋದಿ ಸರ್ಕಾರ ಮೌಲಾನಾರನ್ನು ಗೋಧ್ರಾ ಕೇಸಿನಲ್ಲಿ ಸಿಲುಕಿಸಿ ಜೈಲಿಗೆ ಹಾಕಿಸಿತು. ದುರಂತ ಏನೆಂದರೆ ನಿಜ ಏನೆಂಬುದು ಗೊತ್ತಿದ್ದಾಗಲೂ ಕಾಂಗ್ರೆಸ್ ಮೌಲಾನಾರ ನೆರವಿಗೆ ಬರಲಿಲ್ಲ. ತಮ್ಮ ಜೀವನದ ಎಂಟು ಅಮೂಲ್ಯ ವರ್ಷಗಳನ್ನು ವಿನಾಕಾರಣ ಜೈಲಿನಲ್ಲಿ ಕಳೆದು ಭಯೋತ್ಪಾದಕನೆಂಬ ಅಪಪ್ರಚಾರ ಅನುಭವಿಸಿದ ಮೌಲಾನಾ ನಿರ್ದೋಷಿಯಾಗಿ ಜೈಲಿನಿಂದ ಹೊರಬರುವ ವೇಳೆಗೆ ಛಿದ್ರಗೊಂಡಿದ್ದರು. ಅವರಿಲ್ಲದೆ ಅವರ ಕುಟುಂಬವೂ ಅಸಹಾಯಕತೆ ಹಾಗೂ ನಿರಂತರ ಭೀತಿಯಲ್ಲೇ ಬದುಕಿ ಹೈರಾಣಾಗಿತ್ತು.

ಸಹಬಾಳ್ವೆ, ಮನುಷ್ಯತ್ವ ಹಾಗೂ ದೇಶಪ್ರೇಮಗಳ ಅದ್ಭುತ ಸಂಯೋಜನೆಯಂತಿದ್ದ ಮೌಲಾನಾ ಉಮರ್‌ಜೀಯವರ ಅಕಾಲಿಕ ಸಾವು ನಿಜಕ್ಕೂ ಸೆಕ್ಯುಲರ್ ಇಂಡಿಯಾಗೆ ಆದ ನಷ್ಟ.

● ಪಾರ್ವತೀಶ

ಸಂಪಾದಕರಿಗೆ ಪತ್ರ

ಪ್ರಿಯರೆ,

ಕಳೆದ ವಾರದ ಸಂಚಿಕೆಯಲ್ಲಿ ಒವೈಸಿಯ ಉಗ್ರ ಭಾಷಣ ಕುರಿತ ಪಾರ್ವತೀಶರ ಲೇಖನಕ್ಕೆ ನನ್ನ ಒಂದೆರಡು ಮಾತುಗಳನ್ನು ಸೇರಿಸುವುದಿದೆ. 1948ರಲ್ಲಿ ಹೈದರಾಬಾದ್ ವಿಮೋಚನಾ ಕಾರ್ಯಾಚರಣೆಯ ನಂತರ ಪೊಲೀಸರು ಸಾವಿರಾರು ಮುಸ್ಲಿಮರು ಹಾಗೂ ಕಮ್ಯುನಿಸ್ಟರನ್ನು ಕೊಂದು ಹಾಕಿದ್ದರ ಬಗ್ಗೆ ಪಾರ್ವತೀಶ ಬರೆದಿದ್ದಾರೆ. 48ರ ಈ ಕಗ್ಗೊಲೆಗಳಲ್ಲಿ ಪೊಲೀಸರ ಜೊತೆ ಸಾಮಾನ್ಯ ಹಿಂದೂಗಳು ಸಹ ಪಾಲ್ಗೊಂಡಿದ್ದರು. ರಜಾಕಾರರು ಸಂಸ್ಥಾನದ ಹಿಂದೂಗಳ ಮೇಲೆ ನಡೆಸಿದ ಸಾಮೂಹಿಕ ಹಿಂಸೆಗೆ ನಿಜಾಮನ ಸರಕಾರದ ಬೆಂಬಲವಿದ್ದರೆ, ಹಿಂದೂಗಳು ಮುಸ್ಲಿಮರ ಮೇಲೆ ನಡೆಸಿದ ಹಿಂಸಾಚಾರಕ್ಕೆ ಪೊಲೀಸು ಪಡೆ ಮತ್ತು ಭಾರತದ ಸೈನ್ಯಗಳ ಮೌನ ಸಮ್ಮತಿ ಇತ್ತು. ಒಂದು ಅಂದಾಜಿನ ಪ್ರಕಾರ ಈ ಹಿಂಸೆಯಲ್ಲಿ ಕೊಲೆಯಾದ ಮುಸ್ಲಿಮರ ಸಂಖ್ಯೆಯೇ ಸುಮಾರು 50 ಸಾವಿರ. (ನೋಡಿ: ಫ್ರಂಟ್‌ಲೈನ್, ಮಾರ್ಚ್ 16, 2001, ಪುಟ 113-115 http://www.frontlineonnet.com/fl1805/18051130.htm)

ಹಿಂದೂ ಪ್ರತೀಕಾರದ ಹಿಂಸೆ ಅತ್ಯಧಿಕ ಪ್ರಮಾಣದಲ್ಲಿ ನಡೆದ ಜಿಲ್ಲೆಗಳಲ್ಲಿ 1948ರ ಮೊದಲು ಹೈದರಾಬಾದ್ ಸಂಸ್ಥಾನದ ಭಾಗವಾಗಿದ್ದ ಕರ್ನಾಟಕದ ಬೀದರ್ ಮತ್ತು ಗುಲ್ಬರ್ಗಾಗಳು ಸೇರಿವೆ. ಆದರೆ ಈ ನರಮೇಧದ ನೆನಪುಗಳನ್ನು ಸಹ ಈಗ ಚರಿತ್ರೆಯಿಂದಲೂ, ಜನರ ನಾಲಗೆ ಮತ್ತು ಮನಸ್ಸುಗಳಿಂದಲೂ ಅಳಿಸಿಹಾಕಲಾಗಿದೆ. ಅದರ ಕುರಿತು ವಿಚಾರಣೆ ನಡೆಸಲು ಆಗಿನ ಪ್ರಧಾನಿ ನೆಹರೂ ನೇಮಿಸಿದ್ದ ಸುಂದರ್ ಲಾಲ್ ಆಯೋಗದ ವರದಿ ಈಗಲೂ ರಹಸ್ಯವಾಗಿದೆ. ಸರಕಾರ, ಮಾಧ್ಯಮ, ವಿಶ್ವವಿದ್ಯಾಲಯಗಳೆಲ್ಲವೂ ಒಟ್ಟಾಗಿ ಈ ನರಮೇಧವನ್ನು ಮುಚ್ಚಿಹಾಕಿವೆ.

ಕರ್ನಾಟಕದಲ್ಲಿ ಪ್ರತಿ ವರ್ಷವೂ ಸೆಪ್ಟೆಂಬರ್ ತಿಂಗಳ ಮೊದಲ ವಾರ ಹೈದರಾಬಾದ್ ವಿಮೋಚನೆ ಮತ್ತು ಕರ್ನಾಟಕ ಏಕೀಕರಣವನ್ನು ನೆನಪಿಸಿಕೊಳ್ಳಲಾಗುತ್ತದೆ. ರಜಾಕಾರರ ಹಿಂಸೆಯ ನಿರೂಪಣೆಗಳಂತೂ ಹೇರಳವಾಗಿವೆ. ಆದರೆ 1948ರಲ್ಲಿ ಸಂಸ್ಥಾನದ ಮುಸ್ಲಿಂ ಜನಸಾಮಾನ್ಯರ ಮೇಲೆ ನಡೆದ ಪ್ರತೀಕಾರದ ಹಿಂಸೆಯನ್ನು ಮಾತ್ರ ನಮ್ಮ ಎಡಪಂಥೀಯ ಬುದ್ಧಿಜೀವಿಗಳು ಕೂಡ ಈಗ ನೆನಪಿಸಿಕೊಳ್ಳುವುದಿಲ್ಲ. ಹೆಚ್ಚಿನವರಿಗೆ ಅದರ ಅರಿವು ಸಹ ಇಲ್ಲ. ಅದರ ಬಗ್ಗೆ ದಾಖಲೆಗಳೂ ಉಳಿದಿಲ್ಲ. ಈ ಹಿಂಸಾಚಾರವನ್ನು ಪ್ರತ್ಯಕ್ಷ ಕಂಡವರು ಮತ್ತು ಅನುಭವಿಸುವವರಲ್ಲಿಯೂ ಹೆಚ್ಚಿನವರು ಈಗ ತೀರಿಕೊಂಡಿದ್ದಾರೆ; ಹಾಗಾಗಿ ಅದರ ಮೌಖಿಕ ದಾಖಲೆಗಳೂ ಬಹುಮಟ್ಟಿಗೆ ನಾಶವಾಗಿವೆ. ಈ ಮಾತಿಗೆ ಒಂದೇ ಒಂದು ಗೌರವಾನ್ವಿತ ಅಪವಾದವೆಂದರೆ ಹಿರಿಯ ಕಮ್ಯುನಿಸ್ಟ್ ನಾಯಕ ದಿ. ಪಿ.ಸುಂದರಯ್ಯ ತಮ್ಮ ತೆಲಂಗಾಣ ರೈತ ಹೋರಾಟ ಕುರಿತ ಕೃತಿ 'ತೆಲಂಗಾಣ ಪೀಪಲ್ಸ್ ಸ್ಟ್ರಗಲ್ಸ್ ಎಂಡ್ ಇಟ್ಸ್ ಲೆಸನ್ಸ್' (1972) ನಲ್ಲಿ ಈ ಹಿಂಸೆಯನ್ನು ಉಲ್ಲೇಖಿಸಿರುವುದು.

ರಜಾಕಾರರ ಹಾಗೆ ಒವೈಸಿಯ ಎಮ್.ಐ.ಎಮ್ ಕೂಡ ಉಗ್ರ ಕಮ್ಯುನಿಸ್ಟ್ ವಿರೋಧಿಯಾಗಿದ್ದು 1948ರ ನಂತರ ಆಂಧ್ರದಲ್ಲಿ ಕಮ್ಯುನಿಸ್ಟರನ್ನು ಹಿಮ್ಮೆಟ್ಟಿಸಲು ಕಾಂಗ್ರೆಸ್ ಎಮ್.ಐ.ಎಮ್ ಜೊತೆ ಕೈಜೋಡಿಸಿತು. ಮಹಾರಾಷ್ಟ್ರದ ಶಿವಸೇನೆಯ ಹಾಗೆ ಆಂಧ್ರದ ಎಮ್.ಐ.ಎಮ್ ಕೂಡ ಒಂದು ಫ್ಯಾಸಿಸ್ಟ್ ಸಂಘಟನೆ. ಆ ಕಾರಣಕ್ಕೇನೆ ಠಾಕ್ರೆ ಮತ್ತು ಒವೈಸಿಯವರ ಭಾಷೆ ಕೂಡ ಒಂದೆ. ಎರಡೂ ಸಂಘಟನೆಗಳೂ ಕಾಂಗ್ರೆಸ್ ಕೃಪಾಪೋಷಿತ ಎಂಬುದನ್ನೂ ನಾವು ಗಮನಿಸಬೇಕು.

- ಜಿ.ರಾಜಶೇಖರ, ಉಡು

ಪುರಾಣ ಕತೆಗಳೆಲ್ಲವೂ ಪೂಜಾರ್ಹವಲ್ಲ...

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಮಗಳು ಮನೆಯಿಂದ ಹೊರಟಿದ್ದಳು. ಆಧುನಿಕ ಯುವತಿಯಾದ ಆಕೆ ಜೀನ್ಸ್ ಪ್ಯಾಂಟ್ ಮತ್ತು ಅದರ ಮೇಲೊಂದು ಟಾಪ್ ಧರಿಸಿದ್ದಳು. ಕತ್ತಿನ ಸುತ್ತ ಒಂದು ಬಣ್ಣಬಣ್ಣದ ಸ್ಕಾರ್ಫ್ ಇತ್ತು, ಒಂದು ಕೈಯಲ್ಲಿ ಹೆಲ್ಮೆಟ್, ಇನ್ನೊಂದು ಕೈಯಲ್ಲಿ ಸ್ಕೂಟರ್‌ನ ಕೀ, ಹೆಗಲ ಮೇಲಿಂದ ಒಂದು ಬ್ಯಾಗ್ ನೇತಾಡುತ್ತಿತ್ತು. ಅಂದು ತೊಟ್ಟಿದ್ದ ಬಟ್ಟೆ ಹೊಸದೇನಾಗಿರಲಿಲ್ಲ. ಈ ಹಿಂದೆ ಆಕೆ ತೊಡುತ್ತಿದ್ದ ವಸ್ತ್ರಗಳಿಗಿಂತ ಭಿನ್ನವೂ ಆಗಿರಲಿಲ್ಲ.

ಆದರೂ ಆಕೆಯ ಅಮ್ಮ ಅವತ್ತು ತಕರಾರೆತ್ತಿದಳು. "ಜೀನ್ಸ್ ಗೀನ್ಸ್ ಇನ್ನು ಮುಂದೆ ಹಾಕಿಕೊಳ್ಳಬೇಡ. ಚೆಂದವಾಗಿ ಸಲ್ವಾರ್ ಕುರ್ತಾ ಹಾಕಿಕೊ" ಎಂದಳು ಅಮ್ಮ. ಸದ್ಯ ಆರೆಸ್ಸೆಸ್ ನಾಯಕ ಮೋಹನ್ ಭಾಗವತ್ ಅಂದಂತೆ 'ಹೊರ ಹೋಗದೆ ಮನೆಯಲ್ಲೇ ಬಿದ್ದಿರುವುದಕ್ಕೆ ನಿನಗೇನು ದಾಡಿ' ಅನ್ನಲಿಲ್ಲವಲ್ಲ ಅನ್ನಿಸಿತು ಮಗಳಿಗೆ. ಅಮ್ಮ "ಕತ್ತಲಾಗೋ ಮುಂಚೆ ಮನೆಗೆ ಬಾ. ಸುಮ್ಮನೆ ಫ್ರೆಂಡ್ಸ್ ಜೊತೆ ಕಾಲ ಕಳೆಯಬೇಡ, ಆಯ್ತಾ?" ಅಂದಳು ಮತ್ತೊಮ್ಮೆ.

"ಓಹೋ, ಏನಿವತ್ತು ಹೊಸ ಪಾಲಿಸಿಗಳನ್ನು ಘೋಷಿಸುತ್ತಿದ್ದೀಯಲ್ಲಾ?" ಎಂದು ಹುಬ್ಬೇರಿಸಿದಳು ಮಗಳು.

"ಜನ ಎಂಥವರು ಅಂತ ಯಾರಿಗೆ ಗೊತ್ತು? ಯಾಕೆ ಸುಮ್ಮನೆ ಇಲ್ಲದ ತಾಪತ್ರಯ? ಯಾರ ಗಮನವನ್ನೂ ಸೆಳೆಯದಂತೆ ಇದ್ದರೆ ಒಳ್ಳೆಯದು. ಇವತ್ತಿನ ಕಾಲದಲ್ಲಿ ನಮ್ಮ ಹುಡುಗಿಯರನ್ನು ದೇವರೇ ಕಾಪಾಡಬೇಕು" ಅಂದಳು ಅಮ್ಮ.

"ದೇವರಾ? ನಮ್ಮ ದೇವರುಗಳೇ ಎಂಥವರು ಅಂತ ನಿನಗೆ ಗೊತ್ತಿಲ್ಲವಾ? ಅವರು ಹೇಗೆ ಮೇಲೆಯೇ ಹಲ್ಲೆ ಮಾಡುವವನು."

"ಏನೇ ನೀನು ಹೇಳ್ತಾ ಇರೋದು?"

"ಶೂರ್ಪನಖಿಗೆ ಆತ ಮತ್ತು ಅವನ ತಮ್ಮ ಲಕ್ಷ್ಮಣ ಮಾಡಿದ್ದೇನು? ರಾವಣನ ಸಹೋದರಿ ಶೂರ್ಪನಖಿ ತನ್ನ ಅಣ್ಣನಷ್ಟೇ ಪಾಂಡಿತ್ಯ ಹೊಂದಿದ್ದವಳು. ಯಾರಿಗೂ ಹೆದರದೆ ಏಕಾಂಗಿಯಾಗಿ ಕಾಡುಮೇಡು ಸುತ್ತುತ್ತಿದ್ದವಳು. ಸಂಪೂರ್ಣವಾಗಿ ಸ್ವತಂತ್ರಳಾಗಿದ್ದವಳು. ಹಲವರ ಪ್ರಕಾರ ಆಕೆ ಅಪ್ರತಿಮ ಸುಂದರಿ. ಆದರೆ ದಕ್ಷಿಣ ಭಾರತದವರನ್ನು ಮಂಗಗಳು ಎಂದು ಪರಿಗಣಿಸಿದವರು ಆಕೆಯನ್ನೂ ರಾಕ್ಷಸಿ, ಕುರೂಪಿ ಎಂದು ಕರೆದರು. ಶೂರ್ಪನಖಿ ಲಕ್ಷ್ಮಣನನ್ನು ಬಯಸಿ ತನ್ನ ಆಶೆಯನ್ನು ವ್ಯಕ್ತಪಡಿಸಿದಳು. ಅದೇ ಆಕೆ ಎಸಗಿದ ಘೋರ ಅಪರಾಧವಾಯಿತು ಅಯೋಧ್ಯೆಯ ರಾಜಕುಮಾರರಿಗೆ. ಆಕೆ ಇಷ್ಟವಿಲ್ಲ ಎಂದಿದ್ದರೆ ಅದನ್ನು ಆಕೆಗೆ ಹೇಳಿ ಕಳುಹಿಸಬಹುದಿತ್ತು. ಆದರೆ ರಾಮ ಮತ್ತು ಲಕ್ಷ್ಮಣ ಮಾಡಿದ್ದೇನು? ಆಕೆಯ ಮೂಗು, ಕಿವಿಗಳನ್ನು ಮಾತ್ರವಲ್ಲ, ಕೆಲವರ ಪ್ರಕಾರ ಆಕೆಯ ಸ್ತನಗಳನ್ನು ಕತ್ತರಿಸಿಹಾಕಿ ಕಳುಹಿಸಿದರು. ರಾಮ ಅದು ಹೇಗೆ ರಕ್ಷಕನಾಗಬಲ್ಲ? ಇನ್ನು ರಾಮನ ಇನ್ನೊಂದು ಅವತಾರವಾದ ಕೃಷ್ಣನ ಪೋಲಿತನದ ಬಗ್ಗೆ..."

"ಸಾಕು ಬಿಡೆ."

"ಅಷ್ಟು ಬೇಗ ಸಾಕು ಅಂದರೆ ಹೇಗೆ? ನಾನು ಈಗಲೇ ಎಲ್ಲೂ ಹೋಗಬೇಕಿಲ್ಲ, ಕೇಳು. ಕೃಷ್ಣ ಸ್ನಾನ ಮಾಡುತ್ತಿದ್ದ ಗೋಪಿಕೆಯರ ಬಟ್ಟೆಗಳನ್ನು ಕದ್ದ. ಅವರು ಎಷ್ಟು ಬೇಡಿಕೊಂಡರೂ ಅವರನ್ನು ಸತಾಯಿಸಿದ. ಅವರು ಅಸಹಾಯಕರಾಗಿ ನೀರಿನಿಂದ ಬೆತ್ತಲೆಯಾಗಿ ಹೊರಬಂದ ನಂತರವೇ ಆತ ಅವರ ಬಟ್ಟೆಗಳನ್ನು ಗೊತ್ತಾಗುತ್ತಿದೆ. ಹಾ, ಕಿಡ್ನಾಪ್ ಮತ್ತು ರೇಪ್ ಬಗ್ಗೆ ಮಾತನಾಡುತ್ತಿದ್ದೆ. ಅಖಂಡ ಬ್ರಹ್ಮಚಾರಿ ದಿ ಗ್ರೇಟ್ ಭೀಷ್ಮ ತನ್ನ ಮಲಸಹೋದರರಿಗೆಂದು ಅಂಬಾ, ಅಂಬಿಕಾ ಮತ್ತು ಅಂಬಾಲಿಕಾ ಎಂಬ ಮೂವರು ಯುವತಿಯರನ್ನು ಕಿಡ್ನಾಪ್ ಮಾಡಿಕೊಂಡು ಬಂದ. ಆಮೇಲೆ ಅವರಿಗೆ ಏನಾಯಿತು? ಭೀಷ್ಮನ ಸಹೋದರನಾದ ಋಷಿ ವೇದವ್ಯಾಸ ಅಂಬಿಕಾ ಮತ್ತು ಅಂಬಾಲಿಕಾರನ್ನು ರೇಪ್ ಮಾಡಿದ. ಕಾಡುಪ್ರಾಣಿಯಂತಿದ್ದ ವೇದವ್ಯಾಸನನ್ನು ಕಂಡು ಅಂಬಿಕಾ ಅದೆಷ್ಟು ಹೆದರಿದಳೆಂದರೆ ಆಕೆ ಬಿಳಿಚಿಕೊಂಡಳು. ಹಾಗೆಯೇ ತನ್ನ ಮೇಲೆ ಆತ ಮಾಡುತ್ತಿದ್ದ ಕೃತ್ಯವನ್ನು ಸಹಿಸಲಾಗದೇ ಅಂಬಾಲಿಕ ಕಣ್ಣು ಮುಚ್ಚಿದಳು. ಅವರಿಬ್ಬರೂ ಅಸಹಾಯಕರಾಗಿದ್ದರು ವೇದವ್ಯಾಸನ ಮೃಗತ್ವದ ಮುಂದೆ. ತನ್ನನ್ನು ಕಿಡ್ನಾಪ್ ಮಾಡಿದ್ದ ಭೀಷ್ಮನ ವಿರುದ್ಧ ಅಂಬಾ ಮಾತ್ರ ಕೊನೆಗೆ ಸೇಡು ತೀರಿಸಿಕೊಳ್ಳುತ್ತಾಳೆ. ಪುರುಷನ ರೂಪದಲ್ಲಿ ಬಂದ ಅಂಬಾ ಆತನನ್ನು ಕೊಂದುಹಾಕುತ್ತಾಳೆ."

"ನೋಡು, ಅದೆಲ್ಲ ಈಗ ಬೇಡ. ಹುಡುಗಿಯರು ಇತಿಮಿತಿಗಳಲ್ಲಿದ್ದರೆ ವಾಸಿ."

"ಅಂದರೆ ಲಕ್ಷ್ಮಣ ರೇಖೆಯ ಒಳಗಿರಬೇಕು ಅಂಥಾ ಅಲ್ಲವಾ ನಿನ್ನ ಮಾತಿನ ಅರ್ಥ? ಆ ಲಕ್ಷ್ಮಣರೇಖೆಯನ್ನು ಸೀತೆ ದಾಟಿದ್ದು ಯಾಕೆ ಗೊತ್ತಾ? ಬಡವನೊಬ್ಬನನ್ನು ಕಂಡು ಮರುಗಿ ಆತನಿಗೆ ಭಿಕ್ಷೆ ಕೊಡಲು ಆ ರೇಖೆಯನ್ನು ದಾಟಿದಳು. ಅದಕ್ಕಿಂತ

"ಹೋಗಲಿ, ನಮ್ಮ ಪುರಾಣಗಳಲ್ಲಿ ಯಾರೂ ನಿನಗೆ ಇಷ್ಟ ಇಲ್ಲವೆ?"

"ಯಾಕೆ ಇಷ್ಟ ಇಲ್ಲ, ದ್ರೌಪದಿ ಅಂದರೆ ನನಗೆ ಇಷ್ಟ. ಯಾಕೆಂದರೆ ಪುರಾಣಗಳಲ್ಲಿ ಆಕೆ ಒಬ್ಬಳೇ ದಿಟ್ಟತನ ತೋರುವವಳು. ದುಶ್ಯಾಸನ ಅವಳ ವಸ್ತ್ರಾಪಹರಣಕ್ಕೆ ಯತ್ನಿಸಿದಾಗ ಆತನಿಗೆ ತನ್ನ ದೇಹದ ಮೇಲೆ ಯಾವ ಹಕ್ಕೂ ಇಲ್ಲ ಎನ್ನುತ್ತಾಳಲ್ಲದೆ ತನ್ನನ್ನು ಪಗಡೆ ಆಟದಲ್ಲಿ ಪಣವಾಗಿಡಲು ತನ್ನ ದೇಹ ಯುಧಿಷ್ಟರನ ಸ್ವತ್ತಲ್ಲ ಎನ್ನುತ್ತಾಳೆ. ಅಷ್ಟೇ ಅಲ್ಲ, ಪುರುಷರು ತನಗೆ ಮಾಡಿದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಲು ಯುದ್ಧಕ್ಕೆ ಕರೆಕೊಡುತ್ತಾಳೆ. ಕೌರವ ವಂಶದ ವಿನಾಶಕ್ಕೆ ಕಾರಣಳಾಗುತ್ತಾಳೆ. ಆದರೂ ಪಾಪ ದ್ರೌಪದಿಗೂ ನಮ್ಮ ಪುರುಷರು ಅನ್ಯಾಯ ಮಾಡಿದ್ದಾರೆ. ಹೇಗೆ ಗೊತ್ತಾ? ಎಲ್ಲಾ ಮುಗಿದು ಪಾಂಡವರು ಸ್ವರ್ಗಕ್ಕೆ ಹೋಗುತ್ತಿರುವಾಗ ಮೊದಲು ಭೂಮಿಯ ಮೇಲೆ ಬೀಳುವವಳು ದ್ರೌಪದಿಯೇ! ಆಗ ಭೀಮ 'ಆಕೆ ಯಾವ ಪಾಪವನ್ನೂ ಮಾಡಲಿಲ್ಲ, ಆದರೂ ಯಾಕೆ ಆಕೆಗೆ ಹೀಗಾಯಿತು?' ಎಂದು ಕೇಳುತ್ತಾನೆ. ಅದಕ್ಕೆ ಯುಧಿಷ್ಟರ 'ಆಕೆಗೆ ಐವರು ಪತಿಗಳಿದ್ದರೂ ಎಲ್ಲರನ್ನೂ







ಹುಡುಗಿಯರನ್ನು ಕಾಪಾಡುತ್ತಾರೆ?" ಮಗಳ ಪ್ರಶ್ನೆ.

"ಬಾಯಿಗೆ ಬಂದದ್ದನ್ನು ಹೇಳಬೇಡ. ದೇವರು ಇರೋದೇ ಜನರನ್ನು ರಕ್ಷಿಸಲು, ಕಾಪಾಡಲು..."

"ಹೌದೌದು. ಆ ದೇವತೆಗಳ ದೇವ ಇದ್ದಾನಲ್ಲ ಇಂದ್ರಾ? ಅಪ್ಪಟ ಲಂಪಟ ಅವನು. ಸುಂದರ ಮಹಿಳೆಯರನ್ನು ಕಂಡರೆ ಜೊಲ್ಲು ಸುರಿಸುವವನು. ಋಷಿ ಗೌತಮನ ಪತ್ನಿ ಅಹಲ್ಯಾಳನ್ನು ಬಯಸಿ, ಆಕೆಯ ಗಂಡನ ರೂಪದಲ್ಲಿ ಆಕೆಯ ಮುಂದೆ ಪ್ರತ್ಯಕ್ಷ ಆಗಿ ಆಕೆಯನ್ನು ಭೋಗಿಸಿದವನು. ಇನ್ನು ಋಷಿ ಗೌತಮನಾದರೂ ಎಂಥವನು? ಬೇಕಂತಲೇ ತನ್ನ ಹೆಂಡತಿಯನ್ನು ವಂಚಿಸಿದ್ದ ಇಂದ್ರನಿಗೆ ಆತ ಕೊಟ್ಟ ಶಾಪ ಮೈತುಂಬ ಯೋನಿಗಳು. ಅದರೊಂದಿಗೆ 'ಸಹಸ್ರಯೋನಿ' ಎಂಬ ಬಿರುದು ಬೇರೆ. ಆದರೆ ಇಂದ್ರ ಕ್ಷಮೆ ಬೇಡಿದಾಗ ಆ ಯೋನಿಗಳನ್ನು ಕಣ್ಣಾಗಿಸಿ ಮಾಫ್ ಮಾಡಿದ. ತನಗೆ ಗೊತ್ತಿಲ್ಲದಂತೆ ಇಂದ್ರನ ವಂಚನೆಗೆ ಬಲಿಯಾದ ಅಹಲ್ಯಾಳಿಗೆ ಅದೇ ಗೌತಮ ಕೊಟ್ಟ ಶಾಪ ಎಂಥದ್ದು? ಆಕೆ ತಪ್ಪು ಮಾಡಿರದಿದ್ದರೂ ಆಕೆಯನ್ನು ಕಲ್ಲಾಗಿಸಿದ! ಅಂದಹಾಗೆ ಅಮರ ಚಿತ್ರ ಕಥಾ ತರಹದ ಪುಸ್ತಕಗಳಲ್ಲಿ ಅಹಲ್ಯಾ ಮೈತುಂಬಾ ಸೀರೆ ಉಟ್ಟಿದ್ದರೂ ಅವಳ ಮೇಲೆ ಇಂದ್ರನ ಕಣ್ಣುಬಿದ್ದದ್ದು ಯಾಕೆ?"

"ರಾಮ, ರಾಮ" ಎಂದು ಉದ್ಗಾರವೆತ್ತಿದಳು ಅಮ್ಮ.

"ರಾಮ ಎಂತಹ ಆದರ್ಶ ಪುರುಷ? ತಾನು ಕೈಹಿಡಿದಿದ್ದ, ತನ್ನನ್ನು ತುಂಬಾ ಪ್ರೀತಿಸುತ್ತಿದ್ದ ಸೀತೆ ಗರ್ಭಿಣಿ ಆಗಿದ್ದರೂ ಆಕೆಯನ್ನು ಕಾಡಿಗೆ ಓಡಿಸಿದ. ಅಷ್ಟೇ ಅಲ್ಲ, ರಾಮನೂ ಒಂಟಿ ಮಹಿಳೆಯ ರಕ್ಷಣೆಗೆ ನಿಲ್ಲುವವನಲ್ಲ, ಬದಲಾಗಿ ಅಂತಹ ಯುವತಿಯರ ಕೊಟ್ಟಿದ್ದು. ಇದು ಸ್ತ್ರೀ ಪೀಡಕನೊಬ್ಬ ಮಾಡುವುದಕ್ಕಿಂತ ಹೇಗೆ ಭಿನ್ನ? ಇದೇ ಕೃಷ್ಣ ತನ್ನ ತಂಗಿ ಸುಭದ್ರಳನ್ನು ಕಿಡ್ನಾಪ್ ಮಾಡುವಂತೆ ಪಾಂಡವ ಅರ್ಜುನನನ್ನು ಪ್ರಚೋದಿಸಿದ್ದ. ಹಾ, ರಾಮ ಮತ್ತು ಕೃಷ್ಣರ, ಅಂದರೆ ವಿಷ್ಣುವಿನ ಐದನೆ ಅವತಾರ ಅಂತಾರಲ್ಲ ಪರುಷರಾಮನನ್ನು. ಅವನಾದರೂ ಎಂಥವನು? ಮಹಾನ್ ಪತಿವ್ರತೆಯಾಗಿದ್ದ ಪರುಶುರಾಮನ ತಾಯಿ ರೇಣುಕಾ ಒಮ್ಮೆ ನದಿಯ ಬಳಿ ಗಾಂಧರ್ವರನ್ನು ನೋಡಿ ಒಂದು ಕ್ಷಣ ಮೈಮರೆಯುತ್ತಾಳೆ. ಅದು ಗೊತ್ತಾಗಿ ಆಕೆಯ ಗಂಡ ಋಷಿ ಜಮದಗ್ನಿಗೆ ಕೆಂಡಾಮಂಡಲ ಕೋಪ ಬರುತ್ತೆ. ಆಗ ತನ್ನ ಮಗನ ಕೈಗೆ ಕೊಡಲಿಯನ್ನು ಕೊಟ್ಟು ಆಕೆಯ ರುಂಡ ಹಾರಿಸುವಂತೆ ಆಜ್ಞೆ ಮಾಡುತ್ತಾನೆ. ಮಗ ಪರಶುರಾಮ ಅಪ್ಪನ ಆಜ್ಞೆ ಪಾಲಿಸಿ ತನ್ನ ತಾಯಿಯನ್ನೇ ಕೊಂದು ಹಾಕುತ್ತಾನೆ. ಆಮೇಲೆ ಮಗನ ಆಶೆಯಂತೆ ಜಮದಗ್ನಿ ತನ್ನ ಪತ್ನಿಗೆ ಮರುಜೀವ ಕೊಡುತ್ತಾನಾದರೂ ಆಕೆಯನ್ನು ಕ್ಷಮಿಸುವುದಿಲ್ಲ, ಬದಲಾಗಿ ಆಕೆಯನ್ನು ದೇವದಾಸಿಯರು ಪೂಜಿಸುವ ಯಲ್ಲಮ್ಮನನ್ನಾಗಿಸುತ್ತಾನೆ. ನಿನಗೆ ಗೊತ್ತ ಅಮ್ಮ, ಆ ದೇವತೆಗಳು ಮತ್ತು ಪುರಾಣಪುರುಷರು ಯುವತಿಯರನ್ನು ಕಿಡ್ನಾಪ್ ಮಾಡುವುದರಲ್ಲಿ ಮತ್ತು ರೇಪ್ ಮಾಡುವುದರಲ್ಲಿ ಎತ್ತಿದ ಕೈ ಅಂತಾ?"

"ನಿನ್ನ ಪುರಾಣ ಮುಗಿಯಲ್ಲಾ?"

"ಇದು ನನ್ನ ಪುರಾಣ ಅಲ್ಲಮ್ಮಾ. ನಮ್ಮೆಲ್ಲರ ಪುರಾಣದ ಕತೆಗಳು, ನಾವು ಚಿಕ್ಕವರಾಗಿದ್ದಾಗಿನಿಂದ ನಮಗೆ ಹೇಳುತ್ತಾ ಬಂದ ಕತೆಗಳು. ಆದರೆ ಅದಕ್ಕೆ ನಿಮ್ಮಂತಹವರು ಬೇರೆ ಬಣ್ಣ ಹಚ್ಚಿದ್ದಿರಿ. ದೊಡ್ಡವರಾದ ಮೇಲೆ ನಮಗೆ ಅವುಗಳ ನಿಜಬಣ್ಣ ಮತ್ತು ಅರ್ಥ ಮುಖ್ಯ ವಿಷಯ ಏನು ಗೊತ್ತಾ ಅಮ್ಮ? ರಾವಣ ಸೀತೆ ಇದ್ದಲ್ಲಿಗೆ ಬಂದಿದ್ದು ತನ್ನ ತಂಗಿ ಶೂರ್ಪಣಕಿಯ ಮೇಲೆ ದಾಳಿ ಮಾಡಿದ್ದ ರಾಮ ಮತ್ತು ಲಕ್ಷ್ಮಣರ ವಿರುದ್ಧ ಸೇಡು ತೀರಿಸಿಕೊಳ್ಳಲು. ಅವರಿಬ್ಬರು ಅಲ್ಲಿ ಇರದಿದ್ದರಿಂದ ರಾವಣ ಸೀತೆಯನ್ನು ಕಿಡ್ನಾಪ್ ಮಾಡಿದ ಅಷ್ಟೇ. ಆಮೇಲೆ ಅವನು ಸೀತೆಯನ್ನು ಇಷ್ಟಪಟ್ಟರೂ ಒಮ್ಮೆಯೂ ಆಕೆಯ ಮೇಲೆ ಕೈಮಾಡಲಿಲ್ಲ ರಾವಣ. ಅವನೊಬ್ಬ ಜೆಂಟಲ್‌ಮ್ಯಾನ್! ಲಕ್ಷ್ಮಣ ರೇಖೆ ಬರೆಯುತ್ತಾನಂತೆ ರೇಖೆ. ತನ್ನ ಪತ್ನಿ ಊರ್ಮಿಳೆಯ ಬಿಟ್ಟು ಹದಿನಾಲ್ಕು ವರ್ಷಗಳ ಕಾಲ ಅಣ್ಣನ ಜೊತೆ ಹೋದವನು ಲಕ್ಷ್ಮಣ. ಅಂಥವನು ಯಾರು ರೇಖೆಯನ್ನು ಬರೆಯಲು?"

"ಅದೆಲ್ಲ ಯಾಕೀಗ. ನನ್ನ ತಲೆ ತಿನ್ನಬೇಡ" ಎಂದಳು ಅಮ್ಮ ಬೇಸರದಿಂದ.

"ಇದೆಲ್ಲ ಈಗಲೂ ಮುಖ್ಯ ಅಮ್ಮ. ಇವತ್ತಿಗೂ ನಮ್ಮಲ್ಲಿ ಮಹಿಳೆಯರೆಂದರೆ ಪುರುಷನ ಸ್ವತ್ತು, ಭೋಗದ ವಸ್ತು, ಮಕ್ಕಳನ್ನು ಹಡೆವ ಯಂತ್ರ, ಆಕೆಗೆ ಸ್ವಾತಂತ್ರ್ಯ-ಸ್ವಾಭಿಮಾನಕ್ಕಿಂತ ಶೀಲವೇ ಮುಖ್ಯ, ಗಂಡ-ಮಕ್ಕಳ ಸೇವೆಯಲ್ಲೇ ಆಕೆ ಧನ್ಯತೆ ಕಾಣಬೇಕು, ಲಕ್ಷ್ಮಣರೇಖೆಯನ್ನು ದಾಟಬಾರದು, ಒಬ್ಬಳೇ ಹೊರಗೆ ಹೋಗಬಾರದು, ಸೂರ್ಯ ಮುಳುಗುವ ಮುನ್ನ ಮನೆಗೆ ಹಿಂದಿರುಗಬೇಕು, ಚೆನ್ನಾಗಿರುವ ಬಟ್ಟೆ ತೊಡಬಾರದು, ತಲೆತಗ್ಗಿಸಿ ನಡೆಯಬೇಕು, ಹಾಗೆ ನಿಲ್ಲಬೇಕು, ಹೀಗೆ ಕೂರಬೇಕು... ಇಂತಹ ಅಭಿಪ್ರಾಯಗಳು ನಮ್ಮ ಸಮಾಜದಲ್ಲಿ ಇರುವುದಕ್ಕೆ ಇಂತಹ ಕತೆಗಳೂ ಪ್ರೇರಣೆ. ದೇವರುಗಳೇ ಕಿಡ್ನಾಪ್ ಮತ್ತು ರೇಪ್ ಮಾಡುತ್ತಾರೆಂದರೆ ಮನುಷ್ಯರು ಸುಮ್ಮನಿರುತ್ತಾರಾ?"

ಆಕೆ ಸಮಾನವಾಗಿ ನೋಡಲಿಲ್ಲ, ಬದಲಾಗಿ ಅರ್ಜುನನನ್ನು ಹೆಚ್ಚು ಪ್ರೀತಿಸುತ್ತಿದ್ದಳು' ಎಂದು ಉತ್ತರಿಸುತ್ತಾನೆ. ವಾಸ್ತವವಾಗಿ ಸ್ವಯಂವರದಲ್ಲಿ ಅರ್ಜುನ ದ್ರೌಪದಿಯನ್ನು ಮಾತ್ರ ಗೆದ್ದಿರಲಿಲ್ಲ, ಆಕೆಯ ಹೃದಯವನ್ನೂ ಗೆದ್ದಿದ್ದ. ಆದರೂ ಪಾಂಡವರು ದ್ರೌಪದಿಯನ್ನು ಎಲ್ಲ ರೀತಿಯಲ್ಲೂ ಹಂಚಿಕೊಂಡಿದ್ದರು. ಅವರಿಗೆ ಅದರಲ್ಲಿ ಯಾವ ಅನ್ಯಾಯವೂ ಕಂಡಿರಲಿಲ್ಲ. ಆದರೆ ಆಕೆ ಅರ್ಜುನನನ್ನು ಕೊಂಚ ಹೆಚ್ಚು ಪ್ರೀತಿಸುತ್ತಿದ್ದಳು ಎಂಬುದೇ ಯುಧಿಷ್ಟರನ ಕಣ್ಣಲ್ಲಿ ದೊಡ್ಡ ಕಳಂಕವಾಯಿತು."


"ಅದೇನೋ ನನಗೆ ಗೊತ್ತಿಲ್ಲ. ಸುಮ್ಮನೆ ಕತೆ ಅಂತ ಕೇಳಿಸಿಕೊಳ್ಳುತ್ತಿದ್ವಿ, ಹೇಳುತ್ತಿದ್ವಿ" ಎಂದಳು ಅಮ್ಮ.

"ಕತೇನೇ ಇರಬಹುದಮ್ಮ. ಆದರೆ ಶೂರ್ಪನಖಿಯ ಕತೆ ಹೇಳಿದ ನಂತರ ಮಹಿಳೆಯರಿಗೆ ಗೌರವ ಕೊಡಬೇಕು ಎಂದೋ, ಗೋಪಿಕೆಯರ ಬಟ್ಟೆ ಕದ್ದ ಕೃಷ್ಣನ ಕತೆ ಹೇಳಿದ ನಂತರ ಹುಡುಗಿಯರನ್ನು ಚುಡಾಯಿಸಬಾರದು ಎಂದೋ ನಮ್ಮ ಹುಡುಗರಿಗೆ ಹೇಳಿದರೆ ಅವರಿಗೆ ಅರ್ಥವಾಗುತ್ತಾ? ಅವರಿಗೆ ಕತೆ ಇಷ್ಟವಾಗುತ್ತದೆಯೇ ಹೊರತು ಉಪದೇಶವಲ್ಲ. ಆದ್ದರಿಂದ ಮೊದಲು ಏನು ಮಾಡಬೇಕು ಗೊತ್ತಾ?"

"ಏನು?" ಅಮ್ಮನ ಪ್ರಶ್ನೆ.

"ಇಂತಹ ಕತೆಗಳನ್ನೇ ಬ್ಯಾನ್ ಮಾಡಬೇಕು ಅನ್ನಿಸಲ್ಲವಾ? ನನಗೆ ಲೇಟ್ ಆಯಿತು ಹೋಗಿಬರುತ್ತೇನೆ" ಎನ್ನುತ್ತಾ ಆ ಯುವತಿ ಮನೆಯಿಂದ ಹೊರಟಳು...

ಕುಂದಾಪುರ: ಹಾಲಾಡಿ ಶೆಟ್ರ ಚಿತ್ತ ಎತ್ತ?!


ಹಾಲಾಡಿ

ವಿಧಾನಸಭಾ ಚುನಾವಣೆ ಹತ್ತಿರತ್ತಿರ ಬರುತ್ತಿದ್ದಂತೆ ಉಡುಪಿ ಜಿಲ್ಲೆಯ ಬಿಜೆಪಿಯಲ್ಲಿ ತಲ್ಲಣ-ಪಲ್ಲಟ ಶುರುವಾಗಿದೆ. ಕಾವಿ ಶನಿಸಂತಾನದ 'ಕರ್ಮ'ಭೂಮಿ ಎಂದೆನಿಸಿದ್ದ ಈ ಕಡಲ ತಡಿಯಲ್ಲೀಗ ಬಿಜೆಪಿಗೆ ಸಂಘ ಪರಿವಾರವೇ ಮಗ್ಗಲು ಮುಳ್ಳಾಗಿದೆ. ಜಿಲ್ಲೆಯ ಅಷ್ಟೂ ಐದು ಅಸೆಂಬ್ಲಿ ಕ್ಷೇತ್ರಗಳಲ್ಲಿ ಇಷ್ಟು ದಿನ ಭಜರಂಗದಳ - ಚೆಡ್ಡಿ ಪಡೆ ಮತ್ತು ಕಾವಿಕೂಟಗಳು ಆಡಿದ ಅನಾಹುತಕಾರಿ ಹಿಂದುತ್ವದ ಆಟವೇ ಬಿಜೆಪಿಗೆ ತಿರುಗೇಟಾಗಿ ಚುಚ್ಚುತ್ತಿರುವುದು ಮೋಜಾಗಿದೆ. ಬಿಜೆಪಿಯ ತೆರೆಮರೆಯ ಸೂತ್ರಧಾರ ಕಲ್ಲಡ್ಕ ಪ್ರಭಾಕರ ಭಟ್ಟನ ಮಾಮೂಲಿ ಮತಾಂಧ ಅಸ್ತ್ರಗಳೆಲ್ಲ ಮೊಂಡಾಗಿರುವುದರಿಂದ ಆತನಿಗೆ ಹುರಿಯಾಳುಗಳ ಆರಿಸುವುದೇ ಕಷ್ಟವಾಗಿ ಕಣ್-ಕಣ್ ಬಿಡುತ್ತಿದ್ದಾನೆ!

ಉಡುಪಿ ಜಿಲ್ಲೆಯಲ್ಲಿ ದೊಡ್ಡ ಕುತೂಹಲ ಕೆರಳಿಸಿರುವ ಕ್ಷೇತ್ರವೆಂದರೆ ಅದು ಕುಂದಾಪುರ. ಇಲ್ಲಿಂದ ಹಾಲಾಡಿ ಶ್ರೀನಿವಾಸ ಶೆಟ್ಟಿ ಎಂಬ ಅಖಂಡ ಬ್ರಹ್ಮಚಾರಿ ಕಮಲದ ಚಿಹ್ನೆಯಲ್ಲಿ ಮೂರ್ಮೂರು ಬಾರಿ ಗೆದ್ದಿದ್ದಾರೆ. ಸದ್ರಿ ಹಾಲಾಡಿ ತಾನೆಷ್ಟೇ ಸೆಕ್ಯುಲರ್-ಕೆಸರಂಟದ ಕಮಲ ಎಂದು ಬೊಗಳೆ ಬಿಟ್ಟರೂ ಆತನ ನಿರಂತರ- ನಿರಾತಂಕ ಗೆಲುವಿಗೆ ವೈಯಕ್ತಿಕ ವರ್ಚಸ್ಸಿನ ಜತೆ ಬಿಜೆಪಿಯ ಕೋಮುವಾದಿ ಕಿತಾಪತಿಯೂ ಕಾರಣವಾಗಿರುತ್ತಿತ್ತು! ಹಾಗಾಗಿ ಆತ ದೊಡ್ಡ ಅಂತರದಲ್ಲಿ ಶಾಸಕನಾಗುತ್ತಲೇ ಹೋದರು. ಗೆದ್ದ ಬಳಿಕ ಹಾಲಾಡಿ ಹಿಂದೂ-ಮುಸ್ಲಿಂ ಎಂಬ ದ್ವೇಷದ ರಾಜಕಾರಣವನ್ನೆಂದೂ ಮಾಡಲಿಲ್ಲ. ಬಿಜೆಪಿ 'ಗುಡಿ'ಯೊಳಗೆ ಹೋಗದೇ ಅಂಗಳದಲ್ಲೇ ನಿಂತು ಎಲ್ಲವನ್ನೂ ಬಾಯ್ಮುಚ್ಚಿಕೊಂಡು ನೋಡುತ್ತಿದ್ದರು. ಕೇಸರಿ-ಚೆಡ್ಡಿ ಪುಂಡರ ಹಿಡಿತಕ್ಕೆ ಎಂದೂ ಸಿಲುಕದ ಹಾಲಾಡಿ ಆರೆಸೆಸ್ ಡಾನ್ ಕಲ್ಲಡ್ಕ ಭಟ್ಟನಿಗಾಗಲಿ, ಆತನ ಕೋರ್ ಕಮಿಟಿ ಗೆಣೆಗಾರ-ಕುಂದಾಪುರ ಬಿಜೆಪಿ ಬಾಸ್ ಎ.ಜಿ.ಕೊಡ್ಗಿಯಂಥ ಬ್ರಾಹ್ಮಣಶಾಹಿಗಾಗಲಿ ದೊಗ್ಗು ಸಲಾಮು ಹಾಕುತ್ತಿರಲಿಲ್ಲ.

ಈ 'ಪಾಪ'ಕ್ಕಾಗಿಯೇ ಹಾಲಾಡಿಗೆ ಮಂತ್ರಿಗಿರಿ ತಪ್ಪಿಸಿ ಸೇಡು ತೀರಿಸಿಕೊಂಡಿತು ಕೊಡ್ಗಿ-ಕಲ್ಲಡ್ಕ ಬಳಗ. ತನಗೆಂದೂ ಮಂತ್ರಿ ಮಾಡಿಯೆಂದು ಕೇಳದ ಹಾಲಾಡಿಗೆ ಮಂತ್ರಿ ಮಾಡುತ್ತೇವೆ ಬೆಂಗಳೂರಿಗೆ ಬನ್ನಿಯೆಂದು ಕರೆದು ಬಿಜೆಪಿ ಭೂಪರು ಅವಮಾನಿಸಿದ್ದರು. ಅಷ್ಟೇ ಅಲ್ಲ, ಕುಂದಾಪುರದಲ್ಲಿ ಪರಂಪರಾಗತವಾಗಿರುವ ಬಂಟ ಮತ್ತು ಬಿಲ್ಲವರ ಮೇಲಾಟ ಬಳಸಿಕೊಂಡು ಬಂಟರ ಹಾಲಾಡಿಯನ್ನು ತುಳಿಯಲು ಬಿಲ್ಲವರ ಕೋಟ ಶ್ರೀನಿವಾಸ್ ಪೂಜಾರಿ ಎಂಬ ಅಬ್ಬೇಪಾರಿಯನ್ನು ಕಲ್ಲಡ್ಕ ಕಮಿಟಿ ಮಂತ್ರಿ ಮಾಡಿತ್ತು, ಆ ಮೂಲಕ ಹಾಲಾಡಿ ಬಂಡೆದ್ದರೆ ಬರುವ ಎಲೆಕ್ಷನ್‌ನಲ್ಲಿ ಜಾತಿರಾಜಕಾರಣದಿಂದ ಹಣಿಯುವ ಸ್ಕೆಚ್ ಅಂದೇ ಹಾಕಿಕೊಂಡಿತ್ತು.


ಅಂದು ಕುತಂತ್ರಿ ಕಲ್ಲಡ್ಕ ಹಾಕಿದ್ದ ದೂ(ದು)ರಾಲೋಚನೆ ಈಗ ವರ್ಕ್‌ಔಟ್ ಆಗುತ್ತಿದೆ! ಮಂತ್ರಿಗಿರಿ ಸಿಗದ ಹತಾಶೆಯಲ್ಲಿ ಶಾಸಕತ್ವಕ್ಕೆ ರಾಜೀನಾಮೆ ಬಿಸಾಡಿ ಬಿಜೆಪಿಯಿಂದ ಒಂದು ಕಾಲು ಹೊರಗೆ ಹಾಕಿದ್ದರು. ಹಾಲಾಡಿ ಪಡೆ ಕಲ್ಲಡ್ಕ ಕಂಪನಿಗೆ ನೇರಾನೇರ ಸೆಡ್ಡುಹೊಡೆದು ನಿಂತುಬಿಟ್ಟಿತ್ತು! ಕುಂದಾಪುರದಲ್ಲಿ ಕದನ ಕುತೂಹಲ ಶುರುವಾಯ್ತು. ಮಾಜಿ ಶಾಸಕ ಹಾಲಾಡಿ ಮತ್ತು ಹಾಲಿ ಮಂತ್ರಿ ಕೋಟ ಕಡೆಯವರ ಜಿದ್ದಾಜಿದ್ದಿ ದಿನಕ್ಕೊಂದು ಆಯಾಮ ಪಡೆದುಕೊಳ್ಳತೊಡಗಿತ್ತು, ಹಾಲಾಡಿ ಬಿಜೆಪಿಗೂ ಅಧಿಕೃತವಾಗಿ ರಾಜೀನಾಮೆ ಬಿಸಾಕುತ್ತಿದ್ದಂತೆಯೇ ಬೀದಿ ಕಾಳಗವೂ ಆರಂಭವಾಯ್ತು.


ಹಾಲಾಡಿ ಬೆಂಬಲಿಗರಿಗೆ ಮಂತ್ರಿ ಕೋಟನ ಕಡೆಯವರು ಹೊಡೆದು ರಕ್ತ ಹರಿಸುವುದು, ಮಂತ್ರಿ ಸರ್ಕಾರಿ ಕಾರಿಗೆ- ಮನೆಗೇ ಹಾಲಾಡಿ ಹುಡುಗರು ಕಲ್ಲು ಹೊಡೆಯುವುದೆಲ್ಲ ಈಗ ನಡೆದುಹೋಗಿದೆ. 'ಉದಯವಾಣಿ' ಪತ್ರಿಕೆ ಹಾಲಾಡಿಗೆ ಡ್ಯಾಮೇಜಾಗುವಂಥ ಮಂತ್ರಿ ಬಳಗದ 'ಜಾಹೀರಾತು' ಪ್ರಕಟಿಸುತ್ತಿದೆ. ತನ್ಮೂಲಕ ಅಳಿದಿರುವ ಬಿಜೆಪಿಯನ್ನು ಕುಂದಾಪುರದಲ್ಲಿ ಕಟ್ಟಲು ಅಳಿಲುಸೇವೆ ಮಾಡುತ್ತಿದೆ. ಈ ಜಾಹೀರಾತಿಗೆ ಹಾಲಾಡಿ ಬಲವಾದ ತಿರುಗೇಟು ಕೊಡುವ ಪತ್ರಿಕಾಗೋಷ್ಠಿ ನಡೆಸಿದ ಬಳಿಕ ಕೋಟ ಬಾಲ ಮುದುಡಿಕೊಂಡಿದ್ದಾರೆ. ಆದರೆ ಕುಂದಾಪುರ ಬೂದಿ ಮುಚ್ಚಿದ ಕೆಂಡದಂತಾಗಿದೆ. ಬಿಲ್ಲವರು V/s ಬಂಟರು ಯುದ್ಧ ನಡೆವ ಭೀತಿ ಮೂಡಿದೆ. ಅಲ್ಲಿಗೆ ರಕ್ತಪಿಪಾಸು ಕಲ್ಲಡ್ಕನ ಕಿತಾಪತಿ ಫಲಪ್ರದವಾದಂತಾಗಿದೆ!!


ಈ ಗಲಾಟೆ-ಗೊಂದಲದ ನಡುವೆಯೇ ಹಾಲಾಡಿ ತನ್ನ ಭವಿಷ್ಯ ಎಲ್ಲಿ ಭದ್ರವಾಗಬಹುದೆಂಬ ಹುಡುಕಾಟಕ್ಕೆ ಇಳಿದಿದ್ದಾರೆ. ಜೆಡಿಎಸ್ ಮತ್ತು ಕಾಂಗ್ರೆಸ್ ಎರಡೂ ಪಾರ್ಟಿಯಿಂದ ಆತನಿಗೆ ಆಫರ್ ಬಂದಿದೆ. ಆದರೆ ಒಂಥರಾ ತಿಕ್ಕಲು ಈಗೋದ ಹಾಲಾಡಿ ಬಿಗುಮಾನ ಬಿಡುತ್ತಿಲ್ಲ. ಜೆಡಿಎಸ್‌ಗೆ ಹೋಗೋ ಮನಸ್ಸು ಆತನಿಗಿಲ್ಲ, ಬಿಜೆಪಿಯಲ್ಲಿ ಹಾಸುಂಡು ಬೀಸಿ ಒಗೆದ ಎಲೆಯಂತಾದ ಬಂಟ್ವಾಳದ ಮಾಜಿ ಮಂತ್ರಿ ನಾಗರಾಜ ಶೆಟ್ಟಿ ಯಾನೆ ಗೋಣಿ ನಾಗ ಮತ್ತು ಮಂಗಳೂರಿನ ಕ್ವಾಲಿಟಿ ಹೋಟೆಲ್-ಲಿಕ್ಕರ್ ಧಣಿ ಸದಾನಂದ ಶೆಟ್ಟಿ ಎಂಬ ಬಂಟರ ಭೂಪರು ಜೆಡಿಎಸ್ ಸೇರಿದ್ದಾಗಲೇ ಕುಮಾರಸ್ವಾಮಿ ಹಾಲಾಡಿಗೆ ಶಾಲು ಹೊದಿಸಿ ಬರಮಾಡಿಕೊಳ್ಳುತ್ತಾರೆಂಬ ವದಂತಿ ಹಬ್ಬಿತ್ತು. ಆದರೆ ಆ ಝೀರೋ ಲೆವೆಲ್‌ನಲ್ಲಿರುವ ಪಕ್ಷ ಸೇರಿದರೆ ಗೆಲ್ಲುವುದು ಕಷ್ಟವೆಂದು ಹಾಲಾಡಿ ಅತ್ತ ಹೋಗಲಿಲ್ಲ, ಕಾಂಗ್ರೆಸಿಗೆ ಹೋಗುವ ಮನಸ್ಸಿದ್ದರೂ ಅವರಾಗೇ ಎಳೆದೊಯ್ಯಲಿ ಎಂಬ ಒಣ ಪ್ರತಿಷ್ಠೆಯಲ್ಲಿದ್ದಾರೆ.


ಹಾಲಾಡಿ ಅದೆಷ್ಟೇ ಬಲಾಢ್ಯನೆಂದರೂ ಪಕ್ಷೇತರನಾಗಿ ನಿಂತು ಕುಂದಾಪುರದಲ್ಲಿ ಗೆಲ್ಲೋದು ಕಷ್ಟ. ಅದು ಆತನಿಗೂ ಗೊತ್ತಿದೆ. ಹಾಲಾಡಿಗೆ ಕಾಂಗ್ರೆಸ್ ಹೇಗೆ ಅನಿವಾರ್ಯವೋ, ಲಾಟ್-ಫುಟ್ ಪುಢಾರಿಗಳ ಬಿಡಾರದಂತಾಗಿರುವ ಕುಂದಾಪುರ ಕಾಂಗ್ರೆಸಿಗೆ ಹಾಲಾಡಿಯಂಥ ಪ್ರಭಾವಿ ಅಷ್ಟೇ ಅವಶ್ಯ! ಹಾಲಾಡಿಯನ್ನು ಕಾಂಗ್ರೆಸ್‌ಗೆ ಸೇರಿಸಲು ಸಂಸದ ಜಯಪ್ರಕಾಶ್ ಹೆಗ್ಡೆ, ಎಐಸಿಸಿ ಮಾಂಡಲೀಕ ಆಸ್ಕರ್ ಫರ್ನಾಂಡಿಸ್, ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿಯಂಥ ಘಟಾನುಘಟಿಗಳೇ ಮನಸ್ಸು ಮಾಡಿದ್ದಾರೆ. ಇಂಥದೊಂದು ಪ್ರಯತ್ನ ಕೆಪಿಸಿಸಿ ಮಟ್ಟದಲ್ಲಿ ಬಿರುಸಾಗಿಯೂ ನಡೆಯುತ್ತಿದೆ. ಆದರೆ ಹಾಲಾಡಿ ಶೆಟ್ಟರ ಪರಂಪರಾಗತ ಎದುರಾಳಿ-ಹಾಲಿ ಎಮ್ಮೆಲ್ಸಿ ಪ್ರತಾಪಚಂದ್ರ ಶೆಟ್ಟಿ ಒಬ್ಬರೇ ವಿರೋಧದ ಧ್ವನಿ ಎತ್ತಿದ್ದಾರೆ. ಪ್ರತಾಪ್‌ಗೆ ಹಿಂದಿನ ಮುಯ್ಯಿ ಇನ್ನೂ ತೀರಿಲ್ಲ, ಹಾಗಾಗಿ ಹದಿನೈದು ವರ್ಷದ ಹಿಂದಿನ ಸಿಟ್ಟು ಪ್ರತಾಪ್‌ನಲ್ಲಿ ಹಾಗೇ ಉಳಿದು ಬುಸುಗುಡುತ್ತಲೇ ಇದ್ದಾರೆ.

ಪ್ರತಾಪ್ ಕುಂದಾಪುರದ ಶಾಸಕನಾಗಿದ್ದಾಗ ಹಾಲಾಡಿ ಕಾಂಗ್ರೆಸ್‌ನಲ್ಲೇ ಇದ್ದಾತ. ಇಂದು ಹಾಲಾಡಿ ಬಿಜೆಪಿ ಬಿಡಲು ಯಾವ ಎ.ಜಿ. ಕೊಡ್ಗಿ ಕಾರ್ಯಕರ್ತನೋ, ಅಂದು ಹಾಲಾಡಿ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಲಿಕ್ಕೂ ಇದೇ ಕೊಡ್ಗಿ ಫಿಟ್ಟಿಂಗ್ ನೆಪವಾಗಿತ್ತು! ಆಗ ಕಾಂಗ್ರೆಸ್‌ನಲ್ಲಿದ್ದ ವಿಪ್ರೋತ್ತಮ ಕೊಡ್ಗಿಗೆ ಶೂದ್ರ ಪ್ರತಾಪ್ ಬೆಳೆಯುವುದು ಬೇಕಾಗಿರಲಿಲ್ಲ, ಪ್ರತಾಪ್‌ನ ಹಣಿಯಲು ತರತರದ ತಂತ್ರ ಮಾಡಿ ವಿಫಲನಾದಾಗ ಕೊಡ್ಗಿ ಬಿಜೆಪಿ ಸೇರಿ ಆತನ ವಿರುದ್ಧವೇ ಚುನಾವಣೆಗೆ ನಿಂತು ಬಿದ್ದಿದ್ದರು. ತನ್ನನ್ನೂ ಕುಂದಾಪುರದ ಜನ ನಂಬುವುದಿಲ್ಲ ಎಂದು ಗೊತ್ತಾದಾಗ ಶುದ್ಧ ಚಾರಿತ್ರ್ಯದ ಹಾಲಾಡಿಯನ್ನು ಪ್ರತಾಪ್ ವಿರುದ್ಧ ಎತ್ತಿಕಟ್ಟಿ ಸೇಡು ತೀರಿಸಿಕೊಂಡಿದ್ದರು. ಈಗ ಹಾಲಾಡಿ ಮೇಲೂ ಅಂಥದೇ ಜಾತಿ ಪ್ರೀತಿಯ ಹಳೇ ಅಸ್ತ್ರ ಪ್ರಯೋಗಿಸುತ್ತಿದ್ದಾರೆ ಕೊಡ್ಗಿ.


ಆಸ್ಕರ್ ಫರ್ನಾಂಡಿಸ್



ಜಯಪ್ರಕಾಶ್ ಹೆಗ್ಡೆ


ಕೋಟಾ ಶ್ರೀನಿವಾಸ ಪೂಜಾರಿ


ಪ್ರತಾಪ್‌ಚಂದ್ರ ಶೆಟ್ಟಿ

ಹಾಲಾಡಿ ಬಿಜೆಪಿಯಿಂದ ಹೊರಬಿದ್ದರೆ ತನ್ನ ಮಗ ಕಿರಣ ಕೊಡ್ಗಿ ಎಂಬ ಮೊದ್ದಣಗೆ ಎಮ್ಮೆಲ್ಲೆಗಿರಿ ಸೀಟು ಸಿಗುತ್ತದೆಂಬ ಪುತ್ರ ವ್ಯಾಮೋಹ ಮುದಿ ಕೊಡ್ಗಿಗೆ. ಕೊಡ್ಗಿ ದುರಂತವೆಂದರೆ ಆತನನ್ನು ಮಗನೇ ನಂಬುತ್ತಿಲ್ಲ, ಕಿರಣ ಕೊಡ್ಗಿ ಅಪ್ಪನ ಬಿಜೆಪಿ ಬಿಟ್ಟು ಹಾಲಾಡಿ ಬೆನ್ನಿಗೆ ನಿಂತಿದ್ದಾರೆ. ಇಷ್ಟಾದರೂ 80ರ ಗಡಿ ದಾಟಿರುವ ಕೊಡ್ಗಿಗೆ

ಬಿದರಿ ನಡಿಗೆ ಕಾಂಗ್ರೆಸ್ ಕಡೆಗೆ



ವೀರಪ್ಪನ್ ಕಾರ್ಯಾಚರಣೆ ವೇಳೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುವ ಆರೋಪದಿಂದಾಗಿ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಹುದ್ದೆಯನ್ನು ಕಳೆದುಕೊಂಡಿದ್ದ ಶಂಕರ ಮಹಾದೇವ ಬಿದರಿ ಈಗ ಕಾಂಗ್ರೆಸ್ ಪಕ್ಷದ ಬಾಗಿಲಿಗೆ ಬಂದು ತಲುಪಿದ್ದಾರೆ.

'ನನಗೆ ಗೌರವಯುತವಾದ ನಿವೃತ್ತಿಗೆ ಅವಕಾಶ ಕೊಡಿ' ಎಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಬಿದರಿ ಅದರಲ್ಲಿ ಯಶಸ್ವಿಯಾಗಿ ಆರೋಪಮುಕ್ತರಾಗಿ ಈಗ ರಾಜಕಾರಣದತ್ತ ಮುಖ ಮಾಡಿದ್ದಾರೆ.

ಮೂಲತಃ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಬನಹಟ್ಟಿಯವರಾದ ಬಿದರಿ ಬಣಜಿಗ ಸಮುದಾಯದ ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿದವರು. ಏಳನೇ ತರಗತಿಯವರೆಗೆ ಇದೇ ಊರಿನ ಸರ್ಕಾರಿ ಶಾಲೆಯಲ್ಲಿ ಓದಿ ಮುಂದೆ 8ನೇ ತರಗತಿಯಿಂದ 10ನೇ ತರಗತಿಯವರೆಗೆ SRA ಹೈಸ್ಕೂಲಿನಲ್ಲಿ ಓದಿ ಪ್ರಥಮ ಶ್ರೇಣಿಯಲ್ಲಿ ಮುಗಿಸಿದರು. ಅನಂತರ ಪಿಯುಸಿಯನ್ನು ನಿಪ್ಪಾಣಿಯ ಬಾಗೇವಾಡಿ ಕಾಲೇಜಿನಲ್ಲಿ ಮುಗಿಸಿದರು. 1970 ರಲ್ಲಿ ಕೆಲಸ ಅರಸಿ ಮುಂಬೈ ಸೇರಿದ ಬಿದರಿ ಅಲ್ಲಿನ ಬ್ಲೀಜ್ ಪತ್ರಿಕೆಯ ಮುದ್ರಣಾಲಯದಲ್ಲಿ ಬಂಡಲ್ ಕಟ್ಟುವ ಕೆಲಸಕ್ಕೆ ಸೇರಿದರು.

ಅಲ್ಲಿಂದಲೇ ಅವರ ಬದುಕಿನ ಶುಕ್ರದೆಸೆ ಆರಂಭವಾಯಿತೆನ್ನಬಹುದು. Post and Telegraph ಇಲಾಖೆಯಲ್ಲಿ ಟೆಲಿಫೋನ್ ಆಪರೇಟರ್ ಆಗಿ 1971 ರಲ್ಲಿ ಆಯ್ಕೆಯಾಗಿ ಇಂಡಿಯಲ್ಲಿ ಕೆಲಸ ಆರಂಭಿಸಿದರು. ಹಾಗೆಯೇ ಧಾರವಾಡದ ಕಿಟೆಲ್ ಕಾಲೇಜಿನಿಂದ External ಬಿ.ಎ. ಪದವಿ ಪಡೆದು 1975 ರಲ್ಲಿ KAS ಪಾಸು ಮಾಡಿದರು. ಅಫಜಲ್‌ಪುರದಲ್ಲಿ ತಹಶೀಲ್ದಾರರಾಗಿ, ಜೇವರ್ಗಿಯಲ್ಲಿ B.D.O ಆಗಿ, ಚಿಕ್ಕಮಗಳೂರು A.C. ಯಾಗಿ ಕಾರ್ಯ ನಿರ್ವಹಿಸಿ 1978 ರಲ್ಲಿ IPS ಪಾಸು ಮಾಡಿ ರಾಜ್ಯ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ನಿಭಾಯಿಸಿದರು.

ಬಿದರಿ ಪ್ರಮುಖವಾಗಿ ಬೆಳಕಿಗೆ ಬಂದದ್ದು ವೀರಪ್ಪನ್ ಕಾರ್ಯಾಚರಣೆಗೆ ರಚಿಸಲಾಗಿದ್ದ STF ನ ಉಪ ಕಮಾಂಡರ್ ಆಗಿದ್ದಾಗ. ಸಾಕಷ್ಟು ಅಧಿಕಾರಿಗಳನ್ನು, ಜನರನ್ನು ಹತ್ಯೆ ಮಾಡಿದ್ದಲ್ಲದೆ, ಗಂಧದ ಮರಗಳ ಕಳ್ಳ ಸಾಗಾಣಿಕೆ, ಆನೆ ದಂತಗಳ ವ್ಯಾಪಾರದಿಂದಾಗಿ ಕುಖ್ಯಾತಿ ಗಳಿಸಿದ್ದ ವೀರಪ್ಪನ್ ತಮಿಳುನಾಡು ಹಾಗು ಕರ್ನಾಟಕ ಎರಡೂ ರಾಜ್ಯಗಳಿಗೂ ತಲೆನೋವಾಗಿ ಪರಿಣಮಿಸಿದ್ದ.

ಬಿದರಿ STF ಮುಖ್ಯಸ್ಥರಾದ ಮೇಲೆ ಸಾಕಷ್ಟು ಸಂಖ್ಯಾಬಲವಿದ್ದ ವೀರಪ್ಪನ್‌ನ ಬಲ ಅಡಗಿಸುವಲ್ಲಿ ಯಶಸ್ವಿಯಾದರಾದರೂ ಗಣನೀಯ ಪ್ರಮಾಣದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯೂ ನಡೆಯಿತು. ಬಿದರಿಯವರ ಪಡೆ ವೀರಪ್ಪನ್ ಬಗೆಗಿನ ಮಾಹಿತಿಗಾಗಿ ಹಾಗು ಅಗತ್ಯ ವಸ್ತುಗಳ ಸರಬರಾಜು ತಡೆಯುವ ಸಲುವಾಗಿ ಕಾಡಂಚಿನ ಗಿರಿಜನರನ್ನು ಸಾಕಷ್ಟು ಪೀಡಿಸಿತು. ಮಹಿಳೆಯರ ಮೇಲೆ, ಕೂಲಿಗಾರರ ಮೇಲೆ ಕಾಡುತ್ಪನ್ನ ಆಯ್ದು ಜೀವನ ಸಾಗಿಸುವ ಅಮಾಯಕ ಜನರ ಮೇಲೆ, ಸಾಕಷ್ಟು ದೌರ್ಜನ್ಯ ನಡೆಸಿತು. STF ನ ಈ ಉಪಟಳ ಅತೀಯಾದಾಗ ಸ್ವತಃ ಮಾನವ ಹಕ್ಕುಗಳ ಆಯೋಗ ಹಾಗು ರಾಷ್ಟ್ರೀಯ ಮಹಿಳಾ ಆಯೋಗಗಳು ಮಧ್ಯ ಪ್ರವೇಶ ಮಾಡಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದವು. ಆ ವರದಿಯೇ ಮುಂದೆ ಶಂಕರಬಿದರಿಯವರ ಸೇವಾವಧಿಯ ಕೊನೆಯ ಗಳಿಗೆಯಲ್ಲಿ ಮುಳುವಾಯಿತು.

ಸಾಕಷ್ಟು ಆತ್ಮವಿಶ್ವಾಸದಿಂದಲೇ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಹುದ್ದೇರಿದ ಬಿದರಿಯವರಿಗೆ ಹಳೆಯ ಈ ವರದಿ ಕಂಟಕವಾಗಬಹುದೆಂಬ ಕಲ್ಪನೆ ಕೂಡ ಇರಲಿಲ್ಲ, ಆದರೆ ಆ ವರದಿ ಹೈಕೋರ್ಟ್ ಸೇರಿತು. ಇತ್ತ ರಾಜ್ಯದಲ್ಲಿ ಲಿಂಗಾಯತ ಸಮುದಾಯದ ಯಡಿಯೂರಪ್ಪ ಅಧಿಕಾರ ಕಳೆದುಕೊಂಡು ಸದಾನಂದಗೌಡ ದೇವೇಗೌಡರ ಆಣತಿಯಂತೆ ಸರ್ಕಾರ ನಡೆಸುತ್ತಿದ್ದರು. ಅಷ್ಟರಲ್ಲಾಗಲೇ ದೇವೇಗೌಡರೊಂದಿಗಿನ ಬಿದರಿಯವರ ಸಂಬಂಧ ಹಳಸಿ ಹೋಗಿತ್ತು. ಸ್ವತಃ ದೇವೇಗೌಡರೇ ಬಿದರಿ ವಿರುದ್ಧ ಗುಡುಗಿದ್ದರು. ನಂತರದ ದಿನಗಳು ಬಿದರಿಯವರಿಗೆ ಶಾಪವಾಗಿ ಪರಿಣಮಿಸಿದವು. ರಾಜ್ಯ ಹೈಕೋರ್ಟ್ ಬಿದರಿ ವಿರುದ್ಧ ತೀರ್ಪು ನೀಡಿದರೆ ರಾಜ್ಯ ಸರಕಾರ ಸುಗ್ರೀವಾಜ್ಞೆ ಹೊರಡಿಸಿ ಅಧಿಕಾರದಿಂದ ದೂರ ಉಳಿಯುವಂತೆ ಮಾಡಿತು.

ಇದರಿಂದಾಗಿ ಸೇವಾವಧಿಯ ಕೊನೆ ಗಳಿಗೆಯಲ್ಲಿ ಸಾಕಷ್ಟು ನೋವು ಅನುಭವಿಸಿದ ಬಿದರಿ ಹುದ್ದೆಯ ಆಸೆಯನ್ನೇ ತೊರೆದರು. ನಂತರ ತಮಗೆ ಅಂಟಿದ ಕಳಂಕ ತೊಳೆದುಕೊಳ್ಳಲು ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿ 'ನನ್ನ 41 ವರ್ಷಗಳ ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿ ನನಗೆ ಗೌರವಯುತವಾದ ನಿವೃತ್ತಿಗೆ ಅವಕಾಶ ಕೊಡಿ. ನನಗೆ ಯಾವ ಹುದ್ದೆಯೂ ಬೇಡ' ಎಂದು ಕೇಳಿಕೊಂಡರು. ಅತ್ತ ಸುಪ್ರೀಂನಲ್ಲಿ ಕೇಸಿನ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿ ರಾಜಕಾರಣಕ್ಕಿಳಿಯುವ ಮಾತುಕತೆ ಆರಂಭಿಸಿದ್ದರು. ಕೇಂದ್ರನಾಯಕ ಆಸ್ಕರ್ ಫರ್ನಾಂಡಿಸ್ ಮತ್ತು ಕೆ.ಪಿ.ಸಿ.ಸಿ. ರಾಜ್ಯಾಧ್ಯಕ್ಷ ಪರಮೇಶ್ವರಪ್ಪ ಅವರೊಂದಿಗೆ ಸಾಕಷ್ಟು ಸುತ್ತಿನ ಮಾತುಕತೆಗಳಾಗಿವೆ. ಕೇಂದ್ರ ಮಟ್ಟದಲ್ಲಿ ಉನ್ನತ ಹುದ್ದೆ ಕೊಡುವ ಭರವಸೆಯನ್ನು ಕೇಂದ್ರ ಕಾಂಗ್ರೆಸ್‌ನ ನಾಯಕರು ನೀಡಿದ್ದಾರೆ. ಸುಪ್ರೀಂ ಆದೇಶ ಬರುವವರೆಗೆ ಕಾಯುತ್ತಿದ್ದ ಬಿದರಿ ತೀರ್ಪು ತಮ್ಮ ಪರವಾಗಿ ಬಂದನಂತರ ಕಾಂಗ್ರೆಸ್ ನಾಯಕರೊಂದಿಗೆ ಅಂತಿಮ ಸುತ್ತಿನ ಮಾತುಕತೆ ನಡೆಸುತ್ತಿದ್ದಾರೆ. ದೇಶದಲ್ಲೇ ಪಿ. ಚಿದಂಬರಂ ಕುಟುಂಬ ಹೊರತುಪಡಿಸಿದರೆ 6 ಜನ

ಪುರೋಹಿತಶಾಹಿ ಪ್ರೊಗರು ಕಡಿಮೆಯಾಗಿಲ್ಲ. ಈ ಕೊಡ್ಗಿ ಮತ್ತು ಪ್ರತಾಪ್ ಈಗ ಕುಂದಾಪುರದ ರಾಜಕಾರಣದಲ್ಲಿ ಅವಧಿ ಮೀರಿದ ಪುಢಾರಿಗಳಂತಾಗಿದ್ದಾರೆ. ಚೆಲಾವಣೆಯಲ್ಲಿರುವ ಹಾಲಾಡಿ ಸುತ್ತ ಕಾಂಗ್ರೆಸ್ ಮತ್ತು ಬಿಜೆಪಿಯ ಟಿಕೆಟ್ ತಂತ್ರಗಾರಿಕೆ ಗಿರಕಿ ಹೊಡೆಯುತ್ತಿದೆ.

ಕಾಂಗ್ರೆಸ್‌ನ ಬಹುಪಾಲು ಲೀಡರ್‌ಗಳು-ಕಾರ್ಯಕರ್ತರು ಹಾಲಾಡಿಯತ್ತ ಆಕರ್ಷಿತರಾಗಿದ್ದಾರೆ. ಹಾಗೆಯೇ ಹಾಲಾಡಿ ಬಣವೂ ಕಾಂಗ್ರೆಸ್ಸೇ ಬೆಟರ್ ಎಂಬ ತೀರ್ಮಾನಕ್ಕೆ ಬಂದಿದೆ. ಪ್ರತಾಪ್ ಚಂದ್ರ ಶೆಟ್ಟರನ್ನು 'ಥಂಡ' ಮಾಡಲು ಆಸ್ಕರ್ ಫರ್ನಾಂಡಿಸ್ 'ಸರ್ಪಾಸ್ತ್ರ'ಕ್ಕೆ ಸಾಣೆ ಹಾಕುತ್ತಿದ್ದಾರೆ. ಹಾಲಾಡಿಗೂ ಕಾಂಗ್ರೆಸ್ ಬಿಟ್ಟರೆ ಗತಿಯಿಲ್ಲ. ಸ್ವಜಾತಿ ಬಂಧುವೂ ಆಗಿರುವ ಸಂಸದ ಜಯಪ್ರಕಾಶ್ ಹೆಗ್ಡೆ ಹಾಲಾಡಿಯನ್ನು ಕಾಂಗ್ರೆಸ್‌ಗೆ ತರುವ ಕಟಿಪಿಯಲ್ಲಿದ್ದಾರೆ. ಹೆಗ್ಡೆ ಸಂಧಾನ ಸಕ್ಸಸ್ ಆಗುವ ಹಂತದಲ್ಲಿದೆ. ಎಐಸಿಸಿ-ಕೆಪಿಸಿಸಿ ಹಾಲಾಡಿ ಸೇರ್ಪಡೆಗೆ ಹಸಿರು ನಿಶಾನೆ ತೋರಿಸಿದೆ ಎಂಬ ಗುಲ್ಲು ಜಿಲ್ಲೆಯಲ್ಲಿ ಹಬ್ಬಿದೆ.

ಬಂಟರ ಹಾಲಾಡಿ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಬಿಲ್ಲವರ ಕೋಟ ಶ್ರೀನಿವಾಸ ಪೂಜಾರಿ ಅಥವಾ ಗೇರು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮಾಣಿ ಗೋಪಾಲರನ್ನು ಬಿಜೆಪಿಯಿಂದ ನಿಲ್ಲಿಸುವ ಪ್ಲಾನ್ ಕಲ್ಲಡ್ಕ-ಕೊಡ್ಗಿ ಜೋಡಿ ಹೆಣೆದಿದೆ. ಹಲವು ಬಾರಿ ಬೈಂದೂರು ಮತ್ತು ಕುಂದಾಪುರದಲ್ಲಿ ವಿವಿಧ ಪಕ್ಷಗಳಿಂದ ಸ್ಪರ್ಧಿಸಿ ಸೋತಿರುವ ಮಾಣಿ ಗೋಪಾಲ್ ಆಗಲಿ, ಮುಖೇಡಿಯಂಥ ಕೋಟ ಶ್ರೀನಿವಾಸ ಪೂಜಾರಿಯಾಗಲಿ ಹಾಲಾಡಿ ಎದುರು ದುರ್ಬಲರು. ಕಾಂಗ್ರೆಸ್‌ನಿಂದ ನಿಂತರೆ ಹಾಲಾಡಿಗೆ ಕೇಕ್‌ವಾಕ್! ಕಾಂಗ್ರೆಸ್‌ಗೆ ನಿವ್ವಳ ಲಾಭ.

ಬಿಲ್ಲವರಿಗೆ ಕುಂದಾಪುರದಲ್ಲಿ ಟಿಕೆಟ್ ಕೊಡಬೇಕಾದ ಅನಿವಾರ್ಯತೆ ಬಂದರೆ ಕಲ್ಲಡ್ಕ- ಕೊಡ್ಗಿ ಬಂಟರ ಸಮಾಧಾನಿಸಲು 'ಬ್ರಾಹ್ಮಣ ಬಲಿ' ಪಡಬೇಕಾಗಿ ಬರುತ್ತದೆ. ಪಕ್ಕದ ಉಡುಪಿ ಶಾಸಕ ರಘುಪತಿ ಭಟ್ ಎಂಬ ಹೆಂಡತಿ ಹಂತಕನಿಗೆ ಗೇಟ್ ಪಾಸ್ ಕೊಡುವ ಯೋಚನೆ ಕಲ್ಲಡ್ಕರ ಟಿಕೆಟ್ ಕಮಿಟಿ ಮಾಡುತ್ತಿದೆ. ಹೆಂಡತಿ ಪದ್ಮಪ್ರಿಯಾಳ ಸಂಶಯಾಸ್ಪದ 'ಹತ್ಯೆ' ಬಳಿಕ ಭಟ್ಟನ ರಾಜಕೀಯ ಚಟ್ಟವನ್ನು ಉಡುಪಿ ಮತದಾರರು ರೆಡಿ ಮಾಡಿದ್ದಾರೆ. ಹಾಗಾಗಿ ಆತನಿಗೆ ಈ ಬಾರಿ ಟಿಕೆಟ್ ಕೊಡಬಾರದೆಂಬ ಲೆಕ್ಕಾಚಾರ ಕಲ್ಲಡ್ಕ ಹಾಕಿದ್ದಾರೆ. ಭಟ್ಟನ ಬದಲಿಗೆ ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷನಾದ ಉದಯಕುಮಾರ್ ಶೆಟ್ಟಿಗೆ ಛಾನ್ಸ್ ಕೊಡಲು ಆರೆಸ್ಸೆಸ್ ನಿರ್ಧರಿಸಿದೆಯಂತೆ.

ಅಲ್ಲಿಗೆ ಹಾಲಾಡಿ ಎಂಬ ಬಂಟರ ಭೂಪ ಬಿಜೆಪಿಯಿಂದ ಹೊರಹೋಗುವಂತಾದ 'ಜಾತಿ ಪ್ರಹಸನ'ದ ಡ್ಯಾಮೇಜ್ ಇನ್ನೊಬ್ಬ ಬಂಟರ ಬಹುದ್ದೂರನಿಗೆ ಟಿಕೆಟ್ ಕೊಟ್ಟರೆ ಸರಿದೂಗುತ್ತದೆ ಎಂಬುದು ಬಿಜೆಪಿಯ ಬ್ರಾಹ್ಮಣ ಯಜಮಾನರ ಭಾವನೆ. ಆದರೆ ಅದೆಂಥ ತಂತ್ರ-ಮಂತ್ರ ಮಾಡಿದರೂ ಉಡುಪಿ ಜಿಲ್ಲೆಯಲ್ಲಿ ಈ ಬಾರಿ ಬಿಜೆಪಿಯನ್ನು ಜನ ಭೂಗತ ಮಾಡುವ ಸಾಧ್ಯತೆಯೇ ಹೆಚ್ಚು. ಅಷ್ಟು ವಾಕರಿಕೆ ಬಿಜೆಪಿ-ಆರೆಸ್ಸೆಸ್‌ನ ಡಾನ್-ಡಾಕೂಗಳ ಮೇಲೆ ಮತದಾರರಿಗೆ ಬಂದಿದೆ!!

● ನಹುಷ


IAS-IPS ಅಧಿಕಾರಿಗಳಿರುವ ಬಿದರಿ ಕುಟುಂಬ ಕಾಂಗ್ರೆಸ್‌ಗೆ ಬಂದರೆ ಏನೆಲ್ಲ ಲಾಭವಾಗಬಹುದು ಎಂದು ನಾಯಕರು ಲೆಕ್ಕ ಹಾಕುತ್ತಿದ್ದಾರೆ. ಲಿಂಗಾಯತ ವರ್ಗದ ಎಲ್ಲ ಉಪ ಜಾತಿಗಳೊಂದಿಗೂ ಬಿದರಿ ಕುಟುಂಬ ವೈವಾಹಿಕ ಸಂಬಂಧ ಹೊಂದಿದೆ.

ಸ್ವತಃ ಶಂಕರ ಬಿದರಿ ಬಣಜಿಗರಾದರೂ ಅವರ ಪತ್ನಿ ಉಮಾದೇವಿ ಶಿವಶಿಂಪಿ ಪಂಗಡಕ್ಕೆ ಸೇರಿದವರು. ಅವರು ಮಧುರಚೆನ್ನರ ಮಗಳೂ ಹೌದು. ಇವರ ಸಹೋದರ ರಾಜು ಬಿದರಿಯವರ ಪತ್ನಿ ವಿಜಯಲಕ್ಷ್ಮಿ ಪಂಚಮಸಾಲಿ ಸಮುದಾಯದವರಾದರೆ ಇನ್ನೊಬ್ಬ ಸಹೋದರ ಸುಭಾಸ್ ಬಿದರಿಯವರ ಪತ್ನಿ ಶ್ರೀದೇವಿ ಗಾಣಕಾರ ಸಮುದಾಯಕ್ಕೆ ಸೇರಿದವರು. ತಂಗಿ ಸಾವಿತ್ರಿ ಹಾಗು ಚನ್ನಮ್ಮ ಇವರನ್ನು ಸಾದರ ಲಿಂಗಾಯತ ವ್ಯಕ್ತಿಗಳಿಗೆ ಕೊಟ್ಟು ಮದುವೆ ಮಾಡಲಾಗಿದೆ. ಸ್ವತಃ ಬಿದರಿಯವರ ಮಗಳು IAS ಅಧಿಕಾರಿ ವಿಜಯಲಕ್ಷ್ಮಿ, ಮಗ IPS ಅಧಿಕಾರಿ ವಿಜೇಂದ್ರ ಕೂಡ ಬೇರೆ-ಬೇರೆ ಸಮುದಾಯಕ್ಕೆ ಸೇರಿದವರನ್ನು ಮದುವೆಯಾಗಿದ್ದಾರೆ. ಹೀಗಾಗಿ ಲಿಂಗಾಯತ ಸಮುದಾಯದ ಯಾವುದೇ ಒಳಪಂಗಡಕ್ಕೆ ಮೀಸಲಾಗಿರದ ಬಿದರಿ ಕುಟುಂಬ ಅಖಂಡ ಲಿಂಗಾಯತ ಸಮುದಾಯದ ಜನರನ್ನೂ ಪಕ್ಷಕ್ಕೆ ಸೆಳೆಯಬಹುದೆಂಬ ಲೆಕ್ಕಾಚಾರ ಕಾಂಗ್ರೆಸ್ ನಾಯಕರದು. ಇದೆಲ್ಲದರ ಫಲವಾಗಿ ಶಂಕರಬಿದರಿ ಕಾಂಗ್ರೆಸ್ ಸೇರುವುದು ಖಚಿತವಾಗಿದೆ. ಇದರ ಭಾಗವಾಗಿ ಅವರ ಸಹೋದರ ರಾಜು ಬಿದರಿ ಈಗಾಗಲೇ ಜೆ.ಡಿ.ಎಸ್ ತೊರೆದು ಕಾಂಗ್ರೆಸ್ ಸೇರಿ ಟಿಕೆಟ್ ಆಕಾಂಕ್ಷೆಯಿಂದ ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. ಶಂಕರಬಿದರಿ ಸೋನಿಯಾ ಸಮ್ಮುಖದಲ್ಲಿ ಅಧಿಕೃತವಾಗಿ ಪಕ್ಷ ಸೇರುವುದಷ್ಟೆ ಈಗ ಬಾಕಿ.

● ಮಹಾಲಿಂಗಪ್ಪ ಆಲಬಾಳ

ಅಂಬಿಯ ಕಬಡ್ಡಿ ಕಪ್ಪು, ಚೆಪ್ಪು

ಬರುವ ಚುನಾವಣೆಯಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಶಾಸಕನಾಗುವ ಕನಸು ಕಾಣುತ್ತಿರುವ ಮಾಜಿ ಸಂಸದ ಅಂಬರೀಶ್ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 'ಅಂಬಿ ಗೋಲ್ಡ್ ಕಪ್ ಕಬಡ್ಡಿ' ಆಡಿಸುವ ಮೂಲಕ ಭರ್ಜರಿಯಾಗೇ ಈ ಕ್ಷೇತ್ರಕ್ಕೆ ಎಂಟ್ರಿ ಕೊಟ್ಟಿದ್ದಾರೆ.




ಕಳೆದ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಜನರಿಂದ ಹೀನಾಯವಾಗಿ ತಿರಸ್ಕರಿಸಲ್ಪಟ್ಟ ಅಂಬರೀಶ್‌ರನ್ನು ಈ ಬಾರಿ ಮಂಡ್ಯ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲು ಅಂಬಿ ಆಪ್ತರು ಮತ್ತು ಹಿಂಬಾಲಕರು ಪ್ರಯತ್ನ ನಡೆಸಿದ್ದಾರೆ. ಶತಾಯಗತಾಯ ಅಂಬಿಯನ್ನು ಎಂಎಲ್‌ಎ ಮಾಡಬೇಕೆಂದು ಹೊರಟಿರುವ ಇವರೆಲ್ಲಾ ಸೇರಿ ಅವರಿಂದ ಕೋಟ್ಯಾಂತರ ರೂ. ಖರ್ಚು ಮಾಡಿಸಿ ಕಬಡ್ಡಿ ಆಡಿಸಿದ್ದಾರೆ. ಮಂಡ್ಯ ಜಿಲ್ಲೆ ತೀವ್ರ ಬರಗಾಲದಿಂದ ತತ್ತರಿಸುತ್ತಿದ್ದರೂ, ಅದನ್ನೆಲ್ಲ ಲೆಕ್ಕಿಸದೆ ಕಬಡ್ಡಿಗಾಗಿ ಒಂದು ಕೋಟಿಗೂ ಅಧಿಕ ಹಣ ಖರ್ಚು ಮಾಡಿರುವ ಅಂಬರೀಶ್ ವಿರುದ್ಧ ಜಿಲ್ಲೆಯ ಜನತೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಹಸಿದು ಸೊರಗಿರುವ ಜಾನುವಾರುಗಳಿಗೆ ಮೇವು ನೀಡಲು ಈ ಹಣವನ್ನು ಬಳಸಿದ್ದರೆ ಅಂಬಿಯ ಉದಾರತೆಯನ್ನು ಜಿಲ್ಲೆಯ ಅನ್ನದಾತ ಮೆಚ್ಚುತ್ತಿದ್ದ. ಆದರೆ ತನ್ನ ಭಟ್ಟಂಗಿ ಅನುಯಾಯಿಗಳ ಮಾತು ಕೇಳಿ ಅಂಬಿ ಇದ್ದ ಅಲ್ಪಸ್ವಲ್ಪ ಜನಪ್ರಿಯತೆಯನ್ನು ಬರಗಾಲದ ಸಂದರ್ಭದಲ್ಲಿ ಕಳೆದುಕೊಂಡಿದ್ದಾರೆ.

ಭಟ್ಟಂಗಿಗಳ ದರ್ಬಾರು


ರಾಷ್ಟ್ರೀಯ ಅಮೆಚೂರು ಕಬಡ್ಡಿ ಅಸೋಸಿಯೇಷನ್ ಅಡಿಯಲ್ಲಿ ಜನವರಿ 10 ರಿಂದ 13ರವರೆಗೆ ನಾಲ್ಕು ದಿನಗಳ ಕಾಲ ಮಂಡ್ಯದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಮಟ್ಟದ ಕಬಡ್ಡಿ ಪಂದ್ಯಾವಳಿ ನಡೆಯಿತು. ಇದರ ಸಂಪೂರ್ಣ ಖರ್ಚು-ವೆಚ್ಚ ನೋಡಿಕೊಂಡಿದ್ದು ಅಂಬರೀಶ್. ಅಂದು ನಡೆದ ಉದ್ಘಾಟನಾ ಸಮಾರಂಭದಲ್ಲಿ "ನನಗೆ 60 ವರ್ಷ ತುಂಬಿದ ಸಂಭ್ರಮವನ್ನು ಬೆಂಗಳೂರಿನಲ್ಲಿ ಆಚರಿಸಲಾಯಿತು. ಈ ಸಂಭ್ರಮದಲ್ಲಿ ನನ್ನ ಹುಟ್ಟೂರಿನ ಜನರನ್ನು ಸರಿಯಾಗಿ ಗಮನಿಸಲು ಹಾಗೂ ಹತ್ತಿರದಿಂದ ಕಣ್ತುಂಬಿಕೊಳ್ಳಲು ಆಗದ ಕಾರಣ 'ಅಂಬಿ ಗೋಲ್ಡ್ ಕಪ್' ಮೂಲಕ ಆ ಆಸೆ ಈಡೇರಿಸಿಕೊಳ್ಳುತ್ತಿದ್ದೇನೆ" ಎಂದು ಅಂಬಿ ಹೇಳಿದ್ದರು.



ಪಂದ್ಯಾವಳಿ ನಡೆದಷ್ಟು ದಿನ ಸರ್ ಎಂ.ವಿ. ಕ್ರೀಡಾಂಗಣದಲ್ಲಿ ಅಂಬಿ ಭಟ್ಟಂಗಿಗಳ ಅಂಧಾ ದರ್ಬಾರು ಯಾವುದೇ ಅಡೆತಡೆಯಿಲ್ಲದೆ ನಡೆಯಿತು. ಅಂಬಿ ಶಿಷ್ಯ ಅಮರಾವತಿ ಚಂದ್ರಶೇಖರ್ ಸ್ವಾಗತ ಭಾಷಣವನ್ನು ಪೆದ್ದುಪೆದ್ದಾಗಿ, ಅಸಂಬದ್ಧವಾಗಿ ಮಾಡಿ ಜಿಲ್ಲೆಯ ಮಾನವನ್ನು ರಾಷ್ಟ್ರಮಟ್ಟದಲ್ಲಿ ಹರಾಜು ಹಾಕಿದರು. ಪಿ.ಎಂ.ಸೋಮಶೇಖರ್, ರವಿಶಂಕರೇಗೌಡ, ಬೇಲೂರು ಸೋಮಶೇಖರ್, ಸಚ್ಚಿದಾನಂದ ಸೇರಿದಂತೆ ಅಂಬಿಯ ಭಟ್ಟಂಗಿ ಪಡೆಯೇ ಕ್ರೀಡಾಂಗಣದಲ್ಲಿ ಮೆರೆದಾಡಿತು. ನಟರಾದ ಸುದೀಪ್ ಮತ್ತು ದರ್ಶನ್‌ರನ್ನು ಕರೆಸಿ ಕ್ರೀಡಾಂಗಣದಲ್ಲಿ ಪೆರೇಡ್ ಮಾಡಿಸಲಾಯಿತು. ಜಿಲ್ಲೆಯ ಎಲ್ಲರನ್ನೂ ಸೇರಿಸಿಕೊಂಡು ನಡೆಯಬೇಕಿದ್ದ ಕಬಡ್ಡಿ ಕ್ರೀಡಾಕೂಟ ಸಂಪೂರ್ಣ ಕಾಂಗ್ರೆಸ್‌ಮಯವಾಗಿತ್ತು. ಆದರಲ್ಲೂ ಅಂಬಿಯ ಭಟ್ಟಂಗಿ, ಹೊಗಳುಪಡೆಯ ಅಂಧಾ ದರ್ಬಾರ್ ಎಂದು ಕರೆದರೆ ಹೆಚ್ಚು ಸೂಚ್ಯವಾಗುತ್ತದೆ.

ಅಂಬಿಯ ಸೋಮಾರಿತನ

ಅಂಬರೀಶ್ ಉತ್ತಮ ಕಲಾವಿದ ನಿಜ. ಸಿನಿಮಾಗಳಲ್ಲಿ ಬಡಜನರ ಪರವಾಗಿ, ವ್ಯವಸ್ಥೆ ವಿರುದ್ಧ ಹೋರಾಡುವ ನಾಯಕನಾಗಿ ಜನತೆಗೆ ಅಚ್ಚುಮೆಚ್ಚು, ಅವರ ನೇರ ಮಾತುಗಳೂ ಜನರಿಗೆ ಇಷ್ಟ. ಆದರೆ ಸಿನಿಮಾದಲ್ಲಿ ನಾಯಕನಾಗಿ ನಿರ್ವಹಿಸಿದ ಪಾತ್ರಗಳಂತೆ ನಿಜಜೀವನದಲ್ಲಿ ಅಂಬಿ ಎಂದೂ ನಡೆದುಕೊಂಡಿಲ್ಲ.



ಶಾಸಕ ಎಂ.ಶ್ರೀನಿವಾಸ್

ಮೂರು ಬಾರಿ ಸಂಸದನಾದರೂ ಅಂಬರೀಶ್ ಸಂಸದ ಸ್ಥಾನವನ್ನು ಸರಿಯಾಗಿ ನಿಭಾಯಿಸಲಿಲ್ಲ, ಕೇಂದ್ರ ಸಚಿವನಾಗಿ ಕಾವೇರಿ ವಿಚಾರದಲ್ಲಿ ಕಾರ್ಯನಿರ್ವಹಿಸದೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ನಗೆಪಾಟಲಿಗೀಡಾದರು. ಸಂಸದನಾಗಿ ಅಧಿವೇಶನಕ್ಕೆ ಸತತ ಗೈರುಹಾಜರಾಗುವ ಮೂಲಕ ದೇಶದ್ಯಾಂತ ಸುದ್ದಿಯಾದರು. ಕುದುರೆ ರೇಸು, ಇಸ್ಪೀಟ್ ಆಡುತ್ತಾ ಶೋಕಿತನದಲ್ಲೇ ತಮ್ಮ ಸಂಸತ್ ಸದಸ್ಯತ್ವ ಮುಗಿಸಿದ ಅಂಬಿಗೆ 2008ರ ವಿಧಾನಸಭಾ ಚುನಾವಣೆಯಲ್ಲಿ 'ನೀನು ಇನ್ನು ಮುಂದೆ ಶೋಕಿಮಾಡಿಕೊಂಡು ಮನೆಯಲ್ಲೇ ಇರು' ಎಂದು ಶ್ರೀರಂಗಪಟ್ಟಣ ಕ್ಷೇತ್ರದ ಜನತೆ ಲಾತಾ ಕೊಟ್ಟು ಮನೆಗೆ ಕಳುಹಿಸಿದರು.

ಶ್ರೀರಂಗಪಟ್ಟಣದಲ್ಲಿ ಸೋತ ನಂತರವೂ ಅಂಬಿ ಆತ್ಮಾವಲೋಕನ ಮಾಡಿಕೊಳ್ಳಲಿಲ್ಲ. ಲೋಕಸಭಾ ಚುನಾವಣೆಗೆ ಬಂದ ಅಂಬಿಯನ್ನು ಮಂಡ್ಯ ಕ್ಷೇತ್ರದ ಜನತೆ ಮತ್ತೆ ಮನೆಗೆ ಕಳುಹಿಸಿದರು. ತವರುಜಿಲ್ಲೆಯ ಜನ ಎರಡು ಬಾರಿ ಮುಖಭಂಗ ಮಾಡಿದರೂ ಅಂಬಿ ತಮ್ಮ ರಾಜಕೀಯ ಶೈಲಿಯನ್ನು ಬದಲಾಯಿಸಲಿಲ್ಲ. ಸೋತ ನಂತರ ಕ್ಷೇತ್ರದೆಡೆಗೆ ತಿರುಗಿಕೂಡ ನೋಡಲಿಲ್ಲ. ಕ್ಷೇತ್ರದ ಜನರ ಕಷ್ಟ-ಸುಖಗಳೊಂದಿಗೆ ಎಂದೂ ಸ್ಪಂದಿಸಲಿಲ್ಲ. ಈಗ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಅಂಬಿ ಗೋಲ್ಡ್ ಕಪ್ ಮೂಲಕ ಮಂಡ್ಯದತ್ತ ತಿರುಗಿನೋಡುತ್ತಿದ್ದಾರೆ.

ಶ್ರೀನಿವಾಸ್ V/S ಅಂಬಿ

ಶ್ರೀರಂಗಪಟ್ಟಣದಿಂದ ಅಂಬಿ ಮತ್ತೆ ಸ್ಪರ್ಧಿಸುವಂತಿಲ್ಲ, ಯಾಕೆಂದರೆ ಅಲ್ಲಿ ಎಸ್.ಎಂ.ಕೃಷ್ಣರ ಬೆಂಬಲಿಗ ರವೀಂದ್ರ ಶ್ರೀಕಂಠಯ್ಯ ದೊಡ್ಡ ಅಡ್ಡಿಯಾಗಿದ್ದಾರೆ. ಹಾಗಾಗಿ ಮಂಡ್ಯ ಕ್ಷೇತ್ರವೇ ಸೇಫ್ ಎಂದು ಅಂಬಿಯ ಭಟ್ಟಂಗಿ ಪಡೆ ಅಂಬಿಯ ತಲೆಕೆಡಿಸಿದೆ. ಆದರೆ ಇಲ್ಲಿ ಜನತಾ ದಳದಿಂದ ಶಾಸಕರಾಗಿರುವ ಎಂ.ಶ್ರೀನಿವಾಸ್ ಅವರೇ ಅಂಬಿಗೆ ದೊಡ್ಡ ಸವಾಲಾಗಿದ್ದಾರೆ.

ಕಳೆದ ಎರಡು ಅವಧಿಯಿಂದ ಮಂಡ್ಯದ ಶಾಸಕರಾಗಿರುವ ಶ್ರೀನಿವಾಸ್ ಅವರು ನೋಡಲು ಕುಳ್ಳಾಗಿದ್ದರೂ ಪಾದರಸದಂತೆ ಕ್ಷೇತ್ರದಾದ್ಯಂತ ಸಂಚರಿಸಿ ಕೆಲಸ ಮಾಡುವ ವ್ಯಕ್ತಿ, ಕ್ಷೇತ್ರದ ಪ್ರತಿ ಹಳ್ಳಿಗಳಲ್ಲಿರುವ ಬೆಂಬಲಿಗರು, ಕಾರ್ಯಕರ್ತರ ಹೆಸರನ್ನು ಬಾಯಿಯ ತುದಿಯಲ್ಲೇ ಇಟ್ಟುಕೊಂಡಿರುವ ಶ್ರೀನಿವಾಸ್ ಜನಸಾಮಾನ್ಯರ ಕೈಗೆ ಸುಲಭವಾಗಿ ಸಿಗುತ್ತಾರೆ. ಅಂಬರೀಶ್‌ರಂತೆ ಅಬ್ಬರದ ವ್ಯಕ್ತಿಯಲ್ಲ. ಯಾವ ಹಮ್ಮು-ಬಿಮ್ಮು ಇಲ್ಲದೆ ಸೈಲೆಂಟಾಗಿ ಜನರ ಕೆಲಸ ಮಾಡುವ ಮನುಷ್ಯ. ತನ್ನಿಂದ ದೂರ ಇರುವವರಿಗೂ ಕೇಡು ಬಯಸುವವರಲ್ಲ, ಕ್ಷೇತ್ರದ ಜನರಿಗೆ ಆರೋಗ್ಯ ಸಂಬಂಧಿ ತೊಂದರೆಯಾದರೆ ಬೆಂಗಳೂರಿಗೆ ಕರೆಸಿ ಚಿಕಿತ್ಸೆ ಕೊಡಿಸುತ್ತಾರೆ. ಮುಖ್ಯಮಂತ್ರಿಗಳ ನಿಧಿಯಿಂದ ಸಹಾಯಧನ ಕೊಡಿಸಲು ತಾವೇ ಮುಂದೆ ಬಂದು ನಿಲ್ಲುತ್ತಾರೆ. ಸ್ಲಂ ಜನರ ಸಮಸ್ಯೆ ಬಗೆಹರಿಸಲು ವಿಕಾಸಸೌಧ, ಸ್ಲಂಬೋರ್ಡ್, ನ್ಯಾಯಾಲಯ ಅಂತೆಲ್ಲಾ ಹತ್ತಾರು ಬಾರಿ ತಿರುಗುವಷ್ಟು ಸರಳ ವ್ಯಕ್ತಿ. ಅಂಬಿಯಿಂದ ಇಂತಹ ಕಾರ್ಯವೈಖರಿಯನ್ನು ನಿರೀಕ್ಷಿಸುವುದು ಖಂಡಿತ ಸಾಧ್ಯವೇ ಇಲ್ಲ.

ಈಗಾಗಲೇ ಮೂರನೆ ಬಾರಿಗೆ ಜನತಾ ದಳ ಮಂಡ್ಯ ಕ್ಷೇತ್ರಕ್ಕೆ ಹಾಲಿ ಶಾಸಕ ಶ್ರೀನಿವಾಸ್ ಅವರಿಗೆ ಟಿಕೆಟ್ ಘೋಷಿಸಿದೆ. ಸೋಮಾರಿ, ಶೋಕಿಗಾರ ಅಂಬರೀಶ್‌ಗೆ ಹೋಲಿಸಿದರೆ ಸರಳ, ಕೆಲಸಗಾರ ಶ್ರೀನಿವಾಸ್ ನೂರಕ್ಕೆ ನೂರರಷ್ಟು ಉತ್ತಮ ಅಭ್ಯರ್ಥಿ. ಹಾಗಾಗಿ ಮುಂದಿನ ಬಾರಿಯ ಚುನಾವಣೆಯಲ್ಲಿ ಶ್ರೀನಿವಾಸ್‌ಗೆ ಹ್ಯಾಟ್ರಿಕ್ ಜನ ಮತ್ತು ಅಂಬಿಗೆ ಹ್ಯಾಟಿಕೆ ಸೋಲು ಎಂಬ ಸಾಧ್ಯತೆಗಳು ಕಾಣಿಸುತ್ತಿವೆ.

ಅಂಬಿಯ ಕಾರ್ಯ ವೈಖರಿಗೊಂದು ಸ್ಯಾಂಪಲ್

ಕೊಡುಗೈದಾನಿ, ಕಲಿಯುಗ ಕರ್ಣ ಎಂದೆಲ್ಲಾ ಬಿರುದಾಂಕಿತರಾಗಿರುವ ಅಂಬರೀಶ್ ಕಾರ್ಯವೈಖರಿಗೊಂದು ಸ್ಯಾಂಪಲ್ ಇಲ್ಲಿದೆ. 2003ರಲ್ಲಿ ಅಂಬರೀಶ್ ಸಂಸದರಾಗಿದ್ದಾಗ ಮಂಡ್ಯ ನಗರದ ಸಂತೇ ಮೈದಾನದ ಬಳಿಯಿರುವ ಸ್ಲಂ ಜನರಿಗೆ 'ಅಂಬರೀಶ್ ಅವರನ್ನು ಭೇಟಿ ಮಾಡಿದರೆ ನಿಮಗೆ ಹಕ್ಕುಪತ್ರ ಸಿಗಲಿದೆ' ಎಂದು ಯಾರೋ ಅವನ ಬೆಂಬಲಿಗನೊಬ್ಬ ಹೇಳಿದ. ಅದನ್ನು ಕೇಳಿ ಸ್ಲಮ್ ನಿವಾಸಿಗಳು ತಮ್ಮ ಮನೆಮಂದಿ, ಮಕ್ಕಳನ್ನೆಲ್ಲಾ ಕರೆದುಕೊಂಡು ಮಧ್ಯರಾತ್ರಿ 12ರ ನಂತರದ ರೈಲಿಗೆ ಹತ್ತಿ ಬೆಂಗಳೂರು ರೈಲು ನಿಲ್ದಾಣದಿಂದ ಜೆ.ಪಿ. ನಗರದಲ್ಲಿರುವ ಅಂಬಿ ನಿವಾಸಕ್ಕೆ ನಡೆದುಕೊಂಡೇ ಹೋಗಿದ್ದರು. ಅವರು ಅಂಬಿ ಮನೆಗೆ ತೆರಳಿದಾಗ ಬೆಳಗ್ಗಿನ ಜಾವ ಐದು ಗಂಟೆ ಆಗಿತ್ತು, ಸುಮಾರು ಆರು ಗಂಟೆಗೆ ಮಳೆ ಸುರಿಯಲಾರಂಭಿಸಿದೆ. ಮಕ್ಕಳು ಮತ್ತು ಮುದುಕರೂ ಇದ್ದ ನೂರಾರು ಜನ ಮಳೆಯಲ್ಲಿ ನೆನೆಯುತ್ತಾ ನಿಂತಿದ್ದರೂ ಅಂಬಿ ಮನೆಯ ವಾಚ್‌ಮನ್ ಅವರನ್ನು ಒಳಗೆ ಕರೆಯಲಿಲ್ಲ. ಕೊನೆಗೆ ಅಕ್ಕಪಕ್ಕದ ನಿವಾಸಿಗಳು ತಮ್ಮ ಮನೆಯ ಅಂಗಳದಲ್ಲಿ ಜಾಗ ನೀಡಿದರಲ್ಲದೆ ಮಕ್ಕಳಿಗೆ ಹಾಲು, ಬ್ರೆಡ್ ನೀಡಿ ಮಾನವೀಯತೆ ತೋರಿದ್ದರು.

ಅಂಬರೀಶರನ್ನು ಕಂಡು ತಮ್ಮ ದುಃಖ ತೋಡಿಕೊಳ್ಳಲು ಜನ ಕಾದು ನಿಂತಿದ್ದರು. ಅವರಿಗೆ ಕೊನೆಗೂ ಅಂಬಿ ದರ್ಶನವಾಗಿದ್ದು ಸೂರ್ಯ ನೆತ್ತಿ ಮೇಲೆ ಬಂದ ನಂತರವೇ. 12.30ರ ಸುಮಾರಿಗೆ ಗೇಟಿನ ಬಳಿಗೆ ಬಂದ ಅಂಬರೀಶ್ "ಥೂ ಬಡ್ಡೆತ್ತವ... ಇಲ್ಲಿವರೆಗೂ ಬಂದ್ರಾ.. ನಡಿರೋ ನಡಿರೋ" ಅಂತ ಬೈದು ಕಳುಹಿಸಿದರು. ಅಸಹಾಯಕ ಸ್ಲಮ್ ಜನರನ್ನು ಅಂಬಿ ನಡೆಸಿಕೊಂಡಿದ್ದು ಹೀಗೆ...

ಭೂಗಳ್ಳ ಅಶೋಕ್ ಖೇಣಿಯ ಸಖ್ಯದಲ್ಲಿ ಅಂಬಿ

ಬಿಎಂಐಸಿ ಯೋಜನೆಯ ಮೂಲಕ ರಾಜ್ಯದ ರೈತರ ಜಮೀನನ್ನು ನುಂಗಿದ ಭೂಗಳ್ಳ ಅಶೋಕ್ ಖೇಣಿಯ ಜೊತೆ ಕೈಜೋಡಿಸಿರುವ ಅಂಬಿ ಆತನನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳುವ ಮೂಲಕ ನೂರಾರು ರೈತರ ಪಾಲಿಗೆ ವಿಲನ್ ಆಗಿದ್ದಾರೆ. ಬರಿಗೈಯಲ್ಲೇ ಬಂದು ರಸ್ತೆ ಹೆಸರಲ್ಲಿ ರೈತರ ಭೂಮಿ ನುಂಗಿದ ಖೇಣಿಯ ಸಖ್ಯದಲ್ಲಿರುವ ಅಂಬಿ ಇದೇ ಸ್ಟೇಡಿಯಂನಲ್ಲಿ ಆತನ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿದ್ದ.

ಮಂಡ್ಯ ಜಿಲ್ಲೆಯ ರೈತರು ಬಿಎಂಐಸಿ ಯೋಜನೆಗೆ ವಿರೋಧ ವ್ಯಕ್ತಪಡಿಸಿ ಇನ್ನೂ ತಮ್ಮ ಭೂಮಿಯನ್ನು ನೀಡಿಲ್ಲ. ಇಂತಹ ಸಂಕಷ್ಟದ ಸಂದರ್ಭದಲ್ಲಿ ರೈತರ ನೆರವಿಗೆ ನಿಲ್ಲಬೇಕಾದ ಅಂಬಿ ಭೂಗಳ್ಳ ಖೇಣಿಯ ಪರವಾಗಿ ನಿಂತು ರೈತರ ಎದೆಯ ಮೇಲೆ ಚಪ್ಪಡಿ ಎಳೆಯುವ ಕಾರ್ಯಕ್ಕೆ ಕೈಜೋಡಿಸಿರುವುದು ಖಂಡನೀಯ. ●


'ಗಣ್ಯ ಭ್ರಷ್ಟ'ರ ಸುಪಾರಿಗೆ ಆರ್‌ಟಿಐ ಕಾರ್ಯಕರ್ತ ಬಲಿ

ಕರ್ನಾಟಕದಲ್ಲಿ ಮತ್ತೊಬ್ಬ ಮಾಹಿತಿಹಕ್ಕು ಕಾರ್ಯಕರ್ತನ ಕೊಲೆಯಾಗಿದೆ. ಕೇವಲ ಒಂದೂವರೆ ತಿಂಗಳ ಅಂತರದಲ್ಲಿ ನಡೆದ ಎರಡನೇ ಕೊಲೆ ಪ್ರಕರಣ ಇದು. ಮಾಹಿತಿಹಕ್ಕು ಕಾರ್ಯಕರ್ತರನ್ನು ಭ್ರಷ್ಟರು ಸುಪಾರಿ ನೀಡಿ ಬಾಡಿಗೆ ಹಂತಕರ ಮೂಲಕ ಬಲಿ ಪಡೆಯುತ್ತಿದ್ದರೂ ರಾಜ್ಯದಲ್ಲಾಗಲೀ, ರಾಷ್ಟ್ರ ಮಟ್ಟದಲ್ಲಾಗಲೀ ದೊಡ್ಡ ಮಟ್ಟದ ಪ್ರತಿಭಟನೆ ವ್ಯಕ್ತವಾಗದಿರುವುದೇ ದೊಡ್ಡ ವಿಪರ್ಯಾಸ.

ಅಡಿಗ ಅಪಹರಣ

ವಂಡಾರು ವಾಸುದೇವ ಅಡಿಗರು ಸಕ್ರಿಯ ಮಾಹಿತಿಹಕ್ಕು ಕಾರ್ಯಕರ್ತರು. ಕೋಟ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರು. ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಜಯಪ್ರಕಾಶ್ ಹೆಗ್ಡೆಯವರ ಪರಮಾಪ್ತರು. ಕೊಕ್ಕರ್ಣೆ ಸಿಎ ಬ್ಯಾಂಕ್ ಮತ್ತು ಸ್ಥಳೀಯ ಹಾಲು ಉತ್ಪಾದಕರ ಸಂಘದ ಮಾಜಿ ನಿರ್ದೇಶಕರೂ ಆದ ಅಡಿಗರನ್ನು ಜನವರಿ 7 ರಂದು ರಾತ್ರಿ ಬಾಡಿಗೆ ಹಂತಕರು


ಅಡಿಗರ ಬೈಕ್


ಅಡಿಗರ ಮನೆ



ಕೊಳೆತ ಶವವಾದ ಅಡಿಗರು

ಪೂರ್ವ ನಿಯೋಜಿತ ಸಂಚು ರೂಪಿಸಿ ಅವರ ಮನೆ ಪಕ್ಕದಿಂದಲೇ ಅತ್ಯಂತ ವ್ಯವಸ್ಥಿತವಾಗಿ ಅಪಹರಿಸಿದ್ದಾರೆ. ಬಳಿಕ ಕೊಲೆ ಮಾಡಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ಬಳಿ ನಿರ್ಜನ ಪ್ರದೇಶದಲ್ಲಿರುವ ಜಲಾಶಯದಲ್ಲಿ ದೇಹಕ್ಕೆ ಕಲ್ಲು ಕಟ್ಟಿ ಮುಳುಗಿಸಿದ್ದಾರೆ.

ಜನವರಿ 7ರ ಸಂಜೆ 5.30 ರ ಸುಮಾರಿಗೆ ತನ್ನ ಹೀರೋ ಹೊಂಡಾ ಪ್ಯಾಶನ್ ಬೈಕ್‌ನಲ್ಲಿ ತನ್ನ ಮನೆ ಕಡೆ ಏಕಾಂಗಿಯಾಗಿ ಸಾಗಿದರು. ಮನೆಗೆ ತಲುಪಲು ಇನ್ನು ಕೇವಲ 200 ಅಡಿಯಷ್ಟೇ ಬಾಕಿ. ಅಲ್ಲೊಂದು ಅಡ್ಡ ರಸ್ತೆಯನ್ನು ಕ್ರಾಸ್ ಮಾಡಬೇಕು ಅಡಿಗರ ಮನೆಗೆ ಹೋಗಲು. ಇಲ್ಲಿಯೇ ಹೊಂಚು ಹಾಕಿ ಕಾದು ಕುಳಿತಿದ್ದ ಬಾಡಿಗೆ ಹಂತಕರ ಪಡೆ ಅಡಿಗರ ಮೇಲೆ ದಾಳಿ ನಡೆಸಿದೆ. ತಾವು ಬಂದ ವಾಹನದೊಳಕ್ಕೆ ಅಡಿಗರನ್ನು ತಳ್ಳಿಕೊಂಡ ಸುಪಾರಿ ಹಂತಕರು ಅವರನ್ನು ಅಪಹರಿಸಿಕೊಂಡು ಹೋಗಿದ್ದಾರೆ.

ತನಿಖೆಯ ದಿಕ್ಕು ತಪ್ಪಿಸಲೋ, ಸ್ಥಳೀಯರ ಮೇಲೆ ಸಂಶಯ ಬಾರದಿರಲೆಂದೋ ಅಥವಾ ಬೈಕ್‌ನಲ್ಲಿ ಇರಬಹುದಾದ ಕಡತ ಇತ್ಯಾದಿಗಳನ್ನು ನಾಶಪಡಿಸುವ ಉದ್ದೇಶದಿಂದಲೋ ಏನೋ ಹಂತಕ ಪಡೆ ಅಡಿಗರ ಬೈಕ್‌ಅನ್ನೂ ಅಲ್ಲಿಂದ ತಮ್ಮ ಜೊತೆಗೆ ಸ್ವಲ್ಪ ಮುಂದಕ್ಕೆ ತೆಗೆದುಕೊಂಡು ಹೋಗಿ ಗೋಳಿಯಂಗಡಿ ಪೇಟೆ ಸಮೀಪದ ಬೆಲ್ಲೂರು ಎಂಬಲ್ಲಿಗೆ ಹಾದುಹೋಗುವ ರಸ್ತೆಯ ಕಾಡಿನಂಚಿನಲ್ಲಿ ಅದನ್ನು ಬಿಟ್ಟು ಹೋಗಿದ್ದಾರೆ.

ಬೈಕ್‌ನ ಕಿಕ್ಕರ್‌ನಲ್ಲಿ ಚಪ್ಪಲಿಯೊಂದು ಸಿಕ್ಕಿಹಾಕಿಕೊಂಡಿದ್ದು, ಇದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಚಪ್ಪಲಿ ಅಡಿಗರದ್ದಲ್ಲ ಎಂದು ಮನೆಯವರು ಸ್ಪಷ್ಟಪಡಿಸಿದ್ದಾರೆ. ಅಡಿಗರ ಪೆನ್ನು ಅಪಹರಣ ನಡೆದ ಸ್ಥಳದಲ್ಲಿ ಪತ್ತೆಯಾಗಿದೆ. ಮಾರ್ಗ ಮಧ್ಯೆ ಮೊಬೈಲ್ ಹ್ಯಾಂಡ್ ಸೆಟ್ ಮತ್ತು ಡೈರಿ ಸಿಕ್ಕಿದೆ.


ವಂಡಾರು ವಾಸುದೇವ ಅಡಿಗ

ರಾತ್ರಿ 8.30 ರಿಂದ 9 ಗಂಟೆ ನಡುವೆ ವಾಸುದೇವ ಅಡಿಗರನ್ನು ಅಪಹರಣ ಮಾಡಲಾಗಿದೆ. ಸ್ಕಾರ್ಪಿಯೋ ಮತ್ತು ಇನ್ನೋವಾ ಹಾಗೂ ಬೈಕ್ ರಾತ್ರಿ 8.30 ರ ಹೊತ್ತಿಗೆ ಇದೇ ದಾರಿಯಾಗಿ ಭಾರೀ ರಭಸದಿಂದ ಹೋಗಿದ್ದನ್ನು ಜನ ನೋಡಿದ್ದಾರೆ.

ವಂಡಾರಿನಿಂದ ಕಡೂರಿಗೆ

ಉಡುಪಿ ತಾಲೂಕು ಬಿಲ್ಲಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ವಂಡಾರು ಗ್ರಾಮದ ಕೊಕ್ಕನಬೈಲು ಎಂಬಲ್ಲಿಂದ ವಾಸುದೇವ ಅಡಿಗರನ್ನು ಅಪಹರಿಸಿದ ಹಂತಕರ ಪಡೆ ಆಗುಂಬೆ ಮೂಲಕ ಕಡೂರಿಗೆ ಹೋಗಿದೆ. ಕಡೂರಿನಿಂದ 20 ಕಿ.ಮೀ ದೂರದಲ್ಲಿ ಹಳೆಸಿದ್ದರಹಳ್ಳಿ ಗ್ರಾಮ ಮತ್ತು ಮೂಸ್ಲಾಪುರದಟ್ಟಿ ಎಂಬೆರಡು ಗ್ರಾಮಗಳ ನಡುವೆ ಸಂಪರ್ಕ ಕಲ್ಪಿಸುವ ನಿರ್ಜನ ರಸ್ತೆಯಲ್ಲಿ ಬರ್ಬರವಾಗಿ ಅಡಿಗರನ್ನು ಕೊಲೆ ಮಾಡಿದೆ. ಬಳಿಕ ಅಲ್ಲಿರುವ ಮದಗದ ಕೆರೆ ಎಂಬ ವಿಶಾಲವಾದ ಜಲಾಶಯದಲ್ಲಿ ಅಡಿಗರ ಶವವನ್ನು ಮುಳುಗಿಸಿ ಬೆಂಗಳೂರಿನತ್ತ ಪಯಣ ಬೆಳೆಸಿದೆ.

ಅಡಿಗರ ಕೈಗಳನ್ನು ಬೆನ್ನ ಹಿಂಬದಿಗೆ ಕಟ್ಟಿಹಾಕಲಾಗಿತ್ತು, ಕಾಲುಗಳನ್ನು ಪಾದದ ಭಾಗದಲ್ಲೂ ಕಟ್ಟಿಹಾಕಲಾಗಿತ್ತು, ಸೊಂಟಕ್ಕೆ 25 ಕೆ.ಜಿ. ಭಾರದ ಕಲ್ಲು ಕಟ್ಟಿ ಜಲಾಶಯದಲ್ಲಿ ಮುಳುಗಿಸಲಾಗಿತ್ತು, ಕುತ್ತಿಗೆಗೆ ತಂತಿಯಿಂದ ಬಿಗಿಯಲಾಗಿತ್ತು, ಮುಖದಲ್ಲಿ ಜಜ್ಜಿದ ಗುರುತು ಮತ್ತು ತಲೆಯಲ್ಲಿ ಮಾರಕಾಯುಧದಿಂದ ಹೊಡೆದ ಗುರುತು ಇತ್ತು, ಜನವರಿ 7 ರಂದು ರಾತ್ರಿ ಅಪಹರಣಕ್ಕೆ ಒಳಗಾದ ಅಡಿಗರ ಶವ ಜ.11 ರ ಸಂಜೆ ಸ್ಥಳೀಯರ ಕಣ್ಣಿಗೆ ಬಿತ್ತು, ಮೃತದೇಹ ಅದಾಗಲೇ ಕೊಳೆತುಹೋಗಿತ್ತು.

ಅತಿರಥ ಮಹಾರಥರ ಬೆನ್ನಿಗೆ

ಅಡಿಗರು ಮಾಹಿತಿಹಕ್ಕು ಕಾಯಿದೆ ಮೂಲಕ ಬೆನ್ನುಬಿದ್ದದ್ದು ಮಾಮೂಲಿ ಜನರ ಹಿಂದಲ್ಲ, ಬದಲಾಗಿ ಅತಿರಥ ಮಹಾರಥರ ಬೆನ್ನಿಗೆ ಅವರು ಬಿದ್ದಿದ್ದರು. ಅಡಿಗರ ಈ ಸಾಹಸಕ್ಕೆ ಸಂಸದ ಜಯಪ್ರಕಾಶ್ ಹೆಗ್ಡೆಯವರು ಪೂರ್ಣ ಸಹಾಯ, ಸಹಕಾರ, ಮಾರ್ಗದರ್ಶನ ಮಾಡುತ್ತಿದ್ದರಿಂದ ಅಡಿಗರ ಧೈರ್ಯ ಇಮ್ಮಡಿಯಾಗಿತ್ತು. ಅಡಿಗರ ಮಾರ್ಗದರ್ಶನದಲ್ಲಿ ಜಿಲ್ಲೆಯ ಇನ್ನೂ ನಾಲ್ಕೈದು ಕಾಂಗ್ರೆಸ್ ಕಾರ್ಯಕರ್ತರು ಒಂದು ಟೀಮ್ ಆಗಿ ನಿರ್ದಿಷ್ಟ ಗುರಿ ಇರಿಸಿಕೊಂಡು ನಿರ್ದಿಷ್ಟ ಸಂಸ್ಥೆಗಳಿಗೆ ಮಾಹಿತಿಹಕ್ಕು ಅರ್ಜಿಗಳನ್ನು ಸಲ್ಲಿಸುತ್ತಿದ್ದರು.

ಸಂಸದ ಹೆಗ್ಡೆಯವರ ಕಚೇರಿಯಲ್ಲೇ ಇರುವ ಅವರ ಆಪ್ತ ಸಹಾಯಕ ರಘುರಾಮ ಶೆಟ್ಟಿಗಾರ್, ಉಡುಪಿಯ ಯೋಗೀಶ್ ಶೇಟ್ ಸಹಿತ ಇನ್ನೂ ಕೆಲವರು ಇದೇ ಅಡಿಗರ ಸಲಹೆ, ಸೂಚನೆಗಳ ಪ್ರಕಾರ ಆರ್‌ಟಿಐ ಅರ್ಜಿ ಸಲ್ಲಿಸುತ್ತಿದ್ದರು. ಇದರಿಂದ ಹಲವು 'ಗಣ್ಯ' ಭ್ರಷ್ಟರು ಬೆದರಿದರು. ಇದಕ್ಕೊಂದು ತಡೆ ಹಾಕಲು ಅಡಿಗರ ಕೊಲೆಗೆ ಸುಪಾರಿ ಕೊಟ್ಟರು.

ತಮ್ಮನ್ನು ಜೈಲು ಪಾಲು ಮಾಡುವ ಪ್ರಯತ್ನ ನಡೆಸುತ್ತಿರುವವರಿಗೆ ಭಯಾನಕವಾದ ಎಚ್ಚರಿಕೆಯನ್ನು ರವಾನೆ ಮಡುವ ಉದ್ದೇಶದಿಂದಲೇ ಉಡುಪಿ ಜಿಲ್ಲೆಯ 'ಗಣ್ಯ ಮಹಾಶಯರು' ಅಡಿಗರ ಬಲಿ ಪಡೆದುಕೊಂಡಿದ್ದಾರೆ. ಇದು ಗಣ್ಯರೆನಿಸಿಕೊಂಡವರು ಸಂಸದ ಹೆಗ್ಡೆಯವರಿಗೆ ಕೊಟ್ಟ ಉತ್ತರವೂ ಹೌದು, ಅಡಿಗರು ಜೊತೆಗೆ ಮಾಹಿತಿಹಕ್ಕು ಅರ್ಜಿ ಸಲ್ಲಿಸುತ್ತಿದ್ದ ಇತರರಿಗೆ ನೀಡಿದ ಮುನ್ನೆಚ್ಚರಿಕೆಯೂ ಹೌದು.

ಹೆಗ್ಡೆಯವರು 'ಗಣ್ಯರ' ಈ ಸವಾಲುಗಳನ್ನು ಸವಾಲಾಗಿಯೇ ಸ್ವೀಕರಿಸಿದ್ದಾರೆ. ಅಡಿಗರ ನಡೆಸಿದ ಹೋರಾಟವನ್ನು ಮುಂದುವರಿಸುವುದಾಗಿ ಬಹಿರಂಗವಾಗಿಯೇ ಘೋಷಣೆಯನ್ನೂ ಮಾಡಿದ್ದಾರೆ.

ವಾರಾಹಿ ನೀರಾವರಿ ಯೋಜನೆ

ವಾರಾಹಿ ನೀರಾವರಿ ಯೋಜನೆ ಆರಂಭಗೊಂಡು ಸುದೀರ್ಘ 32 ವರ್ಷಗಳೇ ಕಳೆದಿದೆ. 1979-80 ರಲ್ಲಿ ಪ್ರಾರಂಭಗೊಂಡ ಈ ಯೋಜನೆಗೆ ಆಗ 9.43 ಕೋಟಿ ರೂ. ನಿಗದಿಪಡಿಸಲಾಗಿತ್ತು, ಬಳಿಕ ವಾರಾಹಿ ನದಿಯಲ್ಲಿ ನೀರು ಹರಿದಂತೆ ಸರಕಾರದ ಖಜಾನೆಯಿಂದ ಇದುವರೆಗೆ 384.37 ಕೋಟಿ ರೂ. ಹರಿದಿದೆ. ವಾರಾಹಿ ನದಿಯ ನೀರು ಸಮುದ್ರ ಸೇರಿದಂತೆ ವಾರಾಹಿ ನೀರಾವರಿ ಯೋಜನೆಯ ಈ ಹಣವೆಲ್ಲಾ ಗುತ್ತಿಗೆದಾರರ, ಸರಕಾರಿ ಅಧಿಕಾರಿಗಳ ತಿಜೋರಿ ಸೇರಿಬಿಟ್ಟಿದೆ. ಈ ಯೋಜನೆ ಮುಕ್ತಾಯಗೊಳ್ಳುವುದಿರಲಿ, ಇನ್ನೂ ಸಹ ಇದರ ಸರ್ವೇಕಾರ್ಯವಾಗಲಿ, ಭೂಸ್ವಾಧೀನ ಪ್ರಕ್ರಿಯೆಯಾಗಲಿ ಪೂರ್ಣವಾಗಿಲ್ಲ, ಭೂಸ್ವಾಧೀನ ಮಾಡದೇ ಟೆಂಡರ್ ಕರೆದು ಕಾಮಗಾರಿ ಆರಂಭಿಸಿದ ಕಾರಣ ಇಲ್ಲಿ ರೈತರು ಹಾಗೂ ಗುತ್ತಿಗೆದಾರರ ನಡುವೆ ಸಂಘರ್ಷವೂ ಆರಂಭಗೊಂಡಿದೆ.

ಎರಡು ಮೂರು ಕಾರಣಕ್ಕೆ ಇವುಗಳನ್ನೆಲ್ಲ ಇಲ್ಲಿ ಪ್ರಶ್ನಿಸುವವರಿರಲಿಲ್ಲ, ಮೊದಲನೆ ಕಾರಣ ವಾರಾಹಿ ನೀರಾವರಿ ಯೋಜನೆಯ ಹಿಂದಿದ್ದವರು ಕೋಟ್ಯಾಧಿಪತಿ. ಈ ಕೋಟ್ಯಾಧಿಪತಿ ಮಹಾದಾನಿ ಬೇರೆ ಆಗಿದ್ದರು. ಪತ್ರಿಕೆಗಳಿಗೆ ಕೋಟ್ಯಂತರ ರೂ. ಜಾಹೀರಾತು, ಸಂಘ-ಸಂಸ್ಥೆಗಳಿಗೂ ಡೊನೇಷನ್ ಕೊಡುತ್ತಿದ್ದರು. ಇಡೀ ಜಿಲ್ಲಾಡಳಿತದೊಂದಿಗಲ್ಲದೆ, ಬಿಜೆಪಿ, ಕಾಂಗ್ರೆಸ್ ಎಂಬ ಭೇದ ಭಾವವಿಲ್ಲದೆ ಹಾಲಿ, ಮಾಜಿ ಮಂತ್ರಿಗಳೊಂದಿಗೆ ಅಧಿಕೃತವಾಗಿಯೂ, ಅನಧಿಕೃತವಾಗಿಯೂ ಗಳಸ್ಯಕಂಠಸ್ಯ ಗೆಳೆತನ ಹೊಂದಿದ್ದರು. ವಂಡಾರು ವಾಸುದೇವ ಅಡಿಗರು ಇಂಥ ವಾರಾಹಿ ನೀರಾವರಿ ಯೋಜನೆಯ ಬಗ್ಗೆಯೂ ಮಾಹಿತಿ ಹಕ್ಕು ಅರ್ಜಿ ಸಲ್ಲಿಸಿ ಮಾಹಿತಿ ಸಂಗ್ರಹಿಸತೊಡಗಿದ್ದರು.

ಜಲ್ಲಿ ಕ್ರಷರ್ ಮಾಫಿಯಾ

ಗೋಳಿಯಂಗಡಿ ಎಂಬಲ್ಲಿ ನಾಲ್ವರು ಹೆಗ್ಡೆ ಬ್ರದರ್ಸ್ ಹಾಗೂ ಒಬ್ಬ ಜೋಯ್ ಎಂಬಾತ ಒಟ್ಟು ಸೇರಿಕೊಂಡು ಅಕ್ರಮ ಜಲ್ಲಿ ಕ್ರಷರ್ ನಡೆಸುತ್ತಿದ್ದರು. ಇದರ ಬಗ್ಗೆಯೂ ಅಡಿಗರು ಮಾಹಿತಿಹಕ್ಕು ಮೂಲಕ ಮಾಹಿತಿ ಸಂಗ್ರಹಿಸಿಕೊಂಡು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ದೂರು ನೀಡಿದ್ದರು. ಈ ದೂರಿನ ಫಲವಾಗಿ ಇಲಾಖೆ ಅಕ್ರಮ ಜಲ್ಲಿ ಕ್ರಷರ್‌ಗೆ ನಾಲ್ಕು ಕೋಟಿ ರೂ. ದಂಡ ವಿಧಿಸಿತ್ತು.

ಗಣಿ ಇಲಾಖೆ ದಂಡ ವಿಧಿಸಿದ ಬೆನ್ನಿಗೆ, ಗಣಿ ಮಾಫಿಯಾ ದಂಡ ಪಾವತಿಸುವ ಮೊದಲೇ ಉಡುಪಿ ಜಿಲ್ಲಾಡಳಿತ ಇದೇ ಗಣಿ ಮಾಫಿಯಾದವರಿಗೆ ಸೇರಿದ ಇನ್ನೊಂದು ಗಣಿ ಅಡ್ಡೆಗೆ ನಾಲ್ಕೂರು ಎಂಬಲ್ಲಿ ಪರವಾನಗಿ ನೀಡಿತ್ತು ಎಂದರೆ ಈ ಗಣಿ ಮಾಫಿಯಾ ಎಷ್ಟು ಪ್ರಬಲವಾಗಿದೆ ಎಂದು ಅರ್ಥವಾಗುತ್ತದೆ.

ತಾವು ನಾಲ್ಕು ಕೋಟಿ ದಂಡ ವಿಧಿಸುವಂತೆ ಮಾಡಿದ ಅಡಿಗ ಮುಂದೆ ಸುಮ್ಮನೇ ಕೈ ಕಟ್ಟಿ ಕುಳಿತುಕೊಂಡಿರಲಾರ ಎಂದು ಗಣಿ ಮಾಫಿಯಾ ಯೋಚಿಸಿದ್ದರೆ ಆಶ್ಚರ್ಯವಿಲ್ಲ...

ಮಂದರ್ತಿ ಮೇಳ

ಮಂದರ್ತಿ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಐದು ಯಕ್ಷಗಾನ ಮೇಳಗಳಿವೆ. ಇಷ್ಟು ಮೇಳಗಳಿರುವುದು ರಾಜ್ಯದಲ್ಲಿ ಮಂದರ್ತಿ ದೇಗುಲಕ್ಕೆ ಮಾತ್ರ. ಕಟೀಲು ದೇವಳಕ್ಕಿರುವುದು ನಾಲ್ಕು ಮೇಳ. ಮುಜುರಾಯಿ ಇಲಾಖೆಯಡಿಯಲ್ಲಿರುವ ಮಂದರ್ತಿ ದೇಗುಲದ ಈ ಐದು ಮೇಳಗಳು ಕುಖ್ಯಾತಿ ಪಡೆದದ್ದು ಬಿಲ್ಲವ ಕಲಾವಿದರಿಗೆ ಪ್ರವೇಶ ನೀಡದಿದ್ದ ಕಾರಣಕ್ಕೆ. ಈ ಜಾತಿ ಅಸ್ಪೃಶ್ಯತೆ ವಿರುದ್ಧ ಜಿಲ್ಲೆಯ ಒಂದೆರಡು ಸಂಘಟನೆಗಳು ಮತ್ತು ಬಿಲ್ಲವ ಸಮುದಾಯ ಭಾರೀ ಪ್ರತಿಭಟನೆ ವ್ಯಕ್ತಪಡಿಸಿದ ಬಳಿಕ ಸಾಂಕೇತಿಕವಾಗಿ ಬಿಲ್ಲವರಿಗೆ ಪ್ರವೇಶವಿಲ್ಲ ಎಂಬ ಅಮಾನವೀಯ ನಿಯಮವನ್ನು ಅನಿವಾರ್ಯವಾಗಿ ಹಿಂತೆಗೆದುಕೊಳ್ಳಲಾಗಿತ್ತು.

ಇಂಥ ದೇವಾಲಯದ ಅಧೀನದಲ್ಲಿರುವ ಐದೂ ಮೇಳಗಳ ಲೆಕ್ಕಪತ್ರಗಳನ್ನು ಅಡಿಗರು ಮಾಹಿತಿಹಕ್ಕು ಮೂಲಕ ಪಡೆಯತೊಡಗಿದ್ದರು.

ನಿರ್ಮಿತಿ ಕೇಂದ್ರ

ಜಿಲ್ಲೆಗೊಂದರಂತೆ ಇರುವ ನಿರ್ಮಿತಿ ಕೇಂದ್ರ ಸರಕಾರದ ಅಧಿಕೃತ ಸಂಸ್ಥೆ. ಜಿಲ್ಲೆಯಲ್ಲಿ ಸರಕಾರಿ ಕಟ್ಟಡಗಳನ್ನು ನಿರ್ಮಿಸುವ ಜವಾಬ್ದಾರಿ ಇದರದ್ದು. ನಿರ್ಮಿತಿ ಕೇಂದ್ರ ಕಟ್ಟಡ ನಿರ್ಮಿಸಬೇಕಾದರೆ, ಸ್ಥಳೀಯ ಶಾಸಕರ ಅನಧಿಕೃತ ಒಪ್ಪಿಗೆ ಮತ್ತು ಜಿಲ್ಲಾಧಿಕಾರಿಗಳ ಅಧಿಕೃತ ಒಪ್ಪಿಗೆ ಇದ್ದರೆ ಸಾಕು. ಬೇರೇನೂ ಬೇಕಾಗಿಲ್ಲ, ಕಟ್ಟಡ ನಿರ್ಮಾಣವಾದ ಬಳಿಕ ಪರಿಶೀಲನೆಯಾಗಲೀ, ಅದೂ ಇದೂ ಎಂದು ಏನೂ ಇಲ್ಲ, ಪ್ರಾಜೆಕ್ಟ್ ಡೈರೆಕ್ಟರ್ ಮಾಡಿದ್ದೇ ಕೆಲಸ. ಈತ ಕೊಟ್ಟದ್ದೇ ಲೆಕ್ಕ. ಡಿಸಿ ಸಹಿಗೆ ಮಾತ್ರ ಇಲ್ಲಿ ಮಾನ್ಯತೆ.

ಕಳೆದ ಕೆಲವು ವರ್ಷಗಳಿಂದ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕನಾಗಿರುವ ಅರುಣ್ ಕುಮಾರ್ ನಾಯರಿ ಎಂಬಾತನ ವಿರುದ್ಧ ಲೋಕಾಯುಕ್ತ ನ್ಯಾಯಾಲಯದ ಮೆಟ್ಟಿಲೇರಲು ಅಡಿಗರು ನಿರ್ಧರಿಸಿದ್ದರು. ಆದರೆ ಈ ನಿರ್ಮಿತಿ ಕೇಂದ್ರಕ್ಕೆ ಮಾಹಿತಿಹಕ್ಕು ಅರ್ಜಿಗಳನ್ನು ಸಲ್ಲಿಸುವ ಜವಾಬ್ದಾರಿಯನ್ನು ಅಡಿಗರು ತಮ್ಮ ಟೀಮ್‌ಗೆ ವಹಿಸಿದ್ದರು. ಅಡಿಗರ ಮಾರ್ಗದರ್ಶನದಲ್ಲೇ ಯೋಗೀಶ್ ಶೇಟ್ ಹಾಗೂ ಇತರರು ಅರ್ಜಿಗಳನ್ನು ಸಲ್ಲಿಸುತ್ತಿದ್ದರು. ಒಂದಷ್ಟು ಮಾಹಿತಿಯನ್ನೂ ಸಂಗ್ರಹಿಸಿದ್ದರು. ಸಂಗ್ರಹಿಸಲಾದ ಕಡತಗಳೊಂದಿಗೆ ಜನವರಿ ಅಂತ್ಯದೊಳಗೆ ಲೋಕಾಯುಕ್ತ ನ್ಯಾಯಾಲಯದ ಮೊರೆ ಹೋಗಲು ಯೋಜನೆ ಸಿದ್ಧಪಡಿಸಲಾಗಿತ್ತು, ಅಷ್ಟರಲ್ಲಿ ಅಡಿಗರ ಕೊಲೆಯಾಗಿದೆ.

ಈ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಅರುಣ್ ಕುಮಾರ್ ನಾಯರಿ ಮೂಲತಃ ಕೇರಳದವನು. ಈತ ಉಡುಪಿಗೆ ಬರುವ ಮುನ್ನ ಮಂಗಳೂರಿನ ಕೊಣಾಜೆಯಲ್ಲಿ ವಾಸವಾಗಿದ್ದನು. ಈಗ ಉಡುಪಿ ಎಸ್ಪಿ ಕಚೇರಿ ಪಕ್ಕವೇ ನಾಲ್ಕು ಕೋಟಿ ರೂ. ಮೊತ್ತದ ಬಂಗಲೆಯನ್ನು ಕಟ್ಟಿಸಿಕೊಂಡಿದ್ದಾನೆ.

ಥ್ರೆಟ್ ನೀಡಿದ್ದ ಅರುಣ್

ಸಂಸದ ಹೆಗ್ಡೆಯವರಿಗೆ ಆಪ್ತನಾಗಿರುವ ಬ್ರಹ್ಮಾವರದ ಕಾಂಗ್ರೆಸ್ ಮುಖಂಡನೋರ್ವ ಇದೇ ಅರುಣ್‌ಗೂ ಕ್ಲೋಸ್. ಈ ಮುಖಂಡನ ಮೂಲಕ ಒಂದು ಬಾರಿ ಅರುಣ್ ಅಡಿಗ ಹಾಗೂ ಯೋಗೀಶ್ ಜೊತೆಗೆ ಮಾತುಕತೆ ನಡೆಸಿದ್ದ. ಮಾತುಕತೆ ನಡೆದದ್ದು ಕೋಟ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ. ಪ್ರಾಮಾಣಿಕರೂ, ನಿಷ್ಠಾವಂತರೂ ಆದ ಅಡಿಗರು ಹಾಗೂ ಯೋಗೀಶರು ನೋಟು ಪಡೆಯದೆ "ಪಕ್ಷಕ್ಕಾಗಿ ನಮ್ಮ ಕೆಲಸ. ನೀವು ಮುಂದುವರಿಸಿ, ನಾವೂ ಮುಂದುವರಿಯುತ್ತೇವೆ" ಎಂಬ ಸ್ಪಷ್ಟ ಉತ್ತರವನ್ನೂ ನೇರವಾಗಿಯೇ ನೀಡಿದ್ದರು. ಇದರಿಂದ ವಿಚಲಿತನಾಗಿದ್ದ ಅರುಣ್ ಪರೋಕ್ಷವಾಗಿ ಒಂದು ಬಾರಿ ಇದೇ ಮಾಹಿತಿಹಕ್ಕು ಕಾರ್ಯಕರ್ತರ ಟೀಮ್‌ಗೆ ಬೆದರಿಕೆ ಸಂದೇಶವನ್ನೂ ರವಾನಿಸಿದ್ದ. ಆದರೆ ಇದನ್ನು ಅಡಿಗ ಟೀಮ್ ಸುದ್ದಿ ಮಾಡಿರಲಿಲ್ಲ.

ಸಾಲಿಗ್ರಾಮ ಪ.ಪಂ.ಭೂ ಹಗರಣ

ಇನ್ನೊಂದು ಬಹಳ ಮುಖ್ಯವಾದದ್ದು ಸಾಲಿಗ್ರಾಮ ಪಟ್ಟಣ ಪಂಚಾಯತ್‌ನ ಭೂಹಗರಣ. ಸಾಲಿಗ್ರಾಮ ಪ.ಪಂ. ಇತ್ತೀಚೆಗೆ ಕೆಲವು ಎಕರೆ ಭೂಮಿಯನ್ನು ಖರೀದಿಸಿತ್ತು, ಸೆಂಟ್ಸ್‌ಗೆ 5 ಸಾವಿರ ರೂ. ಎಂದು ಸರಕಾರಿ ದರ ನಿಗದಿಯಾಗಿದ್ದ ಸ್ಥಳಕ್ಕೆ 10 ಸಾವಿರ ರೂ. ನೀಡಿ ಆಡಳಿತದಾರರು ಭೂಮಿ ಖರೀದಿ ಮಾಡಿದ್ದರು. "ಇದರಿಂದ ಸರಕಾರಕ್ಕೆ ಭಾರೀ ನಷ್ಟವಾಗಿದೆ, ಇದಕ್ಕೆ ಯಾರು ಹೊಣೆ?" ಎಂದು ಪ್ರಶ್ನಿಸಿ ಅಡಿಗರು ಇಲ್ಲಿಗೂ ಮಾಹಿತಿಹಕ್ಕು ಅರ್ಜಿ ಸಲ್ಲಿಸಿ ಮಾಹಿತಿ ಪಡೆದುಕೊಂಡಿದ್ದರು. ಇದು ಕೂಡಾ ಇದೀಗ ಚರ್ಚೆಗೆ ಗುರಿಯಾಗಿದೆ.

ಸುಪಾರಿ ನಿಡಿದವರಾರು?

ವಾರಾಹಿ ಗುತ್ತಿಗೆದಾರರು, ಮಂದರ್ತಿ ಧನಿ, ಗಣಿ ಮಾಫಿಯಾ ದೊರೆಗಳು, ನಿರ್ಮಿತಿಯ ಪ್ರಾಜೆಕ್ಟ್ ಡೈರೆಕ್ಟರ್... ಎಲ್ಲರೂ ಕೋಟಿ ತೂಗುವವರೇ ಆಗಿದ್ದಾರೆ. ಮಾತ್ರವಲ್ಲ, ಇವರ ಬೆನ್ನಿಗೆ ಇರುವವರು ಉನ್ನತ ಸರಕಾರಿ ಅಧಿಕಾರಿಗಳು ಹಾಗು ರಾಜಕಾರಣಿಗಳು ತಾನೇ? ಇದೇ ಧೈರ್ಯದಲ್ಲಿ ಬಾಡಿಗೆ ಹಂತಕರಿಗೆ ಸುಪಾರಿ ನೀಡಿದ 'ಗಣ್ಯರ ತಂಡ' ಅಡಿಗರನ್ನು ಬಲಿ ತೆಗೆದುಕೊಂಡಿದೆ. ಸುಪಾರಿ ನೀಡಿದವರು ಯಾರು ಎಂಬುದನ್ನು ಪೊಲೀಸರು ಪತ್ತೆಹಚ್ಚಬೇಕು. ಇದು ಪೊಲೀಸ್ ಅಧಿಕಾರಿಗಳಿಗೆ ಸಾಧ್ಯವೇ?

• ಶ್ರೀರಾಮ ದಿವಾಣ

ಚನ್ನಪಟ್ಟಣ: ಯೋಗಿ ನಕಲಿ ತ್ಯಾಗಿ!



ಚೆನ್ನಪಟ್ಟಣದ ಚೆಲುವಾಂತ ಚೆನ್ನಿಗ ಆಲಿಯಾಸ್ ಅರಣ್ಯ ಮಂತ್ರಿ ಸಿ.ಪಿ.ಯೋಗೀಶ್ವರ್ ತನ್ನ ರಾಜಕೀಯ ಜೀವನಕ್ಕೆ ನಿವೃತ್ತಿ ಘೋಷಿಸಿದ್ದಾನೆ!

ಇದು ಗಾಳಿ ಸುದ್ದಿಯಲ್ಲ, ಆತನೇ ಹರಿಬಿಟ್ಟ ಬೋಗಸ್ ಸುದ್ದಿ. ಮೊನ್ನೆ ಬೇವೂರು ತಿಮ್ಮಪ್ಪ ಬೆಟ್ಟದ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಯೋಗೀಶ್ವರ್ ಈ ರೀತಿ ಕನವರಿಸಿದ್ದಾನೆ. ಅರಣ್ಯ ಖಾತೆ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವನಂತಹ ಅಧಿಕಾರ ಇದ್ದಾಗ್ಯೂ ಯೋಗೀಶ್ ಹೀಗೆ ಹಠಾತ್ತನೆ ನಿವೃತ್ತಿ ಘೋಷಿಸುತ್ತಾನೆ ಎಂದರೆ ಯಾರಾದರೂ ಆತನ ಪ್ರಾಮಾಣಿಕತೆಯನ್ನು ನಂಬಲು ಸಾಧ್ಯವೇ? ಆಪರೇಷನ್ ಕಮಲದಿಂದ ಮೊದಲ್ಗೊಂಡು ಮೆಗಾಸಿಟಿ ಡೀಲಿಂಗ್, ಅರಣ್ಯ ಖಾತೆಯ ಅಪರಾ-ತಪರಾಗಳ ಮೂಲಕ ಮುಖಕ್ಕೆ ಕಳಂಕದ ಮಸಿ ಮೆತ್ತಿಕೊಂಡಿರುವ ಯೋಗೀಶ್ವರ್‌ಗೆ ಚೆನ್ನಪಟ್ಟಣದಲ್ಲಿ ಈ ಬಾರಿ ಸೋಲು ಕಟ್ಟಿಟ್ಟ ಬುತ್ತಿ. ಅದನ್ನು ತಪ್ಪಿಸುವುದಕ್ಕಾಗಿ ಯೋಗೀಶ್ವರ್ ಇಂತಹ ಗಿಮಿಕ್ ನಡೆಸುತ್ತಿರುವುದು ಸ್ಪಷ್ಟವಾಗಿದೆ.

ಜನರಲ್ಲಿ ತನ್ನ ಕುರಿತು ಒಂದು ಕುತೂಹಲ ಹುಟ್ಟುಹಾಕುವುದು, ಜನರ ಸಿಂಪಥಿ ಗಿಟ್ಟಿಸಿಕೊಳ್ಳುವುದು ಈ ಘೋಷಣೆಯ ಹಿಂದಿರುವ ಉದ್ದೇಶ. ಅವನದೇ ಒಂದಷ್ಟು ಚೇಲಾಗಳ ಕೈಗೆ 'ಅಖಿಲ ಕರ್ನಾಟಕ ಯೋಗೀಶ್ವರ್ ಅಭಿಮಾನಿ ಸಂಘ' ಎಂಬರ್ಥದ ಬ್ಯಾನರ್ ಕೊಟ್ಟು 'ನಮ್ಮೆಲ್ಲರ ನೆಚ್ಚಿನ ನಾಯಕ, ಚನ್ನಪಟ್ಟಣದ ಭಗೀರಥ, ಸಾಧನೆಗಳ ಹರಿಕಾರ ಯೋಗೀಶ್ವರ್ ರಾಜಕಾರಣ ಬಿಡಬಾರದು ಎನ್ನುವ ಘೋಷಣೆ ಕೂಗಿಸುವುದು, ಅದನ್ನು ಕಂಡ ಜನ 'ಯೋಗೀಶ್ ಎಂತಹ ಜನಾನುರಾಗಿ, ಜನರೇ ಆತನನ್ನು ಹಂಬಲಿಸುವಷ್ಟು ಜನೋಪಕಾರಿ' ಎಂದೆಲ್ಲಾ ಬೆರಗುಗೊಂಡು ಓಟು ಒತ್ತುತ್ತಾರೆ ಎನ್ನುವುದು ಅವನ ಲೆಕ್ಕಾಚಾರ. ಇದ್ಯಾವುದು ನಡೆಯದಿದ್ದರೂ ಜನ ಮರೆತಿರುವ ತನ್ನ ಹೆಸರು ಚುನಾವಣೆಯ ಸಮೀಪದಲ್ಲಿ ಈ ರೀತಿಯಾದರೂ ಚಲಾವಣೆಗೆ ಬರಲೆನ್ನುವುದು ಯೋಗಿಯ ಹಕೀಕತ್ತು. ಒಂದೊಮ್ಮೆ ಚುನಾವಣೆ ವೇಳೆಗೆ ಸೋಲಿನ ಈಕ್ವೇಷನ್ ಕೊಂಚವೂ ಚೇತರಿಸಿಕೊಳ್ಳದಿದ್ದರೆ ಈ ಹೇಳಿಕೆಯನ್ನೆ ನೆಪವಾಗಿಟ್ಟುಕೊಂಡು ಚುನಾವಣೆಯಿಂದ ದೂರ ಉಳಿದು ಸೋಲಿನ ಅಪಖ್ಯಾತಿಯಿಂದ ತಪ್ಪಿಸಿಕೊಂಡು ಎಲೆಕ್ಷನ್‌ಗೆ ಖರ್ಚಾಗುವ ಗಂಟನ್ನು ಸೇಫ್ ಮಾಡಿಕೊಳ್ಳುವ ಹುನ್ನಾರವೂ ಇದ್ದಿರಬಹುದು.

ಸೋಲು ಸಖತ್ತಾಗೆ ಕಾದೈತಿ

ಈ ಸಲದ ವಿಧಾನಸಭಾ ಚುನಾವಣೆಯ ಫಲಿತಾಂಶದ ನಂತರದಲ್ಲಿ ತಯಾರಾಗುವ 'ಸಚಿವರಾಗಿದ್ದೂ ಸೋತವರು' ಪಟ್ಟಿಯಲ್ಲಿ ಯೋಗೀಶ್ವರ್ ಹೆಸರು ಕಾಣಿಸಿಕೊಳ್ಳುವುದು ಶತಃ ಸಿದ್ಧ. ಸದ್ಯ ಆತ ಪ್ರತಿನಿಧಿಸುತ್ತಿರುವ ಬಿ.ಜೆ.ಪಿ ಪಕ್ಷಕ್ಕಂತು ಅಲ್ಲಿ ಉಳಿಗಾಲವಿಲ್ಲ. ಇದು ಯೋಗೀಶನಿಗೆ ಚೆನ್ನಾಗೇ ಗೊತ್ತಿದೆ. ಹಾಗಾಗಿ ಕಾಂಗ್ರೆಸ್‌ಗೆ ಜಿಗಿಯಲು ಹವಣಿಸುತ್ತಿದ್ದಾನೆ. ಆತನ ಐರನ್ ಲೆಗ್ ಕಾಂಗ್ರೆಸ್‌ನತ್ತ ತಿರುಗುವುದನ್ನು ಸ್ಥಳೀಯ ಕಾಂಗ್ರೆಸ್ಸಿಗರು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್‌ನ ನಾಯಕರನ್ನು ಇನ್ನಿಲ್ಲದಂತೆ ಕಾಡಿದ, ಪಕ್ಷದ ಅಸ್ತಿತ್ವವನ್ನೇ ಹೀಯಾಳಿಸಿದ ಈ ವ್ಯಕ್ತಿ ಕಾಂಗ್ರೆಸ್‌ನ ಎಂ.ಎಲ್.ಎ ಕ್ಯಾಂಡಿಡೇಟಾಗಿ ನಿಂತರೆ ನಿಷ್ಠಾವಂತ ಕಾರ್ಯಕರ್ತರು ಪಕ್ಷದಿಂದ ಹಿಂದೆ ಸರಿಯುವುದು ನಿಚ್ಚಳವಾಗಿದೆ. ಕಾಂಗ್ರೆಸ್ ಪಾರ್ಟಿಯ ಮಾಜಿ ಶಾಸಕ ಸಾದತ್ ಅಲಿಖಾನ್ ಈ ಬಾರಿ ಪಕ್ಷದ ಟಿಕೆಟ್‌ಗಾಗಿ ತಯಾರಿ ನಡೆಸುತ್ತಿದ್ದು, ಮುಸ್ಲಿಮ್ ಓಟುಗಳ ಮೇಲೆ ಕಣ್ಣಿಟ್ಟಿರುವ ವರಿಷ್ಠರು ಅಸ್ತು ಎನ್ನುವ ಸೂಚನೆಗಳೂ ಸಿಕ್ಕಿವೆ. ಅಲ್ಲದೇ ಈ ಭಾಗದ ಕಾಂಗ್ರೆಸ್‌ನ ಪ್ರಭಾವಿ ಪಟು ಎಂತಲೇ ಗುರುತಿಸಿಕೊಳ್ಳುವ ಡಿ.ಕೆ.ಶಿವಕುಮಾರ್ ಜೊತೆ ವೈಯಕ್ತಿಕ ಜಿದ್ದಾಜಿದ್ದು ಕಟ್ಟಿಕೊಂಡಿರುವ ಯೋಗಿಗೆ ಕೈ ಮನೆಯ ಎಂಟ್ರಿ ಅಷ್ಟು ಸಲೀಸಲ್ಲ.


ಬಿ.ಜೆ.ಪಿಯಲ್ಲೆ ಉಳಿದರೂ ಆತನಿಗೆ ಆಂತರಿಕ ಆಘಾತ ತಪ್ಪಿದ್ದಲ್ಲ. ಯಾಕೆಂದರೆ ಈತ ಕಮಲದಿಂದ ಆಪರೇಷನ್ ಮಾಡಿಸಿಕೊಂಡು ಬಿ.ಜೆ.ಪಿ ಸೇರಿದ ನಂತರ ಪಕ್ಷದ ಮೂಲ ಕಾರ್ಯಕರ್ತರನ್ನು ತುಳಿಯುತ್ತಲೇ ಬಂದಿದ್ದಾನೆ. ತನ್ನ ದಂಡಿನ ಸಮೇತವೇ ಬಿ.ಜೆ.ಪಿ.ಗೆ ಬಂದಿದ್ದ ಯೋಗಿ ಎಲ್ಲಾ ಕಾಮಗಾರಿಗಳನ್ನು ಪರಮಾಪ್ತರಿಗೆ ದಕ್ಕುವಂತೆ ವ್ಯವಸ್ಥೆ ಮಾಡಿದ್ದನೆ ಹೊರತು, ಮೂಲ ಕೇಸರಿ ಕುಮಾರರಿಗೆ ಎಳ್ಳಷ್ಟೂ ಅನುಕೂಲವಾಗಿರಲಿಲ್ಲ. ಜಯರಾಮ್, ರಾಮಾಜೋಯಿಸ್, ರಾಮಚಂದ್ರಗೌಡ ಮೊದಲಾದ ಮೂಲ ಬಿ.ಜೆ.ಪಿ.ಗಳು ಕಮಾಯಿ ಕಾಣದೆ ಬೇಸತ್ತು ಹೋಗಿದ್ದಾರೆ. ಹಾಗಾಗಿ ಸೋಲು ಗ್ಯಾರಂಟಿ ಎನ್ನುವ ಪಕ್ಷದಲ್ಲೂ ಆತನಿಗೆ ನೆಲೆ ಇಲ್ಲದಂತಾಗಿದೆ.

ಯೋಗೀಶ್ವರ್‌ಗೆ ಇದೆಲ್ಲಕ್ಕಿಂತ ದೊಡ್ಡ ಹೊಡೆತ ಜೆ.ಡಿ.ಎಸ್‌ನಿಂದ ಬೀಳಲಿದೆ. ಯಾಕೆಂದರೆ ಈ ವಿಧಾನಸಭಾ ಚುನಾವಣೆಗೆ ಚನ್ನಪಟ್ಟಣದಿಂದ ಜೆ.ಡಿ.ಎಸ್.ನ ಅಭ್ಯರ್ಥಿಯಾಗಿ ಖುದ್ದು ಅನಿತಾ ಕುಮಾರಸ್ವಾಮಿ ಸ್ಪರ್ಧಿಸುವುದು ಖಾತ್ರಿಯಾಗಿದೆ. ಹಾಗೇನಾದರು ಆದಲ್ಲಿ ಕುಮಾರಸ್ವಾಮಿ ಅಲ್ಲಿ ನೇರ ಅಖಾಡಕ್ಕಿಳಿಯುತ್ತಾರೆ. ಅದೂಅಲ್ಲದೆ ಅನಿತಾ ಕುಮಾರಸ್ವಾಮಿಗೆ ಚನ್ನಪಟ್ಟಣ ತೀರಾ ಅಪರಿಚಿತವೇನೂ ಅಲ್ಲ. ಆಕೆ ಚನ್ನಪಟ್ಟಣದ ಮಹಿಳಾ ಕಾಲೇಜಿನಲ್ಲೆ ಓದಿ ಬೆಳೆದವರು. ಅವರ ತಂದೆಯಾದ ಡಾ.ಸೀತಾರಾಮಯ್ಯನವರು ಇಲ್ಲಿಯೇ ವೈದ್ಯ ವೃತ್ತಿಯಲ್ಲಿ ಹೆಸರು ಮಾಡಿದಂತವರು. ಅನಿತಾ ಕುಮಾರಸ್ವಾಮಿಯವರಿಗೆ ಇಲ್ಲಿನ ಒಡನಾಟ ಚೆನ್ನಾಗಿಯೇ ಇದೆ. ಜಾತಿ ಲೆಕ್ಕಾಚಾರ, ಕುಮಾರಸ್ವಾಮಿಯ ಅಲೆ, ದೇವೇಗೌಡರ ಪ್ರಭಾವ ಅಂತೆಲ್ಲ ಲೆಕ್ಕಹಾಕಿದರೂ ಜೆ.ಡಿ.ಎಸ್.ಗೆ ಪೂರಕ ವಾತಾವರಣವೇ ಇದೆ. ಕಳೆದ ಚುನಾವಣೆಯ ಸಮಯದಲ್ಲಿ ಪುಟ್ಟಣ್ಣ, ಲಿಂಗೇಶ್ ಕುಮಾರ್ ಮೊದಲಾದ ಜೆ.ಡಿ.ಎಸ್ ನಾಯಕರೊಂದಿಗೆ ಒಳ ಒಪ್ಪಂದ ಕುದುರಿಸಿಕೊಂಡು ಅವರು ತಟಸ್ಥವಾಗಿರುವಂತೆ ಮಾಡಿ ತನ್ನ ಗೆಲುವಿನ ಹಾದಿಯನ್ನು ಸುಗಮ ಮಾಡಿಕೊಂಡಿದ್ದ ಯೋಗಿಗೆ ಈ ಬಾರಿ ಅದೂ ಸಾಧ್ಯವಿಲ್ಲ. ಯಾಕೆಂದರೆ ಇಡೀ ಚನ್ನಪಟ್ಟಣದ ಜೆ.ಡಿ.ಎಸ್ ಉಸ್ತುವಾರಿಯನ್ನು ಕನಕಪುರದ ದುಂತೂರು ವಿಶ್ವನಾಥ್‌ಗೆ ವಹಿಸಲಾಗಿದೆ. ಪಕ್ಷದ ನಿಷ್ಠಾವಂತ ಎನಿಸಿಕೊಂಡ ಆತನಲ್ಲಿ ಒಳ ಒಪ್ಪಂದಕ್ಕೆ ಆಸ್ಪದವೇ ಇಲ್ಲ. ಒಟ್ಟಿನಲ್ಲಿ ಯೋಗಿಯ ಎಲ್ಲಾ ರಹಸ್ಯ ಬಾಗಿಲುಗಳೂ ಬಂದ್ ಆಗಿವೆ.

ಇದೆಲ್ಲ ಲೆಕ್ಕಾಚಾರವಿಟ್ಟುಕೊಂಡೇ ಮೊನ್ನೆ ಕುಮಾರಸ್ವಾಮಿ ಚನ್ನಪಟ್ಟಣದಲ್ಲಿ ತಮ್ಮ 54ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡಾಗ ಬೃಹತ್ ಅಭಿಮಾನಿ ಬಳಗ ಜಮಾಯಿಸಿತ್ತು. ಅದನ್ನು ಕಂಡ ನಂತರವಂತೂ ಯೋಗೀಶ್‌ಗೆ ಸೋಲಿನ ಭೀತಿ ಮತ್ತಷ್ಟೂ ಹೆಚ್ಚಾಗಿದೆ. ಸಾಮಾನ್ಯ ಜನರಲ್ಲಿ ಯೋಗಿ ಬಗ್ಗೆ ತಾತ್ಸಾರ ಮಡುಗಟ್ಟಿರುವುದು ಕ್ಷೇತ್ರದಲ್ಲಿ ಎದ್ದು ಕಾಣುತ್ತಿದೆ. ಅದಕ್ಕೇ ನಿವೃತ್ತಿಯ ನಾಟಕವಾಡುತ್ತಿದ್ದಾನೆ.

ಬ್ರೋಚರ್ ಪರಾಕುಗಳು

ಯೋಗೀಶ್ವರ್ ಹೀಗೆ ಅಸಂಬದ್ಧವಾಗಿ, ಅರ್ಥವಿಲ್ಲದಂತೆ ಮಾತನಾಡುವುದು ಹೊಸದೇನೂ ಅಲ್ಲ. ಆಗದ-ಹೋಗದ ಕಾಮಗಾರಿಗಳ ಬ್ರೋಚರ್ ಮಾಡಿಸಿ ಜನರಿಗೆ ಹಂಚಿ ತಾನೊಬ್ಬ ಮಹತ್ವಾಕಾಂಕ್ಷಿ ಜನನಾಯಕ ಎಂದು ಬಿಂಬಿಸಿಕೊಳ್ಳುವುದು ಆತನ ಖಯಾಲಿ. ಅದರಲ್ಲಿ ಕೂರಣಗೆರೆ ಬೆಟ್ಟದ ಪ್ರಾಜೆಕ್ಟೂ ಒಂದು. ಬೆಟ್ಟದ ಮೇಲೆ ಟ್ಯಾಂಕ್ ಕಟ್ಟಿಸಿ ಆ ನೀರನ್ನು ಆರೂರು, ಮೊಗೇನಹಳ್ಳಿ, ದೊಡ್ಡಮೂಳೂರು ಕೆರೆಗಳ ಮೂಲಕ ಕಣ್ವಾ ನದಿಗೆ ಜೋಡಿಸಿ ಚನ್ನಪಟ್ಟಣದ ಆಧುನಿಕ ಭಗೀರಥನಾಗುವುದು



ಯೋಗಿಯ ಉದ್ದೇಶ. ಮೇಲ್ನೋಟಕ್ಕೆ ಇದು ಜನೋಪಕಾರಿ ಯೋಜನೆಯಂತೆ ಕಂಡುಬಂದರೂ ಇದರ ಹಿಂದಿರುವುದು ಯೋಗಿಯ ದುರುದ್ದೇಶ ಮಾತ್ರ. ಯಾಕೆಂದರೆ ತಾಂತ್ರಿಕವಾಗಿ ನೋಡಲು ಹೋದರೆ ಇದು ಸದ್ಯದ ಪರಿಸ್ಥಿತಿಯಲ್ಲಿ ಅಸಾಧ್ಯವಾದ ಯೋಜನೆ. ಇದಕ್ಕಿಂತಲೂ ಸಲೀಸಾದ ಯೋಜನೆಗಳೆ ನೀರಾವರಿ ಇಲಾಖೆಯಲ್ಲಿ ಧೂಳು ತಿನ್ನುತ್ತಾ ಕೂತಿರುವಾಗ ಬೆಟ್ಟಗಳ ಹಾದಿಯನ್ನೆ ನೆಲಸಮ ಮಾಡಿ ಜೋಡಿಸುವ ಯೋಗಿಯ ಯೋಜನೆ ನೆಪಕ್ಕೆ ಮಾತ್ರ. ಮೊನ್ನೆ ಬಸವರಾಜ ಬೊಮ್ಮಾಯಿಯನ್ನು ಕರೆಸಿ 200 ಕೋಟಿಯ ಈ ಯೋಜನೆಯ ಉದ್ಘಾಟನೆಯನ್ನೂ ಮಾಡಿದ್ದಾನೆ. ಅಲ್ಲದೆ ಅಲ್ಲಲ್ಲಿ ಪೈಪುಗಳನ್ನೂ ಅನ್‌ಲೋಡ್ ಮಾಡಿಸಿದ್ದಾನೆ. ಇದೆಲ್ಲ ಚುನಾವಣೆಯ ಲಾಭಕ್ಕೋಸ್ಕರ ಮಾತ್ರ. ಆಮೇಲೆ ಅವೆಲ್ಲ ಬರಖಸ್ತಾಗಿ ಹೋಗುತ್ತವೆ ಎನ್ನುವುದರಲ್ಲಿ ಅನುಮಾನವೇ ಇಲ್ಲ.

ಮಾರ್ಕೋನಹಳ್ಳಿ ಕೆರೆಯಿಂದ ಮದಕೇನಹಳ್ಳಿ ಡ್ಯಾಂ ಮೂಲಕ ಕಣ್ವ ನದಿಗೆ ಜೋಡಿಸುವ ಆತನ ಮತ್ತೊಂದು ಯೋಜನೆಯೂ ಬಹಳಷ್ಟು ಹಿಂದೆಯೇ ಬ್ರೋಚರ್ ರೂಪ ತಳೆದು ಜನರನ್ನು ತಲುಪಿತ್ತೇ ಹೊರತು ಇದುವರೆವಿಗೂ ಅದು ಕೈಗೂಡಿಲ್ಲ. ಈ ಬೆಟ್ಟದ ಯೋಜನೆಗೂ ಅದೇ ಗತಿ ಕಾದಿದೆ. ಅಲ್ಲದೆ ಚನ್ನಪಟ್ಟಣಕ್ಕೆ ಶಿಂಷಾ ಆಣೆಕಟ್ಟೆಯಿಂದ, ಹೇಮಾವತಿಯಿಂದ ನೀರು ನುಗ್ಗಿಸುವ ಯೋಜನೆಗಳ ಬ್ರೋಚರ್‌ಗಳೂ ಯೋಗಿಯ ಪೋಸ್ಟರ್ ಸಮೇತ ರೆಡಿಯಾಗಿವೆ. ಈತ ಶಾಸಕನಾಗುವ ಮುನ್ನವೇ ಚಾಲನೆ ಪಡೆದುಕೊಂಡಿದ್ದ ಹಿಗ್ಗಲೂರು ಬ್ಯಾರೇಜ್ ನಿರ್ಮಾಣ ತನ್ನ ಕಾಲದಲ್ಲಿ ಪೂರ್ಣವಾಯಿತೆಂಬ ಕಾರಣಕ್ಕೆ ಅದರ ಸಂಪೂರ್ಣ ಕ್ರೆಡಿಟ್ಟನ್ನು ತನ್ನದಾಗಿಸಿಕೊಳ್ಳಲೂ ಯೋಗಿ ಮುಂದಾಗಿದ್ದಾನೆ. ಆ ಕುರಿತು ಸದ್ಯದರಲ್ಲೆ ಬ್ರೋಚರ್ ಹೊರ ಬಂದರೂ ಆಶ್ಚರ್ಯವಿಲ್ಲ.

● ವರದಿಗಾರ

ಕೊಪ್ಪಳ: ಸುಳ್ಳುಬುರುಕಿ ವನಿತಾಳ ಸದಸ್ಯತ್ವ ಗೋತಾ

ಮೋಸಕ್ಕೂ ಒಂದು ಕೊನೆ ಇದೆ ಎಂಬುದಕ್ಕೆ ಕೊಪ್ಪಳದ ಜಿಲ್ಲಾ ನ್ಯಾಯಾಲಯ ಕಳೆದ ವಾರ ನೀಡಿದ ಮಹತ್ವದ ಆದೇಶ ನಿದರ್ಶನವಾಗಿದೆ. ಈ ನಿರ್ಣಯ ರಾಜ್ಯದ ಇತಿಹಾಸದಲ್ಲೇ ಹೊಸದು. ಚುನಾವಣೆಯಲ್ಲಿ ಗೆದ್ದವಳು ಡಿಬಾರಾಗಿದ್ದಾಳೆ, ಸೋತವಳು ಗೆದ್ದಿದ್ದಾಳೆ...

ಹೌದು ಕೊಪ್ಪಳ ಜಿಲ್ಲಾ ಪಂಚಾಯತಿಗೆ ಎರಡೂವರೆ ವರ್ಷಗಳ ಹಿಂದೆ ಜರುಗಿದ ಚುನಾವಣೆಯಲ್ಲಿ ಸುಳ್ಳು ದಾಖಲೆ ನೀಡಿ ಸ್ಪರ್ಧಿಸಿದ್ದ ವನಿತಾ ಗಡಾದ ಎಂಬುವಳನ್ನು ಅನರ್ಹಗೊಳಿಸಿದ ಜಿಲ್ಲಾ ನ್ಯಾಯಾಲಯ ಅವಳ ಸದಸ್ಯತ್ವವನ್ನು ರದ್ದುಗೊಳಿಸಿ ಇವಳಿಂದ ಸೋಲು ಅನುಭವಿಸಿದ್ದ ಪೂರ್ಣಿಮಾ ಪಾಟೀಲಳಿಗೆ ಗೆಲುವಿನ ಮಾಲೆಯನ್ನ ತೊಡಿಸಿದೆ. ಇದು ರಣ ಹಸುವಿನ ವಂಚಕಿ ವನಿತಾಳ ಭರ್ತಿ ವಸೂಲಿಗೆ ಬ್ರೇಕ್ ಹಾಕಿದಂತಾಗಿದೆ.

ಲೇಬಗಿರಿ ಕ್ಷೇತ್ರದಿಂದ ಗೆದ್ದಿದ್ದಳು

ಕೊಪ್ಪಳ ತಾಲೂಕಿನ ಗಂಗಾವತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಲೇಬಗಿರಿ ಜಿಲ್ಲಾ ಪಂಚಾಯತಿ ಕ್ಷೇತ್ರದಿಂದ 2010ರಲ್ಲಿ ಜರುಗಿದ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದ ವನಿತಾ ಗಡಾದ ಅಲ್ಪ ಮತಗಳ ಅಂತರದಲ್ಲಿ ಗೆದ್ದಿದ್ದಳು. ವನಿತಾಳ ಎಲ್ಲ ಚುನಾವಣಾ ಉಸ್ತುವಾರಿಯನ್ನು ಆಕೆಯ ಅಣ್ಣ ಪ್ರಸನ್ನ ಗಡಾದ ನೋಡಿಕೊಂಡಿದ್ದ. ಈತ ಕೂಡಾ ಹಿಂದಿನ ಅವಧಿಯಲ್ಲಿ ಇದೇ ಕ್ಷೇತ್ರದಿಂದ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಗೆದ್ದು ಒಂದು ಅವಧಿ ಅಧಿಕಾರ ನಡೆಸಿದ್ದ.

ಕೊಪ್ಪಳದ ಶಾಸಕ ಪಕ್ಷಾಂತರಿ ಮಂಗ ಕರಡಿ ಸಂಗಣ್ಣನ ಪರಮ ಶಿಷ್ಯನಾಗಿರುವ ಪ್ರಸನ್ನ ಜಿ.ಪಂ ಸದಸ್ಯನಾಗಿದ್ದಾಗ ಹಿರೇಹಳ್ಳ ಡ್ಯಾಮ್ ನಿರ್ಮಾಣದಲ್ಲಿ ಬೋಗಸ್ ಬಿಲ್ಲಿನ ಮೂಲಕ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿದ್ದ. ಈ ಕಾರಣಕ್ಕೇ ಇವತ್ತಿಗೂ ಪ್ರಸನ್ನ ಗಡಾದಗೆ ಜಿ.ಪಂ. ಅಂಗಳದಲ್ಲಿ ಬೋಗಸ್ ಪ್ರಸನ್ನ ಎಂಬ ಅಡ್ಡ ಹೆಸರು ಚಾಲ್ತಿಯಲ್ಲಿದೆ.

ರಾಜಕಾರಣವನ್ನೇ ಫುಲ್ ಟೈಮ್ ದಂಧೆಯಾಗಿ ಮಾಡಿಕೊಂಡಿರುವ ಪ್ರಸನ್ನನ ಐಲಾಟಗಳಿಗೆ ಲೆಕ್ಕವಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಸ್ಪರ್ಧಿಸಿದ್ದರು. ಜೆಡಿಎಸ್ ಪಕ್ಷದವನಾದ ತಾನು ಅನ್ಸಾರಿ ಪರವಾಗಿ ಕೆಲಸ ಮಾಡುತ್ತಿರುವುದಾಗಿ ಪೋಸು ಕೊಟ್ಟ ಪ್ರಸನ್ನ ತೆರೆಮರೆಯಲ್ಲಿ ಕರಡಿ ಸಂಗಣ್ಣನ ಜೊತೆಗೂಡಿ ಬಿಜೆಪಿಯ ಪರಣ್ಣ ಮುನವಳ್ಳಿ ಪರ ಕೆಲಸಮಾಡಿದ್ದ.



ಆನಂತರ ಜರುಗಿದ ಲೋಕಸಭೆ ಚುನಾವಣೆಯಲ್ಲೂ ಈತ ಪಕ್ಷ ವಿರೋಧಿಯಾಗಿ ಸಂಗಣ್ಣನ ಅಣತಿಯಂತೆ ಬಿಜೆಪಿಯ ಶಿವರಾಮೇಗೌಡರ ಪರ ನಿಂತಿದ್ದ. ಇಂತಹ ಗುಳ್ಳೆನರಿ ಪ್ರಸನ್ನನಿಗೆ 2010ರಲ್ಲಿ ತನ್ನ ತಂಗಿಯನ್ನು ಗೆಲ್ಲಿಸುವುದು ಕಷ್ಟವಾಗಲಿಲ್ಲ.

ಸುಳ್ಳು ದಾಖಲೆಗಳೇ ವನಿತಾಳ ಆಸ್ತಿ

'ಸುಳ್ಳು, ಮೋಸವೇ ನಮ್ಮನೆ ದೇವರು' ಎಂದುಕೊಂಡಿರುವ ಈ ಅಣ್ಣ-ತಂಗಿ ಜೋಡಿ ಚುನಾವಣೆಗೆ ನಿಲ್ಲುವಾಗ ಚುನಾವಣಾ ಇಲಾಖೆಗೆ ಸಲ್ಲಿಸಿದ ದಾಖಲೆಗಳೇ ಖೊಟ್ಟಿಯಾಗಿದ್ದವು. ಚುನಾವಣಾ ನಿಯಮದ ಪ್ರಕಾರ ಒಬ್ಬ ವ್ಯಕ್ತಿ ಒಂದು ಊರಿನ ಮತದಾರರ ಪಟ್ಟಿಯಲ್ಲಿ ಮಾತ್ರ ತನ್ನ ಹೆಸರನ್ನು ನೋಂದಾಯಿಸಿರಬೇಕು. ಆದರೆ ವನಿತಾ ತಾನು ಕಿನ್ನಾಳ ಗ್ರಾಮದಲ್ಲಿರುವ ಮತದಾರಳು ಎಂದು ಪ್ರಮಾಣಪತ್ರ ಸಲ್ಲಿಸಿದ್ದಳು. ಕಿನ್ನಾಳ ಈಕೆಯ ತವರುಮನೆ. ಅಲ್ಲಿ ವನಿತಾ ವೀರಣ್ಣ ಗಡಾದ ಎಂಬ ಹೆಸರಿನಲ್ಲಿ ಮತದಾರಳಾಗಿ ದ್ದಾಳೆ. ಆದರೆ ಈಕೆ ಗಂಡನಮನೆ ಕೊಪ್ಪಳದಲ್ಲೂ ವನಿತಾ ಮಂಜುನಾಥ ಕೋರಿ ಎಂಬ ಹೆಸರಿನಲ್ಲಿ ಮತದಾರಳಾಗಿದ್ದಾಳೆ. ಇದು ಚುನಾವಣಾ ಅಧಿಕಾರಿಗಳ ಗಮನಕ್ಕೆ ಬಾರದೆ ಆಕೆ ಸ್ಪರ್ಧಿಸುವಂತಾಯಿತು.

ಆ ಚುನಾವಣೆಯಲ್ಲಿ ಬಿಜೆಪಿಯ ಪೂರ್ಣಿಮಾ ಹಾಗೂ ಕಾಂಗ್ರೆಸ್ಸಿನ ನೇತ್ರ ಬಸವರಾಜರ ಮಧ್ಯೆ ನೇರ ಸ್ಪರ್ಧೆ ಇದ್ದರೂ ಆಶ್ಚರ್ಯಕರ ರೀತಿಯಲ್ಲಿ ವನಿಯಾ ಗೆಲುವು ಸಾಧಿಸಿದ್ದಳು.

ಸಿಕ್ಕ ಅವಧಿಯಲ್ಲಿ ಲೂಟಿ ಮಾಡಿದ್ದೇ ಹೆಚ್ಚು

ಜಿಲ್ಲಾ ಪಂಚಾಯತಿಯ ಸದಸ್ಯಳಾಗಿ ಪ್ರಮಾಣವಚನ ಸ್ವೀಕರಿಸಿದ ಮರುಕ್ಷಣದಿಂದಲೇ ಆಮದನಿ ತರುವ ಜಾಗೆಗಳಿಗೆ ಹುಡುಕಾಟ ಶುರುವಿಟ್ಟುಕೊಂಡಳೂ ವನಿತಾ. ಈ.ಪಂ. ಅಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ ಕಾಂಗ್ರೆಸ್ಸಿಗರಿಗೆ ಬೆಂಬಲ ನೀಡಿ ಚುನಾವಣೆಗೆಂದು ಮಾಡಿದ್ದ ಖರ್ಚಿನ ಮುಕ್ಕಾಲು ಹಣವನ್ನು ಅಲ್ಲೇ ತೆಗೆದುಬಿಟ್ಟಳು. ಜಿ.ಪಂ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಇಲಾಖೆಯ ಅಧಿಕಾರಿಗಳನ್ನು ಮಾಮೂಲಿಗೆ ಪೀಡಿಸಲಾರಂಭಿಸಿದಳು. ಎನ್‌ಜಿಓ ವೊಂದನ್ನ ರಿಜಿಸ್ಟರ್ ಮಾಡಿಸುವ ಮೂಲಕ ಹಣ ಗಳಿಕೆಯ ದಾರಿಯೊಂದನ್ನು ಕಂಡುಕೊಂಡಳು. ಶಿಕ್ಷಣ ಇಲಾಖೆಯ ಅನೇಕ ಮಹತ್ವಾಕಾಂಕ್ಷಿ ಯೋಜನೆಗಳನ್ನು ಹಳ್ಳ ಹಿಡಿಸಿ ಬಂದ ಅನುದಾನವನ್ನೆಲ್ಲ ಗುಳುಂ ಮಾಡಿಬಿಟ್ಟಳು.ಹಣ ಎತ್ತುವುದರಲ್ಲಿ ನಿಪುಣನಾದ ಅಣ್ಣಾ ಪ್ರಸನ್ನ ತಂಗಿಯ ವಸೂಲಿ ದಂಧೆಯ ಉಸ್ತುವಾರಿ ವಹಿಸಿಕೊಂಡ. ಆಕೆಗೊಂದು ಕಾರು ಕೊಡಿಸಿ ಜುಮ್ ಅಂತ ಓಡಾಡಲು ಬಿಟ್ಟ. ಆದರೆ ಅವರಿಬ್ಬರ ಮಧ್ಯೆಯೂ ಭಿನಾಭಿಪ್ರಾಯಗಳು ಮೂಡಿ ಪೊರಕೆ ಹಿಡಿದು ಬೀದಿಯಲ್ಲಿ ಜಗಳ ಆಡುವ ಮಟ್ಟಿಗೆ ಕಾದಾಡಿದ್ದರಂತೆ. ಕೊನೆಗೆ ಅದು ಹೇಗೋ ರಾಜಿ ಪಂಚಾಯತಿ ಮಾಡಿಕೊಂಡು ಮತ್ತೆ ಒಂದಾದರಂತೆ.

ಐತಿಹಾಸಿಕ ತೀರ್ಪು

ಎರಡೆರಡು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಿಕೊಂಡು ಅಕ್ರಮವೆಸಗಿದ್ದ ವನಿತಾ ಗಡಾದಳ ಆಯ್ಕೆ ಪ್ರಶ್ನಿಸಿ ಬಿಜೆಪಿಯ ಪೂರ್ಣಿಮಾ ದೊಡ್ಡನಗೌಡ ಪಾಟೀಲ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು. ಆ ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಾಲಯ ಎಲ್ಲ ಸಾಕ್ಷ್ಯಾಧಾರಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ವನಿತಾಳನ್ನ ಜಿ.ಪಂ. ಸದಸ್ಯತ್ವ ಸ್ಥಾನದಿಂದ ಡಿಬಾರ್ ಮಾಡಿದೆ. ಈ ಆದೇಶ ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿಯೇ ಹೊಸದು ಮತ್ತು ಐತಿಹಾಸಿಕ ಎಂದು ಹೇಳಲಾಗುತ್ತಿದೆ.

ಒಟ್ಟಿನಲ್ಲಿ ಲೇಬಗಿರಿ ಕ್ಷೇತ್ರಕ್ಕೆ ಅಂಟಿದ್ದ ಶಾಪವೊಂದು ಕಳಚಿದಂತಾಗಿದೆ. ಅಧಿಕಾರ ಸಿಕ್ಕಿದ್ದೇ ಲೂಟಿ ಮಾಡಲು ಎಂಬಂತೆ ವರ್ತಿಸುತ್ತಿದ್ದ ವನಿತಾ ಈಗ ಮನೆ ಸೇರಿದ್ದಾಳೆ. ನ್ಯಾಯಾಲಯದ ಆದೇಶದ ಮೇರೆಗೆ ನೂತನ ಸದಸ್ಯೆಯಾಗಿ ಪ್ರಮಾಣವಚನ ಸ್ವೀಕರಿಸಿರುವ ಪೂರ್ಣಿಮಾ ಇನ್ನು ಮುಂದೆ ಕ್ಷೇತ್ರದ ಜನರ ಪರ ಕೆಲಸ ಮಾಡಲಿ.

● ಹುರಳಿಕುಪ್ಪಿ ವಿನಯ

ವಾಘಾ ಗಡಿಯಲ್ಲಿ ಉದ್ವಿಗ್ನತೆ!

ನಾಗತಿಹಳ್ಳಿ ಚಂದ್ರಶೇಖರ ತನ್ನೂರಿನ ಐವತ್ತು ಜನರಿಗೆ ಉತ್ತರ ಭಾರತ ತೋರಿಸುವ ಸಲುವಾಗಿ ಕರೆದುಕೊಂಡು ಹೋಗಿದ್ದ. ಆ ಜನರಿಗೆ ಮನರಂಜನೆ ಒಗಿಸಲು ನನ್ನನ್ನೂ ಎಳೆದುಕೊಂಡು ಹೋಗಿದ್ದ. ನಮ್ಮೊಂದಿಗೆ ಹಾರ್ಮೋನಿಯಂ, ತಬಲಾ ಅಲ್ಲದೆ ಸುಮಾರು ಜನ ಕಲಾನಿಧಿಗಳಿದ್ದರು. ಅವರೆಲ್ಲಾ ರೈಲಿನಲ್ಲಿ ಹಾಡಿಕೊಂಡು ಕಾಲ ದೂಡುವುದಕ್ಕೆ ನಮ್ಮದ್ಯಾವ ಅಭ್ಯಂತರವೂ ಇರಲಿಲ್ಲ, ಆದರೆ ದೆಹಲಿಯಿಂದ ನಮ್ಮನ್ನು ಅಮೃತಸರಕ್ಕೆ ಕರೆದುಕೊಂಡು ಹೋಗುವ ಬಸ್ಸಿನಲ್ಲಿದ್ದ ಮೈಕ್ ಕೈಗೆ ತೆಗೆದುಕೊಂಡ ಗಾನಕೋಗಿಲೆಗಳು ಅದ್ಭುತವಾಗಿ ಹಾಡತೊಡಗಿದರು. ಅದರಲ್ಲೊಂದು ಕೋಗಿಲೆಯನ್ನುದ್ದೇಶಿಸಿ ನಾನು "ಅವ್ವಾ, ಇದು ಯಾವ ರಾಗ, ಇಂತಹ ಆಲಾಪನೆಯನ್ನು ನನ್ನ ಜೀವಮಾನದಲ್ಲಿ ಕೇಳಿಲ್ಲ. ಗಂಡನ ಕೈಲಿ ಗೂಸು ತಿಂದ ಗಯ್ಯಾಳಿ ಹೆಣ್ಣುಮಗಳು ತನ್ನ ತಾರಕದನಿಯನ್ನು ಮಂದರಕ್ಕೆ ನಿಲ್ಲಿಸಿಕೊಂಡು ಬಹಳ ಹೊತ್ತು ಎಳೆದಂತಿದೆಯಲ್ಲಾ. ಅದ್ಭುತ ಕಣವ್ವ" ಎಂದೆ.

ನನ್ನ ವ್ಯಂಗ್ಯವನ್ನು ಮೆಚ್ಚುಗೆಯಾಗಿ ಗ್ರಹಿಸಿದಳೋ ಏನೊ, ಮತ್ತೊಂದು ಹಾಡನ್ನು ಶುರು ಮಾಡೇಬಿಟ್ಟಳು. ಅವಳ ಬಳಿಯಿದ್ದ ಎಕ್ಸೈ ಹಾಳೆಯ ತುಂಬ ಹಾಡುಗಳಿದ್ದವು. ಅವನ್ನು ಗಮನಿಸಿ ಹೆದರಿಕೊಂಡ ನಾನು ಆಕೆಯ ಕೈಯಿಂದ ಮೈಕ್ ಕಸಿದುಕೊಂಡು ಅಮೃತಸರ ಸಿಗುವವರೆಗೂ ನನಗೆ ಬರುವ ಹಾಡನ್ನೆಲ್ಲ ಹಾಡಿದೆ. ಸುಸ್ತಾದಾಗ ಮೈಸೂರಿನ ಚಂದ್ರಶೇಖರಾಚಾರಿಯವರಿಗೆ ಕೊಟ್ಟೆ. ಆತ ಒಳ್ಳೆಯ ಹಾಡುಗಾರ. ಆತನ ದನಿಯೇ ಮೋಹಕವಾಗಿದೆ. ಆನಂತರ ನಾಗತಿಹಳ್ಳಿ ಕಲಾವಿದೆ ಅಂಬಾ ಹಾಡತೊಡಗಿದಳು. ಅಷ್ಟರಲ್ಲಿ ಅಮೃತಸರ ಬಂದಿತು.

ಚಿರಂಜೀವಿ ಸಿಂಗ್‌ರ ಪ್ರಭಾವ ಬಳಸಿ ಸ್ವರ್ಣಮಹಲ್ ಸಮೀಪವೇ ನಮಗೆಲ್ಲಾ ವಸತಿ ವ್ಯವಸ್ಥೆ ಮಾಡಿದ್ದ ನಾಗತಿಹಳ್ಳಿ ಚಂದ್ರ ಮರುದಿನದ ಕಾರ್ಯಕ್ರಮದ ವಿವರ ಒಪ್ಪಿಸಿದ. ಅದರಂತೆ ಮರುದಿನ ಬೆಳಿಗ್ಗೆ ಸ್ವರ್ಣಮಂದಿರ ನೋಡಿಕೊಂಡು, ನಂತರ ಜಲಿಯನ್‌ವಾಲಾಬಾಗ್ ವೀಕ್ಷಿಸಿ, ಸಂಜೆ ವಾಘಾಗಡಿ ನೋಡುವುದಿತ್ತು.

ಸ್ವರ್ಣಮಂದಿರದ ಸಮೀಪವೇ ಇರುವ ಸಿಖ್ ಜನಾಂಗದ ಮ್ಯೂಸಿಯಂ ನೋಡಿದಾಗ ನಮ್ಮ ಭಾವನೆಗಳು ಬದಲಾಗಿ ಉಸಿರು ಬಿಗಿಹಿಡಿಯುವಂತಾಯ್ತು. ನಿಜಕ್ಕೂ ನಾವು ಮೈಸೂರು ಅರಸರ ಆಳ್ವಿಕೆಯಲ್ಲಿ ಸುಖವಾಗಿ ಬದುಕಿ ಬಂದವರು. ಆದರೆ ಭಾರತದ ಹೃದಯಭಾಗದಲ್ಲಿರುವ ಈ ಪಂಜಾಬು ಬಹಳ ರಕ್ತ ಹರಿಸಿದೆ. ಪರಕೀಯರ ದಾಳಿಯಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಒಂದು ಧಾರ್ಮಿಕ ರೆಜಿಮೆಂಟನ್ನೇ ತಯಾರಿಸಿಕೊಂಡಿದೆ. ತನ್ನ ನಾಡಿಗಾಗಿ ಬಲಿದಾನಗೊಂಡವರ ಭಾವಚಿತ್ರಗಳೆಲ್ಲಾ ಈ ಮ್ಯುಜಿಯಮ್ಮಿನಲ್ಲಿದೆ. ಅಷ್ಟೇ ಅಲ್ಲ, ಮುಸ್ಲಿಂ ದಳಪತಿಯೊಬ್ಬ ತನಗೆ ಹುಕ್ಕಾ ಹಚ್ಚಿಕೊಡಲಿಲ್ಲ ಎಂಬ ಕಾರಣಕ್ಕೆ ಸಿಖ್ಖನ ಚರ್ಮ ಸುಲಿಯುವ ಚಿತ್ರ ಭಯಾನಕವಾಗಿದೆ. ಬಹುಶಃ ಇವೆಲ್ಲಾ ನೆನಪುಗಳು ಸಿಖ್ಖರ ಮನಸ್ಸಿನ ಬಿಲ್ಲಿನ ಹುರಿ ಸಡಿಲವಾಗದಂತೆ ನೋಡಿಕೊಂಡಿರಬಹುದು. ಭಾರತ ಪಾಕ್ ಯುದ್ಧದ ಸಂದರ್ಭದಲ್ಲಿ ಮಡಿದ ವೀರಯೋಧರ ಭಾವಚಿತ್ರಗಳೂ ಇಲ್ಲಿವೆ.

ಪ್ರಪಂಚದ ಮೂಲೆಮೂಲೆಯಲ್ಲಿರುವ ಸಿಖ್ಖರು ಸ್ವರ್ಣಮಂದಿರದ ಸಮುಚ್ಚಯದಲ್ಲಿ ನಡೆಯುವ ದಾಸೋಹಕ್ಕೆ ದೇಣಿಗೆ ನೀಡುತ್ತಾ, ಭಾರತ ದಲ್ಲಿಯೇ ಇದೊಂದು ಸರ್ವಸಮೃದ್ಧ ಕ್ಷೇತ್ರವಾಗಿರುವಂತೆ ನೋಡಿಕೊಂಡಿದ್ದಾರೆ. ಸ್ವರ್ಣಮಂದಿರ ನೋಡಲು ಬಂದ ಯಾತ್ರಾರ್ಥಿಗಳಿಗೆ ಊಟ ನೀಡುವ ದೃಶ್ಯ ನಿಂತು ನೋಡುವಂತದ್ದು. ಪೌರುಷದ ಸಂಕೇತದಂತಿರುವ ಸಿಖ್ಖರು ಊಟ ಬಡಿಸುತ್ತ, ತಟ್ಟೆ ತೊಳೆಯುತ್ತ ತನ್ಮಯವಾಗಿ ಧಾರ್ಮಿಕ ಸೇವೆ ಸಲ್ಲಿಸುವುದನ್ನು ನೋಡಿ ನಮ್ಮ ಜನ ವಿಸ್ಮಯಗೊಂಡರು.

ಈ ಸ್ವರ್ಣಮಂದಿರ ಇರಬಹುದಾದ ಪರಿಸರದಲ್ಲಿ ಇದ್ದಂತೆ ಕಾಣಲಿಲ್ಲ, ನಮ್ಮ ಬೆಂಗಳೂರಿನ ಸಿಟಿ ಮಾರ್ಕೆಟ್ ಏರಿಯಾದಲ್ಲಿ ಇದ್ದಂತೆ ಕಂಡಿತು. ಹಿಂದೂ ಮತ್ತು ಮುಸ್ಲಿಂ ಧರ್ಮದ ಸಮ್ಮಿಶ್ರದಲ್ಲಿ ರೂಪುಗೊಂಡ ಸಿಖ್ ಧರ್ಮದ ಕಟ್ಟಡಗಳೂ ಎರಡೂ ಧರ್ಮದ ಸಮ್ಮಿಶ್ರಣದಲ್ಲೇ ರೂಪುಗೊಂಡಿವೆ.

ಹಿಂದೂ ಮುಸ್ಲಿಂ ಸಾಮರಸ್ಯದ ಬೆಸುಗೆ ಕೆಲಸಗಳು ಶತಮಾನಗಳಿಂದ ನಡೆಸುತ್ತ ಬಂದಿರುವ ಸಿಖ್ ಧರ್ಮದ ಬಗ್ಗೆ ಚರ್ಚಿಸುತ್ತ ಜಲಿಯನ್ ವಾಲಾಬಾಗ್ ನೋಡಲು ಹೊರಟೆವು. ಅಲ್ಲಿನ ಕತೆ ಕೇಳುತ್ತ ಬ್ರಿಟಿಷರ ಕ್ರೌರ್ಯಕ್ಕೆ ನಮ್ಮವರು ಬೆಚ್ಚಿಬಿದ್ದರು. ಸೈನಿಕರು ಹಾರಿಸಿದ ಗುಂಡುಗಳಿಂದ ತೂತಾಗಿರುವ ಗೋಡೆ ನೋಡುತ್ತ ಪರಂಗಿ ಪಿಶಾಚಿಗಳನ್ನು ಶಪಿಸಿದರು. ಒಬ್ಬ ಕಸಬ್‌ನನ್ನು ನೆನೆಸಿಕೊಂಡ. ಮತ್ತೊಬ್ಬ "ಹಿಮದ ಬಂಡೆಗೆ ಹೊಟ್ಟೆ ತರಚಿಕೊಂಡು ಮುಳುಗಿದ ಟೈಟಾನಿಕ್ ಹಡಗಿನ ಇತಿಹಾಸವನ್ನೇ ಜಗತ್ತು ಕಣ್ಣೀರುಗರೆಯುವಂತೆ ಸಿನಿಮಾ ತೆಗೆದವರು, ಈ ಜುಲಿಯನ್‌ವಾಲಾಬಾಗ್ ಸಿನಿಮಾ ಏಕೆ ತೆಗೆಯಲಿಲ್ಲ? ಅದೇನೊ ಸಮುದ್ರದೊಳಗಣ ಹಿಮಗಲ್ಲಿನಿಂದ ನಡೆದ ಅನಾಹುತ. ಆದರೆ ಇದು ಮನುಷ್ಯ ಮನುಷ್ಯನನ್ನು ಕ್ರೌರ್ಯದ ಪರಾಕಾಷ್ಠೆಯಲ್ಲಿ ಭೇಟಿ ಮಾಡಿರುವಂತದ್ದು. ಇಂತಹ ಘಟನೆ ಸಿನಿಮಾ ಆದರೆ ಜಗತ್ತಿಗೇ ಬ್ರಿಟಿಷರ ಪೈಶಾಚಿಕ ಕೃತ್ಯ ತೋರಬಹುದಾಗಿತ್ತಲ್ಲಾ" ಎಂದು ಹೇಳಿದ. ನಾವೆಲ್ಲ ಅಲ್ಲಿಂದ ಹೊರಬಂದೆವು.

ಮುಂದೆ ವಾಘಾಗಡಿ ನೋಡಬೇಕು. ಈ ವಾಘಾಗಡಿ ನೋಡುವ ತೀವ್ರ ಕುತೂಹಲ ನನ್ನೊಬ್ಬನಲ್ಲೇ ಅಲ್ಲ, ಎಲ್ಲರಲ್ಲೂ ಉಂಟಾಗಿದ್ದುದು ನನಗೆ ಕುತೂಹಲವಾಯ್ತು. ಏಕೆಂದರೆ ಈ ಗಡಿ ನಮ್ಮ ದೈನಂದಿನ ಬದುಕಿನಲ್ಲೇ ಹಾಸುಹೊಕ್ಕಾಗಿದೆ. ಊರವರ ಮೇಲೆಲ್ಲ ಜಗಳಕ್ಕೆ ಹೋಗುತ್ತಿದ್ದ ಅಣ್ಣತಮ್ಮಂದಿರು ಪಾಲು ತೆಗೆದುಕೊಂಡು, ಮನೆಗೆ ಗೋಡೆ ಹಾಕಿಕೊಂಡು, ಜಮೀನಿಗೆ ಪಹಣಿಕಲ್ಲು ನೆಟ್ಟ ಮರುದಿನದಿಂದಲೇ ಮಾರಾಮಾರಿ ಜಗಳಕ್ಕೆ ಬೀಳುವುದನ್ನು ನೋಡುತ್ತಲೇ ಬಂದಿದ್ದೇವೆ. ಅಷ್ಟೇ ಅಲ್ಲ, ನಮ್ಮ ಶ್ರೇಣೀಕೃತ ಸಮಾಜದಲ್ಲಿ ಕೇರಿಗಳಿಗೇ ಗಡಿಗಳಿದ್ದವು. ಮೇಗಲಹಟ್ಟಿ, ಕೆಳಗಲ ಹಟ್ಟಿ, ಅಗಸರ ಹಟ್ಟಿಹ ಕುರುಬರಟ್ಟಿ.... ಇಂತಹ ಹಟ್ಟಿಗಳಿಗೆಲ್ಲಾ ಗಡಿಗಳಿದ್ದವು. ಇಂತಹ ಗಡಿಗಳಲ್ಲಿ ಬೆಳೆದು, ಗಡಿಗಳಲ್ಲಿ ಮದುವೆಯಾಗಿ, ಮಕ್ಕಳು ಮಾಡಿರುವ ನಾವು ಇನ್ನೂ ಗಡಿಬಿಟ್ಟು ಯೋಚಿಸುವುದನ್ನೇ ಕಲಿತಿಲ್ಲ.

ಇಂತಾದ್ದರಲ್ಲಿ ಭಾರತ-ಪಾಕಿಸ್ತಾನದ ಗಡಿ ನೋಡುವ ಬಗ್ಗೆ ನಮ್ಮಲ್ಲಿ ವಿನಾಕಾರಣ ಒಂದು ಉದ್ವಿಗ್ನತೆಯುಂಟಾಗಿತ್ತು. ಏಕೆಂದರೆ ಪಾಕಿಸ್ತಾನ ನಮ್ಮ ಶತ್ರುದೇಶ. ಯಾವಮಟ್ಟಿಗೆ ಶತ್ರುತ್ವ ಎಂದರೆ ಆ ದೇಶದ ಹೆಸರೇ ವೈರಿಯೊಬ್ಬನ ಹೆಸರು ಕೇಳಿದಂತಾಗುತ್ತದೆ.

ಪಾಲು ತೆಗೆದುಕೊಂಡು ಪಾಕಿಸ್ತಾನ ಬೇರೆಯಾದ ಕ್ಷಣದಿಂದಲೂ ಕೆಟ್ಟದ್ದನ್ನೇ ಮಾಡಿಕೊಂಡು, ನಾಶದ ಅಂಚಿಗೆ ಬಂದಿದ್ದರೂ ಇನ್ನೂ ಅದಕ್ಕೆ ಬುದ್ಧಿ ಬಂದಿಲ್ಲ, ಸುಳ್ಳು ಹೇಳುವುದರಲ್ಲಿ ಅದೆಂತಹ ಭಂಡದೇಶ ಎಂದರೆ ಜಗತ್ತಿನ ಕಣ್ಣಿಗೇ ಕಂಡ ಸತ್ಯವನ್ನು ಅದು ಒಪ್ಪಿಕೊಳ್ಳುವುದಿಲ್ಲ. ಬಿನ್ ಲಾಡೆನ್‌ನನ್ನು ತನ್ನ ದೇಶದೊಳಗಡೆ ಇಟ್ಟುಕೊಂಡು ಸಾಕುತ್ತಲೇ, ಅಮೆರಿಕಕ್ಕೇ ಸುಳ್ಳು ಹೇಳುತ್ತ ಬಂದ ದೇಶ. ಬಾಂಬೆಯನ್ನು ಉಡಾಯಿಸಿದ ದಾವೂದ್ ಕರಾಚಿಯಲ್ಲಿದ್ದುಕೊಂಡು ಭಾರತಕ್ಕೆ ತಕ್ಕ ಪಾಠ ಕಲಿಸಿ ಬಂದ ಯೋಧನಂತೆ ಮೆರೆಯುತ್ತಿದ್ದರೂ, ಆ ದೇಶ ದಾವೂದ್ ನಮ್ಮಲ್ಲಿಲ್ಲ ನಿಮ್ಮಲ್ಲೇ ಇರಬೇಕು ಅನ್ನುತ್ತದೆ. ನಾವೆಷ್ಟೇ ಸಮಾಧಾನದಿಂದ ಬಾಳಲು ಯತ್ನಿಸಿದರೂ ಹಾಳಾದವನೊಬ್ಬ ಮನೆ ಪಕ್ಕದಲ್ಲಿದ್ದರೆ ನಿಮಗೆ ನೆಮ್ಮದಿಯಿರಲು ಸಾಧ್ಯವೆ.

ಸ್ವಾತಂತ್ರ್ಯ ಬಂದಂದಿನಿಂದಲೂ ಪಾಕಿಸ್ತಾನಕ್ಕೆ ಒಳ್ಳೆಯ ನಾಯಕರು, ಒಳ್ಳೆಯ ಸರ್ಕಾರ ಸಿಕ್ಕದ ಕಾರಣಕ್ಕೆ ಸೈತಾನರ ನಾಡಿನಂತಾಗಿ ಹೋಗಿದೆ. ಈ ಪೈಕಿ ಅಯೂಬ್ ಖಾನ್ ಬಹಳ ದೊಡ್ಡ ಮನುಷ್ಯನೆಂದು ಇತಿಹಾಸದಲ್ಲಿ


ವಾಘ ಗಡಿಯ ಗೇಟ್.....

ದಾಖಲಾಗಿದೆ. ಆತ ಕಾಯಿಲೆಯಿಂದ ನರಳುತ್ತ ಮಲಗಿದ್ದಾಗ ನಮ್ಮ ಫೀಲ್ಡ್ ಮಾರ್ಷಲ್ ಕಾರಿಯಪ್ಪನವರು ಆತನನ್ನು ನೋಡಲು ಹೋಗುತ್ತಾರೆ. ಇಬ್ಬರೂ ಸಹೋದರರಂತೆ ಮಾತನಾಡುತ್ತ, "ಈ ಸೈನ್ಯಕ್ಕೆ ಸುರಿಯುವ ಹಣದಿಂದ ಜನರಿಗೆ ಆರೋಗ್ಯ, ಶಿಕ್ಷಣ, ವಸತಿ ಒದಗಿಸಬಹುದಲ್ಲವೆ. ಆದ್ದರಿಂದ ಭಾರತ ಮತ್ತು ಪಾಕಿಸ್ತಾನ ಒಂದೇ ಸಂಯುಕ್ತ ಸೈನ್ಯ ಇಟ್ಟುಕೊಂಡರೆ ಹೇಗೆ?" ಎಂದು ಕೇಳುತ್ತಾನೆ. ಇದನ್ನು ಒಪ್ಪಿಕೊಂಡ ಕಾರಿಯಪ್ಪನವರು ಇಂತಹ ಅಚ್ಚರಿಯ ಸುದ್ದಿಯನ್ನು ತಂದು ನೆಹರೂರವರಿಗೆ ಹೇಳುತ್ತಾರೆ. ಆದರೆ ನೆಹರೂ ಅವರು "ಭಾರತ ಮತ್ತು ಪಾಕಿಸ್ತಾನಕ್ಕೆ ಒಂದೇ ಆರ್ಮಿ ಇರುವುದಕ್ಕೆ ನನ್ನ ವಿರೋಧವಿದೆ" ಎನ್ನುತ್ತಾರೆ. ಇಂತಹ ಕೌತುಕಮಯ ಐತಿಹಾಸಿಕ ಸಂಗತಿಯನ್ನು ಅನಂತಮೂರ್ತಿಯವರು ಕಾರಿಯಪ್ಪನವರು ಸಂದರ್ಶನದಲ್ಲಿ ಬಾಯಿಬಿಡಿಸಿದ್ದಾರೆ.

ಅದಕ್ಕೂ ಹಿಂದೆ ಭಾರತ ಪಾಕಿಸ್ತಾನ ಇಬ್ಭಾಗವಾದಾಗ, ಸೇನೆಯೂ ಇಬ್ಭಾಗವಾಗುತ್ತದೆ. ಭಾರವಾದ ಹೃದಯದಿಂದ ಭಾರತ ಮತ್ತು ಪಾಕಿಸ್ತಾನದ ಸೇನಾಧಿಕಾರಿಗಳಿಬ್ಬರು ಕೈಕುಲುಕುತ್ತ "ನಾವಿಬ್ಬರೂ ಮುಂದೆ ಒಟ್ಟಿಗೇ ಜಗತ್ತಿನ ಶತ್ರುಗಳನ್ನು ಎದುರಿಸೋಣ" ಎಂದು ಬೀಳ್ಕೊಡುತ್ತಾರೆ. ಆದರೆ ಮುಂದೆ ಅದೇ ದಂಡನಾಯಕರು ಎದುರಾಬದುರಾ ನಿಲ್ಲುವ ಅನಿವಾರ್ಯತೆ ಪಾಕಿಸ್ತಾನದಿಂದಲೇ ಸೃಷ್ಟಿಯಾಗುತ್ತದೆ. ಅಂದಿನಿಂದ ಇಂದಿನವರೆಗೂ ಈ ದಾಯಾದಿಕಲಹ ನಿಂತೇ ಇಲ್ಲ.

ಭಾರತ ಪಾಕಿಸ್ತಾನದ ನಡುವೆ ಗಡಿ ಕೊರೆದ ಬ್ರಿಟಿಷ್ ಅಧಿಕಾರಿ ತಾನೆ ಮೆಚ್ಚಿಕೊಂಡ ಕೆಲಸಕ್ಕೆ ಬಹುಮಾನ ನಿರೀಕ್ಷಿಸಿದ್ದನಂತೆ. ಆದರೆ ಅಂದು


ವಾಘ ಗಡಿ ಯೋಧನೊಂದಿಗೆ ನಾಗತಿಹಳ್ಳಿ–ಬಿ.ಚಂದ್ರೇಗೌಡ

ಭುಗಿಲೆದ್ದ ಗಲಭೆಯನ್ನು ನೋಡಿ ಏನೂ ಕೇಳದೆ ಹಾಗೇ ಹೋದನಂತೆ. ಈತ ಕೊರೆದ ಗಡಿ ಹರಿಸಿದ ರಕ್ತ ಸಾಧಾರಣವಾಗಿರಲಿಲ್ಲ. ಮುಂದೆ ಹೆಣಗಳ ರಾಶಿಯನ್ನೇ ನೋಡುವಂತಾಯ್ತು.

ಯಾವುದೇ ಗಲಭೆ, ಯುದ್ಧ ಸಂಭವಿಸಿದರೂ ತೊಂದರೆಗೊಳಗಾಗುವವರು ಮಕ್ಕಳು ಮತ್ತು ಮಹಿಳೆಯರು. ಈ ಗಡಿ ಗಲಭೆಯಲ್ಲಿ ಬರೋಬರಿ ಎಪ್ಪತ್ತು ಸಾವಿರ ಜನ ಮಹಿಳೆಯರು ಕಾಣೆಯಾಗುತ್ತಾರೆ. ಆದರೆ ಭಾರತಮಾತೆಯ ಮಕ್ಕಳು ಈ ಮಹಿಳೆಯರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಮುಸ್ಲಿಮರು ಮುಟ್ಟಿದ ಹೆಂಗಸರನ್ನು, ಅವರು ಹೊತ್ತುಕೊಂಡು ಹೋದ ಹೆಂಗಸರನ್ನು, ಈಗಾಗಲೇ ಅವರಿಗೆ ಗರ್ಭವತಿಯರಾಗಿರುವ ಹೆಂಗಸರನ್ನು ಹೇಗೆ ಹುಡುಕುವುದು? ಸಿಕ್ಕಿದರೂ ಕರೆತರುವುದು ಹೇಗೆ? ಎಂಬ ಶ್ರೀರಾಮನ ಪ್ರಶ್ನೆ ಎದುರಾಗುತ್ತದೆ. ಎಲ್ಲರೂ ಸುಮ್ಮನಾಗುತ್ತಾರೆ.

ಹೀಗೆ ಈ ವಾಘಾಗಡಿಯ ಬಗ್ಗೆ ಒಂದು ರೀತಿ ಉದ್ವಿಗ್ನತೆಯಲ್ಲೇ ಯೋಚಿಸುತ್ತಾ ಗೋದಿ ಗದ್ದೆಗಳನ್ನು ನೋಡುತ್ತಿರಬೇಕಾದರೆ ಗಡಿ ಬಂದೇಬಿಟ್ಟಿತು. ನಮ್ಮ ಪ್ರವಾಸದಳಕ್ಕೆ ಅಪರೂಪದ ಮತ್ತು ಅತ್ಯುತ್ಸಾಹದ ವ್ಯಕ್ತಿಯೊಂದು ಸೇರಿಕೊಂಡಿತ್ತು. ಗಡಿ ಸಮೀಪ ನಮ್ಮ ಬಸ್ಸು ನಿಂತಕೂಡಲೇ ಬಸ್ಸಿನಿಂದ ಇಳಿದ ಆ ವ್ಯಕ್ತಿ ಕೆಲವೇ ಕ್ಷಣದಲ್ಲಿ ಒಬ್ಬ ಸುಂದರವಾದ ಸಿಖ್ ಯುವಕನೊಂದಿಗೆ ಬಂದು "ಗೌಡ್ರೆ, ನೋಡಿ ಕೇವಲ ಇಪ್ಪತ್ತು ರೂಪಾಯಿಗೆ ಒಂದು ಕೆ.ಜಿ.ಯಂತೆ ಬಾಸುಮತಿ ಅಕ್ಕಿ ಮಾರ್ತರಿವುರು. ನಮ್ಮಲ್ಲಿ ಇದೇ ಅಕ್ಕಿ ನೂರು ರೂಪಾಯಿ. ಎಲ್ರೂ ಐದೈದು ಕೆ.ಜಿ. ತಗಳಣ. ದುಡ್ಡು ನಾನು ಕೊಟ್ಟರತಿನಿ. ಎರಡು ಕ್ವಿಂಟಾಲ್ ತಗಳನ. ಬೆಂಗಳೂರು ರೈಲ್ವೆ ಸ್ಟೇಷನ್‌ನಲ್ಲಿ ಹಂಚಿಗಳನ" ಎಂದು ಒಂದು ಹಿಡಿ ಅಕ್ಕಿ ಕೊಟ್ಟರು. ಆ ಬಾಸುಮತಿ ಅಕ್ಕಿಯ ಗಮಲು ಬಾಯಿಗೆ ಹಾಕಿಕೊಳ್ಳುವಷ್ಟು ಸುಗಂಧಪೂರಿತವಾಗಿತ್ತು. ವಾಘಾಗಡಿಯಿಂದ ಬಾಸುಮತಿ ಅಕ್ಕಿ ತೆಗೆದುಕೊಂಡು ಊರಿಗೆ ಹೋಗುವುದೂ ಕೂಡ ಒಂದು ಐತಿಹಾಸಿಕ ಘಟನೆಯಂತೆ ಕಾಣಿಸತೊಡಗಿತು. ಅಷ್ಟರಲ್ಲಿ ಸಿಖ್ಖರವನು ಅಗ್ಗವಾಗಿ ಮಾರುವ ಅಕ್ಕಿಯ ಬಗ್ಗೆ ವಕಾಲತ್ತು ವಹಿಸಿ ಮಾತನಾಡಿದ. "ಆಯ್ತು ತಗೊಂದಿರಿ" ಎಂದ ನಾನು ಗಡಿ ಗೇಟಿನ ತಾಣದತ್ತ ಹೆಜ್ಜೆ ಹಾಕಿದೆ.

ಸರಕು ಹೊತ್ತ ಭಾರತ-ಪಾಕಿಸ್ತಾನದ ಲಾರಿಗಳು ಎದುರಾಬದುರಾ ನಿಂತಿದ್ದವು. ಪಾಕಿಸ್ತಾನದ ಒಂದು ಲಾರಿ ಮಾತ್ರ ಥೇಟ್ ನಮ್ಮ ಸೋಮನ ಮುಖದಂತೆ ಶೃಂಗರಿಸಿಕೊಂಡು, ಹೆಡ್‌ಲೈಟುಗಳನ್ನೇ ಮೈಡ್ಡರಿಸಿದ ಕಣ್ಣುಗಳಂತೆ ಮಾಡಿಕೊಂಡು ನಿಂತಿತ್ತು. ಎಲಾ ಅವರಾ, ಲಾರಿ ಮುಖಾಂತರವೂ ಹೆದರಿಸುತ್ತಾರಲ್ಲಾ ಎಂದು ನಗಾಡುತ್ತ ಮುಂದುವರಿದೆವು.

ವಾಘಾಗಡಿಯಲ್ಲಾಗಲೇ ಭಾರತ, ಪಾಕಿಸ್ತಾನದ ಪ್ರಜೆಗಳು ತಮ್ಮತಮ್ಮ ದೇಶ ವ್ಯವಸ್ಥೆ ಮಾಡಿರುವ ಆಸನಗಳಲ್ಲಿ ಕುಳಿತು ದೇಶ ಘೋಷಣೆಗಳನ್ನು ಕೂಗುತ್ತಿದ್ದರು. ಪ್ರತಿದಿನ ಹದಿನೈದರಿಂದ ಇಪ್ಪತ್ತು ಸಾವಿರದಷ್ಟು ಜನ ಈ ಗಡಿಯಲ್ಲಿ ಜಮಾವಣೆಯಾಗುತ್ತಾರಂತೆ. ಇದರ ಅರ್ಧದಷ್ಟು ಜನ ಪಾಕಿಸ್ತಾನದ ಕಡೆ ಜಮಾಯಿಸುತ್ತಾರೆ. ಉಭಯ ದೇಶದ ಕಡೆಯಿಂದಲೂ ನಿರಾಯುಧ ಪ್ರಜೆಗಳ ಯುದ್ಧವೇನೂ ಎಂಬಂತೆ ಬರೀ ಘೋಷಣೆಗಳ ಸಮರ ನಡೆಯುತ್ತಿತ್ತು. ನಮ್ಮ ನಾಗತಿಹಳ್ಳಿಯ ಹೆಣ್ಣುಮಕ್ಕಳು ಧ್ವಜ ಹಿಡಿದು ಗಡಿ ಗೇಟಿನವರೆಗೂ ಓಡಿಹೋಗಿ ವಾಪಸು ಬರುತ್ತಿದ್ದರು. ಅವರ ಉತ್ಸಾಹ ನೋಡಿ ಸೀರೆ ತೊಡರಿಕೊಂಡು ಬಿದ್ದರೇನು ಗತಿ ಎಂದು ಆತಂಕವಾಯ್ತು.

ಆ ಕಡೆಯಲ್ಲೂ ಪಾಕಿಸ್ತಾನಿಗಳು ಧ್ವಜ ಹಿಡಿದು ಓಡಿಬಂದು ಮಾಡುತ್ತಿದ್ದರು. ಧ್ವಜ ಇಳಿಸುವ ಸಮಯ ಹತ್ತಿರ ಬರುತ್ತಿದ್ದಂತೆ, ಪಾಕಿಸ್ತಾನದ ಸೈನಿಕ ಮೈಕಿನಲ್ಲಿ "ಪಾಕಿಸ್ತಾನ ಜಿಂದಾಬಾದ್" ಎಂಬ ಘೋಷಣೆ ಶುರು ಮಾಡಿದ. ಇದಕ್ಕೆ ಪ್ರತ್ಯುತ್ತರವಾಗಿ ನಮ್ಮ ಬೆನ್ನ ಹಿಂದಿದ್ದ ಮೈಕಿನಲ್ಲಿ ನಮ್ಮ ಸೈನಿಕನ ಜೈಕಾರ ಆರಂಭವಾಯ್ತು. ಈ ಜೈಕಾರದ ರಣಾಲಾಪನೆ ದೀರ್ಘವಾಗಿ ನಡೆದು ಕರತಾಡನ ಪಡೆಯುತ್ತದೆ. ಎರಡೂ ಕಡೆಯೂ ಈ ಸ್ಪರ್ಧೆ ನಡೆಯುತ್ತದೆ. ನಂತರದ್ದೆಲ್ಲಾ ಉಸಿರು ಬಿಗಿ ಹಿಡಿಯುವಂತಹ ಕವಾಯತು.

ಸೆಟೆದುಕೊಂಡ ದೇಹದ ವೀರಾಗ್ರಣಿಯೊಬ್ಬಳು ನೆಪಕ್ಕೆ ನೆಲದ ಮೇಲೆ ಕಾಲಿಟ್ಟವಳಂತೆ ಹಾರುತ್ತಲೇ ಬಂದು ನಮ್ಮ ಗಡಿಯೋಧರ ಪಕ್ಕದಲ್ಲಿ ನಿಂತಳು. ಗೊಂಬೆಯಂತೆ ಸ್ಥಿರವಾಗಿ ನಿಂತ ಆಕೆ ನಿಜಕ್ಕೂ ನಮ್ಮ ಓಬವ್ವನಂತೆ ಕಂಡಳು. ಗಡಿ ತೆರೆದು ಮುಚ್ಚಿ ನಮ್ಮ ಧ್ವಜ ಇಳಿಸುವವರೆಗೂ ಉಕ್ಕಿನ ಶಿಲೆಯಂತೆ ನಿಂತ ಆಕೆಯ ಶಕ್ತಿಗೆ ನಾವೆಲ್ಲಾ ದಂಗುಬಡಿದು ಹೋದೆವು. ಗಡಿಯ ಗೇಟನ್ನು ತೆರೆಯುವ ಮುನ್ನ ಒಬ್ಬೊಬ್ಬರಾಗಿ ಬಂದು, ತಮ್ಮ ಬಲಗಾಲನ್ನು ಭೂಮಿಗೆ ಕುಟ್ಟಿ ಕುಟ್ಟಿ, ಕಡೆಗೆ ತಲೆಯ ಕುಚ್ಚಕ್ಕೆ ತುದಿಗಾಲು ತಾಕಿಸಿ ನೆಲಕ್ಕಪ್ಪಳಿಸಿ ನಿಂತು, ಪಾಕಿನ ಸೈನಿಕರನ್ನು ಕ್ರೂರ ಕಣ್ಣುಗಳಿಂದ ನೋಡುತ್ತ, ಮುಖದಲ್ಲಿ ಶೌರ್ಯದ ಕಳೆ ತೋರುತ್ತಾನೆ. ಇದಕ್ಕೆ ಪ್ರತಿಯಾಗಿ ಪಾಕಿನ ಸೈನಿಕರು ನಮ್ಮವರಿಗಿಂತಲೂ ಜಾಸ್ತಿಯಾಗಿಯೇ ಮಾಡುತ್ತಾರೆ. ಇದೊಂದು ಭೀಭತ್ಸ ಕ್ಷಣದಂತೆ ಭಾಸವಾಗುತ್ತದೆ.

ಎರಡೂ ದೇಶದ ಗಡಿ ಗೇಟುಗಳನ್ನು ಕಿತ್ತು ಬಿಸಾಡಿದಷ್ಟು ವೇಗವಾಗಿ ತೆರೆಯುತ್ತಾರೆ. ನಂತರ ನಮ್ಮ ಮತ್ತು ಪಾಕಿಸ್ತಾನದ ಸೈನಿಕ ಅರ್ಧ ಅಡಿ ಅಂತರದಲ್ಲೇ ನಿಂತು ಹಸ್ತಲಾಘವ ಮಾಡುತ್ತಾರೆ. ರಾಷ್ಟ್ರಗೀತೆಯೊಂದಿಗೆ ಧ್ವಜ ಇಳಿಸಿ, ಮಡಿಚಿ ತರುತ್ತಾರೆ. ಗೇಟ್ ಬಂದಾಗುತ್ತದೆ. ಮರುದಿನದ ಸೂರ್ಯೋದಯಕ್ಕೆ ಧ್ವಜಾರೋಹಣವಾಗುತ್ತದೆ. ಇದು ದಿನನಿತ್ಯ ನಡೆವ ಉದ್ವಿಗ್ನ ಪ್ರಸಂಗ. ಪ್ರಪಂಚದಲ್ಲೆಲ್ಲೂ ಉಭಯ ದೇಶಗಳೂ ಸೇರಿ ಪ್ರತಿ ದಿವಸವೂ ದೇಶಾಸೂಯೆಗಳನ್ನು ನವೀಕರಣ ಮಾಡುವಂತಹ ಪ್ರಹಸನ ನಡೆಯುವುದಿಲ್ಲವಂತೆ. ಆ ಕಾರಣವಾಗಿ ವಿದೇಶೀಯರೂ ಇಲ್ಲಿ ಬಹಳ ಜನ ಬರುತ್ತಾರೆ.

ಪಾಕಿಸ್ತಾನದ ಕಡೆಗೆ ನಾವು ಕೈಬೀಸಿದೆವು. ಆ ಕಡೆಯಿಂದ ಯಾವ ಕೈಗಳೂ ಬೀಸಲಿಲ್ಲ. ಒಂದು ವಿಶೇಷವೆಂದರೆ, ನಮ್ಮಲ್ಲಿ ಕಾಣಿಸುವಷ್ಟು ಬುರ್ಖಾಗಳು ಆ ಕಡೆ ಕಾಣಲಿಲ್ಲ. ಆದರೂ ಪಾಕಿಸ್ತಾನದ ಪ್ರಜೆಗಳನ್ನು ನೆನೆಸಿಕೊಂಡರೆ ಕನಿಕರವಾಗುತ್ತದೆ. ಅಲ್ಲೂ ಒಳ್ಳೆಯವರ ಸಂಖ್ಯೆ ಜಾಸ್ತಿಯಿರಬಹುದು. ಇರಬಹುದೇನು, ಇದ್ದೇ ಇರುತ್ತಾರೆ. ನಮಗಿಷ್ಟವಿಲ್ಲದಿದ್ದರೂ ಕರ್ನಾಟಕದಲ್ಲಿ ಕೆಟ್ಟವರಿಂದ ನಾವು ಆಳಿಸಿಕೊಳ್ಳುತ್ತಿಲ್ಲವೆ ಹಾಗೆ. ಅಲ್ಲೂ ನಿಸ್ಸಹಾಯಕ ಪ್ರಜೆಗಳು ಹೈರಾಣಾಗಿರಬಹುದು. ಪ್ರತಿ ದಿನವೂ ಅಲ್ಲಿ ರಕ್ತಪಾತ. ಕೈಮೀರಿ ಹೋಗಿರುವ ಅಂತಹ ದೇಶದ ಗಡಿಯಲ್ಲಿ ನಾವು ಇಂತಹ ನಡವಳಿಕೆ ಇಟ್ಟುಕೊಂಡಿರುವುದು ಸರಿಯೇ ಎಂಬ ಪ್ರಶ್ನೆಯೊಂದಿಗೆ ಹೊರಟಾಗ ಮನಸ್ಸು ಘಾಸಿಯಾಗಿತ್ತೇ ಹೊರತು ಇನ್ನೇನು ಆಗಿರಲಿಲ್ಲ.


ಇಂತಹ ದುಗುಡದ ಮನಸ್ಸಿಗೆ ಸಾಂತ್ವನ ನೀಡಿದವನು ನಮ್ಮ ಭಾಸುಮತಿ ಅಕ್ಕಿ ವ್ಯಾಪಾರಿ. ಇಷ್ಟವಿದ್ದವರಿಗೆ ಐದು ಕೆಜಿ ತನಗೆ ಮಾತ್ರ ಒಂದು ಕ್ವಿಂಟಾಲ್ ಎಂದು ಎಲ್ಲರ ಪರವಾಗಿ ಬಾಸುಮತಿ ಅಕ್ಕಿಕೊಂಡ ಗೆಳೆಯ ತುಂಬಾ ಖುಷಿಯಲ್ಲಿದ್ದ. ಅಮೃತಸರ ಬಿಟ್ಟನಂತರ ಲೆಕ್ಕಾಚಾರದ ಹೆಣ್ಣುಮಗಳೊಬ್ಬಳು ಬಾಸುಮತಿ ಅಕ್ಕಿಯ ಕ್ವಾಲಿಟಿ ನೋಡುವ ಸಲುವಾಗಿ ಮೂಟೆ ತೂತು ಮಾಡಿಸಿ ಅಕ್ಕಿ ನೋಡಿದಳು. ಆ ಸಿಖ್ಖರವನು ಸೊಸೈಟಿ ಅಕ್ಕಿಗೆ ಪಾಲಿಷ್ ಹಾಕಿಸಿ ಮೂಟೆ ಹೊಲಿದು ತಂದಿದ್ದ. ಸ್ಯಾಂಪಲ್ಲಿಗೆ ಮಾತ್ರ ಬಾಸುಮತಿ ತೋರಿದ್ದ. ಎಲ್ಲರೂ ತಮಗೆ ಅಕ್ಕಿ ಬೇಡವೆಂದು ನಿರಾಕರಿಸಿಬಿಟ್ಟರು. ಅಕ್ಕಿ ಕೊಂಡ ಪ್ರವಾಸಿಗ "ಆಯ್ತು, ನನಗೆ ಇರ್ಲಿ" ಎಂದು ಡಲ್ಲಾದ.

ಆತನ ವ್ಯವಹಾರದಲ್ಲಿ ನಾವೆಲ್ಲಾ ಪಾಲು ಪಡೆಯೋಣವೆಂದರೆ ಆತ ಎಡೂರಪ್ಪನ ಅಭಿಮಾನಿ ಬೇರೆ. ಯಡ್ಡಿ ರಾಜಕಾರಣ ಮೆಚ್ಚಿಕೊಂಡು ಮಾತನಾಡಿ ತಲೆ ತಿಂದಿದ್ದರಿಂದ ಆತನಿಗಾದ ಶಾಸ್ತಿಗೆ ಬೆಂಗಳೂರುವರೆಗೂ ನಗಾಡಿದೆವು. ಬೆಂಗಳೂರು ರೈಲ್ವೆ ನಿಲ್ದಾಣದಿಂದ ನಾಗತಿಹಳ್ಳಿ ಚಂದ್ರಶೇಖರ್ ಕೊಡಿಸುವ ಒಳ್ಳೆ ಊಟ ಗಮನದಲ್ಲಿ ನಾವು ಸಾಗಿದರೆ ಬಾಸುಮತಿಪ್ರಿಯ ರೈಲಿನಿಂದ ಸೊಸೈಟಿ ಅಕ್ಕಿ ಇಳಿಸಿಕೊಂಡು ಊರ ಕಡೆ ಹೊರಡುವುದೇ ಆಯ್ತು. ಈಗಲೂ ವಾಘಾಗಡಿ ನೆನೆಸಿಕೊಂಡ ಕೂಡಲೇ ಬಾಸುಮತಿ ಪ್ರಸಂಗ ನಗೆಯುಕ್ಕಿಸುತ್ತದೆ.


● ಬಿ. ಚಂದ್ರೇಗೌಡ

ಹಾವೇರಿ: ಯಡ್ಡಿ ಶಿಷ್ಯರಿಗೆ ಅತಂತ್ರ ಪರಿಸ್ಥಿತಿ

ಬಹಳ ವರ್ಷಗಳಿಂದ ಕಾಂಗ್ರೆಸ್ಸಿನ ಭದ್ರಕೋಟೆ ಎನಿಸಿಕೊಂಡಿದ್ದ ಹಾವೇರಿ ಜಿಲ್ಲೆ ಕಳೆದ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ಚೆಡ್ಡಿಗಳ ಪಾಲಾಗಿತ್ತು. ಹಾಗಾದದ್ದು ಬಿಜೆಪಿಯ ಬಲದಿಂದಲ್ಲ, ಬದಲಿಗೆ ಕಾಂಗ್ರೆಸ ನಾಯಕರು ಜನ ವಿರೋಧಿ ಆಡಳಿತ ನಡೆಸಿಕೊಂಡು ಬಂದಿದ್ದರಿಂದ ಜಿಲ್ಲೆಯ ಜನತೆ ಆ ಪಕ್ಷದ ವಿರುದ್ಧ ನೀಡಿದ್ದ ತೀರ್ಮಾನವಾಗಿತ್ತು. ಅದರ ಜೊತೆಗೆ ಅಧಿಕಾರಕ್ಕಾಗಿ ಯಡಿಯೂರಪ್ಪ ಹುಟ್ಟು ಹಾಕಿದ್ದ ಲಿಂಗಾಯತ ಜಾತಿ ಲಾಬಿ ಮತ್ತು ಹಣಬಲ ಸೇರಿಕೊಂಡು ಜಿಲ್ಲೆಯ ಆರು ಕ್ಷೇತ್ರಗಳ ಪೈಕಿ ಹಿರೇಕೆರೂರನ್ನು ಹೊರತುಪಡಿಸಿ ಉಳಿದ ಐದರಲ್ಲಿ ಬಿಜೆಪಿ ಗೆದ್ದು ಬಂದಿತ್ತು.



ಬೊಮ್ಮಾಯಿ

ಆದರೆ ಈ ಬಾರಿ ಹಾವೇರಿಯ ಕೆಸರಲ್ಲಿ ಬಿಜೆಪಿಯ ಕಮಲ ಅರಳದಂತಾಗಿದೆ. ಆ ಪಕ್ಷದಲ್ಲಿದ್ದ ವರೆಲ್ಲ ಯಡ್ಡಿಯ ಬಾಲಂಗೋಚಿಗಳಾಗಿ ಕೆಜೆಪಿಗೆ ಹಾರಿದ್ದಾರೆ. ಇದ್ದ ಐವರು ಬಿಜೆಪಿ ಶಾಸಕರೂ ತಾವು ಮುಂದಿನ ಚುನಾವಣೆಯಲ್ಲಿ ಸೋಲುವದಂತೂ ನಿಶ್ಚಿತ ಎನ್ನುವಷ್ಟರಮಟ್ಟಿಗೆ ಹೆಸರು ಕೆಡಿಸಿಕೊಂಡಿದ್ದಾರೆ.


ಶಂಕರ್

ಈ ಹಿಂದೆ ಎರಡುಬಾರಿ ಹೀನಾಯ ಸೋಲು ಕಂಡಿರುವ ಹಸ್ತದ ಹಳೇ ಮುಖಗಳು ಮತ್ತೆ ಕಣಕ್ಕಿಳಿಯುವ ತಯಾರಿಯಲ್ಲಿದ್ದರೂ ಹೊಸಮುಖಗಳು ಟಿಕೆಟಿಗಾಗಿ ಎಲ್ಲಿಲ್ಲದ ಪ್ರಯತ್ನ ಶುರುವಿಟ್ಟುಕೊಂಡಿರುವುದು ಸೋತ ಶಿಖಾಮಣಿಗಳಿಗೆ ನಡುಕ ಹುಟ್ಟಿಸಿದೆ.

ಜೆಡಿಎಸ್‌ನ ಹೊರೆಹೊತ್ತ ಮಹಿಳೆ ಜಿಲ್ಲೆಯ ಯಾವ ಕ್ಷೇತ್ರದಲ್ಲೂ ಗೆಲ್ಲುವ ಸೂಚನೆಗಳಿಲ್ಲ. ಕೊನೆ ಗಳಿಗೆಯಲ್ಲಿ ಟಿಕೆಟ್ ಕೈ ತಪ್ಪಿದ್ದ ಅತೃಪ್ತರನ್ನು ತನ್ನತ್ತ ಸೆಳೆದು ಮತ ಕದಿಯುವ ತಂತ್ರಗಾರಿಕೆಯನ್ನು ಕಳೆದೆರಡು ಚುನಾವಣೆಯಲ್ಲಿ ಜೆಡಿಎಸ್ ಮಾಡಿದೆ. ಜಿಲ್ಲಾಧ್ಯಕ್ಷರನ್ನೂ ಆಯ್ಕೆ ಮಾಡಲಾಗದೆ ಪಕ್ಷದ ವರಿಷ್ಠ ದೇವೇಗೌಡ ಬಣ, ಮಾಜಿ ಮಂತ್ರಿ ಬಸವರಾಜ್ ಹೊರಟ್ಟಿ ಬಣ ಎಂದು ಒಡೆದು ಹೋಳಾಗಿರುವ ದಳದಲ್ಲಿ ದುಡಿಯುವ ಮುಖಂಡರಿಲ್ಲ. ಇನ್ನು ಗಣಿ ಧೂಳಿನ ಬಿಎಸ್‌ಆರ್ ಕಾಂಗ್ರೆಸ್ ಪಕ್ಷ ಜೆಡಿಎಸ್‌ನಲ್ಲಿ ಜಗಳಾಡಿಕೊಂಡು ತಟಸ್ಥ ಉಳಿದಿದ್ದ ದಿವಾಕಿನ ಮುಖಗಳಿಗೊಂದು ವೇದಿಕೆಯಾಗಿದೆ ಅಷ್ಟೆ.



ನೆಹರು ಓಲೇಕಾರ್

ರಾಣೆಬೆನ್ನೂರಿನಲ್ಲಿ ಕೋಳಿವಾಡನಿಗೆ ಖೊಕ್


ಊರಿಗೊಬ್ಬನೇ ಗೌಡ ಎಂಬಂತೆ ಕೆ.ಬಿ.ಕೋಳಿವಾಡ ಕಾಂಗ್ರೆಸ್ಸಿನಿಂದ ಸತತ ಗೆದ್ದು ಬಂದು ದೌಲತ್ತಿನ ರಾಜಕಾರಣ ಮಾಡಿದ್ದರ ಫಲವಾಗಿ ಯಾರೊಬ್ಬರಿಗೂ ಪರಿಚಿತನಲ್ಲದ ಉದಾಸಿಯ ಬೀಗ ಜಿ.ಶಿವಣ್ಣ 2004ರಲ್ಲಿ ಬಿಜೆಪಿಯಿಂದ ಅಚಾನಕ್ ಆಗಿ ಶಾಸಕನಾಗಿಬಿಟ್ಟ. ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಆಕಳಿನಂತಿರುವ ಶಿವಣ್ಣನಿಗೆ 2008ರಲ್ಲೂ ಜನ ಅವಕಾಶ ನೀಡಿಬಿಟ್ಟರು.


ರುಕ್ಮಿಣಿ ಸಾಹುಕಾರ್

ಆದರೀಗ ಪರಿಸ್ಥಿತಿ ಬದಲಾಗಿದೆ. ಉದಾಸಿಯ ಹಿಂದೆ ಶಿವಣ್ಣನೂ ಯಡ್ಡಿಯ ಕೆಜೆಪಿ ಸೇರಿದ್ದಾನೆ. ರಾಜ್ಯದಲ್ಲೆ ಕೆಜೆಪಿಯ ಮೊದಲ ಕಾರ್ಯಾಲಯ ತೆಗೆದು, ತಾಲೂಕ್ ಅಧ್ಯಕ್ಷರನ್ನು ನೇಮಿಸಿ, ಹಾವೇರಿಯಲ್ಲಿ ಅದ್ದೂರಿಯಾಗಿ ನಡೆದ ಕೆಜೆಪಿ ಸಮಾವೇಶದ ನಂತರ ತನಗೆ ಹ್ಯಾಟ್ರಿಕ್ ಗೆಲುವು ನಿಶ್ಚಿತ ಎಂದುಕೊಂಡಿದ್ದ. ಆದರೆ ದಿನಕಳೆದಂತೆ ಶಿವಣ್ಣನ ಬಳಿ ಇದ್ದ ಕಾರ್ಯಕರ್ತರ ಥೈಲಿ ಖಾಲಿಯಾಗುತ್ತಿದೆ. ಆತ ಚುನಾವಣೆ ಕಣಕ್ಕಿಳಿದರೆ ಗೆಲ್ಲುವುದಿರಲಿ, ಆತನಿಗೆ ಯಾವ ಸ್ಥಾನ ಸಿಗುತ್ತದೆ ಎಂಬ ಚರ್ಚೆ ಕ್ಷೇತ್ರದಲ್ಲಿ ಪ್ರಾರಂಭವಾಗಿದೆ.


ಶ್ರೀನಿವಾಸ್

ಈ ಹಿಂದೆ ಕಾಂಗ್ರೆಸ್ ಟಿಕೆಟ್ ರೇಸಿನಲ್ಲಿ ಕೋಳಿವಾಡ ಒಬ್ಬರೇ ಇರುತ್ತಿದ್ದರು. ಆದರೀಗ ಬಿ ಫಾರ್ಮ್ ಪಡೆಯುವ ರೇಸಿನಲ್ಲಿ ಸಾಕಷ್ಟು ಪ್ರಬಲ ಅಭ್ಯರ್ಥಿಗಳಿದ್ದಾರೆ. ಪ್ರಾರಂಭದಿಂದಲೂ ಕೋಳಿವಾಡನನ್ನು ವಿರೋಧಿಸುತ್ತಾ ತಮ್ಮದೇ ಆದ ಸ್ಥಾನ ಪಡೆದಿರುವ ಜಿಲ್ಲೆಯ ಏಕೈಕ ಮಹಿಳಾ ನಾಯಕಿ ರುಕ್ಮಿಣಿ ಸಾಹುಕಾರ "ಟಿಕೆಟ್ ಈ ಬಾರಿ ನನ್ನದೆ" ಎನ್ನುತ್ತಿದ್ದಾರೆ. ಹಲವಾರು ಪಾದಯಾತ್ರೆ, ಹೋರಾಟದ ಮೂಲಕ ಜನರ ಬಳಿ ಕಾಂಗ್ರೆಸ್ ಪಕ್ಷವನ್ನು ಒಯ್ದಿರುವ ಇವರು ಕೋಳಿವಾಡನಿಗೆ ಟಕ್ಕರ್ ಕೊಡುವ ಎಲ್ಲ ಸಾಧ್ಯತೆಗಳಿವೆ.


ಶಿವರಾಜ್ ಸಜ್ಜನ್

ಕೆಲಕಾಲ ಬಿಜೆಪಿಯಲ್ಲಿ ಜಿಲ್ಲಾಧ್ಯಕ್ಷರಾಗಿದ್ದ ನ್ಯಾಯವಾದಿ ಕೆ.ಶಿವಲಿಂಗಪ್ಪ ಕೂಡ ಕಾಂಗ್ರೆಸ್ ಟಿಕೆಟ್ ರೇಸಿನಲ್ಲಿದ್ದಾರೆ. ರಾಜ್ಯ ವಕೀಲರ ಸಂಘದ ಸದಸ್ಯರಾಗಿರುವ ಇವರು ಕ್ಷೇತ್ರದಲ್ಲಿ ಪ್ರಬಲರಾಗಿರುವ ಲಿಂಗಾಯತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಜಾತಿ ಲೆಕ್ಕಾಚಾರದಲ್ಲಿ ಪಕ್ಷ ಮಣೆ ಹಾಕಿದರೆ ತಾನು ಯಾವರಿಗೂ ಕಡಿಮೆ ಇಲ್ಲ ಎನ್ನುತ್ತಿದ್ದಾರೆ.

ಶಿವಣ್ಣ ಕೆಜೆಪಿ ಸೇರಿದ ನಂತರ ಬಿಜೆಪಿ ಟಿಕೆಟಿಗಾಗಿ ತೀವ್ರ ಪೈಪೋಟಿ ನಡೆಯುತ್ತಿದೆ. ಈ ಹಿಂದೆ ಶಿವಣ್ಣನ ಗೆಲುವಿಗೆ ಶ್ರಮವಹಿಸಿದ್ದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವೀರಣ್ಣ ಅಗಡಿ ಆಕಾಂಕ್ಷಿಗಳ ಪಟ್ಟಿಯಲ್ಲಿ ಪ್ರಮುಖರಾಗಿದ್ದಾರೆ. ನಗರಸಭಾ ಸದಸ್ಯನೂ ಆಗಿರುವ ವೀರಣ್ಣ ಶಿವಣ್ಣನಿಗೇ ಚುನಾವಣಾ ಸಂದರ್ಭದಲ್ಲಿ ಫೈನಾನ್ಸ್ ಮಾಡಿ ಗೆಲ್ಲಿಸಿದ್ದ ಎಂಬ ರೂಮರು ಇದೆ. ಹೀಗಾಗಿ ಬಿಜೆಪಿ ಕ್ಯಾಂಡಿಡೇಟ್ ಈತ ಆದರೂ ಆಶ್ಚರ್ಯವಿಲ್ಲ.

ತಾಲೂಕ್ ಬಿಜೆಪಿ ಅಧ್ಯಕ್ಷ ಡಾ.ಬಸವರಾಜ ಕೇಲಗಾರ, ಸಾದರ ಲಿಂಗಾಯತ ಮುಖಂಡ ಎಂದು ಕರೆಸಿಕೊಳ್ಳುವ ಮಂಜುನಾಥ ಗೌಡ ಶಿವಣ್ಣನವರ ಕೂಡ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಇವರೆಲ್ಲರಿಗೂ ಅಚ್ಚರಿ ನೀಡುವಂತೆ ಬಿಎಜೆಎಸ್‌ಎಸ್ ಕಾಲೇಜಿನ ಪ್ರಾಚಾರ್ಯ ಆರ್.ಎಂ.ಕುಬೇರಪ್ಪ ಕೊನೆ ಗಳಿಗೆಯಲ್ಲಿ ಅಭ್ಯರ್ಥಿಯಾಗಲೂ ಬಹುದು. ಪಕ್ಕಾ ಸಂಘ ಪರಿವಾರದ ತುಣುಕು ಈ ಕುಬೇರಪ್ಪ.

ರೆಡ್ಡಿ ಸಮಾಜಕ್ಕೆ ಸೇರಿರುವ ಕುಬೇರಪ್ಪ ಒಂದು ವೇಳೆ ಗೆದ್ದರೆ ತಮ್ಮ ಬುಡಕ್ಕೆ ಬತ್ತಿ ಇಡುತ್ತಾನೆಂದು ಕಳೆದ ಬಾರಿಯ ವಿಧಾನಪರಿಷತ್ ಚುನಾವಣೆಯಲ್ಲಿ ಆತನಿಗೆ ಬಿ ಫಾರ್ಮ್ ತಪ್ಪಿಸಲು ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಯ 17 ಜನ ಶಾಸಕರು ಪಕ್ಷದ ಅಧ್ಯಕ್ಷರಿಗೆ ದುಂಬಾಲು ಬಿದ್ದಿದ್ದರು. ಆದರೆ ಆರ್‌ಎಸ್‌ಎಸ್ ಶಿಫಾರಸ್ಸಿನಿಂದಾಗಿ ಕುಬೇರಪ್ಪ ಟಿಕೆಟ್ ಪಡೆದಿದ್ದರು. ಆಗ ಬಿಜೆಪಿಯ ಶಾಸಕರು ಮತ್ತು ಮಂತ್ರಿಗಳು ಜೊತೆಗೂಡಿ ಈತನನ್ನು ಸೋಲಿಸಿದ್ದರು.

ಜೆಡಿಎಸ್‌ನಲ್ಲಿ ಸ್ವಾರ್ಥ ಮುಖಗಳೇ ತುಂಬಿತುಳುಕುತ್ತಿವೆ. ನಾಗರಾಜ ಪವಾರ, ಪೊಲೀಸ್ ಅಧಿಕಾರಿಯಾಗಿ ತನ್ನ ಸರ್ವೀಸ್‌ನ ಮುಕ್ಕಾಲು ಭಾಗವನ್ನು ಜಿಲ್ಲೆಯಲ್ಲೇ ಕಳೆದ ಕುರುಬ ಸಮುದಾಯದ ನಿವೃತ್ತ ಅಡಿಶನಲ್ ಎಸ್‌ಪಿ ಬಿ.ಬಿ.ಸಕ್ರಿ, ಗುರುಲಿಂಗಪ್ಪ ಗೌಡ, ಹೆಂಡತಿಯನ್ನು ಕಾಂಗ್ರೆಸ್ಸಿನಿಂದ ಜಿ.ಪಂ. ಸದಸ್ಯೆಯನ್ನಾಗಿ ಮಾಡಿ ತಾನು ದಳದವನು ಎನ್ನುತ್ತಿರುವ ಅಂಬಲಿ ಸಿದ್ದಪ್ಪ ಹೊರೆ ಹೊತ್ತವಳ ಬಿ ಫಾರ್ಮ್ ಆಕಾಂಕ್ಷಿಗಳು. ಆದರೆ ಇವರ್‍ಯಾರೂ ಗೆಲ್ಲುವ ಸಾಧ್ಯತೆಗಳಿಲ್ಲ.

ಬಿಎಸ್‌ಆರ್ ಕಾಂಗ್ರೆಸ್ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ಸ್ವತಃ ಪಕ್ಷದ ರಾಜ್ಯಾಧ್ಯಕ್ಷ ಶ್ರೀರಾಮುಲು ಇಲ್ಲಿಗೆ ಬಂದಾಗ ನೂರು ಜನ ಸೇರಿಸಲಾಗದ ಗುಡ್ಡಪ್ಪ ಓಲೇಕಾರ ಗೆದ್ದು ಬರುವ ಮಾತನಾಡುತ್ತಿದ್ದಾನೆ.

ಆರ್. ಶಂಕರ್ ಎಂಬಾತ ಕ್ಷೇತ್ರದಲ್ಲಿ ಹೊಸದೊಂದು ಅಲೆ ಹುಟ್ಟು ಹಾಕಿದ್ದಾರೆ. ದಾನ ಧರ್ಮದ ಮೂಲಕ ಅಬ್ಬರದ ಪ್ರಚಾರ ಗಿಟ್ಟಿಸಿದ್ದಾರೆ. ಈ ಹಿಂದೆ ಬೃಹತ್ ಬೆಂಗಳೂರಿನ ಮಹಾನಗರ ಪಾಲಿಕೆಯ ಉಪಮೇಯರ್ ಆಗಿದ್ದ ಶಂಕರ್ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಬೆಂಗಳೂರು ಸರ್ವಜ್ಞ ನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋಲುಂಡಿದ್ದ. ಈಶ್ವರಪ್ಪನ ಆಶೀರ್ವಾದದಿಂದ ಈಗ ಕೊನೆಗಳಿಗೆಯಲ್ಲಿ ಬಿಜೆಪಿ ಅಭ್ಯರ್ಥಿಯಾದರೆ ಕಾಂಗ್ರೆಸ್ ಹಾಗು ಕೆಜೆಪಿಗೆ ಚೊಂಬೇ ಗತಿ. ಯಾಕೆಂದರೆ ಈಗ ಈಗಾಗಲೇ ಚುನಾವಣೆಗೆ ನಿಂತಾಗ ಮಾಡುವಷ್ಟು ಖರ್ಚಿನ ದುಪ್ಪಟ್ಟು ಹಣವನ್ನು ಕ್ಷೇತ್ರದಲ್ಲಿ ಚೆಲ್ಲಿದ್ದಾರೆ.

ಹಾನ್‌ಗಲ್‌ನಲ್ಲಿ ಉದಾಸಿಗೆ ನೆಲೆ ಇಲ್ಲ

ಸದಾ ಪಕ್ಷ ಬದಲಾಯಿಸಿ ಗೆಲ್ಲುತ್ತಿದ್ದ ಮಂತ್ರಿ ಚನ್ನಬಸಪ್ಪ ಉದಾಸಿ ಕೆಜೆಪಿ ಸೇರುವ ಮೂಲಕ ಸೋಲಿನ ಹಾದಿ ಹಿಡಿದಿದ್ದಾರೆ. ಕಳೆದ ನಾಲ್ಕೂವರೆ ವರ್ಷದಲ್ಲಿ ಈತ ಮತ್ತು ಈತನ ಮಗ ಸಂಸದ ಶಿವಕುಮಾರ ಉದಾಸಿಯ ಉರವಣಿಗೆಯಿಂದ ಬೇಸತ್ತಿರುವ ಜನ ಕಾಂಗ್ರೆಸ್ಸಿನತ್ತ ಮುಖಮಾಡುತ್ತಿದ್ದಾರೆ.


ವಿಧಾನಸಭೆಯ ಮಾಜಿ ಉಪಸಭಾಪತಿ ಮನೋಹರ ತಹಶೀಲ್ದಾರ ಈ ಕ್ಷೇತ್ರದಲ್ಲಿ ಏಕೈಕ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಿದ್ದರು. ಆದರೆ ಕಳೆದೆರಡು ಚುನಾವಣೆಯಲ್ಲಿ ಸೋಲುಂಡಿರುವ ಇವರ ಬದಲು ಯುವಕರಿಗೆ ಅವಕಾಶ ಕೊಡಿ ಎಂಬ ಕೂಗು ಕೇಳಿಬರುತ್ತಿದೆ. ಇದ್ದುದರಲ್ಲೇ ಹಣ ಖರ್ಚು ಮಾಡಿ ಚುನಾವಣೆ ಮಾಡುವ ತಯಾರಿಯಲ್ಲಿರುವ ಕೆಪಿಸಿಸಿ ಸದಸ್ಯ ಸತೀಶ್ ದೇಶಪಾಂಡೆ ಬಿ ಫಾರ್ಮ್ ರೇಸಿನಲ್ಲಿ ಪ್ರಮುಖರಾಗಿದ್ದಾರೆ. ನಂತರದ ಸ್ಥಾನದಲ್ಲಿ ಪ್ರಕಾಶಗೌಡ ಪಾಟೀಲ, ಜಿ.ಎಸ್.ಗಂಟೇರ, ನಜೀರ ಸವಣೂರು, ರಾಜ್ಯ ಗಂಗಾಮತ ಸಮಾಜದ ಅಧ್ಯಕ್ಷ ಬಿ.ಕೆ.ಮೋಹನಕುಮಾರ, ನಿವೃತ್ತ ಡಿವೈಎಸ್‌ಪಿ ಸೋಲಭೇಶ್ವರಪ್ಪ ಇದ್ದಾರೆ.


ಉದಾಸಿಯನ್ನು ಬೈಯ್ಯುತ್ತಲೆ ದಿನದ ರಾಜಕಾರಣವನ್ನು ಆರಂಭಿಸುವ ಜಿ.ಪಂ ಸದಸ್ಯ ಬಸವರಾಜ ಹಾದಿಮನಿ ಬಿಜೆಪಿ ಕ್ಯಾಂಡಿಡೇಟ್ ಆಗುವ ತಯಾರಿ ನಡೆಸಿದ್ದಾರೆ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಭೋಜರಾಜ ಕರೂದಿ "ನಾನೂ ಒಂದು ಕೈ ನೋಡೇ ಬಿಡ್ತೀನಿ" ಎಂದು ಉದಾಸಿಗೆ ಸೆಡ್ಡು ಹೊಡೆಯಲು ಸಜ್ಜಾಗಿದ್ದಾರೆ. ಹಾನಗಲ್ ಕ್ಷೇತ್ರದಲ್ಲಿ ಈ ಬಾರಿ ಸ್ಪಷ್ಟವಾಗಿ ತ್ರಿಕೋನ ಸ್ಪರ್ಧೆಯಾಗಲಿದೆ. ಲಿಂಗಾಯತರು ಇಲ್ಲಿ ಪ್ರಬಲರಾಗಿದ್ದು, ಗಂಗಾಮತ ಸಮಾಜ ಎರಡನೇ ಸ್ಥಾನದಲ್ಲಿದೆ. ನಿರ್ಣಾಯಕರಾಗಿರುವ ಮುಸ್ಲಿಮರು ಮೂರನೇ ಸ್ಥಾನದಲ್ಲಿದ್ದಾರೆ.

ಕುಮಾರೇಶನ ಆಣೆಗೂ ಈ ಬಾರಿ ಉದಾಸಿಯನ್ನು ಸೋಲಿಸುತ್ತೇವೆ ಎನ್ನುತ್ತಿದ್ದಾರೆ ಇಲ್ಲಿನ ಜನ.


ಹಾವೇರಿ: ಓಲೇಕಾರನ ಉರವಣಿಗೆ ಅಡಗಲಿದೆ

ಯಡ್ಡಿಯ ಕೆಜೆಪಿ ಪಕ್ಷ ಜನ್ಮತಾಳಿದ ನಂತರ ಅದರ ಸ್ವಯಂಘೋಷಿತ ವಕ್ತಾರನಾಗಿ ಬಿಜೆಪಿಯನ್ನು ಬೈಯುವುದನ್ನೇ ತನ್ನ ಕಾಯಕವನ್ನಾಗಿಸಿಕೊಂಡಿರುವ ಶಾಸಕ ನೆಹರು ಓಲೇಕಾರನ ಕಾಲು ಸದ್ಯ ನೆಲದ ಮೇಲೆ ನಿಲ್ಲುತ್ತಿಲ್ಲ. ಓಲೇಕಾರ ಬ್ಯಾಡಗಿ ಕ್ಷೇತ್ರದಿಂದ ಹಾವೇರಿಗೆ ಕಾಲಿಟ್ಟು ಶಾಸಕನಾದರೂ ಇಲ್ಲಿ ಹೇಳಿಕೊಳ್ಳುವಂತಹ ಕೆಲಸವನ್ನೇನೂ ಮಾಡಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಬಂದ ಅನುದಾನದಲ್ಲಿ ಪರಸೆಂಟೇಜ್ ಕೀಳುವುದನ್ನೆ ದಂಧೆಯಾಗಿಸಿಕೊಂಡು ಓಲೇಕಾರ ಎಲ್ಲ ಕಾಮಗಾರಿಗಳ ಗುತ್ತಿಗೆಯನ್ನು ತನ್ನ ಸಂಬಂಧಿಗಳಿಗೆ ನೀಡಿದ್ದಾನೆ. ಅಲ್ಲದೆ, ತನ್ನ ಮಗನ ಮೂಲಕ ನಡೆಸಿದ ಅಕ್ರಮ ಮರಳು ದಂಧೆಯೊಂದರಲ್ಲೆ ಕೋಟಿ ಕೋಟಿ ನುಂಗಿದ್ದಾನೆ. ಸದಾ ಮುಸ್ಲಿಂರ ವಿರುದ್ಧ ಜಳಗಕ್ಕೆ ಮುಂದಾಗುವ ಓಲೇಕಾರ ಪ್ರತಿ ಹೋಳಿಹುಣ್ಣಿಮೆಯಲ್ಲಿ ಕೋಮು ದಳ್ಳುರಿ ಎಬ್ಬಿಸಿ ತನ್ನ ಬೇಳೆ ಬೇಯಿಸಿಕೊಂಡಿದ್ದಾನೆ. ಈತನ ಉಪಟಳದಿಂದ ಬೇಸತ್ತಿರುವ ಹಾವೇರಿ ಮೀಸಲು ಕ್ಷೇತ್ರದ ಜನ ಪರ್ಯಾಯ ನಾಯಕನ ಹುಡುಕಾಟದಲ್ಲಿದ್ದಾರೆ.



ಸಿ.ಎಂ.ಉದಾಸಿ


ಕೋಳಿವಾಡ

ಓಲೇಕಾರನಿಗೆ ಟಕ್ಕರ್ ನೀಡಿ ಮನೆಗೆ ಕಳುಹಿಸಲು ಕಾಂಗ್ರೆಸ ಮಾಜಿ ಶಾಸಕ ರುದ್ರಪ್ಪ ಲಮಾಣಿ ಸಜ್ಜಾಗಿದ್ದಾರೆ. ಆದರೆ ಎರಡು ಬಾರಿ ಸೋತಿರುವವರಿಗೆ ಟಿಕೆಟ್ ನೀಡದಿದ್ದಲ್ಲಿ ರುದ್ರಪ್ಪ ಕೂಡಾ ಬಲಿಯಾಗಲಿದ್ದಾರೆ. ಇನ್ನುಳಿದಂತೆ ಬಿ ಫಾರ್ಮ್ ರೇಸಿನಲ್ಲಿ ಕೆಲದಿನ ಬಿಜೆಪಿಗೆ ಹೋಗಿ ಅಲ್ಲಿಯೂ ಸಲ್ಲದೆ ಕಾಂಗ್ರೆಗೆ ಹಿಂದಿರುಗಿದ ಮಾಜಿ ಜಿ.ಪಂ ಅಧ್ಯಕ್ಷ ಪರಮೇಶ್ವರಪ್ಪ ಮೇಗಳಮನಿ, ನಿವೃತ್ತ ಎಸ್‌ಪಿ ಶಿವಕುಮಾರ ತಾವರಗಿ, ಈರಪ್ಪ ಲಮಾಣಿ, ದಾಸಪ್ಪ ಕರ್ಜಗಿ, ಜಗದೀಶ ಬೆಟಗೇರಿ ಪ್ರಮುಖರಾಗಿದ್ದಾರೆ.


ಸುರೇಶ್ ಪಾಟೀಲ್


ಬಿಜೆಪಿಯಿಂದ ಜಿ.ಪಂ ಮಾಜಿ ಅಧ್ಯಕ್ಷ ಡಾ.ಮಲ್ಲೇಶಪ್ಪ ಹರಿಜನ ಪ್ರಮುಖ ಆಕಾಂಕ್ಷಿಯಾಗಿದ್ದಾರೆ. ಬಸವರಾಜ ಪೋಲನವರ ಕೂಡ ರೇಸಿನಲ್ಲಿದ್ದಾರೆ. ಇನ್ನು ಬೊಮ್ಮಾಯಿಯೊಂದಿಗೆ 'ನೀ ಕೊಡೆ ನಾ ಬಿಡೆ' ಎಂಬಂತೆ ಆಟವಾಡುತ್ತ ಚೆಡ್ಡಿ ಪಕ್ಷದಲ್ಲಿದ್ದ ಸೋಕಾಲ್ಡ್ ದಲಿತ ಮುಖಂಡ ಡಿ.ಎಸ್.ಮಾಳಗಿ ಜೆಡಿಎಸ್‌ನಿಂದ ಸ್ಪರ್ಧೆಗಿಳಿಯುವ ಸಾಧ್ಯತೆ ಇದೆ. 'ನಾನು ಪಕ್ಷದ ಹಿರಿಯ. ನನಗೇ ಟಿಕೆಟ್' ಎನ್ನುತ್ತಿರುವ ಶ್ರೀಪಾದ ಬೆಟಗೇರಿ ಕೂಡಾ ಬಿ ಫಾರ್ಮ್ ಆಕಾಂಕ್ಷಿ. ಬಿಎಸ್‌ಆರ್ ಕಾಂಗ್ರೆಸ್ಸಿನಿಂದ ಡಾ. ಸಂಜಯ ಡಾಂಗೆ ಅಭ್ಯರ್ಥಿಯಾಗುವುದು ನಿಶ್ಚಿತ.


ರಾಜು ಕುನ್ನೂರು


ಮೀಸಲು ಕ್ಷೇತ್ರವಾಗಿರುವುದರಿಂದ ಇಲ್ಲಿ ಜಾತಿ ಲೆಕ್ಕಾಚಾರ ಬರದಿದ್ದರೂ ಅಭ್ಯರ್ಥಿಗಳ ಪ್ರಾಮಾಣಿಕತೆ ಮುಖ್ಯವಾಗುತ್ತದೆ.

ಬ್ಯಾಡಗಿ: ಸುರೇಶಗೌಡ ನಿಲ್ಲುವುದೇ ಗ್ಯಾರಂಟಿ ಇಲ್ಲ

ರಾಜಕಾರಣದ ಗಂಧಗಾಳಿಯಿಲ್ಲದ ಒಬ್ಬ ವ್ಯಾಪಾರಿ ಶಾಸಕನಾದರೆ ಆ ಕ್ಷೇತ್ರಕ್ಕೆ ಏನಾಗುತ್ತದೆ ಎಂಬುದನ್ನು ಬ್ಯಾಡಗಿಯನ್ನ ನೋಡಿದರೆ ತಿಳಿಯುತ್ತೆ. ಅಷ್ಟರ ಮಟ್ಟಿಗೆ ಇಡೀ ಕ್ಷೇತ್ರವನ್ನು ಹಾಳುಗೆಡವಿದ್ದಾನೆ ಬಿಜೆಪಿ ಶಾಸಕ ಸುರೇಶಗೌಡ ಪಾಟೀಲ. ಈಗ ಕೆಜೆಪಿ ಸೇರಿಕೊಂಡು ಅಭ್ಯರ್ಥಿಯಾಗುವ ತಯಾರಿ ಶುರುವಿಟ್ಟಿದ್ದ. ಆದರೆ ಪರಿಷತ್ ಸದಸ್ಯ ಶಿವರಾಜ ಸಜ್ಜನ್ 'ನಾನೇ ಕ್ಯಾಂಡಿಡೇಟು' ಎನ್ನುತ್ತಿರುವದರಿಂದ ದಾರಿ ಕಾಣದೆ ತಟಸ್ಥ ಉಳಿದಿದ್ದಾನೆ.



ಬಿ.ಸಿ.ಪಾಟೀಲ್

ಮಾಜಿ ಸಚಿವ ಬಸವರಾಜ ಶಿವಣ್ಣನವರ ಮತ್ತೆ ಕಾಂಗ್ರೆಸ್ ಅಭ್ಯರ್ಥಿ ಆಗುವುದು ನಿಶ್ಚಿತವಾದಂತಾಗಿದೆ. ಶಿವಣ್ಣನವರ ಇದ್ದುದರಲ್ಲೇ ಉತ್ತಮ ರಾಜಕಾರಣಿ ಎನಿಸಿಕೊಂಡವರು. ಇತ್ತೀಚೆಗೆ ಬ್ಯಾಡಗಿಯಲ್ಲೆ ಮನೆ ಮಾಡಿಕೊಂಡು ಎಲೆಕ್ಷನ್ ತಯಾರಿ ನಡೆಸಿರುವ ಇವರು ಕುರುಬ ಸಮಾಜದವರಾಗಿರುವುದರಿಂದ ಕಾಗಿನೆಲೆ ಕ್ಷೇತ್ರದ ಪ್ರಭಾವ ಅವರಿಗೆ ಸ್ವಲ್ಪ ಅನುಕೂಲ ಮಾಡಿಕೊಡಲಿದೆ. ಜೊತೆಗೆ ಕಳೆದ ಬಾರಿಯ ಸೋಲಿನ ಅನುಕಂಪ ದೊರೆತರೆ ಗೆಲುವು ಸುಲಭ ಎಂಬ ಮಾತುಗಳು ಕೇಳಿಬರುತ್ತಿವೆ. ಇವರೊಂದಿಗೆ ಟಿಕೆಟ್ ಪೈಪೋಟಿಯಲ್ಲಿ ವರ್ತಕ ಎಸ್.ಆರ್.ಪಾಟೀಲ ಮತ್ತು ನ್ಯಾಯವಾದಿ ಶಿಡೆನೂರ ಹೆಸರುಗಳು ಚಾಲ್ತಿಯಲ್ಲಿವೆ.


ಮಂಜುನಾಥ್ ಕುನ್ನೂರು

ಬಿಜೆಪಿಗಿನ್ನೂ ಇಲ್ಲಿ ಅಭ್ಯರ್ಥಿಗಳು ಸಿಕ್ಕಿಲ್ಲ. ಹಾಲಿ ಜಿ.ಪಂ ಸದಸ್ಯ ಕಂ ಲಿಂಗಾಯತ ಮುಖಂಡ

>>12



ಬಾಲಗಂಗಾಧರನಾಥ ಸ್ವಾಮಿ

ಮಣ್ಣಿನ ಮಕ್ಕಳನ್ನು ಮರೆತ ಗುರು

ಆದಿಚುಂಚನಗಿರಿ ಮಠಾಧೀಶರಾಗಿದ್ದ ಬಾಲಗಂಗಾಧರ ನಾಥ ಸ್ವಾಮಿಯವರ ನಿಧನದಿಂದ ಒಂದು ದೊಡ್ಡ ಶೂನ್ಯ ಆವರಿಸಿದಂತಾಗಿದೆ ಎಂಬ ಮಾತು ಈಗ ಎಲ್ಲೆಡೆ ಕೇಳಿಬರುತ್ತಿದೆ.

ಈ ಮಾತುಗಳು ಬೇರೆ ಬೇರೆ ಆಯಾಮಗಳಲ್ಲಿ ವಿಭಿನ್ನ ಅರ್ಥ ಹೊರಡಿಸಬಲ್ಲದ್ದಾಗಿದೆ.

ತಮ್ಮ ಮೂವತ್ತನೇ ವಯಸ್ಸಿನಲ್ಲಿ 1974 ರಲ್ಲಿ ಆದಿಚುಂಚನಗಿರಿಯ ಮಠಾಧೀಶರಾಗಿ ನೇಮಕಗೊಂಡ ಬಾಲಗಂಗಾಧರನಾಥರು ಕಳೆದ ಮೂವತ್ತೆಂಟು ವರ್ಷಗಳಲ್ಲಿ ಒಂದು ಬೃಹತ್ ಸಾಮ್ರಾಜ್ಯವನ್ನೇ ಕಟ್ಟಿ ನಿರ್ಮಿಸಿದ್ದಾರೆ. ಈಗ್ಗೆ ನಾಲ್ಕು ದಶಕಗಳ ಹಿಂದೆ ಏನೇನೂ ಆರ್ಥಿಕ ಶಕ್ತಿ ಇರದಿದ್ದ ಒಕ್ಕಲಿಗ ಜಾತಿ ಸಮುದಾಯದವರ ಶ್ರದ್ಧಾಭಕ್ತಿಯ ದೊಡ್ಡ ಕೇಂದ್ರವೂ ಆಗಿರದಿದ್ದ ಆದಿಚುಂಚನಗಿರಿ ಕ್ಷೇತ್ರವು ನಂತರದ ದಿನಗಳಲ್ಲಿ ಅತ್ಯಂತ ಬಲಿಷ್ಠ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕೇಂದ್ರವಾಗಿ ತಲೆ ಎತ್ತಿತು. ಪ್ರಾಥಮಿಕ ಶಾಲೆಯಿಂದ ಹಿಡಿದು ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳು ಸೇರಿದಂತೆ ನಾನೂರೈವತ್ತಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, ಹತ್ತಿರತ್ತಿರ ಒಂದು ಲಕ್ಷದಷ್ಟು ವಿದ್ಯಾರ್ಥಿಗಳು, ಸಾವಿರಾರು ಶಿಕ್ಷಕರು, ಕಟ್ಟಡಗಳು ಸ್ವಾಮೀಜಿಯವರ ಖಾಸಗಿ ಬಳಕೆಯ ಮರ್ಸಿಡಿಸ್ ಬೆನ್ಜ್, ಬಿಎಂಡಬ್ಲ್ಯು ಕಾರ್ fleet ಜೊತೆಗೆ ಹೆಲಿಕಾಪ್ಟರ್ ಸೇರಿದಂತೆ ನೂರಾರು ವಾಹನಗಳು.....!

ಒಟ್ಟಿನಲ್ಲಿ ಇವೆಲ್ಲಾ ಸೇರಿ ಹದಿನೈದು ಸಾವಿರ ಕೋಟಿ ರೂಪಾಯಿ ಮೌಲ್ಯದ ಸಾಮ್ರಾಜ್ಯವಿದು.

ಇಷ್ಟೇ ಅಲ್ಲದೆ ರಾಜಕಾರಣಿಗಳು, ಉದ್ದಿಮೆದಾರರು, ಸರ್ಕಾರಿ ಉನ್ನತಾಧಿಕಾರಿಗಳ ಬೇಕುಬೇಡಗಳನ್ನು ನಿರ್ಧರಿಸುವ, ಅಗತ್ಯಗಳನ್ನು ಈಡೇರಿಸುವ ಒಂದು ವರದಾನ ಕೇಂದ್ರವಾಗಿಯೂ ಈ ಮಠ ತನ್ನ ಪ್ರಭಾವ ಬೆಳೆಸಿಕೊಂಡಿತ್ತು.

ಈ ಮಾತು ಕೇವಲ ಆದಿಚುಂಚನಗಿರಿ ಮಠಾಧೀಶರಿಗೆ ಮಾತ್ರ ಅನ್ವಯಿಸುವಂತದ್ದಲ್ಲ, ಕರ್ನಾಟಕದಲ್ಲಿರುವ ಬ್ರಾಹ್ಮಣ, ಲಿಂಗಾಯತ, ಕುರುಬ ಮುಂತಾದ ಸಮುದಾಯಗಳ ಧರ್ಮಗುರುಗಳು-ಮಠಗಳೂ ಸ್ವಲ್ಪ ಹೆಚ್ಚು ಕಡಿಮೆ ಹೀಗೇ ಇವೆ. ಸಣ್ಣ ಪ್ರಮಾಣದಲ್ಲಾದರೂ ಮುಸ್ಲಿಮರ ಧರ್ಮಗುರುಗಳು, ಇನ್ನಿತರ ಪುಟ್ಟ ದುರ್ಬಲ ಜಾತಿಗಳ ಚಲನೆ ಕೂಡ ಇವತ್ತು ಇದೇ ದಿಕ್ಕಿನಲ್ಲಿದೆ.

ಮೇಲೆ ಹೇಳಲಾದ ಸಾಧನೆಗಳನ್ನು 'ಸಾಧನೆ' ಎಂದು ಹೇಳುವುದಾದರೆ ಬಾಲಗಂಗಾಧರನಾಥರದ್ದು ನಿಜಕ್ಕೂ ಒಂದು ಅಸಾಧಾರಣ ಸಾಧನೆಯೇ ಸರಿ.

ಆದರೆ

ಈ ಎಲ್ಲವನ್ನು ಸಾಧಿಸಲು ಅವರಿಗೆ ಹೇಗೆ ಸಾಧ್ಯವಾಯಿತು, ಕರ್ನಾಟಕದ ಸಾರ್ವಜನಿಕ ಬದುಕಿನ ಯಾವ ಕಾಲಘಟ್ಟದಲ್ಲಿ ಅವರಿಗೆ ಈ ರಾಕೆಟ್ ವೇಗದ ಸಾಧನೆ ಮಾಡಿ ತೋರಿಸಲು ಸಾಧ್ಯವಾಯಿತು, ಅದರ ಹಿಂದಿದ್ದ ಪ್ರೇರಣೆಗಳೇನು, ನೆರವು ನೀಡಿ ಪೋಷಿಸಿದವರ್‍ಯಾರ್‍ಯಾರು? ಅಂತಾ ಪೋಷಕರಿಗೆ ಇದರಿಂದ ಸಿಕ್ಕ ಲಾಭವೇನು? ಮಠವನ್ನು ಬೆಳೆಸಲು ತಾನೂ ಕೊಂಚ ಕೊಡುಗೆ ನೀಡಿದ ಬಡ ಚೋರೇಗೌಡನಿಗೆ ಇದರಿಂದ ದಕ್ಕಿದ್ದೇನು?

- ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ಹುಡುಕಬೇಕಾದ್ದು ಅಗತ್ಯವಾಗಿದೆ.

ಚಾರಿತ್ರಿಕ ಹಿನ್ನೆಲೆ

ಕರ್ನಾಟಕದ ಜನಸಮುದಾಯಗಳ ಪೈಕಿ ಮಹತ್ವದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಂಪರೆ ಹೊಂದಿರುವ ಸಮುದಾಯಗಳಲ್ಲಿ ಒಕ್ಕಲಿಗ ಜಾತಿಯೂ ಒಂದಾಗಿದೆ. ಹದಿನೇಳಕ್ಕೂ ಹೆಚ್ಚು ಒಳಪಂಗಡಗಳಿರುವ ಒಕ್ಕಲಿಗರಲ್ಲಿ ಗಂಗಟಕಾರ, ಕುಂಚಿಟಿಗ, ಮೊರಸು, ಮುಸುಕು, ಮುಳ್ಳು, ಬಂಟರು, ಹಳ್ಳಿಕಾರ ಹಾಗೂ ರೆಡ್ಡಿ ಜನಾಂಗದೊಳಗೆ ಪಾಕನಾಕ, ಕಮ್ಮ, ನಾರದಿ, ತೆರಟಿ, ಗುಂಟುವಾರು ಮುಂತಾದ ಒಳಪಂಗಡಗಳಿವೆ. ಪ್ರಾಚೀನ ಕವಿರಾಜಮಾರ್ಗ ಕೃತಿಯಲ್ಲಿ ಒಕ್ಕಲು ಜನಾಂಗದ ಪ್ರಸ್ತಾಪವಿದೆ. 12 ನೇ ಶತಮಾನದ ವಚನ ಕಾಲಘಟ್ಟಕ್ಕೂ, ಮೊದಲು ಇದ್ದ ಮುದ್ದಯ್ಯ ಕವಿಯೆಂಬ ವಚನಕಾರ ಒಕ್ಕಲಿಗ ಸಮುದಾಯದವ ಎನ್ನಲಾಗಿದೆ. ಕರ್ನಾಟಕವನ್ನಾಳಿದ ರಾಜವಂಶಗಳ ಪೈಕಿ ತಲಕಾಡಿನ ಗಂಗರು, ಹೊಯ್ಸಳರು, ವಿಜಯನಗರ ಕಾಲದ ಯಲಹಂಕ ನಾಡಪ್ರಭುಗಳು.... ಒಕ್ಕಲು ಮೂಲದವರಾಗಿದ್ದರು. ಕೆಳದಿಯ ಅರಸರು ಮೇಲ್ನೋಟಕ್ಕೆ ಶೈವ ಪಂಥೀಯರಂತೆ ಕಂಡರೂ ಆರಂಭದಲ್ಲಿ ಅದು ಒಕ್ಕಲಿಗ ಸಮುದಾಯದವರೇ ಸ್ಥಾಪಿಸಿದ್ದ ಸಂಸ್ಥಾನವಾಗಿತ್ತು, ಅದೇ ರೀತಿ ಬಿದನೂರು ರಾಜ್ಯ ಸ್ಥಾಪನೆಯ ಹಿಂದೆ ಚೌಡಗೌಡ ಎಂಬುವವರ ಶ್ರಮವಿತ್ತು, ನಂತರ ಒಡೆಯರ್ ಆಳ್ವಿಕೆಯಡಿ ಮೈಸೂರು ಸಂಸ್ಥಾನ ಆಡಳಿತದ ಕೇಂದ್ರವಾದಾಗ ಅಲ್ಲಿ ಮೊದಲು ಅಧಿಕಾರದ ರುಚಿ ಕಂಡವರು ಬ್ರಾಹ್ಮಣರಾದರೆ ನಂತರದ ಸಿಂಹಪಾಲು ಪಡೆದವರು ಒಕ್ಕಲಿಗ ಸಮುದಾಯದವರೆ. ಬದಲಾಗುತ್ತಿದ್ದ ಸನ್ನಿವೇಶ ಹಾಗೂ ಆಧುನಿಕ ಸ್ಥಿತಿಗಳಿಗೆ ತೆರೆದುಕೊಂಡ ದಕ್ಷಿಣ ಕರ್ನಾಟಕದ ಬಲಿಷ್ಠ ಭೂಮಾಲೀಕ ಸಮುದಾಯವಾಗಿದ್ದ ಒಕ್ಕಲಿಗ ಜನಾಂಗವು ಆಗಿನ ಪ್ರಜಾ ಪ್ರತಿನಿಧಿ ಸಭೆಯಲ್ಲೂ (ಈಗಿನ ಎಂಎಲ್‌ಎ ರೀತಿ ಎಂದುಕೊಳ್ಳಬಹುದು) ಗಣನೀಯ ಸಂಖ್ಯಾಬಲ ಹೊಂದಿತ್ತು.

ಮಾಜಿ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣರ ತಂದೆ ಹಾಗೂ ತಾತ ಕೂಡ ಈ ಸಭೆಯ ಮೆಂಬರ್‌ಗಳಾಗಿದ್ದರು. ಆಗಿನ ಸಂಕೀರ್ಣ ಸನ್ನಿವೇಶದಲ್ಲಿ ಇನ್ನಿತರ ಜಾತಿವರ್ಗಗಳಲ್ಲೂ ಕಂಡುಬರುವಂತೆ ಒಕ್ಕಲಿಗ ನಾಯಕರಲ್ಲೂ ಬ್ರಿಟಿಷರ ಪರ-ವಿರುದ್ಧದ ವ್ಯಕ್ತಿಗಳಿದ್ದರು. ಆದರೆ ಬಿಕ್ಕಟ್ಟು ಬಂದಿದ್ದು ಮಾತ್ರ ಕರ್ನಾಟಕ ಏಕೀಕರಣದ ಪ್ರಶ್ನೆ ಬಂದಾಗ. ಹಳೇ ಮೈಸೂರು ರಾಜ್ಯದಲ್ಲಿ ಅದಾಗಲೇ ರಾಜಕೀಯ ಪ್ರಾಬಲ್ಯ ಹೊಂದಿದ್ದ ಒಕ್ಕಲಿಗ ನಾಯಕರು ಏಕೀಕರಣವಾದರೆ ತಮ್ಮ ಅಧಿಪತ್ಯ ಕೊನೆಗೊಂಡು ಲಿಂಗಾಯತರ ಕೈ ಮೇಲಾಗಬಹುದೆಂಬ ಆತಂಕದಿಂದ ಕರ್ನಾಟಕ ಏಕೀಕರಣಕ್ಕೆ ಬೆಂಬಲ ನೀಡಲಿಲ್ಲ, ಕೊನೆಗೆ ಏಕೀಕರಣ ಈಡೇರಿತಾದರೂ ಅಧಿಕಾರಕ್ಕಾಗಿ ರಾಜ್ಯದ ಎರಡು ಬಲಿಷ್ಠ ಸಮುದಾಯಗಳಾದ ಲಿಂಗಾಯತರು ಹಾಗೂ ಒಕ್ಕಲಿಗರ ನಡುವೆ ಮುಸುಕಿನ ಗುದ್ದಾಟ ಶುರುವಾಯಿತು. ಅಷ್ಟರಲ್ಲಾಗಲೇ ರಾಜಕೀಯ ಕ್ಷೇತ್ರ, ಭೂಒಡೆತನ, ಉದ್ದಿಮೆ, ಅಧಿಕಾರಶಾಹಿ, ಸಾಂಸ್ಕೃತಿಕ ವಲಯಗಳಲ್ಲಿ ತಮ್ಮದೇ ಪ್ರಭಾವ ಈ ಎರಡೂ ಗುಂಪುಗಳಿಗಿತ್ತು.

ಆದರೆ ಒಕ್ಕಲಿಗರಿಗೆ ಕೊರತೆ ಇದ್ದಿದ್ದು ಮಠಗಳಲ್ಲಿ.

ಲಿಂಗಾಯತರಿಗೆ ಕರಾವಳಿ ಹೊರತು ಪಡಿಸಿ ರಾಜ್ಯದ ಉದ್ದಗಲಕ್ಕೂ ಮಠಗಳ ಬಲಿಷ್ಠ ಜಾಲವೇ ಇತ್ತು. ಇವುಗಳ ಮಠಾಧೀಶರು ತಮ್ಮ ಸಮುದಾಯದ ಕೇವಲ ಆಧ್ಯಾತ್ಮಿಕ ವ್ಯಕ್ತಿಗಳಾಗಿರದೆ ಸಾಮಾಜಿಕ ನಾಯಕರಾಗಿಯೂ ಬಿಂಬಿಸಿಕೊಳ್ಳುತ್ತಾ ಶಿಕ್ಷಣ, ಉದ್ದಿಮೆ, ರಾಜಕೀಯ, ಸರ್ಕಾರವನ್ನು ನಿಯಂತ್ರಿಸುವ ತಾಕತ್ತನ್ನು ಬೆಳೆಸಿಕೊಳ್ಳುತ್ತಾ ಬಲಿಷ್ಠರಾಗತೊಡಗಿದ್ದರು.

ಈ ವಿಚಾರದಲ್ಲಿ ಒಕ್ಕಲಿಗ ಸಮುದಾಯದಲ್ಲಿ ನಿಜಕ್ಕೂ ದೊಡ್ಡ ಶೂನ್ಯವಿತ್ತು ಹಾಗೂ ಆ ಶೂನ್ಯವನ್ನು ತುಂಬಿ ಆವರಿಸಿಕೊಂಡವರೇ ಬಾಲಗಂಗಾಧರನಾಥರು. ಕರ್ನಾಟಕದ ಚರಿತ್ರೆಯ ಚಲನೆಯಲ್ಲಿ ಒಕ್ಕಲಿಗ ಸಮುದಾಯ ಬೇರೆಬೇರೆ ಸಂದರ್ಭದ ಒತ್ತಡಕ್ಕೆ ಸಿಲುಕಿ ಶೈವ, ವೈಷ್ಣವ ಪಂಥಗಳಲ್ಲಿ ಹಂಚಿಹೋಗಿತ್ತು, ಆದಿಚುಂಚನಗಿರಿ ಕ್ಷೇತ್ರ ಶೈವಾನುಯಾಯಿಗಳ ನಾಥಪಂಥದ ಶ್ರದ್ಧಾಕೇಂದ್ರವಾಗಿ ಬೆಳೆದು ಬಂದಿತ್ತು, ಎಪ್ಪತ್ತರ ದಶಕದವರೆಗೂ ಈ ಸ್ಥಳ ಬಹುತೇಕ ನಿರ್ಲಕ್ಷಿತ ಆಧ್ಯಾತ್ಮಿಕ ಕೇಂದ್ರವಾಗಿತ್ತು.

ರಾಜಕೀಯ ಪ್ರಚೋದನೆ

1974 ರಲ್ಲಿ ಪಟ್ಟಕ್ಕೆ ಬಂದರೂ 1976 ರ ವರೆಗೂ ತಣ್ಣಗಿದ್ದ ಬಾಲಗಂಗಾಧರನಾಥರಿಗೆ ದೇವೇಗೌಡ ಹಾಗೂ ಕಾಂಗ್ರೆಸ್‌ನ ಎಚ್.ಸಿ. ಶ್ರೀಕಂಠಯ್ಯ ಪ್ರೇರೇಪಣೆ ನೀಡಿ ಸಾರ್ವಜನಿಕ ರಂಗಕ್ಕೆ ಬರುವಂತೆ ನೋಡಿಕೊಂಡರು. ಅಲ್ಲಿಂದಾಚೆಗೇನಾಯಿತೆಂಬುದು ಈಗ ಎಲ್ಲರಿಗೂ ತಿಳಿದಿದೆ. ಬಾಲಗಂಗಾಧರನಾಥರು ತಮ್ಮ ಮಠ ಹಾಗೂ ಶಿಕ್ಷಣ ಸಂಸ್ಥೆ ಹಾಗೂ ಇನ್ನಿತರ ವ್ಯವಹಾರಗಳನ್ನು ಕಟ್ಟಿ ಬೆಳೆಸಲು ಒಕ್ಕಲಿಗ ಜಾತಿಯನ್ನೇ ಟ್ರಂಪ್‌ಕಾರ್ಡ್ ರೀತಿ ಬಳಸಿಕೊಂಡರು. ಒಕ್ಕಲಿಗ ರಾಜಕಾರಣಿ-ನೌಕರಶಾಹಿ-ಉದ್ದಿಮೆಪತಿಗಳ ಪೂರ್ಣ ಬೆಂಬಲ ಪಡೆದು ಬೆಳೆಯುತ್ತಾ ಕೊನೆಗೆ ತಾನೇ ಈ ಎಲ್ಲಾ ವರ್ಗಗಳನ್ನು ಮಠದ ನಿಯಂತ್ರಣಕ್ಕೆ ತಂದುಕೊಂಡರು. 'ಮಠಕ್ಕಾಗಿ ಇವರೆಲ್ಲರೂ-ಇವರೆಲ್ಲರಿಗಾಗಿ ಮಠ' ಎಂಬ ಫಾರ್ಮೂಲ ಒಂದು ನಿಧಾನಕ್ಕೆ ಸ್ಪಷ್ಟ ರೂಪ ಆಕಾರ ತಳೆಯಿತು. ಕೇವಲ ಜಾತಿಯ ಕಾರಣಕ್ಕಾಗಿ ಮಠವನ್ನು ಬೆಂಬಲಿಸಿದ್ದ ಬಡ ಒಕ್ಕಲಿಗರಿಗೆ ಪ್ರತಿಫಲವಾಗಿ ಸಿಕ್ಕಿದ್ದು ಕೇವಲ 'ಹೆಮ್ಮೆ'ಯ ಭಾವನೆ ಮಾತ್ರ. ಆಗಲೇ ಬಡ ದಲಿತರ ಭೂಮಿ ನುಂಗುವ, ಮೆಡಿಕಲ್ ಕಾಲೇಜ್‌ನ ನಿಯಮಗಳನ್ನು ಉಲ್ಲಂಘಿಸಿಯೂ ದಕ್ಕಿಸಿಕೊಳ್ಳುವ, ಸರ್ಕಾರವನ್ನೇ ತನ್ನ ಅಗತ್ಯಗಳಿಗಾಗಿ ಬಗ್ಗಿಸಿ ಪಳಗಿಸಿಕೊಳ್ಳುವ ಶಕ್ತಿಯೂ ಮಠಕ್ಕೆ ದಕ್ಕಿತ್ತು.

ಇದು ಸ್ಪಷ್ಟವಾಗಿ ಗೋಚರಿಸಿದ್ದು 1988 ರಲ್ಲಿ ನಡೆದ ವೆಂಕಟಸ್ವಾಮಿ ಆಯೋಗದ ವಿರುದ್ಧ ಸಂಘಟಿಸಿದ್ದ ಮೀಸಲಾತಿ ವಿರೋಧಿ ರ್‍ಯಾಲಿಯಲ್ಲಿ, ಒಕ್ಕಲಿಗರ ಹಿತಾಸಕ್ತಿ ರಕ್ಷಿಸುವ ನೆಪದಲ್ಲಿ ಬೆಂಗಳೂರಿನಲ್ಲಿ ನಡೆದ ಬೃಹತ್ ರ್‍ಯಾಲಿಯು ದೇವೇಗೌಡರಿಗೆ ರಾಜಕೀಯ ಪುನರ್‌ಜನ್ಮವನ್ನೂ, ಬಾಲಗಂಗಾಧರನಾಥರಿಗೆ ಒಕ್ಕಲಿಗ ಸಮುದಾಯ ಪ್ರಶ್ನಾತೀತ ಧಾರ್ಮಿಕ ನಾಯಕನ ಸ್ಥಾನವನ್ನೂ ಗಟ್ಟಿಗೊಳಿಸಿತು. ಇದರಿಂದ ಅನ್ಯಾಯಕ್ಕೊಳಗಾದವರು ಮಾತ್ರ ಹಿಂದುಳಿದ ಹಾಗೂ ದಲಿತ ಸಮುದಾಯದವರಾಗಿದ್ದರು.

ಇದು ರಾಜಕೀಯರಂಗದಲ್ಲಿ ವಿಚಿತ್ರವಾಗಿ ಪ್ರತಿಫಲಿಸಿತು.

1978 ರಲ್ಲಿ ಕರ್ನಾಟಕದಲ್ಲಿ 56 ಶಾಸಕರನ್ನು ಹೊಂದಿದ್ದ ಜನತಾ ಪಾರ್ಟಿಯು 1983 ರಲ್ಲಿ 95 ಹಾಗೂ 1985 ರಲ್ಲಿ 135 ಸ್ಥಾನಗಳನ್ನು ಗೆದ್ದು ಅಧಿಕಾರ ಹಿಡಿದಿತ್ತು, ಇದಕ್ಕೆ ಕಾಂಗ್ರೆಸ್ ವಿರೋಧಿ ಭಾವನೆಯೇ ಪ್ರಧಾನ ಕಾರಣವಾಗಿತ್ತು, ಜನ ಆಗ ಬದಲಾವಣೆ ಬಯಸಿದ್ದರು. ನಂತರ 1990 ರಲ್ಲಿ ಜನತಾ ಪಾರ್ಟಿಗೆ 24 ಹಾಗೂ 1994 ರಲ್ಲಿ 116 ಸ್ಥಾನ ದಕ್ಕಿತು. ದೇವೇಗೌಡ ಮುಖ್ಯಮಂತ್ರಿಯಾದರು. ಆಗಿನ್ನು ದೇವೇಗೌಡರ ರಾಜಕೀಯ ಕೊಂಚ ವಿಶಾಲ ಚೌಕಟ್ಟನ್ನೇ ಒಳಗೊಂಡಿತ್ತು, ಆದರೆ ಅಲ್ಲಿಂದಾಚೆಗೆ ಅವರ ಜನತಾ ಪಾರ್ಟಿಯು ವಿಭಜನೆಯಾಗಿ ಜೆಡಿಯು ಹಾಗೂ ಜೆಡಿಎಸ್ ಆದಾಗ ದೇವೇಗೌಡರು ತಮ್ಮ ನಾಯಕತ್ವದ ಜೆಡಿಎಸ್ ಅನ್ನು ದಕ್ಷಿಣ ಕರ್ನಾಟಕದ ಒಕ್ಕಲಿಗ ಪ್ರಾಬಲ್ಯದ ಪ್ರದೇಶಗಳಿಗೆ ಸೀಮಿತಗೊಳಿಸಿಕೊಂಡರು. ಯಾವಾಗ ಪಕ್ಷಕ್ಕೆ ಜಾತಿಯ ಚೌಕಟ್ಟು ಬಂತೋ 1999 ರಲ್ಲಿ ಜೆಡಿಎಸ್ ಕೇವಲ 10 ಸ್ಥಾನ ಪಡೆಯಿತು. ನಂತರ ಒಕ್ಕಲಿಗ ಜಾತಿ ಜಾಗೃತಿಯಾಗಿ ಅದು 2004 ರಲ್ಲಿ 58 ಸ್ಥಾನಕ್ಕೇರಿತು. ಗೌಡರ ಕುಟುಂಬ ರಾಜಕಾರಣವೂ ಶುರುವಾಗಿ ಸಿದ್ದರಾಮಯ್ಯ ತರಹದ ಜಾತ್ಯತೀತ ನಾಯಕರಿಗೂ ಜೆಡಿಎಸ್‌ನಲ್ಲಿ ಜಾಗ ಸಿಗದಂತಾಯಿತು.

ದೇವೇಗೌಡರು ತಾವೆಷ್ಟೇ ಜಾತ್ಯತೀತ ಎಂದು ಹೇಳಿಕೊಂಡರೂ ಜೆಡಿಎಸ್ ಅನ್ನು ಒಕ್ಕಲಿಗರು ತಮ್ಮ ಜಾತಿಯ ಪಾರ್ಟಿ ಎಂತಲೇ ನಂಬುವಂತೆ ವರ್ತಿಸುತ್ತಾ ಬಂದಿದ್ದಾರೆ. ಇದಕ್ಕೆ ಪರ್ಯಾಯವಾಗಿ ಈಗ ಯಡಿಯೂರಪ್ಪ ಲಿಂಗಾಯತ ವರ್ಗಕ್ಕಾಗಿ ಕರ್ನಾಟಕ ಜನತಾ ಪಾರ್ಟಿಯನ್ನು ಹುಟ್ಟು ಹಾಕಿದ್ದಾರೆ.

ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಲಿಷ್ಠ ಜಾತಿಗಳು ಅಧಿಕಾರ ಕೇಂದ್ರವನ್ನೂ ವಶಪಡಿಸಿಕೊಂಡು, ಆಡಳಿತ ಯಂತ್ರ, ಉದ್ದಿಮೆ-ಶಿಕ್ಷಣ, ಸಂಸ್ಕೃತಿಗಳಿಗೆ ಕೈ ಇಟ್ಟರೆ ಅದು ಪ್ರಜಾಪ್ರಭುತ್ವದ ಮೌಲ್ಯಗಳ ವಿರುದ್ಧ ಘೋಷಿಸುವ ಯುದ್ಧವೇ ಆಗಿರುತ್ತದೆ.

ಬಾಲಗಂಗಾಧರನಾಥರೂ ಕೂಡಾ ಪೇಜಾವರ, ಸುತ್ತೂರು ಸ್ವಾಮಿ... ಮುಂತಾದವರಂತೆ ಇಂತಹ ಯುದ್ಧ ನಡೆಸಿದ ಜಾತಿ ಸೇನಾನಿಯೆ!

ಬ್ರಾಹ್ಮಣ್ಯದೊಂದಿಗೆ ಕೆಟ್ಟ ಗೆಳೆತನ

ವೇದಾಗಮಗಳ ವಿರುದ್ಧ ಬಂದದ್ದು ಬೆಳೆದು ಬಂದಿರುವ ನಾಥಪಂಥದ ಆದಿಚುಂಚನಗಿರಿ ಕ್ಷೇತ್ರದ ಮಠಾಧೀಶರಾಗಿಯೂ ಬ್ರಾಹ್ಮಣ್ಯದ ಜೀವವಿರೋಧಿ ಸಿದ್ಧಾಂತಕ್ಕೆ ಬಾಲಗಂಗಾಧರನಾಥರೂ ಕೈಗೂಡಿಸಿದ್ದರು. ಆರ್‌ಎಸ್‌ಎಸ್ ಚಿಂತಕ ಗೋಲ್ವಾಳ್ಕರ್ ತನ್ನ ಚಿಂತನಗಂಗಾ ಪುಸ್ತಕದಲ್ಲಿ ಬ್ರಾಹ್ಮಣ್ಯದ ಹಿರಿಮೆಯನ್ನು ಎತ್ತಿ ಹಿಡಿಯುತ್ತಾ "ಶಿವನ ಭೂತಗಣವನ್ನು ನಾವು ಒಪ್ಪಲು ಸಾಧ್ಯವೆ?" ಎಂದು ಪ್ರಶ್ನಿಸಿ ನಾಥ, ಮತ್ತಿತರ ಪಂಥದವರನ್ನು ಗೇಲಿ ಮಾಡುತ್ತಾನೆ. ಆದರೆ ಇದೇ ನಾಥ ಪಂಥದ ಪರಂಪರೆಗೆ ಸೇರಿದ್ದ ಬಾಲಗಂಗಾಧರನಾಥರು ತಮ್ಮ ಜೀವನದುದ್ದಕ್ಕೂ ಥೇಟ್ RSS ಕಾರ್ಯಕರ್ತರಂತೆ ವರ್ತಿಸಿಬಿಟ್ಟರು. ವೈದಿಕರ ಮಾನ್ಯತೆಗಾಗಿ ಹಪಾಹಪಿಸುವವರಂತೆ ಅವರಿಗಿಂತ ನಾಲ್ಕು ಹೆಜ್ಜೆ ಮುಂದೆ ಸಾಗಿ ಬ್ರಾಹ್ಮಣ್ಯವನ್ನು ಪೋಷಿಸಿ ಬೆಂಬಲಿಸುವ ರೀತಿ ನಡೆದುಕೊಂಡರು.

2002 ರಲ್ಲಿ ಬೆಂಗಳೂರಿನಲ್ಲಿ ನಡೆದ RSSಸಮಾವೇಶವನ್ನು ಉದ್ಘಾಟಿಸಿ 'ಹಿಂದೂತ್ವ ಉಳಿಸಲು RSSನವರ ಕೈಗೆ ಮೆಷಿನ್‌ಗನ್ ಕೊಡಬೇಕು' ಎಂಬ ಕೆಟ್ಟ ಸಂದೇಶ ನೀಡಿದ್ದರು. ಗೋವಧೆ ನಿಷೇಧಿಸಬೇಕೆಂದು ಹಿಂದೂ ಕೋಮುವಾದಿಗಳ ಜೊತೆ ಸೇರಿ ಧರಣಿ ನಡೆಸಿದ್ದರು. ಈಗಿನ ಬಿಜೆಪಿ ಸರ್ಕಾರ ತರಲು ಉದ್ದೇಶಿಸಿರುವ ಗೋಹತ್ಯಾ ನಿಷೇಧದ ಕಾನೂನು ಈ ನಾಡಿನ ಲಕ್ಷಾಂತರ ರೈತರಿಗೆ ಮಾರಕವಾಗಿದ್ದಾಗಲೂ ಅದರ ವಿರುದ್ಧ ದನಿ ಎತ್ತದೆ ಸುಮ್ಮನಿದ್ದರು. ಸ್ವಾಮಿಗಳ ಶಾಲೆಗಳಲ್ಲಿ RSS ನವರು ಪ್ರವಚನ ನಡೆಸಲು, ವಿದ್ಯಾರ್ಥಿ ಯುವ ಜನರ ಶಾಖೆಗಳನ್ನು ಕಟ್ಟಲು ಮುಕ್ತ ಅವಕಾಶ ನೀಡಿದ್ದರು. ಹಿಂದೂ ಧರ್ಮ ಬಿಟ್ಟು ಹೋದವರನ್ನು ಮರುಮತಾಂತರ ಗೊಳಿಸುತ್ತೇನೆಂತಲೂ ಕೆಲದಿನ ಓಡಾಡಿದ್ದರು. ಕುವೆಂಪು ತರದವರನ್ನು ತಮ್ಮ ಜಾತಿಯ ಹೆಮ್ಮೆಯೆಂಬಂತೆ ಬಿಂಬಿಸುತ್ತಾ ಅವರ ಆಶಯಗಳನ್ನು ನಿರ್ಲಕ್ಷಿಸಿದರು. ಕೇಂದ್ರದಲ್ಲಿ ಬಿಜೆಪಿ ಸರ್ಕಾರವಿದ್ದಾಗ ವಿಮಾನಯಾನ ಸಚಿವರಾಗಿದ್ದ ಅನಂತ್‌ಕುಮಾರ್ ಮೂಲಕ ಲಾಬಿ ನಡೆಸಿ ವಿದೇಶಿ ಒಕ್ಕಲಿಗ ಭಕ್ತನೊಬ್ಬ ಕೊಟ್ಟಿದ್ದ ಹೆಲಿಕಾಪ್ಟರ್ ಅನ್ನು ತೆರಿಗೆಗಿರಿಗೆ ಕಟ್ಟದೆ ಇಲ್ಲಿಗೆ ತರಿಸಿಕೊಂಡಿದ್ದರು. ಒಂದು ಹಂತ ತಲುಪಿದ ಮೇಲೆ ಮಠ ಹೇಗಾಯಿತೆಂದರೆ ಅಧಿಕಾರದಲ್ಲಿರುವ ಪಕ್ಷ ಯಾವುದಾದರೇನು, ತನ್ನ ಕೆಲಸವಾದರೆ ಸಾಕೆಂಬ ಧೋರಣೆ ತಳೆಯಿತು. ರಾಜಕಾರಣಿಗಳು ಜಾತಿಯ ಹಂಗು ತೊರೆಯದಿದ್ದರೂ ಮಠ, ಪಕ್ಷಗಳ ಹಂಗು ತೊರೆದು ತಾನೇ ಅಧಿಕಾರದ ಕೇಂದ್ರದಂತೆ ವರ್ತಿಸಿತು. ಜೆಡಿಎಸ್‌ನ ದೇವೇಗೌಡ, ಬಿಜೆಪಿಯ ಅನಂತ್‌ಕುಮಾರ್ ಮಾತ್ರವಲ್ಲದೆ ಕಾಂಗ್ರೆಸ್‌ನ ಎಸ್.ಎಂ. ಕೃಷ್ಣ ಮೂಲಕವೂ ಅಮೆರಿಕ, ಶ್ರೀಲಂಕಾ, ಕಾಶಿ, ವಾರಣಾಸಿ, ಮಧ್ಯಪ್ರದೇಶಗಳಲ್ಲಿ ಎಕರೆಗಟ್ಟಲೆ ಜಮೀನು ಗಿಟ್ಟಿಸಿ ಮಠದ ಶಾಖೆಗಳನ್ನು ಎಬ್ಬಿಸಿತು.

ಈ ಪ್ರಕ್ರಿಯೆಯಲ್ಲಿ ಬಾಲಗಂಗಾಧರರು ಬಡ ಒಕ್ಕಲಿಗರ ಹಂಗನ್ನು ತೊರೆದರು. ನೈಸ್ ಯೋಜನೆಯ ಭೂಗಳ್ಳ ಅಶೋಕ್ ಖೇಣಿ ಬಡ ರೈತರ ಸಾವಿರಾರು ಎಕರೆ ಜಮೀನು ಕಸಿದು ಹಣ ಲೂಟಿ ಹೊಡೆಯುತ್ತಿದ್ದರೂ ಆತನಿಗೆ ಬೇಷರತ್ ಬೆಂಬಲ ನೀಡಿದರು. ಇದಕ್ಕೆ ಪ್ರತಿಫಲವೆಂಬಂತೆ ಮಠಕ್ಕೆ ಖೇಣಿಯಿಂದ 20 ಕೋಟಿ ರೂಪಾಯಿ ದೇಣಿಗೆ ಗಿಟ್ಟಿಸಿ ಅದೇ ಹಣದಲ್ಲಿ ಒಂದು ಹಾಸ್ಟೆಲ್ ಕಟ್ಟಿಸುವ ಕೆಲಸ ಶುರು ಮಾಡಿದ್ದರು.

ಬಹಳ ಮುಖ್ಯವಾಗಿ 1990 ರ ದಶಕದಿಂದೀಚೆಗೆ ದಕ್ಷಿಣ ಕರ್ನಾಟಕದಲ್ಲಿ ಒಕ್ಕಲಿಗ ಭೂಮಾಲೀಕ ವರ್ಗದ ಜಾತಿ ಸದೃಢೀಕರಣಗೊಂಡ ನಂತರ ದಲಿತ ಸಮುದಾಯದವರ ಮೇಲಿನ ಹಲ್ಲೆ ದೌರ್ಜನ್ಯಗಳು ಹೆಚ್ಚಾದವು. ಇದನ್ನು ಪ್ರತಿರೋಧಿಸಿದ ದಲಿತರು ಹಾಗೂ ಪ್ರಗತಿಪರರನ್ನು ಬಗ್ಗುಬಡಿಯಲು 'ಒಕ್ಕಲಿಗ ಹಿತರಕ್ಷಣಾ ಸಮಿತಿ', 'ನಾಗರಿಕ ವೇದಿಕೆ' ಮುಂತಾದ ಮೇಲ್ಜಾತಿ ಹಿಡಿತವನ್ನು ಕಾಪಾಡುವ ಕೆಲಸಗಳಿಗೆ ಮಠ ನೇರ ಪ್ರಚೋದನೆ ನೀಡುತ್ತಾ ಬಂದಿತ್ತು.

ಬಾಲಗಂಗಾಧರನಾಥ ಸ್ವಾಮಿಗಳು ತಮ್ಮ ಜೀವನಪೂರ್ತಿ ಅವಿಶ್ರಾಂತವಾಗಿ ದುಡಿದದ್ದು ನಿಜ. ಅವರ ನಾಯಕತ್ವದಲ್ಲಿ ಒಕ್ಕಲಿಗ ಸಮುದಾಯ ತನ್ನ ಸ್ಥಾನಮಾನ ಹೆಚ್ಚಿಸಿಕೊಂಡು, ರಾಜಕೀಯ ಅಧಿಕಾರ, ಸರ್ಕಾರದ ಮೇಲಿನ ನಿಯಂತ್ರಣ ಸಾಧಿಸಲು ತಕ್ಕಮಟ್ಟಿಗೆ ಯಶಸ್ವಿಯೂ ಆಗಿದೆ.

ಅದೇ ವೇಳೆಯಲ್ಲಿ ಅವರು ಒಂದು ಜನಾಂಗಕ್ಕೆ ಸಮಾನತೆಯ ಆಶಯ, ಪ್ರಜಾಪ್ರಭುತ್ವದ ಮೌಲ್ಯ, ಸಂವಿಧಾನ ಪ್ರತಿಪಾದಿಸುವ ಜಾತ್ಯತೀತತೆಯ ನಿಲುವುಗಳನ್ನು ಕಲಿಸುವ ಬದಲಾಗಿ ಬ್ರಾಹ್ಮಣಿಕೆಯ ಯಜಮಾನಿಕೆ ಒಪ್ಪುವ, ತಮ್ಮ ಮಠಕ್ಕೆ ಒಂದು ಕಾರ್ಪೊರೇಟ್ ಗುಣಸ್ವಭಾವಗಳನ್ನು ತುಂಬಲಷ್ಟೇ ಶ್ರಮಿಸಿದರೆಂಬುದು ಸತ್ಯ.

ಇದರಿಂದ ಹೆಚ್ಚು ಲಾಭ ಪಡೆದವರು ಒಕ್ಕಲಿಗ ಶ್ರೀಮಂತರು, ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ಹಿಂದೂತ್ವವಾದಿಗಳು.

ಸ್ವಾಮಿಗಳ ನಿರ್ಗಮನದಿಂದ ಶೂನ್ಯ ಭಾವ ಅನುಭವಿಸುತ್ತಿರುವವರು ಇವರೇನೆ.

• ಪಾರ್ವತೀಶ



ನಿರ್ಮಲನಂದನಾಥ
ಮುಳ್ಳ ಗದ್ದುಗೆ ಮೇಲೆ ಮುಗ್ಧ

ಮಕರ ಸಂಕ್ರಮಣದ ಆ ಸಂಜೆ ಕಾಲ ಭೈರವನ ...ಧಿಯಲ್ಲಿ ಶೋಕತಪ್ತ ಶಾಖಾ ಸ್ವಾಮಿಗಳು ಮತ್ತು ...ನಾಂಗದ ಪ್ರಮುಖರೆದುರು ಕಾಲೈಕ್ಯ ಬಾಲಗಂಗಾಧರ ...ಥರು ಬರೆದಿಟ್ಟಿದ್ದ ವಿಲ್ಲನ್ನು ಉಧೋ ಕಂಠದಿಂದ ಓದಿ ...ಳುತ್ತಿದ್ದ ಪುರುಷೋತ್ತಮನಾಥರು ಇನ್ನೇನು ಎಂಟನೇ ...ಟವನ್ನು ಓದಬೇಕೆನ್ನುವಷ್ಟರಲ್ಲಿ ಮೂಲೆಯಿಂದ ...ಜ್ಞಾತಸದೃಶ ಧ್ವನಿಯೊಂದು ಕೇಳಿಬಂತು.

'ಸಾಕು ಬಿಡ್ರೀ...! ಮಿಕ್ಕಿದ್ದೆಲ್ಲಾ ಓದ್ತಾ ಕುಂತ್ಕಂಡ್ರೆ ...ಮಾಗ್ತದೆ. ಇಪ್ಪತ್ತೆರಡನೆ ಪುಟಕ್ಕೆ ಬನ್ನಿ. ಅದೇ ತಾನೇ ...ಪಾರ್ಟೆಂಟು...?'

ಒಂದುಕ್ಷಣ ಇಡೀ ಸಭಾಂಗಣ ಆದೇಶವಿತ್ತ ಆ ...ತಧಾರಿಯತ್ತ ತಿರುಗಿ ನೋಡಿತು. ಕುರುಚಲು ಗಡ್ಡ ...ಟಾಗಿ ತೀಡಿ ಬಾಚಿದ ಕ್ರಾಪು, ಹಣೆ ಒಪ್ಪಾಗಿ ಮೆತ್ತಿದ್ದ ...ಧದ ಬೊಟ್ಟು, ಮುಖದ ತುಂಬ ಮದ ಬಿಂಬ. ...ದು ಮನ್ಮಥರೂಪಿ ಶೇಖರ್‌ಸ್ವಾಮಿ ಅರ್ಥಾತ್ ...ಕಾಶನಾಥ ಸ್ವಾಮಿ.

ಆದಿಚುಂಚನಗಿರಿ ಕಾಲಭೈರವನ ಸನ್ನಿಧಿಯಲ್ಲಿ ಆವತ್ತು ...ದಿದ್ದ ಮಹಾರಥಿಗಳಾದರೂ ಎಂತೆಂಥವರು. ಮಾಜಿ



...ಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯ ...ಂತ್ರಿ ಆರ್. ಅಶೋಕ್, ಮಂಡ್ಯ ಸಂಸದ ಚೆಲುವರಾಯ ...ಮಿ, ಮಂತ್ರಿ ಸಿ.ಟಿ. ರವಿ, ಮಾಗಡಿ ಶಾಸಕ ಬಾಲಕೃಷ್ಣ, ...ಎಸ್ ಶಾಸಕ ಜಮೀರ್ ಅಹ್ಮದ್, ಆದಿಚುಂಚನಗಿರಿ ...ಸ್ತುವಾರಿ ಸ್ವಾಮಿ ಭೈರವನಾಥರು, ಮಂಡ್ಯದ ಶಾಖಾಮಠದ ...ರುಷೋತ್ತಮನಾಥರು, ಮಂಗಳೂರು ಶಾಖಾಮಠದ ...ರ್ಮಪಾಲ ಸ್ವಾಮೀಜಿ, ವಿಜಯನಗರದ ಸೌಮ್ಯನಾಥ ...ಮೀಜಿ, ತುರುವೇಕೆರೆ ಶಾಖಾಮಠದ ಶಿವಕುಮಾರನಾಥ ...ಮಿ, ಶಿವಮೊಗ್ಗ ಶಾಖಾ ಮಠದ ಪ್ರಸನ್ನನಾಥ ಸ್ವಾಮಿ, ...ಶಿ ಮಠದ ವಿದ್ಯಾಧರ ನಾಥರು, ಚಿಕ್ಕಬಳ್ಳಾಪುರದ ...ಂಗಳನಾಥ ಮತ್ತು ಕುಂಚಿಟಿಗರ ನಂಜಾವಧೂತ.

[illegible]

ಆಗಷ್ಟೇ ಬ್ಯಾಂಕ್ ಲಾಕರಿನಿಂದ ಮಂಡ್ಯದ ಜಿಲ್ಲಾಧಿಕಾರಿ ...ಷ್ಣಯ್ಯರೇ ನಿಂತು ತಂದಿದ್ದ ಬಾಲಗಂಗಾಧರನಾಥರು ...ರೆದಿದ್ದ ವಿಲ್ಲಿನ ಇಪ್ಪತ್ತೆರಡನೇ ಪುಟದಲ್ಲೇ ತಮ್ಮ ...ತ್ತರಾಧಿಕಾರಿ ಯಾರಾಗಬೇಕೆಂಬುದರ ಉಲ್ಲೇಖವಿದೆ ಎಂಬುದಾಗಲಿ, ಮಿಕ್ಕ ಪುಟಗಳನ್ನು ವ್ಯರ್ಥ ಓದುವುದು ಕಾಲಹರಣ ಎಂದಾಗಲಿ, ನಿರ್ಮಲನಾಥರೇ ತಮ್ಮ ಉತ್ತರಾಧಿಕಾರಿಯೆಂದು ಬಾಲಗಂಗಾಧರನಾಥರು ಒಟ್ಟು 25 ಪುಟಗಳ ವಿಲ್ಲಿನ ಇಪ್ಪತ್ತೆರಡನೇ ಪುಟದಲ್ಲಿ ಬರೆದಿಟ್ಟ ಸಂಗತಿಯಾಗಲಿ; ಮಿಕ್ಕೆಲ್ಲರನ್ನೂ ಬಿಟ್ಟು ಶೇಖರ್ ಸ್ವಾಮೀಜಿಗೆ ಮಾತ್ರವೇ ಯಾವ ಮಾಯೆಯಿಂದ ಗೊತ್ತಾಗಲು ಸಾಧ್ಯ?

ಆದಿಚುಂಚನಗಿರಿಯ ಕಾಲಭೈರವನ ಗುಡಿಯ ಪಕ್ಕದಲ್ಲೇ ನಿಶ್ಚಲವಾಗಿ ಮಲಗಿದ್ದ ಬಾಲಗಂಗಾಧರನಾಥರ ಪಾರ್ಥಿವದ ಸುತ್ತ ಭಕ್ತಾದಿಗಳು ಕಣ್ಣೀರಿಡುತ್ತಿದ್ದರೆ ಒಳಗೆ ವಿಲ್ಲಿನ ವಾಚನದಲ್ಲಿ ತಲ್ಲೀನರಾಗಿದ್ದ ಮೂವತ್ತಕ್ಕೂ ಅಧಿಕ ಶಾಖಾ ಸ್ವಾಮಿಗಳೆಲ್ಲ ಪರಸ್ಪರ ಪ್ರಶ್ನಾರ್ಥಕವಾಗಿ ಮುಖ ನೋಡಿಕೊಂಡರು.

ಇದರರ್ಥ ಬಾಲಗಂಗಾಧರನಾಥರು ಬರೆದಿಟ್ಟಿದ್ದ 25 ಪುಟಗಳ ವಿಲ್ಲಿನ 22ನೇ ಪುಟದಲ್ಲೇ ಉತ್ತರಾಧಿಕಾರಿಯ ಉಲ್ಲೇಖ ಇರುವುದನ್ನು ಮೊದಲೇ ತಿಳಿದಿದ್ದ ಏಕೈಕ ವ್ಯಕ್ತಿ ಶೇಖರ್‌ಸ್ವಾಮಿ. ಪುರುಷೋತ್ತಮನಾಥರು ಓದುತ್ತಿದ್ದ ವಿಲ್ಲನ್ನು ಶೇಖರ್‌ಸ್ವಾಮಿ ನೋಡದೆಯೇ ಹೇಳುತ್ತಿದ್ದಾರೆಂದರೆ ಒಂದೋ ಬಾಲ ಗಂಗಾಧರನಾಥರು ವಿಲ್ ಶೇಖರ್‌ಸ್ವಾಮಿ ಸಮ್ಮುಖ ದಲ್ಲೇ ಬರೆದಿರಬೇಕು ಅಥವಾ ಅದನ್ನು ಶೇಖರ್‌ಸ್ವಾಮಿಯೇ ಹೇಳಿ ಬರೆಸಿರಬೇಕು. ವಿಲ್ ಬರೆದ ಸನ್ನಿವೇಶವಾದರೂ ಎಂಥಾದ್ದು?

ಬಾಲಗಂಗಾಧರನಾಥರ ಎರಡೂ ಕಿಡ್ನಿಗಳು ವಿಫಲಗೊಂಡಿದ್ದು ಇಲ್ಲಿಗೆ ಆರು ವರ್ಷಗಳ ಹಿಂದೆಯೇ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಸ್ವಾಮೀಜಿ ಹೆಚ್ಚು ಕಮ್ಮಿ ಅರೆಪ್ರಜ್ಞಾವಸ್ಥೆಯಲ್ಲೇ ಕಾಲ ಸಾಗಿಸಿದ್ದಾರೆ. ಪ್ರತಿ ಮೂರು ದಿನಕ್ಕೊಮ್ಮೆ ಡಯಾಲಿಸಿಸ್‌ಗೆ ಒಳಪಡಲೇಬೇಕು. ಡಯಾಲಿಸಿಸ್‌ನ ಮರುದಿನ ಪೂರ್ತಿ ಪ್ರಜ್ಞಾಹೀನರಾಗಿದ್ದು ಚೇತರಿಸಿಕೊಂಡರೆ ಮಿಕ್ಕ ಒಂದು ದಿನ ಪೂರ್ತಿ ಮರುದಿನದ ಡಯಾಲಿಸಿಸ್‌ಗೆ ಅಣಿಯಾಗಬೇಕು. ಇನ್ನು ನಡೆಯಲಾಗದ, ನೋಡಲ ಸಮರ್ಥ್ಯ ಅರೆಬರೆ ಪ್ರಜ್ಞೆಯ, ಶಯ್ಯಾಗ್ರಸ್ತ ಸ್ವಾಮೀಜಿಗೆ ನಿಜಕ್ಕೂ ವಿಲ್ ಬರೆಯುವ ಸಾಮರ್ಥ್ಯವಿತ್ತೆ, ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವಷ್ಟು ಚೈತನ್ಯವಿತ್ತೆ, ಇಡೀ ಮಠದ ಭವಿಷ್ಯ ತನ್ನ ನಂತರ ಏನಾಗಬೇಕೆಂದು ನಿರ್ಧರಿಸುವಷ್ಟು ಆರೋಗ್ಯವಿತ್ತೆ?

ಅತ್ಯಂತ ಕಿರಿಯ

ವಿಲ್ ಬರೆದದ್ದು ಇಲ್ಲಿಗೆ ಮೂರು ವರ್ಷದ ಹಿಂದೆ. ಸ್ವಾಮೀಜಿ ಇಂಥ ಅಸಹಾಯಕ ಪರಿಸ್ಥಿತಿಯನ್ನೇ ಕಾದು ಶೇಖರ್‌ಸ್ವಾಮಿ ಏಕೆ ತನ್ನ ಬೇಳೆ ಬೇಯಿಸಿಕೊಂಡಿರಬೇಡ? ಈಗ ಉತ್ತರಾಧಿಕಾರಿಯಾದ ನಿರ್ಮಲಾನಂದನಾಥರು ಬಾಲ ಗಂಗಾಧರನಾಥರಿಗಿಂತಲೂ ಆತನ ಆಯ್ಕೆಯಾಗಿರಬಹುದೆ? ಅನಾರೋಗ್ಯದ ಅಸಹಾಯಕ ಪರಿಸ್ಥಿತಿಯಲ್ಲಿರುವ ಸ್ವಾಮಿಯನ್ನು ತನ್ನ ಕಪಿಮುಷ್ಠಿಯಲ್ಲಿಟ್ಟು ಕೊಂಡೇ ತನ್ನ ಕೈಗೊಂಬೆ ಉತ್ತರಾಧಿಕಾರಿಯನ್ನು ಶೇಖರ್‌ಸ್ವಾಮಿ ಪ್ರತಿಷ್ಠಾಪಿಸಿರಬಹುದೆ? ಜೊತೆಗೆ ಕೋಟಿಗಟ್ಟಲೆ ಆದಾಯವುಳ್ಳ ಮೆಡಿಕಲ್ ಕಾಲೇಜು, ಆಯುರ್ವೇದಿಕ್ ಕಾಲೇಜು, ಗ್ಲೋಬಲ್ ಆಸ್ಪತ್ರೆ, ಇಂಟರ್‌ನ್ಯಾಷನಲ್ ಸ್ಕೂಲ್ ಇತ್ಯಾದಿಗಳನ್ನೆಲ್ಲ ಮಠದಿಂದ ಪ್ರತ್ಯೇಕಿಸಿ ತನ್ನದೇ ಅಧಿಪತ್ಯದ ಟ್ರಸ್ಟಿಗೊಳಪಡುವಂತೆ ಶೇಖರ್‌ಸ್ವಾಮಿ ಕಾರ್ಯ ಸಾಧಿಸಿರಬಹುದೆ?

ಇಂಥ ಅನೇಕಾನೇಕ ಪ್ರಶ್ನೆಗಳು, ಗುಮಾನಿಗಳಿಗೆಲ್ಲ ಮಕರ ಸಂಕ್ರಮಣದ ಕಾಲಭೈರವನ ಸನ್ನಿಧಿಯೇ ಉತ್ತರ ಕಲ್ಪಿಸಿರಬಹುದು. ಇಲ್ಲದಿದ್ದರೆ ಬಾಲಗಂಗಾಧರನಾಥರ ವಿಲ್ಲಿನ ಇಂಥದ್ದೇ ಪುಟದಲ್ಲಿ ಇಂಥದ್ದೇ ಉಲ್ಲೇಖವಿದೆ ಎಂಬುದು ಶೇಖರ್‌ಸ್ವಾಮಿಗೆ ಮಾತ್ರವೇ ಹೇಗೆ ಗೊತ್ತಿರಲು ಸಾಧ್ಯ?

ಇದೆಲ್ಲ ಒತ್ತಟ್ಟಿಗಿರಲಿ. ಬಾಲಗಂಗಾಧರನಾಥರ ಉತ್ತರಾಧಿಕಾರಿ ನಿರ್ಮಲಾನಾಥರ ಆಯ್ಕೆಯ ಹಿಂದಿರುವ ಪುರುಷಾರ್ಥವಾದರೂ ಏನು?

ಹಾಗೆ ನೋಡಿದರೆ ನಿರ್ಮಲನಾಥರು ಈಗಿರುವ ಬಹುತೇಕ ಶಾಖಾ ಸ್ವಾಮಿಗಳಿಗಿಂತ ಕಿರಿಯ ಮತ್ತು ಅನುಭವದಲ್ಲಿ ಹೊಸಬ. ಅವರು ಮಠಕ್ಕೆ ಸೇರ್ಪಡೆಯಾಗಿದ್ದೇ 1996 ರಲ್ಲಿ. ಅನುಭವದಲ್ಲಿ ಹಿರೀಕರಾದ ಪುರುಷೋತ್ತಮ ನಾಥರಿದ್ದರು. ಆ ಕಾಲದಿಂದಲೂ ಬಾಲಗಂಗಾಧರನಾಥರಿಗೆ ಸರಿಸಮನಾಗಿ ನಿಂತು ಮಠ ಕಟ್ಟಿದ ತುರುವೇಕೆರೆ ಶಾಖಾಧಿಪತಿ ಶಿವಕುಮಾರನಾಥರಿದ್ದರು. ಅನುಭವ ಮತ್ತು ವರ್ಚಸ್ಸಿನಲ್ಲಿ ವಿಜಯನಗರದ ಸೌಮ್ಯನಾಥ ಸ್ವಾಮೀಜಿ ಇವರಿಬ್ಬರಿಗಿಂತಲೂ ಒಂದು ತೂಕ ಹೆಚ್ಚು, ಕಾಶಿ ಮಠದ ವಿದ್ಯಾಧರನಾಥ ಸ್ವಾಮಿ, ಶಿವಮೊಗ್ಗದ ಪ್ರಸನ್ನನಾಥರು, ಚುಂಚನಗಿರಿಯ ಭೈರವನಾಥ ಸ್ವಾಮೀಜಿ, ಇತ್ಯಾದಿ ಆ ಕಾಲದಿಂದಲೂ ಮಠಕ್ಕಾಗಿ ಜೀವ ತೇದವರನ್ನೆಲ್ಲ ಬಿಟ್ಟು ಅವರೆಲ್ಲರಿಗಿಂತಲೂ ಕಿರಿಯರಾದ ನಿರ್ಮಲಾನಂದನಾಥರನ್ನೇ ಆಯ್ದುಕೊಂಡಿದ್ದೇಕೆ?

ಈ ಪ್ರಶ್ನೆಗೆ ನಿರ್ಮಲಾನಂದನಾಥರ ವ್ಯಕ್ತಿತ್ವವೇ ಉತ್ತರ ನೀಡುತ್ತದೆ. ನಿರ್ಮಲನಾಥರು ಹುಟ್ಟಿದ್ದು 1969 ರ ಜುಲೈ 20 ರಂದು. ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಸಿ.ಎಸ್. ಪುರ ಹೋಬಳಿಯ ಚೀರನಹಳ್ಳಿ ಅವರ ಹುಟ್ಟೂರು. ತಂದೆ ನರಸೇಗೌಡ ಮತ್ತು ನಂಜಮ್ಮ ದಂಪತಿಗಳ ಆರು ಮಕ್ಕಳ ಪೈಕಿ ನಾಲ್ಕನೆಯವರಾದ ನಾಗರಾಜುವೇ ಈಗಿನ ನಿರ್ಮಲಾನಂದನಾಥ ಸ್ವಾಮೀಜಿ. ಹನುಮಂತ ಮತ್ತು ಕೆಂಪಮ್ಮ ಎಂಬ ಸಹೋದರಿಯರಲ್ಲದೆ ಆಂಜನೇಯ, ಕೃಷ್ಣಮೂರ್ತಿ ಮತ್ತು ಚಂದ್ರಶೇಖರಯ್ಯ ಎಂಬ ಮೂವರು ಸಹೋದರರಿದ್ದಾರೆ. ಇಡೀ ಕುಟುಂಬಕ್ಕೆ ಜೀವನಾಧಾರ ಅಂತಿದ್ದರೆ ಅದು ಚೀರನಹಳ್ಳಿಯಲ್ಲಿರುವ ಎರಡೆಕರೆ ಭೂಮಿ ಮಾತ್ರ.

[illegible]

ಇದಕ್ಕಿಂತಲೂ ಹೀನಾಯವೆಂದರೆ ನಾಗರಾಜು ಬಾಲ್ಯದಲ್ಲೇ ತಂದೆಯನ್ನು ಕಳಕೊಂಡು ಅನಾಥರಾದದ್ದು!

ತಂದೆ ತೀರಿಕೊಂಡ ನಂತರ ಕೆಲಕಾಲ ತಾಯಿಯ ತವರೂರು ಮಣಕುಪ್ಪೆಯಲ್ಲಿದ್ದ ನಾಗರಾಜ್ ಕುಟುಂಬ ಕ್ರಮೇಣ ತಂದೆಗಿದ್ದ ಎರಡೆಕರೆಯನ್ನು ನಂಬಿ ಚೀರನಹಳ್ಳಿಗೆ ಬಂತು. ಕಿತ್ತು ತಿನ್ನುವ ಬಡತನ, ತಂದೆಯಿಲ್ಲದ ತಬ್ಬಲಿತನ, ಫೀಜು ಕಟ್ಟುವುದಕ್ಕೂ ಗತಿಯಿಲ್ಲದ ಅವಮಾನ- ಎಲ್ಲವೂ ಅಸಾಧ್ಯ ಛಲವಾಗಿ ನಾಗರಾಜನಲ್ಲಿ ಹೆಪ್ಪುಗಟ್ಟಿದ್ದು, ಇಂಥಾ ದುರ್ಗತಿಗೂ ಧೃತಿಗೆಡದ ತಾಯಿ ನಂಜಮ್ಮ ಹಗಲಿರುಳೆನ್ನದೆ ಕೂಲಿನಾಲಿ ಮಾಡಿ ತನ್ನ ಮಕ್ಕಳನ್ನು ಪೊರೆದದ್ದು ಮುಂದೆ ಬೇರೆಯದೇ ಉತ್ಥಾನವೊಂದಕ್ಕೆ ದಾರಿಯಾಯಿತು.



ಖದೀಮ ಶೇಖರ್‌ಸ್ವಾಮಿ

ಚೀರನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ತನ್ನ ಪ್ರಾಥಮಿಕ ಶಿಕ್ಷಣ ಮುಗಿಸಿದ ನಾಗರಾಜ್ ಓದಿದ್ದು ಕನ್ನಡ ಮಾಧ್ಯಮದಲ್ಲಿ. ಪಕ್ಕದ ಮಾವಿನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಮುಗಿಸಿದ ನಂತರ ಸಿವಿಲ್ ಇಂಜಿನಿಯರಿಂಗ್ ಡಿಪ್ಲೋಮಾಗೆಂದು ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಸೇರಿಕೊಂಡರು. ಕಠಿಣ ಪರಿಶ್ರಮದ ಫಲವಾಗಿ ನಾಗರಾಜ್‌ಗೆ ಏಳನೇ ರ್‍ಯಾಂಕು ದಕ್ಕಿತ್ತು. ಅದರ ಫಲವಾಗಿ ಜಿಂದಾಲ್ ಫೌಂಡೇಶನ್ನಿನ ಸ್ಕಾಲರ್‌ಶಿಪ್ ಸಿಕ್ಕಿತು. ಅದನ್ನೇ ಜೀವದಾಯಿನಿದಂತೆ ಬಳಸಿಕೊಂಡು ಮೈಸೂರು NIE ಅಂದರೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸೇರಿ ಬಿ.ಇ. ಮುಗಿಸಿಕೊಂಡರು. ಆಗ ನಾಗರಾಜ್‌ಗೆ ಆಸರೆಯಾಗಿದ್ದು ಮೈಸೂರಿನ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯ. ಆ ನಂತರ ಚೆನ್ನೈನ IIT ಸೇರಿಕೊಂಡು ಎಂ.ಟೆಕ್ ಮುಗಿಸಿಕೊಂಡರು.

ಕೆಲಕಾಲ ಪುಣೆಯ ಇಂಡಿಯನ್ ರೀಸರ್ಚ್ ಸೆಂಟರ್‌ನಲ್ಲಿ ವಿಜ್ಞಾನಿಯಾಗಿ ಕಾರ್ಯ ನಿರ್ವಹಿಸಿದ ನಿರ್ಮಲನಾಥರ ವ್ಯಕ್ತಿತ್ವ ಪ್ರಕಟಗೊಂಡಿದ್ದು ಈ ಹಂತದಲ್ಲೇ. ಮನಸ್ಸು ಮಾಡಿದ್ದರೆ ಲಕ್ಷಾಂತರ ರೂಪಾಯಿಗಳ ಸಂಬಳ ಗಿಟ್ಟಿಸುವ ಜಲ ತಜ್ಞರಾಗಬಹುದಿತ್ತು, ಅವರ ಮೆರಿಟ್‌ಗೆ ಯಾವುದಾದರೂ ಐಟಿ ಕಂಪೆನಿಯಲ್ಲೋ, ವಿದೇಶಿ ಸಂಸ್ಥೆಯಲ್ಲೋ ಲಕ್ಷಗಟ್ಟಲೆ ಸಂಬಳ ಸಿಗುವುದು ಕಷ್ಟವಾಗಿರಲಿಲ್ಲ. ಆದರೆ ನಾಗರಾಜ್ ಆಯ್ದುಕೊಂಡದ್ದು ಆಧ್ಯಾತ್ಮವನ್ನು. ಎಲ್ಲಾ ತೊರೆದು ಆದಿಚುಂಚನಗಿರಿಯ ಸಂಸ್ಕೃತ ವೇದಾಗಮ ಕಾಲೇಜನ್ನು ಸೇರಿಕೊಂಡ ನಾಗರಾಜ್‌ರ ವಿಚಿತ್ರ ವರ್ತನೆ ಶುರುವಿನಲ್ಲಿ ಯಾರಿಗೂ ಅರ್ಥವಾಗಲಿಲ್ಲ.

>>12

ಡಿಸಿಎಂ ಅಶೋಕ್, ನೈಸ್ ಖೇಣಿ, ಡೀಕೆ: ಇತ್ಯಾದಿ

ಸದ್ಯ ನಿರ್ಮಲನಾಥರು ಹೊಸ ಪೀಠಾಧಿಪತಿಯಾದರೂ ...ಶಕ್ಕಂಟಿದ ಅಪಾಯವೇನೂ ತಪ್ಪಿಲ್ಲ.


ಏಕೆಂದರೆ ಮಠ ಈಗ ಆಸ್ತಿ ಮತ್ತು ಆಧ್ಯಾತ್ಮದ ...ಷಯದಲ್ಲಿ ಇಬ್ಭಾಗವಾಗಿದೆ. ಕೋಟಿಗಟ್ಟಲೆ ಆದಾಯ ...ವ ಆಸ್ಪತ್ರೆ, ರೆಸಿಡೆನ್ಷಿಯಲ್ ಸ್ಕೂಲು, ಕಾಲೇಜು ...ಸಮೂಹಗಳನ್ನೆಲ್ಲ ಮಠದಿಂದ ಪ್ರತ್ಯೇಕಿಸಿ ಬಿಜಿಎಸ್ ...ೋಬಲ್ ಟ್ರಸ್ಟ್ ರಚಿಸಿ ಅದಕ್ಕೆ ಶೇಖರ್‌ಸ್ವಾಮಿಯನ್ನೇ ...ನೇಜಿಂಗ್ ಟ್ರಸ್ಟಿಯನ್ನಾಗಿ ಮಾಡಲಾಗಿದೆ. ಮಿಕ್ಕಂತೆ ...ಠ ಮತ್ತು ಶಾಖಾಮಠಗಳ ಪ್ರತ್ಯೇಕ ಸಮೂಹ ...ಗೇ ಇದೆ. ಹೆಸರಿಗೆ ಪೀಠಾಧಿಪತಿ ನಿರ್ಮಲ ...ಥರೇ ಮಠ ಮತ್ತು ಬಿಜಿಎಸ್ ಗ್ಲೋಬಲ್ ...ಗೆ ಮುಖ್ಯಸ್ಥರಾದರೂ ಬಿಜಿಎಸ್ ಟ್ರಸ್ಟ್‌ನ ...ಕಳಿತ ಸೂತ್ರ ಪೂರ್ತಿ ಕಾನೂನು ರೀತ್ಯ ...ಖರ್ ಸ್ವಾಮಿಯ ಹಿಡಿತಕ್ಕೊಳಪಟ್ಟಿದೆ.

...ಮುಂದೊಮ್ಮೆ ಯಾವುದೇ ಆಸ್ತಿಯನ್ನೋ, ...ೀಜನ್ನೋ, ಅದರ ಆಸ್ತಿಯನ್ನೋ ಟ್ರಸ್ಟಿನಿಂದ ವರ್ಗಾಯಿಸಿ ...ಳುವ ಸಂಪೂರ್ಣ ಅಧಿಕಾರ ಇವತ್ತಿಗೂ ಶೇಖರ್‌ಸ್ವಾಮಿ ...ಲ್ಲೇ ಉಳಿದುಬಿಟ್ಟಿವೆ. ಇದರರ್ಥ ಪೂರ್ತಿ ...ತಂತ್ರ ಏನನ್ನೂ ನಿರ್ಮಲನಾಥರಿಗೆ ಸಿಕ್ಕಿಲ್ಲ.

ಇದರ ವಾಸನೆ ಮೊದಲೇ ಮಾಜಿ ಮುಖ್ಯಮಂತ್ರಿ ಕುಮಾರಣ್ಣನಿಗಿದ್ದಿರಬೇಕು. ಶೇಖರ್‌ಸ್ವಾಮಿಯೇನಾದರೂ ಉತ್ತರಾಧಿಕಾರಿ ಆಗಿಬಿಟ್ಟರೆ ಮಠಕ್ಕೇ ಬಹಿಷ್ಕಾರ ಹಾಕುವ ನಿರ್ಧಾರದಲ್ಲೇ ಸಂಸದ ಚಲುವರಾಯಸ್ವಾಮಿ, ಶಾಸಕ ಬಾಲಕೃಷ್ಣ ಜಮೀರ್ ಅಹ್ಮದ್ ಜೊತೆ ಸೇರಿ ಕಾಲಭೈರವನ ಸನ್ನಿಧಿಗೆ ಬಂದಿದ್ದರು. ದೇವೇಗೌಡರನ್ನು ವ್ಯವಸ್ಥಿತವಾಗಿ ಸ್ವಾಮೀಜಿಯಿಂದ ದೂರ ಮಾಡಿದ್ದೇ ಶೇಖರ್‌ಸ್ವಾಮಿ. ನೈಸ್ ಖೇಣಿ ಯನ್ನು ಅಂಬಿ ಮೂಲಕ ಮಠಕ್ಕೆ ಬಿಟ್ಟುಕೊಂಡಿದ್ದು, ಕ್ರಮೇಣ ಪರ್ಯಾಯ ಮಠ ಹುಟ್ಟಿಕೊಳ್ಳಲು ಕಾರಣನಾಗಿದ್ದು, ಜನಾಂಗದ ಅನೇಕ ಮುಖಂಡರು ಮಠದಿಂದ ದೂರವಿರುವಂತೆ ಮಾಡಿದ್ದರ ಹಿಂದಿದ್ದದ್ದು ಶೇಖರ್‌ಸ್ವಾಮಿಯೆ.







ತೀರ ಇತ್ತೀಚೆಗೆ ಶೇಖರ್‌ಸ್ವಾಮಿ ಎಸಗಿದ ಮತ್ತೊಂದು ಅನಾಹುತವೆಂದರೆ ಇಡೀ ಮಠದ ಹಿಡಿತವನ್ನು ಡಿಸಿಎಂ ಆರ್.ಅಶೋಕ್ ಕೈಗೊಪ್ಪಿಸಿದ್ದು, ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ಆದಿಚುಂಚನಗಿರಿ ಮಠಕ್ಕೆ ಅಶೋಕ್ ಅನಧಿಕೃತ ಅಂಗರಕ್ಷಕನಂತೆ ವರ್ತಿಸತೊಡಗಿದರು. ಶಾಖಾ ಮಠದ ಯಾವೊಬ್ಬ ಸ್ವಾಮಿಗೂ ಶೇಖರ್‌ಸ್ವಾಮಿಯ ಆಧಿಪತ್ಯ ಇಷ್ಟವಿಲ್ಲ, ಶೇಖರ್‌ಸ್ವಾಮಿಗೆ ಇಡೀ ಮಠದ ಸಮಸ್ತ ಸ್ವಾಮಿಗಳೆದುರು ಮುಖವೇ ಉಳಿದಿಲ್ಲ, ಮನೆಗೆ ಯಜಮಾನನಂತಿದ್ದ ಬಾಲಗಂಗಾಧರನಾಥರೇ ಇಲ್ಲವಾದ ಮೇಲೆ ಹೇಗೆ ಅರಾಜಕ ಫಜೀತಿಯಾಯಿತೆಂದರೆ- ಸ್ವಾಮಿಯ ಶವಸಂಸ್ಕಾರದಲ್ಲೂ ಗೊಂದಲ. ಸತ್ತ ಸುದ್ದಿ ಹೊರಗೆಡಹು ವುದಕ್ಕೂ ಅನುಮಾನ, ಶವಯಾತ್ರೆಯಲ್ಲೂ ಅವ್ಯವಸ್ಥೆ, ಧಾರ್ಮಿಕ ವಿಧಿವಿಧಾನಗಳಲ್ಲೂ ಅಸ್ಪಷ್ಟತೆ. ಇದನ್ನೆಲ್ಲ ಲೆಕ್ಕ ಹಾಕಿಯೇ ಡಿ.ಕೆ. ಶಿವಕುಮಾರ್ ಥರದವರು ದೂರ ಉಳಿದದ್ದು!





ಮುಳ್ಳ ಗದ್ದುಗೆ..

10<<<

1995 ರ ಹೊತ್ತಿಗೆ ಎಂ.ಟೆಕ್ ಪದವೀಧರ, ಉದಯೋನ್ಮುಖ ವಿಜ್ಞಾನಿ ನಾಗರಾಜ್ ಅದ್ವೈತ ವಿದ್ವತ್ ಪದವೀಧರರಾಗಿದ್ದರು. ಕೆಲಕಾಲ ಆದಿಚುಂಚನಗಿರಿ ಮಠವೇ ನಡೆಸುತ್ತಿದ್ದ ರಾಮನಗರದ ಅರ್ಚಕರ ಹಳ್ಳಿಯ ಅಂಧರ ಶಾಲೆಯಲ್ಲಿ ಸೇವಾರ್ಥಿಯಾಗಿ ದುಡಿದರು.

ನಿರ್ಮಲಾನಂದನಾಥ

ಮಾತಿನಲ್ಲಿ ನಿಖರತೆ, ನಿಷ್ಕಲ್ಮಷ ಮುಖಭಾವ, ವೈಚಾರಿಕ ಸ್ಪಷ್ಟತೆ, ಆಧ್ಯಾತ್ಮದತ್ತ ಆಕರ್ಷಣೆ ಮತ್ತು ಕರ್ತವ್ಯದಲ್ಲಿ ಪ್ರಾಮಾಣಿಕತೆಯೇ ನಿರ್ಮಲನಾಥರ ವೈಶಿಷ್ಟ್ಯವಾಗಿತ್ತು. ಅದನ್ನು ಸೂಕ್ಷ್ಮವಾಗೇ ಗಮನಿಸಿದ್ದ ಬಾಲಗಂಗಾಧರನಾಥರಿಗೆ ದಿನೇದಿನೇ ನಿರ್ಮಲಾನಂದನಾಥರ ಮೇಲಿನ ಅಕ್ಕರೆ ಹೆಚ್ಚುತ್ತಲೇ ಇತ್ತು. 1997 ರ ಅದೊಂದು ದಿನ ಕರೆಸಿಕೊಂಡು ಕೇಳೇಬಿಟ್ಟರು. 'ಕ್ಷಣಿಕ ಸುಖವನ್ನು ನೀನು ತೊರೆಯುತ್ತೀಯಾ ಅಂದರೆ ಕೋಟ್ಯಂತರ ಜನಕ್ಕೆ ದಾರಿದೀಪವಾಗ್ತೀಯಾ, ಚೆನ್ನಾಗಿ ಯೋಚಿಸಿ ನಿರ್ಧರಿಸು...'

ತಾಯಿ ಪಡುತ್ತಿದ್ದ ಕಷ್ಟ, ಅಣ್ಣ ತಮ್ಮಂದಿರ ನಿರುದ್ಯೋಗ, ವಂಶಪಾರಂಪರ್ಯವಾಗಿ ಕಾಡುತ್ತಿದ್ದ ದಾರಿದ್ರ್ಯ ಇತ್ಯಾದಿಗಳ್ಯಾವುದೂ ನಾಗರಾಜ್ ನಿರ್ಧಾರವನ್ನು ಕರಗಿಸಲಿಲ್ಲ. ಬಾಲಗಂಗಾಧರನಾಥರಿಗೂ ಅದೇ ಬೇಕಿತ್ತೇನೊ. ಅದೊಮ್ಮೆ ನಾಗರಾಜ್ ತಾಯಿಗೆ ಫೋನ್ ಮಾಡಿ 'ಅಮ್ಮಾ ನಿನ್ನ ಆರು ಮಂದಿ ಮಕ್ಕಳಲ್ಲಿ ಒಬ್ಬನನ್ನು ನನಗೆ ಕೊಡು. ನಾಗರಾಜನನ್ನು ನನ್ನ ಮಗನಾಗಿ ಸ್ವೀಕರಿಸಿದ್ದೇನೆ. ನಿನ್ನ ಕಷ್ಟ ಗೊತ್ತಿದೆ. ನಿನ್ನ ಮಗ ನಿನಗೊಬ್ಬಳಿಗೆ ಅಲ್ಲ ನಿನ್ನಂಥ ಲಕ್ಷಾಂತರ ತಾಯಂದಿರ ಬದುಕಿಗೆ ನೆರವಾಗುತ್ತಾನೆ' ಎಂದುಬಿಟ್ಟರು. ಅವತ್ತು ದಿನವಿಡೀ ಕಣ್ಣೀರಿಟ್ಟ ತಾಯಿ ನಂಜಮ್ಮ ಪರಿಪರಿಯಾಗಿ ಮಗನನ್ನು ಕೋರಿಕೊಂಡಳಂತೆ. 1998 ರಲ್ಲಿ ಬಾಲಗಂಗಾಧರನಾಥರೇ ನಿಂತು ಸನ್ಯಾಸ ದೀಕ್ಷೆ ಕೊಟ್ಟರು. ನಾಗರಾಜ್ ಆವತ್ತಿನಿಂದ ನಿರ್ಮಲಾನಂದನಾಥ ಆಗಿದ್ದು, ಆಗಷ್ಟೇ ಸ್ಥಾಪನೆಗೊಂಡಿದ್ದ ಚಿಕ್ಕಬಳ್ಳಾಪುರದ ಮಠಕ್ಕೆ ನಿರ್ಮಲನಾಥರೇ ಶಾಖಾ ಸ್ವಾಮಿಯಾದರು!

ಆ ಕಾಲದಿಂದಲೂ ವಿವಿಧ ಶಾಖಾಮಠಗಳನ್ನು ನಿಯಂತ್ರಿಸುತ್ತಿದ್ದ ವಿವಿಧ ಕಿರಿಸ್ವಾಮಿಗಳಿಗೆ ಹೋಲಿಸಿದರೆ ನಿರ್ಮಲಾನಂದನಾಥರ ಕಾರ್ಯವೈಖರಿ ಮತ್ತು ಚಿಂತನೆಯಲ್ಲೇ ಹೊಸತನವಿತ್ತು. ಕೆಲವೇ ದಿನಗಳಲ್ಲಿ ಬಾಲಗಂಗಾಧರನಾಥರು ವಿಜಯನಗರ ಶಾಖೆಗೆ ಕರೆಸಿಕೊಂಡು ಬಡ್ತಿ ಕೊಟ್ಟರು. ಮಠ ಪ್ರಕಟಿಸುತ್ತಿದ್ದ 'ಶ್ರೀ ಆದಿಚುಂಚನಗಿರಿ' ಎಂಬ ಇಂಗ್ಲಿಷ್ ಮತ್ತು ಕನ್ನಡ ಮಾಸಿಕಕ್ಕೆ ನಿರ್ಮಲಾನಾಥರನ್ನೇ ಪ್ರಕಾಶಕ ಮತ್ತು ಸಂಪಾದಕರನ್ನಾಗಿ ನೇಮಿಸಲಾಯ್ತು. ಬಾಲಗಂಗಾಧರನಾಥರ ಜೊತೆಗೇ ಅಮೆರಿಕೆ, ಶ್ರೀಲಂಕಾ, ಥೈಲ್ಯಾಂಡ್, ಇಸ್ರೇಲ್, ಕಾಂಬೋಡಿಯಾ ಇತ್ಯಾದಿ ದೇಶಗಳನ್ನು ಸುತ್ತಿ ಬಂದರು. 2005 ರ ಹೊತ್ತಿಗೆ ನಿರ್ಮಲನಂದನಾಥರನ್ನು ಆದಿಚುಂಚನಗಿರಿ ಶಿಕ್ಷಣ ಟ್ರಸ್ಟಿನ ಟ್ರಸ್ಟಿಯನ್ನಾಗಿಸಲಾಯ್ತು. ಜೊತೆಗೆ ಮಠದ ಕಾರ್ಯದರ್ಶಿ ಸ್ಥಾನಕ್ಕೂ ಏರಿಸಲಾಯ್ತು. ಹಿಂದೂ ಧರ್ಮ ಆಚಾರ್ಯ ಸಭಾ ಮತ್ತು **Foundation for unity of Religious and enlightened citizenship** ಸಂಘಟನೆಗೂ, ನಿರ್ಮಲನಾಥರೇ ಸಂಚಾಲಕರಾದರು.

ತಪ್ಪಿದ ಅನಾಹುತ

ಇದೆಲ್ಲವೂ ಈ ಹಿಂದೆ ಬಾಲಗಂಗಾಧರನಾಥರು ಹೊಂದಿದ್ದ ಹೊಣೆಗಾರಿಕೆಗಳೇ ಅಂದಮೇಲೆ ಇವತ್ತಲ್ಲ ನಾಳೆ ನಿರ್ಮಲಾನಂದನಾಥರೇ ಉತ್ತರಾಧಿಕಾರಿಯಾಗಬಹುದೆಂಬ ಮುನ್ಸೂಚನೆ ಬಹುತೇಕ ಕಿರಿಸ್ವಾಮಿಗಳಿಗೆ ಸಿಕ್ಕಾಗಿತ್ತು. ಇದಕ್ಕೆ ಮುನ್ನ ಸದಾಕಾಲ ಸ್ವಾಮಿಯ ನೆರಳಾಗಿ ಕಾಡುತ್ತಿದ್ದ ಶೇಖರ್‌ಸ್ವಾಮಿಗೆ ಪರ್ಯಾಯವಾಗಿ ಬಾಲಗಂಗಾಧರನಾಥರು ನಿರ್ಮಲನಾಥರನ್ನು ಸದ್ದಿಲ್ಲದೆ ಬೆಳೆಸಲಾರಂಭಿಸಿದ್ದರು.

ಅದು ಶೇಖರ್‌ಸ್ವಾಮಿಯ ಹಿಡಿತದ ವಿರುದ್ಧದ ಬಾಲಗಂಗಾಧರರ ಅಸಹನೆಯೆ? ಆತನ ಕಪಿಮುಷ್ಟಿಯಿಂದ ಮಠವನ್ನು ಪಾರು ಮಾಡುವ ಪ್ರಾಮಾಣಿಕತೆಯೇ? ಜನಾಂಗದ ಬಗೆಗೆ ಅವರಿಗಿದ್ದ ಅಪ್ರತಿಮ ಕಾಳಜಿಯ ದ್ಯೋತಕವೇ ಗೊತ್ತಿಲ್ಲ. ಅನೇಕರು ಭಾವಿಸಿದಂತೆ ಶೇಖರ್ ಸ್ವಾಮಿ ಉತ್ತರಾಧಿಕಾರಿಯಾಗಬಹುದೆಂಬ ಅಪಾಯವಂತೂ ತಪ್ಪಿದೆ. ಛಲ, ಶ್ರಮ, ದುಡಿಮೆಯಲ್ಲಿ ಬಾಲಗಂಗಾಧರನಾಥರಿಗೆ ಹೊಸಸ್ವಾಮಿ ಸರಿಸಾಟಿಯಲ್ಲದಿರಬಹುದು. ಆದರೆ ಪ್ರಾಮಾಣಿಕತೆ ಮತ್ತು ತಾತ್ವಿಕತೆಯಲ್ಲಿ ಕಾಲೈಕ್ಯ ಸ್ವಾಮಿಗೆ ನಿರ್ಮಲನಂದನಾಥರೇನೂ ಕಮ್ಮಿಯಿಲ್ಲ.

ಬಾಲಗಂಗಾಧರನಾಥರ ನಂತರ ಅನೇಕ ಕಿರಿಸ್ವಾಮಿಗಳು ಬಂಡೇಳಬೇಕಿತ್ತು. ಶೇಖರ್‌ಸ್ವಾಮಿಯೇನಾದರೂ ಉತ್ತರಾಧಿಕಾರಿಯಾಗಿದ್ದರೆ ದೀಕ್ಷೆ, ಕುಮಾರಸ್ವಾಮಿ ಪಾಳಯಗಳಷ್ಟೇ ಅಲ್ಲ ಅಧೀನ ಸ್ವಾಮಿಗಳೇ ಬೀದಿಗಿಳಿಯುತ್ತಿದ್ದರು. ಅಂಥ ಎಲ್ಲಾ ಅವನತಿಗಳಿಂದ ಮಠವನ್ನು ಪಾರು ಮಾಡಿದ್ದಾರೆ ಬಾಲಗಂಗಾಧರ ಸ್ವಾಮೀಜಿ.

ನಿರ್ಮಲನಾಥ ಸೂಕ್ತ ತಕ್ಕ ಯೋಗ್ಯ ಉತ್ತರಾಧಿಕಾರಿ ನಿಜ. ಆದರೆ ಶೇಖರ್‌ಸ್ವಾಮಿಯ ಕಪಿಮುಷ್ಠಿಯಿಂದ ಹೊರಬರುತ್ತಾರಾ? ಮಠವನ್ನು ಆತನ ಹಿಡಿತದಿಂದ ಪಾರು ಮಾಡುತ್ತಾರಾ?

ಕಾಲವೇ ಉತ್ತರಿಸಬೇಕು.

● ರಾ. ಸೋಮನಾಥ್

ಕುಂಚಿಟಿಗ ಸ್ವಾಮಿಯ ಮಸಲತ್ತು

"ಇದನ್ನು ತಮಾಷೆಯೆನ್ನಿ ಕುಚೋದ್ಯವೆನ್ನಿ. ಬಾಲಗಂಗಾಧರನಾಥ ದೇಹಾಂತ್ಯದ ಸುದ್ದಿ ಬಯಲಾಗುತ್ತಿದ್ದಂತೆ ಮೊದಲು ನಗೆ ಬೀರಿದ ಪುಣ್ಯಾತ್ಮ ಯಾರಿರಬಹುದು?

ನಂಬಿ-ಬಿಡಿ. ಅದು ಸೋಕಾಲ್ಡ್ ಕುಂಚಿಟಿಗ ಜಗದ್ಗುರು ನಂಜಾವಧೂತ!



"ನೋಡ್ತಾ ಇರಿ. ಆದಿಚುಂಚನಗಿರಿ ಪೀಠಕ್ಕೆ ನಾನೇ ಉತ್ತರಾಧಿಕಾರಿ ಆಗ್ತೀನಿ. ನನ್ನನ್ನು ಬಿಟ್ಟರೆ ಮಠ ನಡೆಸೋ ಶಕ್ತಿ ಯಾರಿಗಿದೆ. ನಾನಿಲ್ಲದೆ ಹೋಗಿದ್ರೆ ಈ ಹೊತ್ತಿಗೆ ಮಠ ಉಳಿತ್ತಿತ್ತಾ?" ಇತ್ಯಾದಿ ಕಂಡಕಂಡವರೆದುರು ಪೌರುಷ ಮೆರೆದ ನಂಜಾವಧೂತರು ವಿಜಯನಗರದ ಶಾಖಾಮಠ ದಲ್ಲಿರಿಸಿದ್ದ ಸ್ವಾಮೀಜಿ ಪಾರ್ಥಿವದೆದುರು ಪ್ರತ್ಯಕ್ಷರಾಗಿದ್ದು ಮರುದಿನ ಬೆಳಗ್ಗೆ. ಅದೂ ಮುಖಕ್ಕೆ ಪೌಡರ್ ಮೆತ್ತಿಕೊಂಡು, ತುಟಿಗೆ ಲಿಪ್‌ಸ್ಟಿಕ್ ಹಚ್ಚಿಕೊಂಡು, ಗಡ್ಡ ಟ್ರಿಮ್ ಮಾಡಿಕೊಂಡೇ ಹಾಜರಾಗಿದ್ದರು. ಸ್ವಾಮೀಜಿ ಕಾಲೈಕ್ಯರಾದ ಆಘಾತ ದೇವೇಗೌಡರನ್ನು ಕಂಡೊಡನೆಯೇ ಬೇರೆಯದೇ ಅರ್ಥ ಪಡೆದಿತ್ತು.

ಅಲ್ಲೀತನಕ ಸ್ವಾಮೀಜಿಯ ಕಳೇಬರದೆದುರು ನಿಂತು ತಲೆ ಚಚ್ಚಿಕೊಳ್ಳುತ್ತಿದ್ದ ನಂಜಾವಧೂತರು ದೇವೇಗೌಡರನ್ನು ಕಂಡಿದ್ದೇ ತಡ ಪುಸಿನಗೆ ಬೀರುತ್ತ ಮಸ್ಕಾ ಹೊಡೆಯಲಾರಂಭಿಸಿದರು. ಅವರೇ ಕರೆದೊಯ್ದು ದೇವೇಗೌಡರನ್ನು ಕಾರಿನ ತನಕ ಬಿಟ್ಟು ಬಂದರು. ಬಹುಶಃ ದೇವೇಗೌಡರು ಮನಸ್ಸು ಮಾಡಿಬಿಟ್ಟರೆ ತಾನೇ ಪೀಠಾಧಿಪತಿ ಆಗಿಬಿಡಬಹುದೆಂಬ ದುರಾಶೆಯೇನೊ!

ನಂಜಾವಧೂತರ ಮಸಲತ್ತು ಅಷ್ಟಕ್ಕೇ ಮುಗಿಯಲಿಲ್ಲ. ಸ್ವಾಮೀಜಿ ಕಳೇಬರದ ಜೊತೆಗೇ ಆದಿಚುಂಚನಗಿರಿಗೂ ಹಾವಳಿಯಿಟ್ಟು ಕಂಡಕಂಡ ಶಾಖಾಸ್ವಾಮಿಗಳ ಹೆಗಲು ತೀಡಲಾರಂಭಿಸಿದರು. ಒಂದಿಬ್ಬರು ಮರಿಸ್ವಾಮಿಗಳನ್ನು ಬದಿಗೊಯ್ದು 'ನನ್ನ ನಂತ್ರ ನೀನೇ ಮಠವನ್ನು ನೋಡ್ಕೋಬೇಕಪ್ಪ..' ಎಂದು ಸ್ವಾಮೀಜಿ ಹೇಳಿದ್ದನ್ನು ನೆನಪಿಸಿಕೊಟ್ಟರು. ತನ್ನದೇ ಪ್ರತ್ಯೇಕ ಮಠ ಸ್ಥಾಪಿಸಿ, ಕುಂಚಿಟಿಗರನ್ನು ಒಕ್ಕಲಿಗರಿಂದ ಪ್ರತ್ಯೇಕಿಸಿ, ಬಾಲಗಂಗಾಧರನಾಥರಿಗೆ ತಾನೇನು ಕಮ್ಮಿ ಎಂಬಂತೆ ಮೆರೆದು, ಕೊನೆಗೆ ಕುಂಚಿಟಿಗರಿಂದಲೇ ಛೀಮಾರಿಗೀಡಾಗಿ ಕುಂಚಿಟಿಗರ ನಾಯಕ ಟಿ.ಬಿ.ಜಯಚಂದ್ರನ್ನೇ ಚುನಾವಣೆಯಲ್ಲಿ ಸೋಲಿಸಲೆತ್ನಿಸಿ, ಒಂದಲ್ಲ ಇಬ್ಬರು ಹೊಸ ಕುಂಚಿಟಿಗ ಸ್ವಾಮಿಗಳು ಹುಟ್ಟಿಕೊಳ್ಳಲು ಕಾರಣನಾಗಿ, ಕ್ರಮೇಣ ಎಲ್ಲೂ ಸಲ್ಲದೆ ಅಂತರಪಿಶಾಚಿಯಾದ ನಂಜಾವಧೂತರನ್ನು ಆದಿಚುಂಚನಗಿರಿಯ ಯಾವ ಖಾವಿ ತಾನೇ ಒಪ್ಪಲು ಸಾಧ್ಯ?

ಕೆಂಗೇರಿಯ ಪರ್ಯಾಯ ಸ್ವಾಮಿ ಕುಮಾರ ಚಂದ್ರಶೇಖರನಾಥರಾಗಲಿ, ಕುಣಿಗಲ್‌ನ ಅರೆಶಂಕರ ಮಠದ ಸಿದ್ಧರಾಮ ಚೈತನ್ಯರಾಗಲಿ ಯಾವತ್ತಿಗೂ ಇಂಥ ಹಗಲುಕನಸು ಕಂಡೇ ಇಲ್ಲ. ಅಂಥ ಭ್ರಮೆಯೂ ಅವರಿಗಿಲ್ಲ. ನಂಜಾವಧೂತರಿಗೆ ಮಾತ್ರ ಇನ್ನೂ ಹುಚ್ಚು ಬಿಟ್ಟಂತಿಲ್ಲ.

ಯಡ್ಡಿ ಶಿಷ್ಯರಿಗೆ ಸೋಲು...

9<<<

ವಿರೂಪಾಕ್ಷಪ್ಪ ಬಳ್ಳಾರಿಯಿಂದ ಪಕ್ಷೇತರರಾಗಿ ಕಣಕ್ಕಿಳಿಯುವ ಸೂಚನೆ ನೀಡುತ್ತಿದ್ದರೂ ಕೊನೆಗಳಿಗೆಯಲ್ಲಿ ಕಮಲ ಹಿಡಿಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಹಿರೇಕೆರೂರ: ನಟ ಪಾಟೀಲರಿಗೆ ಬಣಕಾರನೆ ಬಾಂಬ್

ಒಂದು ಬಾರಿ ಜೆಡಿಎಸ್‌ನಿಂದ, ಕಳೆದ ಸಾರಿ ಕಾಂಗ್ರೆಸ್ಸಿನಿಂದ ಗೆದ್ದು ಶಾಸಕರಾಗಿರುವ ನಟ ಬಿ.ಸಿ.ಪಾಟೀಲ ಈಗ ಯಾವ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸುತ್ತಾರೆ ಎಂಬುದು ಸ್ಪಷ್ಟಗೊಂಡಿಲ್ಲ. ಕಾಂಗ್ರೆಸ್ಸಿನ ರಾಜ್ಯ ರಾಜಕಾರಣದಲ್ಲಿ ಮೂಗು ತೂರಿಸಿ ವರಿಷ್ಠರ ಮುಂದೆ ಮುಖ ಕೆಡಿಸಿಕೊಂಡಿರುವ ಪಾಟೀಲರಿಗೆ ಕಾಂಗ್ರೆಸ್ ಬಿ ಫಾರ್ಮ್ ಗ್ಯಾರಂಟಿ ಇಲ್ಲ.

ಶಾಮನೂರು ಶಿವಶಂಕರಪ್ಪ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಲು ಹೊರಟ ಲಿಂಗಾಯತ ಶಾಸಕರ ಪೈಕಿ ಮೊದಲಿಗರಾಗಿದ್ದ ಪಾಟೀಲರು ಒಂದು ಬಣದೊಂದಿಗೆ ಗುರ್ತಿಸಿಕೊಂಡಿದ್ದೇ ಬಿ ಫಾರ್ಮ್‌ಗೆ ಮುಳುವಾಗಲಿದೆ. ಆದರೂ, ನಟ ಭಯಂಕರ ಪಾಟೀಲ ಕಾಂಗ್ರೆಸ್ಸಿನಿಂದ ಸ್ಪರ್ಧಿಸುವುದನ್ನು ತಪ್ಪಿಸಲಾಗುವುದಿಲ್ಲ ಎಂಬುದು ಸ್ಥಳೀಯ ಕಾಂಗ್ರೆಸ್ಸಿಗರ ವಾದ.

ಕಳೆದ ಬಾರಿ ಬಿಜೆಪಿ ಬಿ ಫಾರ್ಮ್ ವಂಚಿತರಾಗಿ ಪಕ್ಷೇತರರಾಗಿ ಸ್ಪರ್ಧಿಸಿ ಸೋಲುಂಡಿದ್ದ ಜಿಲ್ಲೆಯ ಮೊದಲ ಬಿಜೆಪಿ ಶಾಸಕ ಉಜನೇಶ ಬಣಕಾರ ಕೆಜೆಪಿ ಅಭ್ಯರ್ಥಿ ಎಂದು ಘೋಷಣೆಯಾಗಿದೆ. ಈಗಾಗಲೇ ಕ್ಷೇತ್ರದಲ್ಲಿ ಯಡ್ಡಿಯ ಹಣ ಕೆಲಸ ಮಾಡುತ್ತಿದೆ. ಕಳೆದ ಬಾರಿ ಅಲ್ಪ ಅಂತರದಲ್ಲಿ ಸೋತಿದ್ದ ಬಣಕಾರ ಈ ಬಾರಿಯೂ ಪ್ರಬಲ ಪೈಪೋಟಿ ನೀಡಲಿದ್ದಾರೆ.

ಬಿಜೆಪಿಯಿಂದ ಪಾಲಾಕ್ಷಗೌಡ ಪಾಟೀಲ್ ಹಾಗೂ ಎ.ಬಿ.ಪಾಟೀಲ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಬಿಎಸ್‌ಆರ್‌ನಿಂದ ನಿವೃತ್ತ ಪೊಲೀಸ್ ಅಧಿಕಾರಿ ಎನ್.ಎಮ್.ಈಟೇರ ಸ್ಪರ್ಧಿಸಲಿದ್ದಾರೆ.

ರೈತ ಪರ ಹೋರಾಟದಲ್ಲಿ ಇಬ್ಬರು ಮಕ್ಕಳನ್ನು ಕಳೆದುಕೊಂಡಿರುವ ಜೆಡಿಎಸ್‌ನ ಮಾಜಿ ಶಾಸಕ ಬಿ.ಹೆಚ್.ಬನ್ನಿಕೋಡ ಸ್ಪರ್ಧೆಗಿಳಿಯುವುದು ಗ್ಯಾರಂಟಿಯಾಗಿದೆ. ಹೀಗಾಗಿ ಇಲ್ಲಿ ತ್ರಿಕೋನ ಸ್ಪರ್ಧೆ ನಡೆಯಲಿದ್ದು ಬಿಜೆಪಿ ಲೆಕ್ಕಕ್ಕೂ ಇಲ್ಲ ಜಮಾಕ್ಕೂ ಇಲ್ಲಾ ಎಂಬಂತಾಗಲಿದೆ.

ಶಿಗ್ಗಾಂವಿ: ಬೊಮ್ಮಾಯಿ ಪಕ್ಷ ಬಿಟ್ಟರೆ ಕಣ ರೆಡಿಯಾಗಲಿದೆ

ಮಂತ್ರಿ ಬಸವರಾಜ ಬೊಮ್ಮಾಯಿ ಬಿಜೆಪಿ ಬಿಡುವುದಂತೂ ನಿಶ್ಚಿತ. ಆದರೆ ಯಾವ ಪಕ್ಷಕ್ಕೆ ಹೋಗುತ್ತಾರೆ ಎಂಬುದೇ ಇಂದಿಗೂ ನಿಗೂಢ. ಯಡ್ಡಿಯ ಮಾನಸಪುತ್ರರಲ್ಲಿ ಬಸು ಕೂಡಾ ಒಬ್ಬರು. ಆದರೆ ಕೆಜೆಪಿ ಪಕ್ಷಕ್ಕೆ ಕಾಲಿಡುವ ಇರಾದೆ ಬೊಮ್ಮಾಯಿಗಿಲ್ಲ ಎಂಬ ರೂಮರ್ ಚಾಲ್ತಿಯಲ್ಲಿದೆ. ಸಚಿವರಾದ ಮುರುಗೇಶ ನಿರಾಣಿ, ವಿ.ಸೋಮಣ್ಣ ಮತ್ತು ಉಮೇಶ್ ಕತ್ತಿಯೊಂದಿಗೆ ಕಾಂಗ್ರೆಸ್ ಸೇರುವ ತಯಾರಿಯಲ್ಲಿರುವ ಬೊಮ್ಮಾಯಿಗೆ ಶಿಗ್ಗಾಂವಿ ಕ್ಷೇತ್ರಕ್ಕೆ ಕಾಂಗ್ರೆಸ್ ಬಿ ಫಾರ್ಮ್ ಸಿಗುವುದು ಅಷ್ಟು ಸುಲಭದ ಮಾತಲ್ಲ.

ಮಾಜಿ ಸಂಸದ ಮಂಜುನಾಥ ಕುನ್ನೂರು ತಮ್ಮ ಪುತ್ರ ರಾಜು ಕುನ್ನೂರನನ್ನು ಕಣಕ್ಕಿಳಿಸುವ ತಯಾರಿಯಲ್ಲಿದ್ದಾರೆ. ಒಂದು ವೇಳೆ ಪಕ್ಷ ಅವರ ಮಗನಿಗೆ ಬಿ ಫಾರ್ಮ್ ನಿರಾಕರಿಸಿದರೆ, ತಾವೇ ಕಣಕ್ಕಿಳಿಯಬಹುದು. ಇನ್ನು ಕಳೆದೆರಡು ಬಾರಿ ಸೋತಿರುವ ಕಾಂಗ್ರೆಸ್ಸಿನ ಅಜ್ಜಂಫೀರ ಎಸ್ ಖಾದ್ರಿ 'ಅಲ್ಪಸಂಖ್ಯಾತರ ಕೋಟಾದಲ್ಲಿ ನನಗೆ ಬಿ ಫಾರ್ಮ್ ಗ್ಯಾರಂಟಿ' ಎನ್ನುತ್ತಿದ್ದಾರೆ. ಹೀಗಾಗಿ ಬೊಮ್ಮಾಯಿ ಯಾವ ಪಕ್ಷ ಸೇರುತ್ತಾರೆ ಎಂಬುದರ ಮೇಲೆ ಈ ಕ್ಷೇತ್ರದ ಚುನಾವಣಾ ರಾಜಕಾರಣ ಬಾಯ್ತೆರೆಯಲಿದೆ.

ಬೊಮ್ಮಾಯಿ ಬಿಜೆಪಿ ಬಿಡುವುದು ಇನ್ನೂ ಗ್ಯಾರಂಟಿ ಇಲ್ಲದಿದ್ದರೂ ಬಿಜೆಪಿ ಜಿಲ್ಲಾಧ್ಯಕ್ಷ ಸೋಮಣ್ಣ ಬೇವಿನಮರದ 'ಪಕ್ಷ ಅವಕಾಶ ಕೊಟ್ಟರೆ ಬೊಮ್ಮಾಯಿ ವಿರುದ್ಧ ಸ್ಪರ್ಧಿಸಿ ಗೆಲ್ಲುತ್ತೇನೆ' ಎಂಬ ಅಹಂನಲ್ಲಿದ್ದಾರೆ. ಪಂಚಮಸಾಲಿ ಲಿಂಗಾಯತ ಮತಗಳೇ ಇಲ್ಲಿ ನಿರ್ಣಾಯಕವಾಗಿರುವುದರಿಂದ ಈ ಬಾರಿ ಪಂಚಮಸಾಲಿ ಅಭ್ಯರ್ಥಿಗಳಿಗೆ ಹೆಚ್ಚು ಅನುಕೂಲವಾಗುವ ಸಾಧ್ಯತೆಗಳಿವೆ. ಈ ಹಿಂದೆ ಬೊಮ್ಮಾಯಿಯ ಬೆನ್ನಿಗಿದ್ದ ಈ ಮತಗಳು ಈಗ ದೂರ ಸರಿದಿವೆ. ಮುಸ್ಲಿಮರು ಕೊನೆ ಗಳಿಗೆಯಲ್ಲಿ ನಿರ್ಧಾರ ಪ್ರಕಟಿಸುವ ರೂಢಿ ಇಲ್ಲಿ ಹಿಂದಿನಿಂದ ಚಾಲ್ತಿಯಲ್ಲಿದೆ. ಒಂದು ವೇಳೆ ಅಜ್ಜಂಫೀರ ಖಾದ್ರಿ ಕಾಂಗ್ರೆಸ್ ಬಿ ಫಾರ್ಮ್ ಸಿಗದೆ ಬೇರೆ ಪಕ್ಷದಿಂದ ಸ್ಪರ್ಧಿಸಿದರೆ ಉಳಿದ ಘಟಾನುಘಟಿಗಳಿಗೆ ಗೆಲುವು ಸುಲಭದ ಮಾತೇನಲ್ಲ.

250 ಕೋಟಿ ರೂ. ಏತ ನೀರಾವರಿ ಯೋಜನೆ, ಜಾನಪದ ವಿಶ್ವ ವಿದ್ಯಾಲಯದ ಸ್ಥಾಪನೆ ಸೇರಿದಂತೆ ಇಂಜಿನಿಯರಿಂಗ್ ಕಾಲೇಜುಗಳನ್ನು ಕ್ಷೇತ್ರಕ್ಕೆ ತಂದ ಮಂತ್ರಿ ಬೊಮ್ಮಾಯಿಗೆ ಚುನಾವಣಾ ಸಂದರ್ಭದಲ್ಲಿ ಇವ್ಯಾವೂ ಮತಗಳನ್ನ ಹುಟ್ಟಿಸುವುದಿಲ್ಲ. ತಂತ್ರಗಾರಿಕೆಯೇ ಈ ಕ್ಷೇತ್ರದ ಚುನಾವಣಾ ಅಸ್ತ್ರ. ಕಳೆದ ಬಾರಿ ಅದರಲ್ಲಿ ಯಶಸ್ವಿಯಾಗಿದ್ದ ಬೊಮ್ಮಾಯಿಗೆ ಈ ಬಾರಿ ಗೆಲುವು ಸುಲಭವಲ್ಲ.

ಬೊಮ್ಮಾಯಿ ಕೆಜೆಪಿಗೆ ಕೈಕೊಟ್ಟರೆ ಮಾಜಿ ಶಾಸಕ ಸವಣೂರಿನ ರಾಜಶೇಖರ ಸಿಂಧೂರ ಬಿ ಫಾರ್ಮ್ ಗಿಟ್ಟಿಸಿಕೊಳ್ಳಬಹುದು. ಜೆಡಿಎಸ್‌ನಿಂದ ನ್ಯಾಯವಾದಿ ಎಮ್.ಹೆಚ್.ಬೆಂಡಿಗೇರಿ ಸ್ಪರ್ಧೆ ಖಚಿತಗೊಂಡಲ್ಲಿ ಅಲ್ಪಸಂಖ್ಯಾತರ ಜೊತೆಗೆ ಹಿಂದುಳಿದವರ ಮತಗಳಿಗೆ ಕತ್ತರಿ ಹಾಕಲಿದ್ದಾರೆ. ಬಿಎಸ್‌ಆರ್ ಕಾಂಗ್ರೆಸ್ಸಿನಿಂದ ತಾಲೂಕ ಅಧ್ಯಕ್ಷ ಮಲ್ಲೇಶ ಚೋಟಪ್ಪನವರ ಹಾಗೂ ಬಸವರಾಜ ಅಂಗಡಿ ಇಬ್ಬರಲ್ಲಿ ಒಬ್ಬರು ಬಿ ಫಾರ್ಮ ಗಿಟ್ಟಿಸಿಕೊಳ್ಳಲಿದ್ದಾರೆ.

ಜೆಡಿಯು ತೊರೆದು ಚಡ್ಡಿಗಳೊಂದಿಗೆ ಸೇರಿ ತಂದೆಯ ಮೂಲ ಸಿದ್ಧಾಂತಕ್ಕೆ ಎಟು ಕೊಟ್ಟ ಬೊಮ್ಮಾಯಿ ಭವಿಷ್ಯದ ಬಗ್ಗೆ ಶಿಶುನಾಳ ಶರೀಫರೇ ಹೇಳಬೇಕು...

● ಹುರಳಿಕುಪ್ಪಿ ವಿನಯ



‘60 ಲಕ್ಷ ಕೋಟಿ’ ಸರ್ಕಾರಗಳ ಹತ್ತಿರ ಜನಸಾಮಾನ್ಯರಿಗಾಗಿ 3 ಸಾವಿರ ಕೋಟಿ ಇಲ್ಲ, ಏಕೆ?

ಯುಪಿಎ ಸರ್ಕಾರದ ‘ಗ್ಯಾಸ್’ ನಾಟಕವನ್ನು ...ೂ ನಂಬುವ ಸ್ಥಿತಿಯಲ್ಲಿಲ್ಲ. ಆದರೂ ವೀರಪ್ಪ ...ಯಿಲಿ ಎಂಬ ಕಲಾವಿದನನ್ನು ಮುಂದಿಟ್ಟುಕೊಂಡು ... ಮೂರು ತಿಂಗಳಲ್ಲಿ ದೇಶದ ಜನರ ಮುಂದೆ ... ಸಣ್ಣ ಪ್ರಹಸನವನ್ನು ಪ್ರದರ್ಶಿಸಲಾಯಿತು. ಈ ...ಮುದ್ದೇ ಬಣ್ಣ ಹಚ್ಚಿಕೊಂಡು, ಇದೇ ರೀತಿ ಹೆಜ್ಜೆ ...ಕುಣಿಯಬೇಕು ಎಂದು ಧಣಿಗಳಾದ ಅಂಬಾನಿಗಳು ...ವನ್ನು ನಿರಾಕರಿಸಿದ್ದಕ್ಕಾಗಿ ಜೈಪಾಲ್ ರೆಡ್ಡಿ ಎಂಬ ...ವಿದನ ಪಾರ್ಟನ್ನೇ ಬದಲಾಯಿಸಲಾಯಿತು. ಎಂತಹ ...ರ್ಟ್ ಕೊಟ್ಟರೂ ಕುಣಿಯಬಲ್ಲ ಅಪರೂಪದ ಪ್ರತಿಭೆ ...ಯಿಲಿ ದೆಹಲಿ ಯಕ್ಷಗಾನದಲ್ಲಿ ಪಳಗುತ್ತಿದ್ದಾರೆ. ...ಗಿಯೇ ‘6ರಿಂದ 9 ಮತ್ತೆ 9ರಿಂದ 6’ ಎಂಬ ... ನಾಟಕದ ಎರಡೂ ಸೀನುಗಳನ್ನು ಸೊಗಸಾಗಿ ...ಯಿಸಿ ಮುಗಿಸಿದ್ದಾರೆ. ಆದರೆ ಇದು ಇಲ್ಲಿಗೇ ...ದಿಲ್ಲ. ದೊಡ್ಡಾಟ ಇನ್ನೂ ಸಾಕಷ್ಟೇ ಇದೆ.

...ಷ್ಟಾದರೂ ಧಣಿಗಳಿಗೆ ಇನ್ನೂ ಪೂರ್ಣ ...ಧಾನವಾಗಿಲ್ಲ. ಹಾಗಾಗಿಯೇ ದೊಡ್ಡ ಧಣಿ ಮುಖೇಶ್ ...ಬಾನಿ ಸೀದಾ ಗುಜರಾತ್‌ಗೆ ಹೋಗಿ ಮೋದಿಯನ್ನು ...ಹೊಂದಿದ್ದಾರೆ. “ನರನೂ, ಇಂದ್ರನೂ ಆಗಿರುವ ವ್ಯಕ್ತಿಯೇ ...ದ್ರ ಮೋದಿ. ಈತ ಅಂತಿಂತವನಲ್ಲ; ಸಾಕ್ಷಾತ್ ...ಹಾತ್ಮಾ ಗಾಂಧಿಯೇ ಮೋದಿಯ ರೂಪದಲ್ಲಿ ...ಮರಿಗಿದ್ದಾರೆ” ಎಂದು ಬಹಿರಂಗವಾಗಿ ಹೇಳಿದ್ದಾರೆ. ... ಈ ದೇಶದ ಕಾರ್ಪೊರೇಟ್ ಕಂಪೆನಿಗಳ ವರಸೆ; ...ಎಯ ಮೌನಿ ಮನಮೋಹನ ಜನರಿಗೆ ರಂಜನೆ, ...ಧನೆ, ಪ್ರಚೋದನೆ ಒದಗಿಸಲು ಅಷ್ಟು ...ನಾಗದಿದ್ದರೆ, ಸೈಡ್‌ವಿಂಗ್‌ನಲ್ಲಿ ಸಿದ್ಧವಾಗಿರಲು ...ದಿಯನ್ನು ರೆಡಿಯಾಗಿಟ್ಟುಕೊಂಡಿದ್ದಾರೆ.

...ಜವಾಗಲೂ ಯಾವ ನಾಟಕದ ಸೀನಿಗಿಂತಲೂ ...ಯಿಲ್ಲದಷ್ಟು ಚೊಕ್ಕದಾಗಿ ಸ್ಕ್ರಿಪ್ಟ್ ಸಿದ್ಧವಾಗಿದೆ. ಇದು ...ಮಟ್ಟಿಗೆ ದೇಶದ ಜನರ ಅರಿವಿಗೆ ಬರುತ್ತದೆ ...ದಷ್ಟೇ ಈಗ ನಮ್ಮ ಕಾಳಜಿಯ ವಿಷಯವಾಗಬೇಕಿದೆ. ... ಸೆಪ್ಟೆಂಬರ್ 13ರಂದು ಈ ದೇಶದ ಜನರಿಗೆ ... ದರದಲ್ಲಿ ಒದಗಿಸುವ ಸಿಲಿಂಡರ್‌ಗಳನ್ನು ಆರಕ್ಕೆ ...ತಗೊಳಿಸಲಾಗುವುದು ಎಂದು ಕೇಂದ್ರ ಸರ್ಕಾರವು ...ಷಿಸಿತು. ಪೆಟ್ರೋಲ್ ಸಂಪೂರ್ಣ ... ಮಾರುಕಟ್ಟೆಯ ದರಗಳಂತೆ ...ಯುತ್ತಿದೆ; ಡೀಸೆಲ್, ಸೀಮೆಎಣ್ಣೆ ಮತ್ತು ...ಪಿಜಿ ಸಿಲಿಂಡರ್‌ಗಳಿಗೆ ಕೇಂದ್ರ ...ವು ಸಬ್ಸಿಡಿ ನೀಡುತ್ತಿದೆ. ಈ ಸಬ್ಸಿಡಿ ...ವುದೂ ಒಂದು ದೊಡ್ಡ ಬೋಗಸ್ ... (ಬಾಕ್ಸ್ ನೋಡಿ). ಆದರೂ ಇಂತಹ ...ಡಿ ನೀಡುತ್ತಿರುವುದರಿಂದ ...ಟ್ರೋಲಿಯಂ ಕಂಪೆನಿಗಳು ನಷ್ಟಕ್ಕೆ ...ಗುತ್ತಿವೆ; ಹಾಗಾಗಿ ಸಬ್ಸಿಡಿ ಸಹಿತ ...ಡರ್‌ಗಳ ಸಂಖ್ಯೆಯನ್ನು 6ಕ್ಕೆ ಸೀಮಿತ ...ಡಲಾಗುವುದು ಎಂದು ...ಲಾಯಿತು. ಆಗ 14.2 ಕೆ.ಜಿ.ಯ ... ಸಹಿತ ಸಿಲಿಂಡರ್‌ನ ಬೆಲೆ 399 ...ಇದ್ದರೆ, ಅಷ್ಟೇ ತೂಕದ ಸಬ್ಸಿಡಿರಹಿತ ...ಡರ್‌ನ ಬೆಲೆ 746 ರೂ. ಆಗಿತ್ತು. ... ಎರಡರ ಬೆಲೆಯೂ ಹೆಚ್ಚಾಗಿದೆ.

ಈ ರೀತಿ ಸೀಮಿತಗೊಳಿಸುವುದರಿಂದ ಸರ್ಕಾರಕ್ಕೆ 20,300 ಕೋಟಿ ರೂ. ಉಳಿತಾಯವಾಗುತ್ತದೆ ಎಂದು ಹೇಳಲಾಯಿತು.

ಈ ಮಧ್ಯೆ ಡಿಸೆಂಬರ್ 13 ಮತ್ತು 17ರಂದು ಗುಜರಾತ್‌ನಲ್ಲಿ ಚುನಾವಣೆಗಳು ನಡೆಯುತ್ತವೆಂದು ಅಕ್ಟೋಬರ್‌ನಲ್ಲಿ ಘೋಷಣೆಯಾಯಿತು. ನವೆಂಬರ್ 18ರಂದು “ಸಬ್ಸಿಡಿ ಸಹಿತ ಸಿಲಿಂಡರ್‌ಗಳ ಏರಿಕೆ ವಿಚಾರದಲ್ಲಿ ಪೆಟ್ರೋಲಿಯಂ ಸಚಿವಾಲಯ ಬೇಕಾದರೆ ಪ್ರಸ್ತಾಪ ಸಲ್ಲಿಸಬಹುದು” ಎಂದು ಹಣಕಾಸು ಮಂತ್ರಿ ಚಿದಂಬರಂ ಹೇಳಿದರು. ಇದ್ದಕ್ಕಿದ್ದಂತೆ (ನವೆಂಬರ್ 29ರಂದು) ಇಂಧನ ಸಚಿವ ವೀರಪ್ಪ ಮೊಯಿಲಿ ಸಬ್ಸಿಡಿ ಸಹಿತ ಸಿಲಿಂಡರ್‌ಗಳ ಸಂಖ್ಯೆಯನ್ನು ಒಂಭತ್ತಕ್ಕೆ ಏರಿಸಲಾಗುವುದು ಎಂದು ಮಾಧ್ಯಮಗಳಿಗೆ ಹೇಳಿದರು. ಆದರ ಜೊತೆಗೆ ಅವರು ಕೊಟ್ಟ ಅಂಕಿಅಂಶ ಗಮನಾರ್ಹ. ಈ ರೀತಿ ಏರಿಸಿದರೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಮಗೆ 3,000 ಕೋಟಿ ರೂ. ಬೇಕಾಗುತ್ತದೆ; ಅದನ್ನು ಹಣಕಾಸು ಇಲಾಖೆ ನೀಡಿದರೆ ಮಾತ್ರ ಎಂದು ಜೊತೆಗೇ ಸೇರಿಸಿದ್ದರು. ವರ್ಷವಿಡೀ ಒಂಭತ್ತು ಸಿಲಿಂಡರ್ ನೀಡಬೇಕೆಂದರೆ 9,000 ಕೋಟಿ ರೂ. ಬೇಕಾಗುತ್ತದೆ ಎಂದೂ ಹೇಳಲಾಗಿತ್ತು. ವರ್ಷವಿಡೀ ಒಂಭತ್ತು ಸಿಲಿಂಡರ್ ನೀಡಿದರೂ 3,000 ಕೋಟಿ ಅಷ್ಟೇ ಸಾಕು ಎಂದೂ ನಂತರ ಮಾಧ್ಯಮಗಳಲ್ಲಿ ಪ್ರಕಟವಾಯಿತು.

ಗುಜರಾತ್ ಚುನಾವಣೆಯ ಫಲಿತಾಂಶ ಡಿಸೆಂಬರ್ 20ಕ್ಕೆ ಬಂದಿತು. ನರನೂ, ಇಂದ್ರನೂ, ನರಮೇಧದ ರೂವಾರಿಯೂ, ಮಹಾತ್ಮ ಗಾಂಧಿಯೂ ಆದಂತಹ ಮೋದಿಯು ಹಿಂದಿಗಿಂತಲೂ ಹೆಚ್ಚು ಸೀಟುಗಳನ್ನು ಗೆದ್ದು ಅಧಿಕಾರಕ್ಕೆ ಬಂದಾಯಿತು. ಅದಾದಮೇಲೆ ಜನವರಿ 5ರಂದು ಒಂಭತ್ತು ಸಿಲಿಂಡರ್‌ಗಳಿಗೆ ಏರಿಸಲು ಸಾಧ್ಯವಿಲ್ಲ, ಏಕೆಂದರೆ ಹಣಕಾಸು ಸಚಿವಾಲಯ ಇದಕ್ಕೆ ಒಪ್ಪಿಗೆ ಕೊಡುತ್ತಿಲ್ಲ ಎಂಬ ‘ಮಾಹಿತಿ’ ಹೊರಬಂತು. ಜನವರಿ 12ರಂದು ಅದೇ ವೀರಪ್ಪ ಮೊಯಿಲಿ ಗ್ಯಾಸ್ ಸಿಲಿಂಡರ್‌ನ ಬೆಲೆಯನ್ನು 50 ರೂ.ಗಳಷ್ಟು ಏರಿಸುತ್ತೇವೆ ಎಂದು ಗುಜರಾತ್ ಒಳಗೊಂಡಂತೆ ದೇಶದ ಮಹಾಜನತೆಗೆ ತಿಳಿಯಪಡಿಸಿದರು. ಡೀಸೆಲ್‌ನ ಬೆಲೆಯನ್ನು ತಿಂಗಳಿಗೆ 1 ರೂ.ನಂತೆ 15 ತಿಂಗಳು ಏರಿಸುತ್ತೇವೆ, ಸೀಮೆಎಣ್ಣೆಯನ್ನೂ ಬಿಡುವುದಿಲ್ಲ ಎಂದೂ ಹೇಳಿದರು. ಕೇಳ್ಕರ್ ಸಮಿತಿಯ ಶಿಫಾರಸ್ಸಿನ ಅನ್ವಯವೇ ಇದೆಲ್ಲವನ್ನೂ ಮಾಡುತ್ತಿದ್ದೇವೆ ಎಂದೂ ಹೇಳಿದರು. ಆರರಿಂದ ಒಂಭತ್ತು ಸಿಲಿಂಡರ್‌ಗಳಿಗೆ ಸಬ್ಸಿಡಿಯನ್ನು ಏರಿಸುವ ಪ್ರಸ್ತಾಪವೇನಾಯಿತೆಂದು ಮಾಧ್ಯಮದವರು ಕೇಳಲಾಗಿ “ಯಾವ ಕ್ಷಣದಲ್ಲಾದರೂ ಅದು ಏರಿಬಿಡುತ್ತದೆ, ಕಾದು ನೋಡಿ” ಎಂದರು.


ಈ ಮಧ್ಯೆ ಮಹಾನ್ ಪ್ರಜಾಪ್ರಭುತ್ವ ರಾಷ್ಟ್ರದ ಮಹಾನ್ ಲಕ್ಷಣವಾದ ಚುನಾವಣೆಯನ್ನು ಅತ್ಯಂತ ನಿಷ್ಪಕ್ಷಪಾತವಾಗಿ ನಡೆಸುವ ಚುನಾವಣಾ ಆಯೋಗವೂ ಧುತ್ತೆಂದು ಗ್ಯಾಸ್‌ನೊಳಗೆ ಮೂಗು ತೂರಿಸಿತು. ಗ್ರೀಕ್ ನಾಟಕಗಳಲ್ಲಿ ರಂಗದ ಮುಂದಿನ ಗುಹೆಗಳಂತಹ ಗುಂಡಿಗಳಿಂದ ಭೂತಗಳು ಏಳುವುದಿಲ್ಲವೇ ಹಾಗೆ. ಡಿಸೆಂಬರ್ 12ರಂದು ಖಾರವಾದ ಪತ್ರ ಬರೆದ ಆಯೋಗ, ಮರುದಿನ ಬೆಳಿಗ್ಗೆ 11 ಗಂಟೆ ಒಳಗೆ ಮೊಯಿಲಿ ಮಾರುತ್ತರ ಬರೆಯದೇ ಹೋದರೆ ತಲೆ ಸಾವಿರ ಹೋಳಾಗಿ ಬಿಡುವುದೋ ಏನೋ ಎಂಬಂತೆ ಎಚ್ಚರಿಸಿತು. ಮೊಯಿಲಿ ಪತ್ರವನ್ನೂ ಬರೆದರು. ಆಯೋಗ ಆಮೇಲೆ ಏನು ಮಾಡಿತು ಎಂಬುದರ ಕುರಿತು ಯಾವ ಮಾಧ್ಯಮದಲ್ಲೂ ಏನೂ ಬರಲಿಲ್ಲ. ಸಿಲಿಂಡರ್‌ಗಳ ಸಂಖ್ಯೆಯೂ ಏರಲಿಲ್ಲ; ಆದರ ಬೆಲೆ ಏರುವುದು ಮಾತ್ರ ಖಾತ್ರಿಯಾಯಿತು.


ಇಲ್ಲಿ ಹಾಸ್ಯಾಸ್ಪದವಾಗಿದ್ದು ಯಾರು? ಚುನಾವಣಾ ಆಯೋಗವೋ, ಮೊಯಿಲಿಯೋ, ದೇಶದ ಜನರೋ, ಪ್ರಜಾಪ್ರಭುತ್ವವೋ ಎಂಬ ವಿಶ್ಲೇಷಣೆಯನ್ನು ಬೇಕಾದರೆ ನಾವು ಮಾಡಿಕೊಳ್ಳಬಹುದು. ಆದರೆ ಇದೇ ಡಿಸೆಂಬರ್ 12ರಂದು ಇನ್ನೊಂದು ಮುಖ್ಯ ಸಂಗತಿ ಅದೇ ಪತ್ರಿಕಾಗೋಷ್ಠಿಯಲ್ಲಿ ಪ್ರಕಟವಾಯಿತು. ಹಣ ಎಷ್ಟಾದರೂ ಖರ್ಚಾಗಲೀ, ನಮಗೆ ನಿರಂತರವಾಗಿ ಏನೇನು ಸರಕು ಮತ್ತು ಸೇವೆಗಳು ಲಭ್ಯವಿದೆಯೋ ಅವೆಲ್ಲವೂ 24X 7 ಸಿಗುತ್ತಾ ಇರಬೇಕು ಎಂದು ಬಯಸುವ ಒಂದು ಮೇಲ್ಮಧ್ಯಮ ವರ್ಗವು ಈ ದೇಶದಲ್ಲಿ ಇದೆ. ಭಾರೀ ದೊಡ್ಡ ಬಂಡವಾಳಶಾಹಿಗಳ ಜೊತೆಗೆ ಜಾಗತೀಕರಣದ ಫಲಾಮೃತವು ತೊಟ್ಟಿಕ್ಕಿರುವುದು ಇದೇ ವರ್ಗಕ್ಕೆ. ಅಂತಹವರಿಗೆ ಗ್ಯಾಸ್ ಸಿಲಿಂಡರ್ ಒಂದೆರಡು ದಿನ ಬಾರದೇ ಹೋಗಿಬಿಟ್ಟರೆ ಬಹಳ ತೊಂದರೆಯಾಗುತ್ತದೆ. ಹಾಗಾಗಿ ಮೊಬೈಲ್ ಸಂಖ್ಯೆಯನ್ನು ಉಳಿಸಿಕೊಂಡು ಕಂಪೆನಿ ಬದಲಾಯಿಸುವ ಹಾಗೆ, ಗ್ಯಾಸ್ ಸಿಲಿಂಡರ್‌ನ ಅದೇ ಕನೆಕ್ಷನ್ ಉಳಿಸಿಕೊಂಡು ಕಂಪೆನಿ ಬದಲಾಯಿಸುವ ಹೊಸ ಯೋಜನೆಯು ಬರುತ್ತಿದೆ. ಇನ್ನೇನು ಬೇಕು ನೀವೇ ಹೇಳಿ.


ಮುಗಿಸುವ ಮುನ್ನ ಈ ಅಂಚಿನಿಂದ ಒಂದಿಷ್ಟು ರಾಜಕೀಯಾರ್ಥಿಕ ಪ್ರಶ್ನೆಗಳನ್ನು ಕೇಳಬೇಕಲ್ಲವೇ? ಇಡೀ ದೇಶದ ಜನಸಾಮಾನ್ಯರೆಲ್ಲರಿಗೂ 2012-13ರ ಸಾಲಿನಲ್ಲಿ ಗ್ಯಾಸ್ ಸಬ್ಸಿಡಿ ನೀಡಲು ಕೊಡಬೇಕಾಗಿರುವ ಅಂದಾಜು ಹಣ 35,000 ಕೋಟಿ. ಈಗ ನಿಗದಿಯಾಗಿರುವ ಆರರಿಂದ ಒಂಭತ್ತು ಸಿಲಿಂಡರ್‌ಗೆ ಏರಿಸಲು ಬೇಕಾಗಿರುವುದು ಇನ್ನೂ 3,000 ಕೋಟಿ. 9,000 ಎಂದೂ ಹೇಳಲಾಗುತ್ತಿದೆ, ಬೇಕಾದರೆ ಹಾಗೇ ಇಟ್ಟುಕೊಳ್ಳೋಣ. 60 ಲಕ್ಷ ಕೋಟಿಗೂ ಹೆಚ್ಚಿನ ಆರ್ಥಿಕ ಸಾಮರ್ಥ್ಯವನ್ನು ಹೊಂದಿರುವ ದೇಶಕ್ಕೆ, ಜನಸಾಮಾನ್ಯರ ನಿತ್ಯದ ಅಡಿಗೆ ವಿಚಾರದಲ್ಲಿ ಹೆಚ್ಚು ಒತ್ತಡವಿಲ್ಲದಂತೆ ಮಾಡಲು ಅಷ್ಟನ್ನು ಖರ್ಚು ಮಾಡಲಾಗುವುದಿಲ್ಲವೇ? ಕರ್ನಾಟಕದ ಆರ್ಥಿಕತೆಗೆ ಇದನ್ನು ಅನ್ವಯಿಸಿ ನೋಡುವುದಾದರೆ ಸುಮಾರು 150ರಿಂದ 200 ಕೋಟಿಗಳನ್ನು ಖರ್ಚು ಮಾಡಿದರೆ ಸಾಕು. ಈ ರಾಜ್ಯದ ಜನರಿಗೆ ಒಂಭತ್ತು ಸಿಲಿಂಡರ್ ಕೊಡಬಹುದು. ಪಶ್ಚಿಮ ಬಂಗಾಳ, ಅಸ್ಸಾಂ ರಾಜ್ಯ ಸರ್ಕಾರಗಳು ಈ ರೀತಿ ಮಾಡಿರುವುದನ್ನು ಜಗದೀಶ್ ಶೆಟ್ಟರ್ ಗಮನಿಸಿಲ್ಲವೇ? 200 ಕೋಟಿ ಎಂದರೆ ಅಷ್ಟು ಕಷ್ಟವೇ? ಇಡೀ ದೇಶಕ್ಕೆ ಒಂಭತ್ತು ಸಿಲಿಂಡರ್ ಕೊಡಬೇಕೆಂದರೆ ಖರ್ಚಾಗುವ ಹಣದ ಎಷ್ಟು ಪಟ್ಟು ಹಾಕಿದರೆ ಒಬ್ಬ ಯಡಿಯೂರಪ್ಪ ಒಬ್ಬ ಜನಾರ್ದನರೆಡ್ಡಿ ಆಗಬಹುದು? ಮಂತ್ರಿಗಳನ್ನು, ಎಂಎಲ್‌ಎಗಳನ್ನು, ಬಿಬಿಎಂಪಿ ಕಾರ್ಪೊರೇಟರ್‌ಗಳನ್ನು ಜಪ್ತಿ ಮಾಡಿದರೆ ಇನ್ನೂ ಕನಿಷ್ಠ 100 ವರ್ಷ ಸಬ್ಸಿಡಿ ಸಿಲಿಂಡರ್‌ಗಳನ್ನು ಕೊಡಬಹುದಲ್ಲವೇ?

ಇಷ್ಟೇ ಪ್ರಶ್ನೆಗಳನ್ನು ಕೇಳಿದರೆ ಅದು ಕೇಜ್ರಿವಾಲ್ ಮತ್ತು ಹಜಾರೆಯವರಂತೆ ಆಗಿಬಿಡಬಹುದು. ಏಕೆಂದರೆ ರಾಜಕಾರಣಿಗಳು ಮಾಡುತ್ತಿರುವ ಭ್ರಷ್ಟತೆ ಎಂಬುದು ಸಾರ್ವಜನಿಕರಿಂದ ದೊಡ್ಡ ಉದ್ದಿಮೆಪತಿಗಳಿಗೆ ಸಂಪತ್ತು ಹರಿಸುವಾಗ ನೆಕ್ಕಿಕೊಳ್ಳುತ್ತಿರುವ ಅಥವಾ ಮುಕ್ಕುತ್ತಿರುವ ಕಮೀಷನ್ ಅಷ್ಟೇ ಆಗಿದೆ. ನಿಜವಾಗಲೂ ನಾವು ಕೇಳಬೇಕಾದ್ದು ಬೇರೆ ಇದೆ. ಈ ದೇಶದ ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪೆನಿಗಳಿಗೆ ಮತ್ತು ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡಿರುವ ಸಬ್ಸಿಡಿಗಳನ್ನು ವಾಪಸ್ಸು ತೆಗೆದುಕೊಂಡರೆ ಗ್ಯಾಸ್ ಸಿಲಿಂಡರ್‌ಗಳನ್ನು ಸಬ್ಸಿಡಿ ದರದಲ್ಲಲ್ಲ, ಉಚಿತವಾಗಿಯೇ ಕೊಡಬಹುದು ಮತ್ತು ಕೇವಲ ಗ್ಯಾಸನ್ನು ಮಾತ್ರವಲ್ಲ, ಆಹಾರ, ಆರೋಗ್ಯ ಶಿಕ್ಷಣ, ವಸತಿ ಎಲ್ಲವನ್ನೂ ನೀಡಬಹುದು. ಚಿದಂಬರಂ ಒಂದೇ ಒಂದೇ ಆದೇಶ ಹೊರಡಿಸಿ ಸಂಪತ್ತಿನ ಮೇಲೆ ಹಾಕುವ ತೆರಿಗೆಯಲ್ಲಿ ಶೇ.0.5ರಷ್ಟು ಹೆಚ್ಚಿಸಿದರೆ 12 ಸಿಲಿಂಡರ್‌ಗಳನ್ನು ನೀಡಲು ಹಣ ಲಭ್ಯವಾಗುತ್ತದೆ. ಶ್ರೀಮಂತರ ವಿಲಾಸಿ ಸರಕುಗಳು ಹಾಗೂ ಸೇವೆಗಳ ಮೇಲೆ ಶೇ.1ರಷ್ಟು ತೆರಿಗೆ ಹೆಚ್ಚಿಸಿದರೆ ಸಿಗುವ ಹಣದಿಂದಲೇ ಹತ್ತಾರು ಸಾವಿರ ಕೋಟಿ ರೂ. ಲಭ್ಯವಾಗುತ್ತದೆ. ಹಾಗೆ ಮಾಡದೇ ಕಾರು ಕಂಪೆನಿಗಳಿಗೆ ಒಂದೆಡೆ ಕಾರ್ಮಿಕರನ್ನು ಗುತ್ತಿಗೆ ಕಾರ್ಮಿಕರನ್ನಾಗಿಸಿ ಶ್ರಮಶಕ್ತಿಯ ಲೂಟಿಗೂ ಅವಕಾಶ ಮಾಡಿಕೊಡುವುದು, ಇನ್ನೊಂದೆಡೆ ಎಲ್ಲಾ ರೀತಿಯ ತೆರಿಗೆ ವಿನಾಯಿತಿ, ಭೂಮಿ, ನೀರನ್ನು ನೀಡುವ ಕೆಲಸವನ್ನೇ ಸರ್ಕಾರ ಮಾಡುತ್ತಿದೆ.

ಹಾಗಾಗಿಯೇ ನಮ್ಮದಿನ್ನೂ 60 ಲಕ್ಷ ಕೋಟಿ ಆರ್ಥಿಕತೆಯಾಗುಳಿದಿದೆ. ಅವರೆಲ್ಲರಿಗೆ ತೆರಿಗೆ ಹೆಚ್ಚಿಸುವ ಮೂಲಕ ಇದರ ದುಪ್ಪಟ್ಟು ದೊಡ್ಡದಾದ ಆರ್ಥಿಕತೆಯನ್ನೂ ಕಟ್ಟಿಕೊಳ್ಳಬಹುದು. ಅದೆಲ್ಲಾ ಮಾಡುವುದು ದೂರವೇ ಇರಲಿ, ಆದರೆ 60 ಲಕ್ಷ ಕೋಟಿ ಆರ್ಥಿಕತೆಯಲ್ಲೇ 3,000 ಕೋಟಿ ರೂ. ನೀಡಲು ಯಾವ ಕಷ್ಟವೂ ಇಲ್ಲ. ಸಮಸ್ಯೆ ಇರುವುದು ಸಂಪತ್ತು ಎಲ್ಲಿಂದ ಎಲ್ಲಿಗೆ ತರಿಸಬೇಕೆಂಬುದರ ಕುರಿತು ಆಳುವವರ ನೀತಿಯಲ್ಲಿ ಅಷ್ಟೇ. ■









...ಸ್‌ಗೆ ಸಬ್ಸಿಡಿ ಎಂಬ ಗ್ಯಾಸು: ಯಾರು ಯಾರಿಗೆ ಸಬ್ಸಿಡಿ ನೀಡುತ್ತಿದ್ದಾರೆ?

...ಜನಸಾಮಾನ್ಯರಿಗೆ ಸಬ್ಸಿಡಿ ನೀಡಲು ಕುಬೇರರ ಆದಾಯ ತೆರಿಗೆ, ಸಂಪತ್ತು ...ಯಿಂದಲೇ ಹಣ ಬರುತ್ತಿದೆ ಎಂದು ಬಿಂಬಿಸಲಾಗುತ್ತದೆ. ಇಂಜಿನಿಯರ್‌ಗಳು, ...ರುಗಳು ಇನ್ನಿತ್ಯಾದಿ ‘ಪುಣ್ಯವಂತರು’ ತಮ್ಮ ತೆರಿಗೆಯಿಂದಲೇ ಈ ‘ಬ್ಯಾಕ್‌ವರ್ಡ್ ...ರ್’ಗಳಿಗೆಲ್ಲಾ (ಮತ್ತು ಬ್ಯಾಕ್‌ವರ್ಡ್ ಪೀಪಲ್‌ಗಳಿಗೆ ಮಾತ್ರ) ಹಣ ಸೋರಿಹೋಗುತ್ತಿದೆ ... ಭಾವಿಸುವುದೂ ಇದೆ. ಆದರೆ ವಾಸ್ತವವೇನು ಎಂಬುದಕ್ಕೆ ಈ ಉದಾಹರಣೆಯನ್ನು ...ನೋಡಿ.

...ವಡೀ ಪೆಟ್ರೋಲಿಯಂ ಕ್ಷೇತ್ರದಿಂದ 2009-10ರ ಸಾಲಿನಲ್ಲಿನ 2009ರ ...ವೊಳಗೆ ಕೇಂದ್ರ ಸರ್ಕಾರಕ್ಕೆ ಲಭ್ಯವಾದ ಒಟ್ಟು ತೆರಿಗೆ ಇತ್ಯಾದಿ ಬಾಬ್ತು ...65 ಕೋಟಿ ರೂ.ಗಳು. ಸಬ್ಸಿಡಿ ನೀಡಿದ್ದಕ್ಕಾಗಿ ಎಲ್ಲಾ ತೈಲ ಉತ್ಪಾದಕ ಕಂಪೆನಿಗಳಿಗೆ ...) ಸರ್ಕಾರದ ಪತಿಯಿಂದ ಮರುಪಾವತಿ ಮಾಡಬೇಕಾಗಿ ಬಂದದ್ದು 14,058 ... ರೂ.ಗಳು. ಅಂದರೆ ಜನಸಾಮಾನ್ಯರೆಲ್ಲರೂ 100 ರೂ.ಗಳನ್ನು ತೆರಿಗೆಯಾಗಿ ಪೆಟ್ರೋಲಿಯಂ ಕ್ಷೇತ್ರದಿಂದಲೇ ಸರ್ಕಾರಕ್ಕೆ ನೀಡಿ, ಅದರಿಂದ 25 ರೂ.ಗಳನ್ನು ಮಾತ್ರ ಡೀಸೆಲ್, ಸೀಮೆಎಣ್ಣೆ ಮತ್ತು ಎಲ್‌ಪಿಜಿ ಗ್ಯಾಸ್‌ಗೆ ಸಬ್ಸಿಡಿಯಾಗಿ ಪಡೆಯುತ್ತಾರೆ. ಹಣದುಬ್ಬರ ಹೆಚ್ಚಾದ 2010-11ರ ಸಾಲಿನಲ್ಲಿ ಸಬ್ಸಿಡಿಯಾಗಿ ವಾಪಸ್ಸು ಪಡೆದದ್ದು ಕೇವಲ 20%ಅನ್ನು ಮಾತ್ರ.

ಇಲ್ಲಿ ಇನ್ನೂ ಒಂದು ಅಂಶವನ್ನು ನೋಡಿದರೆ ಈ ದೇಶ ನಡೆಯುತ್ತಿರುವ ರೀತಿ ಗೊತ್ತಾಗುತ್ತದೆ. ಜನಸಾಮಾನ್ಯರೆಲ್ಲರೂ ಬಳಸುವ ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲೆ ಹಾಕುವ ಅಬಕಾರಿ ಸುಂಕವು ಲೀಟರ್‌ಗೆ ಕ್ರಮವಾಗಿ 14.78 ರೂ. ಮತ್ತು 4.75 ರೂ.ಗಳು. ಆದರೆ ವಿಮಾನಗಳಲ್ಲಿ ಬಳಸುವ ಇಂಧನ (Aviation Turbine Fuel ATF33)ಕ್ಕೆ ಲೀಟರ್‌ಗೆ 3.60 ರೂ ಮಾತ್ರ. ಪಾಪ ವಿಮಾನದಲ್ಲಿ ಓಡಾಡುವ ಪ್ರಯಾಣಿಕರು, ಬಸ್ಸುಗಳಲ್ಲಿ, ದ್ವಿಚಕ್ರ ವಾಹನಗಳಲ್ಲಿ ಓಡಾಡುವವರಿಗಿಂತ ಬಡವರು!

ನಾನ್ ರೆಸಿಡೆಂಟ್ ಸಾಹಿತ್ಯ: ನಮ್ಮೊಡನಿದ್ದೂ ನಮ್ಮಂತಾಗದ..

'ಜನವರಿ 25, 26, 27ರಂದು ನಡೆಯಲಿರುವ ಸಾಹಿತ್ಯ ಸಂಭ್ರಮಕ್ಕೆ ಧಾರವಾಡ ಸಜ್ಜಾಗುತ್ತಿದೆ. ಈ ಸಂಭ್ರಮ ಅಂತಿಂಥದಲ್ಲ! ನಾನ್ ರೆಸಿಡೆಂಟ್ ಸಾಹಿತಿಗಳು, ಮತ್ತೆ ನೋಡಲು ಸಿಗಲಾರದವರು, ಪ್ರಶಸ್ತಿ ಪಡೆದವರು, ಪಡೆಯಲು ಕ್ಯೂ ನಿಂತವರು, ಎಲ್ಲರೂ ಇಲ್ಲಿ ನೆರೆಯುತ್ತಾರೆ. ಪುಷ್ಪಕ ವಿಮಾನಗಳಲ್ಲಿ ಸ್ವರ್ಗದಿಂದ ಧರೆಗಿಳಿವವರನ್ನು ನೋಡಲು ಇಂದೇ ನಿಮ್ಮ ಪ್ರವೇಶ ಕಾಯ್ದಿರಿಸಿಕೊಳ್ಳಿ, ಏಕೆಂದರೆ ಮೊದಲು ಬಂದ 250 ಜನರಿಗಷ್ಟೇ ಪ್ರವೇಶ.

ನೀವು ಧಾಸಾಸಂದಲ್ಲಿ ಪಾಲ್ಗೊಳ್ಳಬಯಸುವಿರಾದರೆ ಮೊದಲು ಪ್ರತಿನಿಧಿ ಶುಲ್ಕ 1500 ರೂಪಾಯಿ ಹಾಗೂ ಹೋಗಿಬರುವ ಪ್ರಯಾಣಕ್ಕೆ ಮತ್ತು ರಾತ್ರಿ ಊಟವಸತಿಯ ಖರ್ಚಿಗೆ ಕಿಸೆಯಲ್ಲಿ ಹಣವಿದೆಯೇ ನೋಡಿಕೊಳ್ಳಿ. ಹಣವಿಲ್ಲವೇ? ಕ್ಷಮಿಸಿ, ನಿಮ್ಮ ಕತೆಕವಿತೆಕಾಳಜಿಗಳು ಪ್ರವೇಶಕ್ಕೆ ಅರ್ಹತೆ ಒದಗಿಸುವುದಿಲ್ಲ. ನೆನಪಿಡಿ: ಕತೆಕವಿತೆಗಳಿಂದ ಹೊಟ್ಟೆ ತುಂಬುವುದಿಲ್ಲ.

ವಿಶೇಷ ಸೂಚನೆ: ವಿದ್ಯಾರ್ಥಿಗಳಿಗೆಂದೇ ಭಾರೀ ವಿಶೇಷ ರಿಯಾಯ್ತಿ ನೀಡಲಾಗಿದೆ. ಪ್ರತಿನಿಧಿ ಶುಲ್ಕ ಕೇವಲ ಒಂದು ಸಾವಿರ ಮಾತ್ರ.

ಪ್ರವೇಶಕ್ಕೆ ಅನುಮತಿ ನೀಡುವ ಹಕ್ಕು ಕಾದಿರಿಸಲಾಗಿದೆ. ಪ್ರವೇಶ ಗಿಟ್ಟಿಸಿದವರು ನಿಮ್ಮ ಪೆನ್ನು, ಸಿಗರೇಟು ವಗೈರೆ ಶಸ್ತ್ರಾಸ್ತ್ರಗಳನ್ನೆಲ್ಲ ತ್ಯಜಿಸಿ ಬನ್ನಿ. ಬಾಯಿ ಮುಚ್ಚಿಕೊಳ್ಳಲು ಬಟ್ಟೆ ಕಡ್ಡಾಯ. ಏಕೆಂದರೆ ಸಭ್ಯತೆಗೆ ಮೊದಲ ಪ್ರಾಶಸ್ತ್ಯ. ನಿಮ್ಮ ಪ್ರಶ್ನೆ, ಚರ್ಚೆ ಡೀಸೆಂಟ್ ಅಲ್ಲದಿದ್ದರೆ ಹೊರಹಾಕುವ, ಉಳಿದ ಅವಧಿಗೆ ಒಳಬಿಟ್ಟುಕೊಳ್ಳದೇ ಇರುವ ಎಲ್ಲ ಹಕ್ಕು ಸಂಘಟಕರಿಗಿದೆ.' •

******

ಇಂಥ ವಿಕಟ ಮಾತುಗಳಲ್ಲದೇ ಧಾರವಾಡದಲ್ಲಿ ನಡೆಯುತ್ತಿರುವ ಸಾಹಿತ್ಯ ಸಂಭ್ರಮ ಕುರಿತ ಬರಹ ಟೇಕ್ ಆಫ್ ಆಗುವುದಿಲ್ಲ.

ಮೊದಲ ಬಾರಿಗೆ ಧಾರವಾಡದ ಸಾಹಿತ್ಯ ವಲಯದ ದಿಗ್ಗಜರು ಸೇರಿ ನಡೆಸುತ್ತಿರುವ ಈ ಸಂಭ್ರಮವನ್ನು ಸಂಘಟಿಸಿದ ಉದ್ದೇಶ, ಅದರ ನಿಯಮ ನಿಬಂಧನೆಗಳತ್ತ ಕಣ್ಣು ಹಾಯಿಸಿದರೆ ಜನಪರ ಸಾಹಿತ್ಯ ಚಳವಳಿ, ಕನ್ನಡಭಾಷೆ ಇಂಥ ಮಾತುಗಳಿಗೆ ಅವರ ನಿಘಂಟುಗಳಲ್ಲಿ ಏನರ್ಥವಿದೆ ಎಂಬ ಕುತೂಹಲವಾಗುತ್ತದೆ. ಭಾರೀ ಪ್ರತಿನಿಧಿ ಶುಲ್ಕ ವಿಧಿಸಿ 40 ಲಕ್ಷ ಖರ್ಚಿನಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ ಬರಬಹುದೆಂದು ನಿರೀಕ್ಷಿಸಿರುವುದು ಕೇವಲ 400-600 ಜನ ಮಾತ್ರ. ಉದ್ದೇಶಿತ ವೆಚ್ಚದಲ್ಲಿ 10 ಲಕ್ಷ ಕನ್ನಡ ಸಂಸ್ಕೃತಿ ಇಲಾಖೆಯದು. ಧಾರವಾಡ ವಿಶ್ವವಿದ್ಯಾಲಯ ತನ್ನ ಸ್ಥಳವನ್ನು ಉಚಿತವಾಗಿ ಬಳಸಿಕೊಳ್ಳಲು ಅನುಮತಿ ನೀಡಿದೆ. ಪ್ರತಿದಿನ ಬೆಳಗ್ಗೆ ತಿಂಡಿಯಿದೆ, ಮಧ್ಯಾಹ್ನ ಊಟವಿದೆ. ಅದಕ್ಕೂ ಪ್ರಾಯೋಜಕರನ್ನು ಹುಡುಕಲಾಗುತ್ತಿದೆ. ರಾತ್ರಿ ಊಟ ಮತ್ತು ವಸತಿ ನಿಮ್ಮದೇ. ಅಲ್ಲಿ ಪುಸ್ತಕ ಮಳಿಗೆ ಹಾಕಬಯಸುವವರು 1500 ರೂ. ಶುಲ್ಕ ನೀಡಬೇಕು. ಅಲ್ಲಿಗೆ ಬರುವವರು ಸಭ್ಯವಾಗಿ ವರ್ತಿಸಬೇಕು. ಅಸಭ್ಯ ಪ್ರಶ್ನೆ, ಚರ್ಚೆಗೆ ಅವಕಾಶವಿಲ್ಲ.

ಕೆಲವೇ ಜನ ಭಾಗವಹಿಸಬಹುದಾದ ಇಂಥ ಡಿಸೈನರ್ ಕಾರ್ಯಕ್ರಮ ಯಾರಿಗಾಗಿ? ಸರ್ಕಾರ ಸಾಕುತ್ತಿರುವ ಎಷ್ಟೋ ಬಿಳಿಯಾನೆಗಳ ಯಾದಿಯಲ್ಲಿ ಇಂಥ ಇನ್ನೊಂದನ್ನು ಸೇರಿಸುವ ಅಗತ್ಯವಾದರೂ ಏನಿತ್ತು? ಇದಾದ ಎರಡೇ ವಾರಗಳಲ್ಲಿ ಧಾರವಾಡಕ್ಕೆ ಹತ್ತಿರದ ಬಿಜಾಪುರದಲ್ಲಿ ಕೋಟ್ಯಂತರ ವೆಚ್ಚದ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವಾಗ ಹದಿನೈದು ದಿನ ಮೊದಲು ಈ ಹೈ ಪ್ರೊಫೈಲ್ ಕಾರ್ಯಕ್ರಮ ನಡೆಸುವ ಉದ್ದೇಶ ಏನು?

ಸಾಹಿತ್ಯ ಕಲೆಗಳು ಪಂತಗೋಪುರದಲ್ಲಿ ಹುಟ್ಟಿ ಬೆಳೆಯಲಿಲ್ಲ, ಅವು ಕೇರಾಫ್ ಫುಟ್‌ಪಾತ್ ಅರಳಿ ಈ ನೆಲೆ ತಲುಪಿವೆ. ಕೇಳುಗ, ಓದುಗನೇ ಅದರ ಜೀವಾಳ. ಹಾಗಿರುವಾಗ ಕಾಸಿದ್ದರೆ ಬಂದು ಕೇಳು, ಇಲ್ಲದಿದ್ದರೆ ಹೊರಗಿರು ಎನ್ನುವ ನಿಯಮ ಕನ್ನಡ ಸಾಹಿತ್ಯ ಪರಂಪರೆಗಷ್ಟೇ ವಿರೋಧಿಯಲ್ಲ, ಜನ ವಿರೋಧಿಯೂ ಆಗುತ್ತದೆ. ಕನ್ನಡ ಸಾಹಿತ್ಯಕ್ಕೆ ಅನನ್ಯವಾದ ಒಂದು ಜನಸ್ನೇಹಿ, ಜನಪರ ಪರಂಪರೆಯಿದೆ. ಮೌಖಿಕ ಪರಂಪರೆ ಕೂಡಾ ಕೇಳುಗನಿಗೆ 'ಶರಣು' ಎಂದೇ ಹೇಳಲು ಶುರುಮಾಡುತ್ತದೆ. ರಾಜಾಶ್ರಯ ನೆಚ್ಚದೇ ಜನಸಾಮಾನ್ಯರ ನಡುವೆ ಬದುಕಿ ಬರೆದ ಕವಿಗಳಿದ್ದಾರೆ. ಮನೆಮನೆಗೆ ಪುಸ್ತಕ ಹೊತ್ತು ಮಾರಿ ಪುಸ್ತಕ ಪ್ರೀತಿ ಹೆಚ್ಚಿಸಿದ ಗಳಗನಾಥರಂಥವರಿದ್ದಾರೆ. ಟಿಎಡಿಎ ಗೊತ್ತೇ ಇಲ್ಲದೆ ಊರೂರಿಗೆ ಒಂದು ಭಾಷಣ, ಕವಿತೆ ಕೇಳಲಿಕ್ಕೆ ಹೇಳಲಿಕ್ಕೆ ತಿರುಗುವವರಿದ್ದಾರೆ. ಹೋರಾಟ ಚಳವಳಿಗಳ ಮೂಲಕ ಜನರ ನಡುವಿನಿಂದಲೇ ರೂಪುಗೊಂಡ ಸಾಹಿತಿಗಳಿದ್ದಾರೆ. ಸಾಹಿತ್ಯ ಹುಟ್ಟುವುದೂ, ಬೆಳೆಯುವುದೂ ಜನಸಂವೇದನೆಯಿಂದ, ಜನರಿಗಾಗಿ ಎನ್ನುವುದಾದರೆ ಅಂಥ ಕತೆ, ಕವಿತೆ, ಚರ್ಚೆಗಳನ್ನು ಮುಚ್ಚಿದ ಬಾಗಿಲಿನ ಒಳಗೆ ನಡೆಸಿದರೆ ಅದನ್ನು ಸಾಹಿತ್ಯ ಸಂಭ್ರಮವೆನ್ನುವುದು ಹೇಗೆ?

ಕಿಸೆಯಲ್ಲಿ ಕಾಸಿಲ್ಲದವ ಒಳಬರಲು ಅಯೋಗ್ಯನೆಂದು ನಿರ್ಧರಿಸುವ ಇಂಥ ಸಮ್ಮೇಳನಗಳು ಆಳದಲ್ಲಿ ಜನರಿಂದ ಸಾಹಿತಿಗಳನ್ನು, ಸಾಹಿತ್ಯವನ್ನು ದೂರ ಒಯ್ಯುವ; ಸಾಹಿತ್ಯವನ್ನೂ ಮಾರುಕಟ್ಟೆಯನ್ನಾಗಿಸುವ; ಯಾವುದು ಹೊರಗೆ ಯಾವುದು ಒಳಗೆ ಎಂದು ಮೊದಲೇ ನಿರ್ಧರಿಸಿ ಪ್ರತ್ಯೇಕತಾ ನೀತಿಯನ್ನು ಬೆಳೆಸುವ; ಚರ್ಚೆ-ವಾಗ್ವಾದ-ಠರಾವುಗಳ ನೈಜ ಸ್ಫೂರ್ತಿಯನ್ನೇ ನಾಶ ಮಾಡುವ ಕನ್ನಡ ವಿರೋಧಿ ಚಟುವಟಿಕೆಯಾಗಿದೆ. ಈಗ ಎಲ್ಲೆಡೆ ಪ್ರವೇಶಿಸಿರುವ ಕಾರ್ಪೋರೇಟ್ ಸಂಸ್ಕೃತಿ ಸಾಹಿತ್ಯ ಲೋಕವನ್ನೂ ಭ್ರಷ್ಟಗೊಳಿಸಿದ ಸೂಚನೆಯಾಗಿದೆ. ಒಂದೆಡೆ ಬನ್ನಿ ಎಂದು ಕರೆದರೆ ಬಟ್ಟೆ ಇಸ್ತ್ರಿ ಮಾಡಿಕೊಂಡು ಕವಿಗಳು ಓಡೋಡಿ ಬರುತ್ತಾರೆಂದು ಭಾವಿಸು ಬಂಡವಾಳಶಾಹಿ ಸಾಹಿತ್ಯ ಸಂಘಟಕರು; ಮತ್ತೊಂದೆಡ ಕೇಳುಗರನ್ನು 'ಪೇಯಿಂಗ್ ಕೆಪಾಸಿಟಿ' ಮೇಲೆ ಮೊದಲೇ ನಿರ್ಧರಿಸುವ ಶ್ರೇಷ್ಠತೆಯ ವ್ಯಸನಿಗಳು - ಇದರ ನಡುವ ನಿಜವಾದ ಸಾಹಿತಿ-ಸಾಹಿತ್ಯ ಎಲ್ಲೋ ಸೊರಗುತ್ತದೆ.

ಸಾರ್ವಜನಿಕ ಆಡಂಬರ ಮತ್ತು ಕೀಳು ಅಭಿರುಚಿಯ ವಿಜೃಂಭಣೆಯನ್ನು ಮೆಚ್ಚುವ ಗುಣ ಜನಸಾಮಾನ್ಯರಲ್ಲೂ ಕಾಣತೊಡಗಿದೆ. ಆದರೆ ಬರಹಗಾರನೂ ಹಾಗೇ ಆದರೆ? ಬರಹಗಾರನಿಗೆ ಇಂಥವಕ್ಕೆಲ್ಲ ಸಿಟ್ಟೇ ಬಾರದೆ ಸಿನಿಕನಾದರೆ? ಬಂದರೂ ಆ ಸಿಟ್ಟು ಬರೀ ನೈತಿಕ ಆಕ್ರೋಶದಲ್ಲಿ ಕೊನೆಗೊಂಡರೆ? ಆಗ ದುಷ್ಟಕೂಟಗಳು ಬೆಳೆಯುತ್ತಲೇ ಹೋಗುತ್ತವೆ. ಆದರೆ ಕನ್ನಡದ ಅನನ್ಯ ಪರಂಪರೆಯನ್ನು ಹಾದುಬಂದ, ಚಳವಳಿ-ಸಿದ್ಧಾಂತಗಳಿಂದ ತಮ್ಮ ತಾತ್ವಿಕತೆ ರೂಪಿಸಿಕೊಂಡ ಅನೇಕ ಸೂಕ್ಷ್ಮ ಮನಸ್ಸುಗಳು ವ್ಯವಹಾರದ ಕಸರತ್ತಿನಂತಿರುವ ಈ ಸಂಭ್ರಮದಲ್ಲಿ ಭಾಗವಹಿಸುತ್ತಿರುವುದು ಸಾಹಿತ್ಯದ ದುರಂತವಾಗಿ ಕಾಣುತ್ತಿದೆ.

ಆದರೂ ಕಾಲ ಮಿಂಚಿಲ್ಲ. ಮನೆಯೊಳಗೆ ಕಸ ಬೀಳುತ್ತಲೇ ಇರುತ್ತದೆ, ಅದನ್ನು ಗುಡಿಸಿ ಎಸೆಯುತ್ತಲೇ ಇರಬೇಕು. ಧೈರ್ಯವಾಗಿ ಯೋಚಿಸುವ ಮನಸ್ಸುಗಳು ಒಂದೆಡೆ ಸೇರಿ ಜನಸ್ನೇಹಿಯಲ್ಲದ ಸಾಹಿತ್ಯಕ ಸಂಭ್ರಮಾಚರಣೆಗಳನ್ನು ವಿರೋಧಿಸಬೇಕು. ಆ ನೆವದಲ್ಲಿ ಜನಪರ ಕಾಳಜಿಯ ಮನಸ್ಸುಗಳು ಒಂದಾಗಬೇಕು.

ಈ 'ಸಂಭ್ರಮ'ದ ಎಡಬಲ ತಿಳಿಯದೇ ಅದರಲ್ಲಿ ಭಾಗವಹಿಸ ಹೊರಟ ಹಿರಿಯರೇ, ಸ್ನೇಹಿತರೇ ಹೊರಬನ್ನಿ. ಎಲ್ಲಕ್ಕೂ ಇದ್ದೇ ಇದೆ ಪರ್ಯಾಯ.

• ಡಾ.ಎಚ್.ಎಸ್. ಅನುಪಮಾ

ತುಮಕೂರು: ಜಾತಿರಾಜಕಾರಣದ ಒಳಸುಳಿ


ಕಳೆದ ಬಾರಿ ಬಿಜೆಪಿ ಗೆಲುವಿಗೆ ವರದಾನವಾಗಿದ್ದ ಲಿಂಗಾಯತರ ವೋಟು ಯಡ್ಡಿಯ ಕೆಜೆಪಿ ಸ್ಥಾಪನೆಯಾಗುತ್ತಿದ್ದಂತೆ ಬಹುಮಟ್ಟಿಗೆ ಬಿಜೆಪಿ ಕೈಬಿಟ್ಟುಹೋಗಲಿದೆ. ಕೆಜೆಪಿ ಎಷ್ಟು ಕ್ಷೇತ್ರಗಳಲ್ಲಿ ಗೆಲ್ಲುತ್ತದೆ ಎಂದು ಹೇಳಲು ಸಾಧ್ಯವಿಲ್ಲವಾದರೂ ಎಷ್ಟು ಕ್ಷೇತ್ರಗಳಲ್ಲಿ ತನ್ನ ವಿರೋಧಿಗಳನ್ನು ಮಣ್ಣುಮುಕ್ಕಿಸುತ್ತದೆ ಎಂಬುದೇ ಕುತೂಹಲಕಾರಿ ವಿಷಯ. ಕೆಜೆಪಿ ಒಳಗೊಂಡಂತೆ ವಿವಿಧ ಪಕ್ಷಗಳ (ಜಾತಿವಾರು) ಅಭ್ಯರ್ಥಿಗಳ ಪಟ್ಟಿ ಆಖೈರುಗೊಂಡು ಅಖಾಡಕ್ಕಿಳಿದಾಗಲೇ ಈ ಬಗ್ಗೆ ಕನಿಷ್ಟ ಅಂದಾಜು ಸಿಗಲು ಸಾಧ್ಯ.

ರಾಜ್ಯದ ಜಾತಿ ಸಮೀಕರಣದ ಒಂದು ಸರಾಸರಿ ಲೆಕ್ಕಾಚಾರದಂತಿರುವ ಈ ಜಿಲ್ಲೆಯಲ್ಲಿ, ರಾಜ್ಯದಲ್ಲಿ ರಾಜಕೀಯ ಪ್ರಾಬಲ್ಯ ಹೊಂದಿರುವ ಲಿಂಗಾಯತ ಮತ್ತು ಒಕ್ಕಲಿಗ ಜಾತಿಗಳು ಹೆಚ್ಚೂಕಡಿಮೆ ಸಮಬಲದಲ್ಲಿವೆ. ಉಳಿದಂತೆ ದಲಿತ, ಕುರುಬ, ಅಲ್ಪಸಂಖ್ಯಾತ, ನಾಯಕ ಮುಂತಾದ ಜಾತಿಗಳು ಹೆಚ್ಚುಕಡಿಮೆ ಸರಾಸರಿ ಪ್ರಮಾಣದಲ್ಲಿವೆ.

ಆದರೆ ಈ ಸರಾಸರಿ ಲೆಕ್ಕಾಚಾರಕ್ಕೆ ಅಪವಾದವಾಗಿರುವ ಜಾತಿಯೆಂದರೆ ಅದು ಗೊಲ್ಲರ ಜಾತಿಯದು. ಇಡೀ ರಾಜ್ಯದ ಜನಸಂಖ್ಯೆಯಲ್ಲಿ ಗೊಲ್ಲರು ಕಡಿಮೆ ಜನಸಂಖ್ಯೆಯಿದ್ದರೂ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಈ ಜಾತಿಯ ಕೇಂದ್ರೀಕರಣ ಹೆಚ್ಚಾಗಿದ್ದು ಜಿಲ್ಲೆಯಲ್ಲಿ ಬಹುಶಃ ಮೂರನೇ ಅಥವಾ ನಾಲ್ಕನೇ ಅತಿದೊಡ್ಡ ಜಾತಿಯಾಗಿದೆ. ಆದರೆ ಇದುವರೆಗೆ ಯಾವುದೇ ಪಕ್ಷ ಈ ಜಾತಿಗೆ ಪ್ರಾತಿನಿಧಿತ್ವ ಕೊಟ್ಟಿರುವ ಉದಾಹರಣೆಯೇ ಇಲ್ಲಿಲ್ಲ. ಆದ್ದರಿಂದ ಜಿಲ್ಲೆಯ ರಾಜಕೀಯ ಲೆಕ್ಕಾಚಾರದಲ್ಲಿ ಗೊಲ್ಲರ ಜಾತಿಯ ಪ್ರಾತಿನಿಧಿತ್ವ ಎಂಬುದು ಕೂಡ ಒಂದು ಪ್ರಮುಖ ಅಂಶವಾಗಿಬಿಡುವ ಸಾಧ್ಯತೆ ಇಲ್ಲಿದೆ.

ತುಮಕೂರು ನಗರದಿಂದ ಬಿಜೆಪಿ ಪಕ್ಷದ ಸೊಗಡು ಶಿವಣ್ಣ ಗೆದ್ದಿದ್ದರೆ, ಲೋಕಸಭಾ ಕ್ಷೇತ್ರದಿಂದ ಅದೇ ಪಕ್ಷದ ಬಸವರಾಜು ಗೆದ್ದಿದ್ದಾರೆ. ಇಬ್ಬರೂ ಲಿಂಗಾಯತ ಜಾತಿಯವರೇ. ಉಳಿದಂತೆ ಗ್ರಾಮಾಂತರ ಕ್ಷೇತ್ರದಿಂದ ಗೆದ್ದಿರುವ ಬಿಜೆಪಿ ಅಭ್ಯರ್ಥಿ ಸುರೇಶ್ ಗೌಡ ಒಕ್ಕಲಿಗ ಜಾತಿಯಾದರೆ, ತಿಪಟೂರಿನ ಬಿಜೆಪಿಯ ಹಾಲಿ ಎಂಎಲ್‌ಎ ನಾಗೇಶ್ ಬ್ರಾಹ್ಮಣ ಜಾತಿಯ ಹಿನ್ನೆಲೆಯವರು. ಇನ್ನು ಜೆಡಿಎಸ್‌ನಿಂದ ಆರಿಸಿಬಂದಿರುವ ವಾಸು (ಗುಬ್ಬಿ ಕ್ಷೇತ್ರ), ಎಂಟಿ ಕೃಷ್ಣಪ್ಪ (ತುರುವೇಕೆರೆ), ಅನಿತಾ ಕುಮಾರಸ್ವಾಮಿ (ಮಧುಗಿರಿ) ಈ ಮೂವರು ಒಕ್ಕಲಿಗರಾದರೆ, ಚಿಕ್ಕನಾಯಕನಹಳ್ಳಿಯಿಂದ ಆರಿಸಿಬಂದಿರುವ ಸುರೇಶ್ ಬಾಬು ಮಾತ್ರ ಹಿಂದುಳಿದ ಕುರುಬ ಜನಾಂಗಕ್ಕೆ ಸೇರಿದವರು. ಕಾಂಗ್ರೆಸ್‌ನಿಂದ ಆರಿಸಿ ಬಂದಿರುವ ಟಿಬಿ ಜಯಚಂದ್ರ (ಶಿರಾ), ರಾಮಸ್ವಾಮಿಗೌಡ (ಕುಣಿಗಲ್) ಇಬ್ಬರೂ ಒಕ್ಕಲಿಗರೇ ಆಗಿದ್ದಾರೆ. ಅಂತೆಯೇ ಜಿಲ್ಲೆಯಲ್ಲಿ ಕೊರಟಗೆರೆ ಮತ್ತು ಪಾವಗಡ ಎರಡು ಮೀಸಲು ಕ್ಷೇತ್ರಗಳಿದ್ದು ಕ್ರಮವಾಗಿ ಕಾಂಗ್ರೆಸ್‌ನ ಜಿ.ಪರಮೇಶ್ವರ್ ಮತ್ತು ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ವೆಂಕಟರಮಣಪ್ಪ ಆ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಿದ್ದಾರೆ.

ಶಕ್ತಿ ರಾಜಕಾರಣದಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಎರಡೂ ಜಾತಿಗಳು ಪರಸ್ಪರ ಸೆಣಸಾಡುತ್ತಿವೆ. ಮೂರನೇ



ದೊಡ್ಡ ಶಕ್ತಿಯಾಗಿರುವುದು ದಲಿತ ಸಮುದಾಯ. ಸಂವಿಧಾನಬದ್ಧ ಮೀಸಲಾತಿ ಕೊಡುವುದು ಅನಿವಾರ್ಯವಾಗಿರುವ ಕಾರಣಕ್ಕೆ ದಲಿತ ಸಮುದಾಯದಿಂದ ಶಾಸನಸಭೆಗೆ ಪ್ರತಿಬಾರಿ ಇಬ್ಬರು ಆರಿಸಿ ಬರುತ್ತಿದ್ದಾರೆ. ಈ ದಲಿತ ಪ್ರತಿನಿಧಿಗಳು ತಮ್ಮ ಜನಾಂಗಗಳ ಉದ್ಧಾರಕ್ಕೆ ಏನು ಮಾಡಿದ್ದಾರೆ ಎಂಬುದು ಬೇರೆಯದೇ ಚರ್ಚೆಯಾದ್ದರಿಂದ ಆ ವಿವರ ಇಲ್ಲಿ ಅನಗತ್ಯ.


ಜಿಲ್ಲೆಯಲ್ಲಿ ನಾಲ್ಕು ಅಥವಾ ಐದನೇ ಸ್ಥಾನದಲ್ಲಿರುವ ಕುರುಬ ಜಾತಿಯನ್ನು ಪ್ರತಿನಿಧಿಸುವ ಏಕೈಕ ಅಭ್ಯರ್ಥಿ ಚಿಕ್ಕನಾಯಕನಹಳ್ಳಿ ಕ್ಷೇತ್ರದ ಜೆಡಿಎಸ್ ಎಂಎಲ್‌ಎ ಸುರೇಶ್‌ಬಾಬು. ಆದರೆ ಚಿಕ್ಕನಾಯಕನ ಹಳ್ಳಿಯ ರಾಜಕೀಯದ ಲೆಕ್ಕಾಚಾರ ಹಾಗೂ ಕ್ಯಾಸ್ಟ್ ಕೆಮಿಸ್ಟ್ರಿ ವಿಭಿನ್ನವಾಗಿರುವ ಅನಿವಾರ್ಯ ಕಾರಣಕ್ಕಾಗಿ ಸುರೇಶ್‌ಬಾಬು ಗೆದ್ದು ಬಂದಿದ್ದಾರೆಯೇ ಹೊರತು ಬೇರೆ ಯಾವುದೇ ಕಾರಣದಿಂದಲ್ಲ. ದೇವರಾಜ ಅರಸು ಸಂಪುಟದಲ್ಲಿ ಮಂತ್ರಿಯಾಗಿದ್ದ ನಾಡಿನಾದ್ಯಂತ ಹೆಸರುವಾಸಿಯಾಗಿದ್ದ ಸಜ್ಜನ ಹಾಗೂ ದಕ್ಷ ರಾಜಕಾರಣಿ ಎನ್. ಬಸವಯ್ಯನವರ ಸುಪುತ್ರ ಎಂಬುದೇ ಇವರ ಏಕೈಕ ಅರ್ಹತಾ ಸರ್ಟಿಫಿಕೇಟ್.

ಇಲ್ಲಿಗೆ ಸುಮಾರು ಎರಡು ದಶಕಗಳ ಹಿಂದೆ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಎಂಎಲ್‌ಎ ಒಬ್ಬರು ವಿಧಾನಸಭೆಯಲ್ಲಿ ಒಂಟಿಕಾಲಿನ ಧರಣಿ ಸತ್ಯಾಗ್ರಹ ನಡೆಸಿ, ತಾಲ್ಲೂಕಿಗೆ ಒಂದು ಡಿಗ್ರಿ ಕಾಲೇಜನ್ನು ಮಂಜೂರು ಮಾಡಿಸಿಕೊಂಡು ಬಂದದ್ದನ್ನು ಬಿಟ್ಟರೆ ಇದುವರೆಗೂ ಅಧಿಕಾರಕ್ಕೆ ಬಂದ ಯಾವುದೇ ಶಾಸಕ ಇಲ್ಲಿ ಕಿಸಿದಿದ್ದೇನೂ ಇಲ್ಲ. ಇದುವರೆಗೂ ಉತ್ತಮ ರಸ್ತೆಗಳಾಗಲಿ, ಆಸ್ಪತ್ರೆಯಾಗಲಿ, ಉನ್ನತ ಶೈಕ್ಷಣಿಕ ಸಂಸ್ಥೆಗಳಾಗಲಿ ಇಲ್ಲಿ ಕಾಣ ಸಿಗುವುದಿಲ್ಲ. ತಾಲ್ಲೂಕಿನ ಜನರು ಸಣ್ಣಪುಟ್ಟ ಕಾಯಿಲೆ ಅಥವ ಹೆರಿಗೆ ಚಿಕಿತ್ಸೆಯಂಥಾ ಸಾಮಾನ್ಯ ಚಿಕಿತ್ಸೆಗೂ ಪಕ್ಕದ ತಿಪಟೂರು ಅಥವ ತುಮಕೂರಿಗೆ ಹೋಗಬೇಕಾಗಿದೆ.

ಹೇಮಾವತಿಯಿಂದ ನೀರನ್ನು ಹರಿಸುವ ಆಶ್ವಾಸನೆಯಲ್ಲಿ ದಶಕಗಟ್ಟಲೆ ಜನರನ್ನು ಯಾಮಾರಿಸುತ್ತಲೇ ಬಂದಿರುವ ರಾಜಕಾರಣಿಗಳನ್ನು ಗಟ್ಟಿಸಿ ಕೇಳುವವರೇ ಇಲ್ಲಿಲ್ಲ. ಹೀಗಾಗಿ ಚುನಾವಣೆ ಹತ್ತಿರವಾಗುತ್ತಿದ್ದಂತೆ ಬಿಜೆಪಿಯ ಮಾಜಿ ಎಂಎಲ್‌ಎ ಕಿರಣ್‌ಕುಮಾರ್ ಎಂಬುವವರು ಸಿಎಂ ಶೆಟ್ಟರ್‌ರನ್ನು ಕರೆತಂದು ಒಂದು ಶಿಲಾನ್ಯಾಸದ ಕಸರತ್ತು ನಡೆಸಿದ್ದಾರೆ. 102 ಕೋಟಿಗಳನ್ನು ಬಿಡುಗಡೆ ಮಾಡಿ ಕಾಮಗಾರಿಗೆ ಚಾಲನೆ ನೀಡಿರುವುದಾಗಿಯೂ ಬಡಾಯಿ ಬಿಟ್ಟಿದ್ದಾರೆ. ಆದರೆ ದಶಕಗಟ್ಟಲೆ ನನೆಗುದಿಗೆ ಬಿದ್ದಿದ್ದ ಈ ಯೋಜನೆ ಕಾರ್ಯರೂಪಕ್ಕೆ ಬರುವವರೆಗೆ ಇಂಥಾ ಶಿಲಾನ್ಯಾಸಗಳನ್ನು ನೆಚ್ಚಿಕೊಳ್ಳುವಂತಿಲ್ಲ.

ಗೆದ್ದ ಹೋದ ಎಂಎಲ್‌ಎಗಳು ಕ್ಷೇತ್ರಕ್ಕೆ ಕಾಲಿಡುವುದು ಒಂದು ರೀತಿಯಲ್ಲಿ ಪಿಕ್‌ನಿಕ್‌ಗೆ ಬಂದಂತೆ ಫಾರ್ ಎ ಚೇಂಜ್ ಅಷ್ಟೆ. ಹಾಲಿ ಎಂಎಲ್‌ಎ ಸುರೇಶ್‌ಬಾಬುರನ್ನು ಸಂಪರ್ಕ ಮಾಡುವುದು ಹೇಗೆ ಎಂಬುದು ಇಲ್ಲಿನ ಮತದಾರರಿಗೆ ಇಂದಿಗೂ ಬಗೆಹರಿಯದ ಪ್ರಶ್ನೆಯಾಗಿದೆ. ಗಣಿಗಳು ಕಾರ್ಯ ನಿರ್ವಹಿಸುತ್ತಿದ್ದ ಕಾಲದಲ್ಲಿ ಗಣಿ ಲಾಬಿ ನಡೆಸಿದ್ದನ್ನು ಬಿಟ್ಟರೆ ಈ ಮಹಾನುಭಾವ ಕಡಿದಿದ್ದೇನೂ ಇಲ್ಲವೆಂಬುದನ್ನು ಅವರ ಪಕ್ಷದ ಕಾರ್ಯಕರ್ತರೇ ಹೇಳುತ್ತಾರೆಂದರೆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬಹುದು.

ಮತ್ತೊಂದು ವಿಶೇಷವೇನೆಂದರೆ ಕಳೆದ 60 ವರ್ಷಗಳ ಚುನಾವಣಾ ರಾಜಕೀಯದ ಇತಿಹಾಸದಲ್ಲಿ ಇಲ್ಲಿ ಗೆದ್ದು ಬಂದವರು ಒಂದೋ ಲಿಂಗಾಯತ ಅಭ್ಯರ್ಥಿ ಅಥವಾ ಕುರುಬ ಜಾತಿಯ ಅಭ್ಯರ್ಥಿ ಮಾತ್ರ.



ಸತೀಶ್ ಸಾಸಲು

ಅನಾದಿಕಾಲದಿಂದಲೂ ಕಾಂಗ್ರೆಸ್ ಈ ಕ್ಷೇತ್ರವನ್ನು ತಮ್ಮ ಎದುರಾಳಿಗಳ ಜೊತೆ ಒಳಒಪ್ಪಂದದ ಡೀಲ್‌ಗಾಗಿ ಬಳಸುತ್ತಾ ಬಂದಿದೆ ಅಥವಾ ಬಿ ಫಾರ್ಮ್ ಅನ್ನು ಮಾರಾಟಕ್ಕಿಟ್ಟು ಹೆಚ್ಚು ಹಣ ಕೊಟ್ಟವರಿಗೆ ಟಿಕೆಟ್ ಕೊಡುವ ಹೀನ ಚಾಳಿಗೆ ಬಿದ್ದು ಹೋಗಿದೆಯೆಂಬ ಗುಟ್ಟು ಒಂದು ರೀತಿಯ ಓಪನ್ ಸೀಕ್ರೆಟ್. ಇಂಥಾ ಸನ್ನಿವೇಶದಲ್ಲಿ ಈ ಬಾರಿಯೂ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ಬಹಳ ದೊಡ್ಡದಿದೆ. ಶಿರಾ ಕ್ಷೇತ್ರದ ಶಾಸಕ ಜಯಚಂದ್ರರ ಮಗ, ಮಾಜಿ ಶಾಸಕ ರಾಜಣ್ಣ ಅವರ ಮಗ ಮುಂತಾದವರು ತಮಗೆ ಒಂದು ಚಾನ್ಸ್ ಕೊಡಿ ಎಂದು ಸರದಿಯಲ್ಲಿದ್ದಾರೆ.

ಜೊತೆಗೆ ಜೆಡಿಯು ಎಂಬ ಹಾಸಿಗೆ ಹಿಡಿದ ಪಕ್ಷದ ನಾಯಕ ಹಾಗೂ ಮಾಜಿ ಶಾಸಕ ಜೆಸಿ ಮಾಧುಸ್ವಾಮಿ ಕೂಡ ಕಾಂಗ್ರೆಸ್ ಪಕ್ಷದತ್ತ ಒಂದು ಕಾಲಿರಿಸಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಕೆಲ ತಿಂಗಳುಗಳಿಂದ ಮಾಧುಸ್ವಾಮಿ ಯಡ್ಡಿಯ ಕೆಜೆಪಿ ಪಕ್ಷದಲ್ಲಿ ಅಧಿಕೃತವಾಗಿ ಸೇರೇಬಿಟ್ಟಿದ್ದಾರೇನೋ ಎಂಬಂತೆ ಓಡಾಡಿಕೊಂಡಿದ್ದರು. ಯಡ್ಡಿ ಜೊತೆಯೂ ಕೆಲವು ಸುತ್ತಿನ ಮಾತುಕತೆ ನಡೆಸಿದ್ದರು. ಆದರೆ ಈಗ ಏನಾಯ್ತೋ ಏನೋ? ಇದ್ದಕ್ಕಿದ್ದಂತೆ ಕಾಂಗ್ರೆಸ್‌ನ ಕದ ತಟ್ಟುತ್ತಿದ್ದಾರೆ ಎಂಬ ಸುದ್ದಿಗಳು ಕೇಳಿಬರುತ್ತಿವೆ.


ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿ ಸತೀಶ್ ಸಾಸಲು ಎಂಬ ಯುವ ಅಭ್ಯರ್ಥಿ ಕ್ಷೇತ್ರಾದ್ಯಂತ ಚುರುಕಾಗಿ ಓಡಾಡುತ್ತಿರುವ ಸುದ್ದಿಗಳು ಕೇಳಿಬಂದಿವೆ. ಸತ್ತು ಮಲಗಿರುವ ಕಾಂಗ್ರೆಸ್‌ನಲ್ಲಿ ಇದೆಂಥಾ ಚುರುಕುತನ ಎಂದು ಕೆದಕುತ್ತಾ ಹೋದರೆ ಅದು ಅಹಿಂದ ಹೋರಾಟದೊಂದಿಗೆ ಈ ಅಭ್ಯರ್ಥಿಯ ಉಗಮ ಹೆಣೆದುಕೊಂಡಿರುವ ಸತ್ಯ ಗೋಚರಿಸುತ್ತದೆ. ಅಂದರ ಲಾಗಾಯ್ತಿನಿಂದ ಲಿಂಗಾಯತ ಅಥವ ಕುರುಬ ಜನಾಂಗಗಳಿಗೆ ಮಾತ್ರ ಮೀಸಲು ಎಂಬಂತಾಗಿರುವ ಕ್ಷೇತ್ರದಲ್ಲಿ ಇತರ ಜನಾಂಗಗಳು ರಾಜಕೀಯ ಪ್ರಾತಿನಿಧಿತ್ವ ಗಳಿಸಿಕೊಳ್ಳಬೇಕೆಂಬ ತಳಸಮುದಾಯಗಳ ಒತ್ತಾಸೆಯಾಗಿ ಈ ಯುವಕನನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿಸಲಾಗಿದೆ ಎಂಬ ಮಾತುಗಳೂ ಕೇಳಿಬರುತ್ತಿದೆ.

ಹಿಂದುಳಿದ ಕಾಡು ಗೊಲ್ಲರ ಈ ಹುಡುಗ ವಿದ್ಯಾವಂತನಾಗಿದ್ದು ನಾನಾ ಪ್ರಗತಿಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಸಹಜವಾಗಿಯೇ ದಲಿತರನ್ನೂ ಒಳಗೊಂಡಂತೆ ಇನ್ನಿತರ ನಾಯಕ, ಲಂಬಾಣಿ ಮುಂತಾದ ಜಾತಿಗಳ ಯುವಕರು ಈತನ ಬೆನ್ನ ಹಿಂದೆ ನಿಲ್ಲುತ್ತಿದ್ದಾರೆ. ಹೇಳಿಕೇಳಿ ಈತ ಕಾಂಗ್ರೆಸ್ ಅಧ್ಯಕ್ಷ ಪರಮೇಶ್ವರ್ ಅವರ ಶಿಷ್ಯ ಎಂದು ಗುರುತಿಸಿಕೊಂಡಿರುವುದರಿಂದ ಈತನಿಗೆ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚು ಎಂಬುದು ಕ್ಷೇತ್ರದಲ್ಲಿ ಕೇಳಿಬರುತ್ತಿರುವ ಮಾತು. ಸತೀಶ್‌ಗೆ ಟಿಕೆಟ್ ಕೊಡುವ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ ಸರಾಸರಿ 20ರಿಂದ 30 ಸಾವಿರದಷ್ಟಿರುವ ಗೊಲ್ಲರ ಜನಾಂಗದ ಓಟುಗಳನ್ನು ತನ್ನ ತೆಕ್ಕೆಯಲ್ಲೇ ಉಳಿಸಿಕೊಳ್ಳುವ ಲೆಕ್ಕಾಚಾರ ಕಾಂಗ್ರೆಸ್‌ನದು ಎಂಬುದು ಜಿಲ್ಲೆಯ ರಾಜಕೀಯ ಪಂಡಿತರ ಲೆಕ್ಕಾಚಾರ. ಆದರೆ ಕೊನೆ ಘಳಿಗೆಯಲ್ಲಿ ಆತ್ಮಹತ್ಯಾಕಾರಿ ಬದಲಾವಣೆಗೆ ಕುಖ್ಯಾತಿ ಗಳಿಸಿರುವ ಕಾಂಗ್ರೆಸ್ ಪಕ್ಷದಲ್ಲಿ ಏನು ಬೇಕಾದರೂ ಸಂಭವಿಸಬಹುದು. ಇದಕ್ಕೆ ತುಮಕೂರು ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದ ಇತಿಹಾಸದಲ್ಲಿ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ.

ಹೀಗೆ ಪಲ್ಲಟಗೊಳ್ಳಬಹುದಾದ ಲಿಂಗಾಯತ, ಗೊಲ್ ದಲಿತ ಓಟುಗಳು ಯಾರನ್ನು ಗದ್ದುಗೆಗೆ ಏರಿಸುತ್ತವೆ ಯಾರನ್ನು ಮಕಾಡೆ ಕೆಡವುತ್ತವೆ ಎಂಬುದನ್ನು ಕಾಲವೇ ನಿರ್ಧರಿಸಬೇಕು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ನಾನು ನನ್ನ ಬದುಕಿಗಾಗಿ ಹೋರಾಡಿದೆ... ಮತ್ತು ಗೆದ್ದೆ



ನಾನು ಬಾಂಬೆಯಲ್ಲಿ ಹುಟ್ಟಿ ಬೆಳೆದವಳು. ಈಗ ...ರಿಕಾದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ಅತ್ಯಾಚಾರದ ...ೆ ನಾನು ಪ್ರಬಂಧವೊಂದನ್ನು ಬರೆಯುತ್ತಿದ್ದು ಅದರ ...ರ್ಯಗಾಗಿ ಹದಿನೈದು ದಿನಗಳ ಹಿಂದೆ ಬಾಂಬೆಗೆ ...ದ್ದೇನೆ.

...ಮೂರು ವರ್ಷಗಳ ಹಿಂದೆ ನಾನು ಅತ್ಯಾಚಾರಕ್ಕೆ ...ಾದ ದಿನದಿಂದಲೂ ಅತ್ಯಾಚಾರದ ಬಗ್ಗೆ ಅತ್ಯಾಚಾರಿಗಳ ... ಅತ್ಯಾಚಾರಕ್ಕೆ ಬಲಿಯಾದವರ ಬಗ್ಗೆ ಜನರಲ್ಲಿರುವ ... ಗ್ರಹಿಕೆಗಳನ್ನು ಎಚ್ಚರದಿಂದ ಗಮನಿಸಿದ್ದೇನೆ. ...ಚಾರಕ್ಕೆ ಬಲಿಯಾದವರಿಗೆ ಅಂಟುವ ಕಳಂಕದ ...ಮೂ ನನಗೆ ಅರಿವಿದೆ. 'ಶೀಲವನ್ನು ಕಳೆದುಕೊಳ್ಳು...ಕ್ಕಿಂತ ಸಾಯುವುದೇ ಮೇಲು' ಎಂಬ ಭಾವವನ್ನು ...ಮಾನಸವು ಸೂಚಿಸುತ್ತಲೇ ಬಂದಿದೆ. ನಾನು ಇದನ್ನು ...ವುದಿಲ್ಲ. ನನ್ನ ಜೀವವು ನನಗೆ ಬೇರೆಲ್ಲದಕ್ಕಿಂತಲೂ ... ಅಮೂಲ್ಯವಾದುದು. ಅತ್ಯಾಚಾರಕ್ಕೆ ಒಳಗಾದ ಅನೇಕ ...ಳೆಯರು ಈ ಕಳಂಕದಿಂದ ತಪ್ಪಿಸಿಕೊಳ್ಳಲು ಮೌನಕ್ಕೆ ...ಾಗುತ್ತಾರೆ. ಆದರೆ ಈ ಮೌನದಿಂದಾಗಿ ನಡುಕ ...ಸುವ ಪ್ರಾಣಸಂಕಟದಿಂದ ಒದ್ದಾಡುತ್ತಾರೆ.

...ಪುರುಷರು ಅನೇಕ ಕಾರಣಗಳನ್ನು ಮುಂದೊಡ್ಡಿ ...ಚಾರಕ್ಕೆ ಒಳಗಾದ ಮಹಿಳೆಯನ್ನೇ ದೂಷಿಸುತ್ತಾರೆ. ...ತಕರ ಸಂಗತಿಯೆಂದರೆ ಹೆಂಗಸರು ಕೂಡ ಅತ್ಯಾಚಾರಕ್ಕೆ ...ಯಾದವರನ್ನೇ ದೂರುತ್ತಾರೆ. ಅಂತರಂಗದಲ್ಲಿ ಆಳಿಸಲಾಗ... ಛಾಪು ಮೂಡಿಸಿರುವ ಧಾರ್ಮಿಕ ನಂಬುಗೆಗಳು, ...ಗಳು ಇದಕ್ಕೆ ಕಾರಣವಿರಬಹುದು. ಅದೇನೇ ಇರಲಿ, ... ಮಾಡುವುದರ ಮೂಲಕ ತಮಗೇ ಅರಿವಿಲ್ಲದಂತೆ ...ಚಾರಕ್ಕೊಳಗಾಗಬಹುದಾದ ಸಾಧ್ಯತೆಗೆ ತಮ್ಮನ್ನೇ ಈಡು ...ಸಿಕೊಳ್ಳುತ್ತಾರೆ.

...ಜುಲೈ ತಿಂಗಳ ಸೆಖೆಗಾಲದ ಒಂದು ಸಂಜೆ ಈ ...ೆ ನಡೆಯಿತು. ಅದೇ ವರ್ಷ ಮಹಿಳಾ ಸಂಘಗಳು ...ಚಾರವನ್ನು ತಡೆಯಲು ಸಶಕ್ತ ಶಾಸನ ರೂಪಿಸುವಂತೆ ...ಯಿಸಲು ಆರಂಭಿಸಿದ್ದವು. ನಾನು ಗೆಳೆಯ ರಶೀದ್ ...ದಿಗಿದ್ದೆ. ನಾವಿಬ್ಬರೂ ಸುತ್ತಾಡುತ್ತಾ ಮನೆಯಿಂದ ...ೂವರೆ ಮೈಲಿನಷ್ಟು ನಡೆದುಬಂದು ಬಾಂಬೆಯ ...ವಲಯದ ಚೆಂಬೂರುಗುಡ್ಡದ ಅಂಚಿನಲ್ಲಿ ಕುಳಿತು ...ಡಿದ್ದೆವು. ಕತ್ತಿಯನ್ನು ಹಿಡಿದುಕೊಂಡಿದ್ದ ನಾಲ್ಕು ...ಂದ ನಾವು ದಾಳಿಗೊಳಗಾದೆವು. ನಮ್ಮಿಬ್ಬರನ್ನು ...ಡೆದರು. ಗುಡ್ಡದ ಮೇಲ್ಭಾಗಕ್ಕೆ ಬಲವಂತವಾಗಿ ...ೊಯ್ದರು. ಸುಮಾರು ಎರಡು ಗಂಟೆಗಳ ಕಾಲ ...ನ್ನಲ್ಲಿ ಇಟ್ಟುಕೊಂಡರು. ದೈಹಿಕವಾಗಿ ಮಾನಸಿಕವಾಗಿ ...ಬ್ಬರೂ ಹಲ್ಲೆಗೊಳಗಾದೆವು. ಕತ್ತಲಾಗುತ್ತ ಬಂದಂತೆ ...ಬ್ಬರನ್ನೂ ಬೇರ್ಪಡಿಸಿದರು. ನಾವು ಜೋರಾಗಿ ...ಾಡಿದೆವು. ರಶೀದ್‌ನನ್ನು ಒತ್ತೆಯಾಗಿಟ್ಟುಕೊಂಡು ...ಲ್ಲ ನನ್ನ ಮೇಲೆ ಅತ್ಯಾಚಾರ ನಡೆಸಿದರು. ನಮ್ಮಿಬ್ಬರಲ್ಲಿ ...ಾದರೊಬ್ಬರು ಪ್ರತಿರೋಧಿಸಿದರೆ ಇನ್ನೊಬ್ಬರನ್ನು ಘಾಸಿ ...ಸುವ ಬೆದರಿಕೆಯಿತ್ತು, ಇದೊಂದು ಪರಿಣಾಮಕಾರಿ ...!

...ನಮ್ಮನ್ನು ಕೊಲ್ಲಬೇಕೋ ಬೇಡವೋ ಎಂಬುದನ್ನು ...ನ್ನೂ ನಿರ್ಧರಿಸಿರಲಿಲ್ಲ. ಜೀವ ಉಳಿಸಿಕೊಳ್ಳುವುದಕ್ಕಾಗಿ ...ಬ್ಬರು ಸಾಧ್ಯವಿರುವುದನ್ನೆಲ್ಲ ಮಾಡಿದೆವು. ನನ್ನ ಏಕೈಕ ...ೇಶ ಬದುಕುವುದಾಗಿತ್ತು, ಅದೇ ಬೇರೆಲ್ಲಕ್ಕಿಂತ ...ವಾಗಿತ್ತು.


...ಅತ್ಯಾಚಾರಿಗಳೊಡನೆ ಮೊದಲು ದೈಹಿಕವಾಗಿ ಸೆಣಸಿದೆ. ... ಕೆಳಗೆ ತಳ್ಳಿ ಅಲುಗಾಡದಂತೆ ಹಿಡಿದುಕೊಂಡ ... ಕೂಗಾಡಿದೆ. ನನ್ನ ಕೋಪ ಆಕ್ರಂದನಗಳಿಂದ ಏನೂ ...ೋಜನವಾಗಲಿಲ್ಲ. ಆದ್ದರಿಂದ ನಾನು ಹುಚ್ಚಳಂತೆ ...ಯ ಬಗ್ಗೆ, ಕರುಣೆಯ ಬಗ್ಗೆ, ತೊದಲತೊಡಗಿದೆ. ...ವೀಯತೆಯ ಬಗ್ಗೆಯೂ ಮಾತನಾಡಿದೆ. ಅವರಂತೆ ... ಮನುಷ್ಯಳೆಂದು ಉಸುರಿದೆ. ನನ್ನ ಉನ್ಮತ್ತ ...ುಗಳು ಪರಿಣಾಮ ಬೀರಿದವು. ಕಡೆಯ ಪಕ್ಷ ...ವರೆಗೂ ಅತ್ಯಾಚಾರ ನಡೆಸದೇ ಇದ್ದವರು ...ವಾದರು. ನನ್ನನ್ನಾಗಲಿ ರಶೀದನನ್ನಾಗಲಿ ಕೊಲ್ಲದೆ ...ುವುದಾಗಿ ಭರವಸೆ ನೀಡಿದರೆ ಮರುದಿನ ಮತ್ತೆ ...ುದಾಗಿ ನಾನು ಅವರಲ್ಲೊಬ್ಬನಿಗೆ ಹೇಳಿದೆ. ಈ ...ಗಳು ನಾವು ಹೇಳಲಾರದಷ್ಟು ಬೆಲೆಯುಳ್ಳವಾಗಿದ್ದವು.

ನಮ್ಮಿಬ್ಬರ ಬದುಕುವ ಆಸೆ ಜೀವಂತವಾಗಿತ್ತು, ... ವೇಳೆ ಮತ್ತೆ ಆ ವ್ಯಕ್ತಿಯ ಬಳಿ ಹೋಗುವ ...ರ್ಭ ಬಂದಿದ್ದರೆ ಹರಿತವಾದ ಆಯುಧವನ್ನು ಒಯ್ದು ... ಮತ್ತೊಮ್ಮೆ ಅತ್ಯಾಚಾರವೆಸಗದಂತೆ ಮಾಡುತ್ತಿದೆ. ...ಷ್ಟು ಬಾರಿಯಾದರೂ ನನ್ನ ಮೇಲೆ ಅತ್ಯಾಚಾರವೆಸಗಿ ...ದು. ನಾನು ಅದೆಂತಹ ಭಯಾನಕ ನೋವಿನಿಂದ ...ತ್ತಿದ್ದೆನೆಂದರೆ ಕೆಲವು ಸಮಯದ ಬಳಿಕ ಏನು ...ಯುತ್ತಿದೆಯೆನ್ನುವ ವಾಸ್ತವ ಪ್ರಜ್ಞೆಯನ್ನೆ ಕಳೆದುಕೊಂಡು ... ಎಂದೆಂದಿಗೂ ಮುಗಿಯದಂತೆ ಕಂಡ ಸುದೀರ್ಘ ...ಸೆಯ ನಂತರ, ಹುಡುಗನೊಂದಿಗೆ ಒಂಟಿಯಾಗಿ ...ೇಕೆಂದರೆ ನಾನೆಂಥ ನೀತಿಗೆಟ್ಟ ಹಾದರಗಿತ್ತಿಯಿರ...ದು ಉಪ್ಪಣೆಯ ಭಾಷಣ ಮಾಡಿ ನಮ್ಮನ್ನು ಬಿಟ್ಟರು.

ಒಂಟಿಯಾಗಿ ರಶೀದ್‌ನೊಂದಿಗಿದ್ದುದು ಅವರನ್ನು ...ತ್ತು, ಈ ಸಮಯದುದ್ದಕ್ಕೂ ನನಗೇನೋ ಒಳ್ಳೆಯದನ್ನು ...ವರಂತೆ, ಸರಿಯಾದ ಪಾಠ ಕಲಿಸಿದವರಂತೆ ಅವರು ...ುತ್ತಿದ್ದರು. ಅವರದು ಧರ್ಮಾಂಧತೆಯಿಂದ ಕೂಡಿದ ಕುರುಡು ನಿಷ್ಠೆಯಾಗಿತ್ತು.

ಅವರು ನಮ್ಮನ್ನು ಗುಡ್ಡದಿಂದ ಕೆಳಗಿಳಿಸಿದರು. ನಾವು ಎಡವಿ ಮುಗ್ಗರಿಸುತ್ತ ಒಬ್ಬರಿಗೊಬ್ಬರು ಆತುಕೊಂಡು ಕತ್ತಲೆದುಂಬಿದ ರಸ್ತೆಗೆ ಬಂದೆವು. ಅವರೆಲ್ಲ ಸ್ವಲ್ಪ ದೂರ ಕೈಯಲ್ಲಿಯ ಕತ್ತಿಯನ್ನು ಝಳಪಿಸುತ್ತಾ ನಮ್ಮ ಹಿಂದೆಯೇ ಬಂದರು. ಇದು ಇಡೀ ಪ್ರಕರಣದ ದಾರುಣ ಘಟ್ಟ. ನಮ್ಮ ಬಿಡುಗಡೆ ಎಷ್ಟು ಹತ್ತಿರವಿತ್ತು, ಆದರೂ ಮರಣಭಯ ನಮ್ಮನ್ನು ಸಂಪೂರ್ಣವಾಗಿ ಆವರಿಸಿತ್ತು. ನಮ್ಮ ಜೀವಕ್ಕಾಗಿ ಚೌಕಾಸಿ ಮಾಡುವುದನ್ನು ಬಿಟ್ಟು ಆಡುವ ಪ್ರತಿ ಪದವನ್ನು ತೂಗಿ ಮಾತನಾಡಬೇಕಾದ ನಂಬಲಸಾಧ್ಯವಾದ ಸಂದರ್ಭವನ್ನು ಸುಲಭವಾಗಿ ಮರೆಯಲಾಗುವುದಿಲ್ಲ. ನಮ್ಮ ಮಾತುಗಳು ಅವರನ್ನು ಸಿಟ್ಟಿಗೆಬ್ಬಿಸಿತೆಂದರೆ ನಮ್ಮ ಹೊಟ್ಟೆಯೊಳಗಡೆ ಕತ್ತಿ ಚುಚ್ಚಿಕೊಂಡಿತೆಂದೇ ಅರ್ಥ.

ಚೂರುಚೂರಾಗಿ, ಹಿಂಡಿಹಿಪ್ಪೆಯಾಗಿ, ಬಳಲಿದ ದೇಹದೊಂದಿಗೆ ಕೊನೆಗೂ ನಾವು ಮನೆ ತಲುಪಿದೆವು. ನಿಧಾನವಾಗಿ ಹಗುರವಾದ ಭಾವ ನಮ್ಮ ಮೂಳೆ ಮೂಳೆಗಳಲ್ಲಿ ನುಗ್ಗಿ ಕೊನೆಗೆ ಕಣ್ಣೀರಾಗಿ ಹರಿಯತೊಡಗಿತು.



ನಾವಿಬ್ಬರೂ ದುರ್ಬಲರಾಗಿ ಬಿಕ್ಕಿಬಿಕ್ಕಿ ಅತ್ತು ಬಿಟ್ಟೆವು. ಸ್ವಲ್ಪ ಸಮಯದ ಹಿಂದೆ ಈ ವಿಷಯವನ್ನು ಯಾರಿಗೂ ತಿಳಿಸುವುದಿಲ್ಲವೆಂದು ಅತ್ಯಾಚಾರಿಗಳಿಗೆ ಪ್ರಮಾಣ ಮಾಡಿದ್ದೆ. ಆದರೆ ಮನೆಗೆ ಬಂದ ತಕ್ಷಣ ಅಪ್ಪನಿಗೆ ಪೋಲೀಸರನ್ನು ಕರೆಯಲು ಹೇಳಿದೆ. ಅಪ್ಪ ಆತಂಕ ಗೊಂಡಿದ್ದರು. ಅಪರಾಧಿಗಳ ಬಂಧನವಾಗಬೇಕೆಂದು ಅವರೂ ಬಯಸಿದ್ದರು. ನಾನಂತೂ ನನ್ನ ಮೇಲೆ ನಡೆದ ದುರಾಚಾರ ಇನ್ನಾರ ಮೇಲೆಯೂ ನಡೆಯದಂತೆ ತಡೆಯಲು ಏನನ್ನಾದರೂ ಮಾಡಲು ಸಿದ್ಧಳಿದ್ದೆ.

ಪೋಲೀಸರು ಬಂದರು. ಅಸೂಕ್ಷ್ಮವಾಗಿರುವ, ದುರಹಂಕಾರದ ಈ ಮಹಾನುಭಾವರು ನನ್ನನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಉತ್ಸುಕರಾಗಿದ್ದರು. ನಡೆದ ಘಟನೆಯನ್ನು ಮುಚ್ಚುಮರೆಯಿಲ್ಲದೆ ನಾನು ನೇರವಾಗಿ ತಿಳಿಸಿದೆ. ಇದರಿಂದಾಗಿ ನಾನು ಲಜ್ಜೆ ನಾಚಿಕೆಗಳಿಲ್ಲದ ಹೆಣ್ಣೆಂದು ಅಪವಾದ ಹೊರಿಸಿದರು. ಪ್ರಕರಣವನ್ನು ಮುಂದುವರೆಸಿದರೆ ಊರೆಲ್ಲ ಪ್ರಚಾರವಾಗುತ್ತದೆಂದು ಹೇಳಿದಾಗ ನಾನು ಆಗಲಿ ಬಿಡಿ ಎಂದೆ. ನಡೆದ ಘಟನೆಗೆ ನಾನಾಗಲಿ, ರಶೀದ್ ಆಗಲಿ ಯಾವ ರೀತಿಯಿಂದಲೂ ಕಾರಣರಾಗಿರಲಿಲ್ಲ. ರಕ್ಷಣೆಗಾಗಿ ನನ್ನನ್ನು ಬಾಲಾಪರಾಧಿಗಳ ಗೃಹಕ್ಕೆ ಕಳಿಸಬೇಕಾಗುತ್ತದೆ ಎಂದವರು ಹೆದರಿಸಿದರು. ಅತ್ಯಾಚಾರಿಗಳನ್ನು ನ್ಯಾಯಾಂಗದೆದುರು ತರಲು ನಾನು ಪಿಂಪ್‌ಗಳ ಜೊತೆ ಅಪರಾಧಿಗಳ ಜೊತೆ ಬದುಕಲು ಸಿದ್ಧಳಿದ್ದೆ. ಆದರೆ, ಈ ವ್ಯವಸ್ಥೆಯಲ್ಲಿ ಮಹಿಳೆಗೆ ನ್ಯಾಯ ದೊರೆಯುವುದು ಸಾಧ್ಯವಿಲ್ಲವೆಂಬುದು ಅತಿಬೇಗನೆ ನನ್ನ ಅರಿವಿಗೆ ಬಂತು. ನೀವು ಗುಡ್ಡದ ಅಂಚಿನಲ್ಲಿ ಏನು ಮಾಡುತ್ತಿದ್ದೀರೆಂಬ ಪ್ರಶ್ನೆಗೆ ನಾನು ಸಿಟ್ಟಿಗೆದ್ದೆ. ರಶೀದ್ ನನ್ನನ್ನು ಉಳಿಸಲು ಯತ್ನಿಸದೇ ಸುಮ್ಮನಿದ್ದುದು ಏಕೆಂದು ಅವರು ಕೇಳಿದಾಗ ತಡೆಯಲಾರದೇ ಬಿಕ್ಕಳಿಸಿದೆ. ರಶೀದ್‌ನೇನಾದರೂ ಪ್ರತಿರೋಧಿಸಿದ್ದರೆ ನನ್ನ ಮೇಲೆ ಇನ್ನಷ್ಟು ಚಿತ್ರಹಿಂಸೆ ನಡೆಸಲಾಗುತಿತ್ತು ಎನ್ನುವುದು ಇವರಿಗೆ ಅರ್ಥವಾಗುವುದಿಲ್ಲವೇ? ನಾನು ಯಾವ ರೀತಿಯ ಬಟ್ಟೆಗಳನ್ನು ಧರಿಸಿದ್ದೆ, ರಶೀದನ ಮೈಮೇಲೆ ಗಾಯಗಳು ಏಕಿಲ್ಲ? (ಕತ್ತಿಯ ಹಿಡಿಯಿಂದ ನಿರಂತರವಾಗಿ ಹೊಟ್ಟೆಗೆ ಹೊಡೆದಿದ್ದರಿಂದ ರಶೀದನ ಹೊಟ್ಟೆಯೊಳಗಡೆ ರಕ್ತಸ್ರಾವ ವಾಗಿತ್ತು) ಮುಂತಾದ ಪ್ರಶ್ನೆಗಳನ್ನು ಕೇಳತೊಡಗಿದಾಗ ನಾನು ಭಯ ಹಾಗು ದುಃಖಗಳಲ್ಲಿ ಮುಳುಗಿ ಹೋದೆ. ನನ್ನಪ್ಪ ಅವರನ್ನು ಸರಿಯಾಗಿ ಬೈದು ಮನೆಯಿಂದ ಹೊರಹಾಕಿದರು. ಇದು ಪೋಲೀಸರು ಅತ್ಯಾಚಾರದ ಬಲಿಪಶುವಾದ ನನಗೆ ನೀಡಿದ ಸಹಾಯ. ಯಾವುದೇ ಪ್ರಕರಣ ದಾಖಲಾಗಲಿಲ್ಲ. ನಾವು ಸುತ್ತಾಡಲು ಹೋಗಿದ್ದು ಬರುವುದು ತಡವಾಯಿತೆಂಬ ಹೇಳಿಕೆಯನ್ನು ಅವರು ದಾಖಲಿಸಿಕೊಂಡರು.

ಇದೆಲ್ಲ ನಡೆದು ಮೂರು ವರ್ಷಗಳಾಗಿವೆ. ನಡೆದ ಘಟನೆಗಳು ಮತ್ತೆ ಮತ್ತೆ ನನ್ನ ಸ್ಮೃತಿಪಟಲದಲ್ಲಿ ಸುಳಿಯದ ಒಂದು ದಿನವೂ ಇಲ್ಲ. ನೋವು, ಭಯ, ಕೋಪ, ಅಸಹಾಯಕತೆ ಇವುಗಳ ವಿರುದ್ಧ ನಾನು ನಿರಂತರವಾಗಿ ಹೋರಾಡುತ್ತಿದ್ದೇನೆ. ಕೆಲವು ಬಾರಿ ಬೀದಿಯಲ್ಲಿ ನಡೆದು ಹೋಗುತ್ತಿರುವಾಗ ಹಿಂದೆ ಹೆಜ್ಜೆ ಸದ್ದುಗಳು ಕೇಳಿದರೆ ಭಯದಿಂದ ಬೆವರು ಕಿತ್ತುಕೊಳ್ಳುತ್ತದೆ. ಕೂಗಿಕೊಳ್ಳದಂತೆ ತಡೆಯಲು ನನ್ನ ತುಟಿಗಳನ್ನು ಬಿಗಿಯಾಗಿ ಕಚ್ಚಿ ಹಿಡಿಯುತ್ತೇನೆ. ಸ್ನೇಹದ ಸ್ಪರ್ಶಗಳಿಗೆ ಹಿಂಜರಿಯುತ್ತೇನೆ. ಕುತ್ತಿಗೆಯ ಸುತ್ತ ಬಿಗಿಯಾಗಿ ಸ್ಕಾರ್ಫ್ ಸುತ್ತಿಕೊಳ್ಳಲು ನನಗೆ ಸಾಧ್ಯವಿಲ್ಲ. ಏಕೆಂದರೆ ನನ್ನ ಕುತ್ತಿಗೆಯ ಸುತ್ತ ಕೈಗಳನ್ನು ಬಳಸಿ ಅಮುಕಿದಂತೆ ಭಾಸವಾಗುತ್ತದೆ. ಗಂಡಸರ ಕೆಲ ನೋಟವನ್ನು ಎದುರಿಸಲು ಹಿಂಜರಿಯುತ್ತೇನೆ. ಈ ನೋಟಗಳು ನನಗೆ ಆ ದಿನದ ನೋಟದಂತೆಯೇ ಭಾಸವಾಗುತ್ತವೆ.

ಆದಾಗ್ಯೂ, ಅನೇಕ ಕಾರಣಗಳಿಂದ ನಾನು ಸಶಕ್ತಳಾಗಿದ್ದೇನೆಂದು ಭಾವಿಸುತ್ತೇನೆ. ನಾನು ನನ್ನ ಬದುಕನ್ನು ಹಿಂದೆಂದಿಗಿಂತಲೂ ಹೆಚ್ಚು ಮೆಚ್ಚಿಕೊಂಡಿದ್ದೇನೆ: ಪ್ರತೀ ದಿನವೂ ನನಗೊಂದು ಉಡುಗೊರೆ. ನಾನು ನನ್ನ ಬದುಕಿಗಾಗಿ ಹೋರಾಡಿದೆ ಮತ್ತು ಗೆದ್ದೆ. ಯಾವುದೇ ಋಣಾತ್ಮಕ ಭಾವನೆಗಳು ನನ್ನ ಈ ಸಕಾರಾತ್ಮಕ ಯೋಚನೆಗಳನ್ನು ತಡೆಯಲಾರವು.

ನಾನು ಗಂಡಸರನ್ನು ದ್ವೇಷಿಸುವುದಿಲ್ಲ. ಹಾಗೆ ಮಾಡುವುದು ಸುಲಭ. ಅನೇಕ ಪುರುಷರು ಕೂಡ ಅನೇಕ ಬಗೆಯ ದಬ್ಬಾಳಿಕೆಗೆ, ತುಳಿತಕ್ಕೆ ಒಳಗಾಗಿದ್ದಾರೆ. ಧರ್ಮಾಂಧತೆಯ ಪುರುಷಾಧಿಪತ್ಯದ ಭಾವನೆಯನ್ನು ನಾನು ದ್ವೇಷಿಸುತ್ತೇನೆ. ಪುರುಷರು ಮಹಿಳೆಯರಿಗಿಂತ ಶ್ರೇಷ್ಠರೆಂಬ ಸಾಮಾಜಿಕ ಮೌಲ್ಯಗಳನ್ನು ನಾನು ದ್ವೇಷಿಸುತ್ತೇನೆ. ಮಹಿಳೆಯರಿಗಿಲ್ಲದ ಅನೇಕ ಹಕ್ಕುಗಳು ಪುರುಷರಿಗಿರುವುದನ್ನು ನಾನು ದ್ವೇಷಿಸುತ್ತೇನೆ. ಮಹಿಳೆಯರು ಪುರುಷರ ಸ್ವತ್ತು ಎನ್ನುವ ಭಾವವನ್ನು ನಾನು ದ್ವೇಷಿಸುತ್ತೇನೆ.

ಸ್ತ್ರೀವಾದಿ ಚಿಂತನೆಗಳ ನನ್ನ ಗೆಳೆಯರೆಲ್ಲ, ನಾನು ಅತ್ಯಾಚಾರಕ್ಕೆ ಒಳಗಾಗಿದ್ದರಿಂದಲೇ ಮಹಿಳಾ ಹಕ್ಕುಗಳ ಬಗ್ಗೆ ಕಾಳಜಿ ಹೊಂದಿದ್ದೇನೆಂದು ಭಾವಿಸುತ್ತಾರೆ. ಅದು ಸರಿಯಲ್ಲ. ಅತ್ಯಾಚಾರ, ನಾನು ಸ್ತ್ರೀವಾದಿ ಲೇಖಕಿಯಾಗಲು ಇರುವ ಅನೇಕ ಕಾರಣಗಳಲ್ಲಿ ಒಂದಿರಬಹುದು. ಅತ್ಯಾಚಾರವನ್ನು ಬೇರೆ ಅಪರಾಧಗಳಿಂದ ಬೇರ್ಪಡಿಸಿ ಏಕೆ ನೋಡಬೇಕು? ಬಲಾತ್ಕಾರದ ಸಂಭೋಗವಷ್ಟೇ ಅತ್ಯಾಚಾರವೆಂದು ಏಕೆ ಪರಿಗಣಿಸಬೇಕು? ಬೀದಿಗಳಲ್ಲಿ ನಾವು ನಡೆಯುತ್ತಿರುವಾಗ ವಾರೆಗಣ್ಣಿನಿಂದ ದುರುಗುಟ್ಟುವುದು ಅತ್ಯಾಚಾರವಲ್ಲವೇ? ನಮ್ಮನ್ನು ಲೈಂಗಿಕ ಸರಕುಗಳೆಂದು ಭಾವಿಸುವುದು ಅತ್ಯಾಚಾರವಲ್ಲವೇ? ನಮ್ಮ ಹಕ್ಕುಗಳನ್ನು ನಿರಾಕರಿಸುವುದು ಅತ್ಯಾಚಾರವಲ್ಲವೇ? ದಬ್ಬಾಳಿಕೆಯನ್ನು ಏಕಮುಖವಾಗಿ ವಿಶ್ಲೇಷಿಸಲು ಆಗುವುದಿಲ್ಲ. ಉದಾಹರಣೆಗೆ, ಅತ್ಯಾಚಾರದ ಸಂದರ್ಭದಲ್ಲಿ ವರ್ಗ ವಿಶ್ಲೇಷಣೆ ತುಂಬಾ ಅಗತ್ಯ. ಹಾಗೆಂದಮಾತ್ರಕ್ಕೆ ಆ ವಿಶ್ಲೇಷಣೆಯೂ ಅತ್ಯಾಚಾರವು ಅದೇ ವರ್ಗದಲ್ಲಿ ಏಕೆ ನಡೆಯುತ್ತದೆ ಎನ್ನುವುದನ್ನು ವಿವರಿಸುವುದಿಲ್ಲ. ಎಲ್ಲಿಯವರೆಗೆ ಮಹಿಳೆಯರ ಮೇಲೆ ಅನೇಕ ರೀತಿಯ ದಬ್ಬಾಳಿಕೆಗಳು ನಡೆಯುತ್ತಿರುತ್ತದೋ ಅಲ್ಲಿಯವರೆಗೂ ಅತ್ಯಾಚಾರದ ಸಂದರ್ಭದಲ್ಲಿ ಮಹಿಳೆಯನ್ನೆ ಹೊಣೆ ಮಾಡಲಾಗುತ್ತದೆ. ಅತ್ಯಾಚಾರದ ಪ್ರಕರಣಗಳನ್ನು ನಿಗೂಢಗೊಳಿಸುವುದನ್ನು ನಾವು ಮೊದಲು ನಿಲ್ಲಿಸಬೇಕು. ನಮ್ಮ ಸುತ್ತಲೂ ಅತ್ಯಾಚಾರವು ಅಸ್ತಿತ್ವದಲ್ಲಿರುವ ಸತ್ಯವನ್ನು, ಅದು ಪಡೆದುಕೊಳ್ಳುವ ರೂಪಾಂತರಗಳನ್ನು ನಾವು ಒಪ್ಪಿಕೊಳ್ಳಬೇಕು. ಅಂತ ಪ್ರಕರಣ ನಡೆದಾಗ ರಹಸ್ಯವಾಗಿ ಮುಚ್ಚಿ ಹಾಕುವುದನ್ನು ನಿಲ್ಲಿಸಬೇಕು. ಅದೊಂದು ಹಿಂಸೆಯಿಂದ ಕೂಡಿದ ಅಪರಾಧ ಹಾಗು ಅತ್ಯಾಚಾರಿಯು ಒಬ್ಬ ಅಪರಾಧಿಯೆನ್ನುವುದನ್ನು ಗ್ರಹಿಸಬೇಕು.

ಇಂದು ಜೀವಂತವಾಗಿರುವುದಕ್ಕೆ ನಿಜಕ್ಕೂ ನಾನು ಸಂಭ್ರಮಿಸುತ್ತೇನೆ. ಬಲಾತ್ಕಾರಕ್ಕೊಳಗಾಗುವುದು ಪದಗಳಿಗೆ ನಿಲುಕದ ಭಯಾನಕ ಅನುಭವ ಎನ್ನುವುದು ನಿಜ. ಆದರೆ ಜೀವಂತವಾಗಿರುವುದು ಎಲ್ಲಕ್ಕಿಂತ ಮುಖ್ಯವಾದುದು. ಹೀಗೆ ಭಾವಿಸಲು ಮಹಿಳೆಗೆ ಎಲ್ಲಿ ಅವಕಾಶವಿಲ್ಲವೋ ಅಲ್ಲಿನ ಸಾಮಾಜಿಕ ಮೌಲ್ಯಗಳಲ್ಲಿ ತಪ್ಪುಗಳಿರುತ್ತವೆ. ಯಾರಾದರೂ ಅಪಾಯಗಳಿಂದ ಪಾರಾಗಲು ಹೊಡೆತಗಳನ್ನು ಸಹಿಸಿಕೊಂಡರೆ ಯಾರೂ ಅವಳು ಇಚ್ಛೆ ಪಟ್ಟು ಹೊಡೆಸಿಕೊಂಡಳೆಂದು ಭಾವಿಸುವುದಿಲ್ಲ. ಆದರೆ ಅತ್ಯಾಚಾರದ ಸಂದರ್ಭದಲ್ಲಿ ಮಾತ್ರ ಅದಕ್ಕೆ ಏಕೆ ಅವಕಾಶ ನೀಡಿದೆ? ಏಕೆ ಪ್ರತಿರೋಧಿಸಲಿಲ್ಲ? ಖುಷಿಯಿಂದ ಅನುಭವಿಸಿದೆಯಾ? ಮುಂತಾದ ಪ್ರಶ್ನೆಗಳನ್ನು ಮಹಿಳೆಗೆ ಕೇಳಲಾಗುತ್ತದೆ.

ಅತ್ಯಾಚಾರವು ನಿರ್ದಿಷ್ಟವಾಗಿ ಇಂಥದೇ ಮಹಿಳೆಯರ ಮೇಲೆ ನಡೆಯಬೇಕೆಂದೇನೂ ಇಲ್ಲ, ಅಪರಾಧಿಗಳೂ ನಿರ್ದಿಷ್ಟ ಗುಂಪಿಗೆ ಸೇರಿರುವುದಿಲ್ಲ. ಅವನು ಪಶುಸ್ವಭಾವದ ಹುಚ್ಚು ಮನುಷ್ಯನಾಗಿರಬಹುದು ಅಥವಾ ನೆರೆಮನೆಯ ಹುಡುಗನಾಗಿರಬಹುದು ಅಥವಾ ಹಿತೈಷಿಯಂತೆ ವರ್ತಿಸುವ ಅಂಕಲ್ ಕೂಡ ಆಗಿರಬಹುದು. ಅತ್ಯಾಚಾರವು ಇನ್ನೊಬ್ಬ ಮಹಿಳೆಯ ಸಮಸ್ಯೆಯೆಂದು ಪರಿಗಣಿಸುವುದನ್ನು ನಾವು ನಿಲ್ಲಿಸಬೇಕು. ಅದು ಎಲ್ಲೆಡೆ ಇರುವುದನ್ನು ಒಪ್ಪಿಕೊಂಡು ಸರಿಯಾಗಿ ಅರ್ಥೈಸಿಕೊಳ್ಳಬೇಕು.


ಎಲ್ಲಿಯವರೆಗೆ ಪ್ರಪಂಚದ ಅಧಿಕಾರಸ್ಥ ಸಂಬಂಧಗಳ ತಳಪಾಯಗಳು ಬದಲಾಗುವುದಿಲ್ಲವೋ, ಎಲ್ಲಿಯವರೆಗೆ ಮಹಿಳೆಯನ್ನು ಪುರುಷನ ಆಸ್ತಿ ಎಂದು ಪರಿಗಣಿಸಿ ತಡೆಯೊಡ್ಡಲಾಗುತ್ತದೆಯೋ ಅಲ್ಲಿಯವರೆಗೂ ನಾವೆಲ್ಲರೂ ನಿರಂತರವಾಗಿ ಬಲಾತ್ಕಾರಕ್ಕೊಳಗಾಗುವ ಹಾಗೂ ನಿರಪರಾಧಿಯೆಂದು ಸಾಬೀತುಪಡಿಸುವ ಭಯದಲ್ಲಿ ಬದುಕಬೇಕಾಗುತ್ತದೆ.

ನಾನು ಅತ್ಯಾಚಾರಕ್ಕೊಳಗಾಗಿ ಬದುಕಿದವಳು. ನನ್ನ ಮೇಲೆ ಬಲಾತ್ಕಾರ ನಡೆಸಿ ಎಂದು ನಾನು ಕೇಳಿರಲಿಲ್ಲ ಮತ್ತು ನಾನದನ್ನು ಆನಂದಿಸಲಿಲ್ಲ. ಅದು ನನಗೆ ಗೊತ್ತಿರುವ ಅತಿ ಕ್ರೂರವಾದ ಚಿತ್ರಹಿಂಸೆ. ಅತ್ಯಾಚಾರವು ಎಂದಿಗೂ ಮಹಿಳೆಯ ತಪ್ಪಾಗಿರಲು ಸಾಧ್ಯವಿಲ್ಲ. ಮಹಿಳೆಯರು ಮೌನವನ್ನು ಮುರಿಯಲು, ತಾವು ದುರ್ಬಲರೆಂಬ ಹಿತವಾದ ಕಾಲ್ಪನಿಕ ನಂಬಿಕೆಯನ್ನು ತೊಡೆಯಲು ಈ ಲೇಖನವು ಒಂದು ಪ್ರೇರಣೆಯಾಗಲಿ. ಮನುಕುಲವು ತಿಳಿದಿರುವ ಅತಿ ಯಾತನಾಮಯ ದುರಾಚಾರಕ್ಕೆ ಬಲಿಯಾದ ದುರ್ದೈವಿಗಳಿಗೆ ಈ ಬರೆಹವು ಅರ್ಪಿತ.


ಇಂಗ್ಲಿಷ್ ಮೂಲ: **ಸೊಹೈಲಾ ಅಬ್ದುಲಾಲಿ**

● ಕನ್ನಡಕ್ಕೆ: **ಅನನ್ಯಶಿವು, ಶಿವಮೊಗ್ಗ**

(1980ರಲ್ಲಿ ಸೊಹೈಲಾ ಅಬ್ದುಲಾಲಿ ಅವರು 17 ವರ್ಷ ವಯಸ್ಸಿನ ಯುವತಿಯಾಗಿದ್ದಾಗ ಅವರ ಮೇಲೆ ಮುಂಬೈಯಲ್ಲಿ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಆ ಪ್ರಕರಣವನ್ನು ಕುರಿತು ಅವರು ಬರೆದ ಲೇಖನ ಅವರ ಫೋಟೋದೊಂದಿಗೆ 'ಮಾನುಷಿ' ಪತ್ರಿಕೆಯಲ್ಲಿ 1983ರಲ್ಲಿ ಪ್ರಕಟಗೊಂಡಿತ್ತು. ಅದರ ಅನುವಾದ ಇಲ್ಲಿದೆ. ಸೊಹೈಲಾ ಅಬ್ದುಲಾಲಿ ಈಗ ಪತ್ರಕರ್ತೆ, ಅಧ್ಯಾಪಕಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿದ್ದಾರೆ. ಅವರು ಹಲವಾರು ಕಥೆ, ಕಾದಂಬರಿ ಮತ್ತು ಲೇಖನಗಳನ್ನು ಬರೆದಿದ್ದಾರೆ. ಈಗ ತಮ್ಮ ಪತಿ ಮತ್ತು ಪುತ್ರಿಯೊಂದಿಗೆ ಅಮೆರಿಕದಲ್ಲಿ ವಾಸಿಸುತ್ತಿದ್ದಾರೆ.)



ಎದೆ ತಟ್ಟೋ ಮಾತು, ಕಿಚ್ಚಿಟ್ಟೋ ಮಾತು



ನಾನು ಒಂದು ಸಣ್ಣೂರಲ್ಲಿ ಪ್ರೈಮರಿ ಶಾಲೆಯಲ್ಲಿ ಓದುತ್ತಿದ್ದಾಗ "ನಂ ಸಾಲಿಯಿಂದ ನೀನು ಹೋಗಲೇ" ಅಂತ ಒಂದು ಭಾಷಣ ಸ್ಪರ್ಧೆಗೆ ನನ್ನನ್ನು ಆಯ್ಕೆ ಮಾಡಿದ್ರು. ಒಬ್ಬ ಮೇಸ್ಟ್ರು ನನ್ನನ್ನು ತಯಾರಿ ಮಾಡೋ ಜವಾಬ್ದಾರಿ ತಗೊಂಡ್ರು. 'ಮಹನೀಯರೇ ಮತ್ತು ಮಹಿಳೆಯರೇ' ಎಂದು ನಿಂತ ಇಕ್ಕೆಲಗಳಲ್ಲಿ ಗೋಣು-ಕೈ ಆಡಿಸಿ ಶುರು ಮಾಡೋದ್ರಿಂದ ಹಿಡಿದು, ಕನ್ನಡಿ ಮುಂದೆ ನಿಂತು ಹಾವಾಭಾವ ಪ್ರಾಕ್ಟಿಸ್ ಮಾಡೋದು, ಮೇಜು ಗುದ್ದಿ ಪಾಯಿಂಟ್ ಹೇಳೋದು, ಧ್ವನಿ ಏರಿಸಿ ಒಂದು ಪಾಯಿಂಟ್ ಹೊಡೆದು, ಧ್ವನಿ ಇಳಿಸಿ ಶಾಂತವಾಗಿ 'ಇದನ್ನು ನೀವಾದರೂ ಒಪ್ಪದೇ ಇರೋದಕ್ಕೆ ಸಾಧ್ಯವೇ ಇಲ್ಲ' ಅಂದು ಮೆಚ್ಚಿಸುವ ವರಸೆ ಎಲ್ಲವನ್ನೂ ಹೇಳಿಕೊಟ್ಟರು. ಇಷ್ಟೆಲ್ಲಾ ಹೇಳಿಕೊಟ್ಟ ಅವರು, ಮಾತಾಡೋ ವಿಷಯದ ಬಗ್ಗೆ ಮಾತ್ರ ಯಾವ ಮಾರ್ಗದರ್ಶನವನ್ನೂ ಮಾಡ್ಲಿಲ್ಲ ಸಾರ್! ನಾನೇ ದುಂಬಾಲು ಬಿದ್ದಾಗ "ಏನಾದ್ರು ಒಂದಿಷ್ಟು ಉರು ಹೊಡೆಯಲೇ! ಏನು ಮಾತಾಡ್ತಿ ಅಂತ ಯಾರು ಕೇಳ್ತಾರೆ. ಹೇಗೆ ಬಡಿದೆಬ್ಬಿಸೋ ಹಾಗೆ ಮಾತಾಡ್ತಿ ಅದು ಇಂಪಾರ್ಟೆಂಟು ಕಣ್ಲೇ! ಕೇಳ್ಳೋರು ಅಲಲಾ! ಅಂತ ನೀ ಹೇಳಿದ್ದನ್ನು ನಂಬೋ ಹಂಗೆ ಮಾತಾಡ್ಬುಕಲೇ ಪೆದ್ದ" ಅಂತ ಉಪದೇಶ ನೀಡಿದ್ರು. ಹಾಂಗಾಗಿ ನಾನು ಯಾವುದೇ ವಿಷಯ ಇದ್ರೂ ಕೇರ್ ಮಾಡ್ದೆ ಹೆಸರು ಕೊಟ್ಟು ಭಾಷಣ ಜಡಿದು ಪ್ರೈಜು ಗಿಟ್ಟಿಸ್ಕೊಂಡು, ಆ ಸಣ್ಣೂರಲ್ಲಿ ವಾಕ್ಪಟು ಅಂತ ವರ್ಲ್ಡ್ ಫೇಮಸ್ ಆಗ್ಬುಟ್ಟೆ. ಎಂಥ ಕೊಬ್ಬೋಂದು ಬಿಟ್ಟೆ ಅಂದ್ರೆ 'ಸಮಾನರಾರಿಹರು ನನ್ನ ಸಮಾನರ್ಯಾರಿಹರು...' ಅಂತ ಚರ್ಚೆ ವಿಷಯ ಎಂಥದಾದ್ರು ಇರ್ಲಿ, ಪರವೋ ವಿರೋಧವೋ ಮೇಜು ಗುದ್ದಿ ಪ್ರೈಜು ಗೆಲ್ಲೋ ಪಂಥ ಆಯ್ಕೆ ಮಾಡ್ಕೊಂಡು ಭಾಷಣ ಕುಟ್ಟತೊಡಗಿದೆ ಸಾರ್. ಆದ್ರೆ ನಾನು ಹೈಸ್ಕೂಲಿಗೆ ಬಂದ ಮೊದಲ ವರ್ಷದಲ್ಲಿ ಗರ್ವಭಂಗ ಪ್ರಸಂಗ ಘಟಿಸಿತು. ತಾಲೂಕು ಮಟ್ಟದ ಚರ್ಚಾ ಸ್ಪರ್ಧೆಗೆ ಶಾಲೆಯಿಂದ ಒಬ್ಬ ಪರ, ಒಬ್ಬ ವಿರುದ್ಧ ಮಾತಾಡೋರನ್ನ ಆಯ್ಕೆ ಮಾಡಿ ಕಳಿಸ್ಬೇಕಿತ್ತು, ನಾನಂತು ಒಬ್ಬ, ಇನ್ನೊಂದು ಸ್ಥಾನಕ್ಕೆ ಮಾತ್ರ ಸ್ಪರ್ಧೆ ಅಂತ ಬೀಗ್ತಾ ಇದ್ದೆ. ಆದರೆ ಆಯ್ಕೆಯ ಜವಾಬ್ದಾರಿ ಹೊತ್ಕೊಂಡೋರು ಯಾವಾಗಲೂ ಮೌನವಾಗಿ, ನಸುನಗುತ್ತ, ಒಳ್ಳೆ ಪಾಠ ಮಾಡ್ತಿದ್ದ ಫಿಸಿಕ್ಸ್ ಮೇಷ್ಟ್ರು. ಅವರು ಹತ್ತು ಹುಡುಗರನ್ನು ಆಯ್ದು ಒಂದು ವಿಷಯ ಕೊಟ್ಟು ಸ್ಪರ್ಧೆ ಇಟ್ರು. ನಾನು ಯಥಾಪ್ರಕಾರ ವಿಷಯದ ಬಗ್ಗೆ ಕ್ಯಾರೇ ಅನ್ನದೆ, ನನ್ನ ಸ್ಟೈಲು ಹೊಡೆದು ಭಾಷಣ ಕುಟ್ಟಿದೆ. ಮೇಷ್ಟ್ರು ಫಲಿತಾಂಶ ಪ್ರಕಟಿಸಿದ್ರು ಬುದ್ಧಿ; ನನ್ನ ಹೆಸ್ರಿಲ್ಲ! ತಡವರಿಸಿ ಮಾತಾಡೋ ಇಬ್ಬರನ್ನ ಸೆಲೆಕ್ಟ್ ಮಾಡುಬುಟ್ಟವ್ರೇ! ನಾನು ಧಿಮಾಕಿಂದ ಅವರತ್ರ ಹೋಗಿ "ಏನ್ಸಾರ್! ಅನ್ಯಾಯ ಅಲ್ವಾ ಹೇಳಿ ಸಾ.." ಅಂದೆ. ಅವ್ರು ಕೋಪ ಮಾಡ್ಕೊಳ್ದೆ ನಗ್ತ "ಮಿಸ್ಟರ್, ನಿಮ್ಮ ಮನದಲ್ಲಿ ಅಹಂಕಾರ ತುಂಬಿದೆ, ತಲೇಲಿ ಮಣ್ಣು ತುಂಬಿದೆ. ಅಹಂಕಾರ ಬಿಡಿ, ವಿಷಯ ಅಭ್ಯಾಸ ಮಾಡಿ, ಬುದ್ಧಿ ಬರ್ತದೆ. ಬುದ್ಧಿ ಇರೋರು ಕೇಳೋರ ಎದೆ ತಟ್ಟುವ ಹಾಗೆ ಮಾತಾಡ್ತಾರೆ. ಹೊಸ ವಿಷಯ ತಿಳ್ಕೊಳಿ, ತಿಳಿದು, ತಿಳ್ಸಿ. ಈಗ ಹೋಗಿ" ಅಂದುಬಿಟ್ರು. ನಾನು ಎರಡು ಮೂರು ದಿವ್ಸ ಗರಂ ಆಗಿ 'ಮೇಷ್ಟ್ರು ಪಕ್ಷಪಾತ ಮಾಡವ್ರೆ' ಅಂತ ಚಾಡಿ ಹೇಳ್ಕೊಂಡು ತಿರುಗ್ದೆ. ಆದ್ರೆ ಅವ್ರು ಅಂದ 'ಮನ ತಟ್ಟುವ ಹಾಗೆ' ಮಾತಾಡೋದು ನಂಗೆ ಗೊತ್ತಿಲ್ಲ ಅಂತ ಖಾತ್ರಿಯಾಗೋಯ್ತು ಸಾರ್. ಮುಂದಿನ ಎರಡು ವರ್ಷ ಅವ್ರು ನನ್ನನ್ನ ಯಾವ ಸ್ಪರ್ಧೆಗೂ ಆಯ್ಕೆ ಮಾಡಿ ಕಳಿಸ್ಲಿಲ್ಲ, ನಾನು ಭಾಷಣದ ವರಸೆ ಬಿಟ್ಟು ವಿಷಯ ತಿಳ್ಕೋಳೊಕೆ ಒದ್ದಾಡತೊಡಗಿದೆ. ದಿನದಿನಕ್ಕೂ ಮಾತಿನ ವರಸೆ ಬದಲಾಗ್ತಾ ಹೋಯ್ತು, ರಾಶಿ ಪಾಯಿಂಟು ಸಂಗ್ರಹಿಸಿ, ಮನತಟ್ಟುವ ಹಾಗೆ ಹೇಳೋ ಪ್ರಯತ್ನದಲ್ಲಿ ಪ್ರತಿ ಸಾರಿಯೂ ಅಳುಕಿ, ಅಂಜಿ ಮಾತಿಗೆ ಸ್ಟೇಜು ಹತ್ಕೊಂಗಾಯ್ತು, ಕೊನೆಗೆ ಹತ್ತನೇ ಕ್ಲಾಸಲ್ಲಿರೋವಾಗ ಒಂದು ಸ್ಪರ್ಧೆಗೆ ಆಯ್ಕೆ ಮಾಡಿದ್ರು. ಭರಪೂರ ಓದ್ಲಿಕ್ಕೆ ಪೇಪರು, ಮ್ಯಾಗಜೀನು, ಪುಸ್ತಕ ಕೊಟ್ರು. ನಾನು ನನ್ನ ವಾಕ್ಪಟುತ್ವದ ಜೀವನದಲ್ಲಿ ಮೊದಲ ಬಾರಿಗೆ ಸೋಲೋಂಥ ಪಂಥ ಆಯ್ಕೆ ಮಾಡ್ಕೊಂಡೆ. ವಿಷಯ 'ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರೇ?' ನಾನು 'ಅರ್ಹರು' ಅನ್ನೋ ಪಂಥ ಆಯ್ಕೊಂಡೆ. ಮಾತಾಡಿದೆ. ಸ್ಪರ್ಧೆಯಲ್ಲಿ ಸೋತೆ. ಆದರೆ ಆ ನನ್ನ ಮೇಷ್ಟ್ರು "ನೀನು ಮುಗಿಸುವಾಗ ಹೇಳಿದ – ನಡುವಿರುವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ – ಅನ್ನೋ ಅಕ್ಕನ ವಚನ ನೀನು ಹೇಳಿದ ರೀತಿಯಿಂದ್ಲೆ ಟಚ್ಚಿಂಗ್ ಆಗಿತ್ತು ಕಣಯ್ಯ, ಐ ರಿಯಲಿ ಲೈಕ್ಡ್" ಅಂದ್ರು ಸಾರ್! ಆವತ್ತಿನಿಂದ ನಾನು ಸ್ಪರ್ಧೆಗಾಗಿ ಭಾಷಣ ಮಾಡೋದು ನಿಲ್ಲಿಸಿದೆ. ಭಾಷಣ ಮಾಡೋದೇ ಆದ್ರೆ, 'ಸೋಲುಂಪ' ಪರ, ಓದಿ-ತಿಳಿದು-ಅರಿತು-ಮನತಟ್ಟುವ ಹಾಗೆ ಮಾತಾಡ್ತೀನಿ ಅಂತ ಡಿಸೈಡ್ ಮಾಡ್ದೆ ಬುದ್ಧಿ. ಇವತ್ತಿಗೂ ಆ ದೈವ ಬದಲಾಗಿಲ್ಲ.

ಇದರಲ್ಲಿ ನನ್ನ ಸಂಕಲ್ಪದ ದೊಡ್ಡಸ್ತಿಕೆ ಏನೂ ಇಲ್ಲ, ಕಾಲಕಾಲಕ್ಕೆ 'ಸರ್-ಓ-ಜಿಗರ್' ತಟ್ಟೋ ಹಾಗೆ ಮಾತಾಡುವ ಅನೇಕರ ಮಾತುಗಳನ್ನು ಮನತುಂಬಿಕೊಂಡ ಅನುಭವ ದೊಡ್ಡದು. ಹೀಗೆ ಎದೆಯಲ್ಲಿ ಕೂತ ಎರಡು ಮಾತುಗಳ ಝಲಕ್ ಹೇಳ್ತೇನೆ ಕೇಳಿ. ವರ್ಷ 1981-82 ಇರಬೇಕು. ನಾನು ಆಗ ಚಿಲ್ಟು ಚಳವಳಿಗಾರ. ಬೆಂಗಳೂರಲ್ಲಿ ಒಂದು ಅಧ್ಯಯನ ಶಿಬಿರ. ಅಲ್ಲಿ ಇ.ಎಂ.ಎಸ್. ನಂಬೂದ್ರಿಪಾದ್ 'ಭಾರತದಲ್ಲಿ ಆಸ್ತಿ ಕುಟುಂಬ ವ್ಯವಸ್ಥೆ.' ಇಂಥದ್ದೇನೋ ಒಂದು ವಿಷಯದ ಬಗ್ಗೆ ಪಾಠ ಹೇಳೋದಿಕ್ಕೆ ಬಂದಿದ್ದರು. ಅವರು ತನ್ನ ಯೌವನ ಕಾಲದಲ್ಲಿ ಕೇರಳದ ಕುಟುಂಬ ವ್ಯವಸ್ಥೆಯಲ್ಲಿ ಹೆಂಗಸರ ಸ್ಥಾನ ಹ್ಯಾಗಿತ್ತು ಅನ್ನೋದನ್ನು ತಮ್ಮ ಜೀವನದ ನೈಜ ಅನುಭವ ಕಥನದ ಮೂಲಕ ವಿವರಿಸುತ್ತಿದ್ದರು. ಅವರು ಇಂಗ್ಲಿಷಿನಲ್ಲಿ ಮಾತಾಡಿದ್ದನ್ನು ಕನ್ನಡದಲ್ಲಿ ಹೇಳುತ್ತಿರುವೆ- "ನನ್ನ ಹತ್ತಿರದ ಸಂಬಂಧದ ಹುಡುಗಿಯೊಬ್ಬಳನ್ನು ಹತ್ತನೇ ವಯಸ್ಸಲ್ಲಿ ಮದುವೆ ಮಾಡಿದ್ದರು. ಅವಳು..". ನಂಬೂದ್ರಿಪಾದರಿಗೆ ಉಗ್ಗು. ಉಗ್ಗು ಬಂದಾಗ ನಿಮಿಷಗಳ ಕಾಲ ಹೇಳಬೇಕಾದ ಪದಕ್ಕೆ ಅವರು ಉಗ್ಗು ಮೀರುವವರೆಗೂ ಪ್ರಯತ್ನಿಸುವರು. ಅವರು "ತ್..ತ್.." ಉಗ್ಗುತ್ತ ನಿಮಿಷದ ನಂತರ "ಟ್ವೆಲ್ ಯಿಯರ್ಸ್" (ಹನ್ನೆರಡನೆ ವಯಸ್ಸಿನವಳಿದ್ದಾಗ) "ವಿಧವೆಯಾದಳು.." ಅಂತ ಕಥನ ಮುಂದುವರೆಸಿದರು. ಹತ್ತಕ್ಕೆ ಮದುವೆ, ಹನ್ನೆರಡಕ್ಕೆ ವಿಧವೆ ಅನ್ನೋದನ್ನು ನಿಖರವಾಗಿ ಅವರಿಗೆ ಹೇಳಬೇಕಿತ್ತು, ಉಗ್ಗಿದೆ ಅಂತ "ಟ್ವೆಲ್" ಅನ್ನೋದನ್ನು ಅವರು ಹಾರಿಸಿ ಮುಂದೆ ಹೋಗಲಿಲ್ಲ. ತನ್ನ ಮಾತಿನ ಊನವೆಂದೂ ನಂಬೂದ್ರಿಪಾದರಿಗೆ ದೊಡ್ಡ ಸಮಸ್ಯೆಯಾಗಿ ಕಂಡಿರಲಿಲ್ಲ, ಆದರೆ ನಿಖರವಾಗಿ ಹೇಳಬೇಕಾದ್ದನ್ನು ಅವರು ಎಷ್ಟೇ ಉಗ್ಗಿನ ಕಷ್ಟವಾದರೂ ಹಾರಿಸದೆ ಹೇಳುವರು. ಆ 'ತ್..ತ್..ಟ್ವೆಲ್' ನನ್ನ ಎದೆಯಲ್ಲಿ ಕಚ್ಚಿ ಕೂತಿದೆ. ಹಾಗೆ, ತೀಸ್ತಾ ದೀದಿ ಈಗ್ಗೆ ಎರಡು ವರ್ಷದ ಹಿಂದೆ, ಶ್ರೀಕುಮಾರ್ ಅವರು ಗುಜರಾತ್ ಗಲಭೆಗಳ ತಮ್ಮ ಅನುಭವವನ್ನು ಕುರಿತು ಬರೆದ ಪುಸ್ತಕದ ಕನ್ನಡ ಅನುವಾದ ಕೃತಿಯ ಬಿಡುಗಡೆಗೆ ಬಂದಿದ್ದರು: ಅವರು ತಮ್ಮ ಭಾಷಣದಲ್ಲಿ ಹೇಗೆ ಕೋಮುಗಲಭೆಗಳ ಸಂದರ್ಭದಲ್ಲಿ ವಾಸ್ತವಿಕ ಘಟನೆಗಳನ್ನು, ನಡೆದ ಕಾಲಾನುಕ್ರಮದಲ್ಲಿ ಚಾಚೂತಪ್ಪದೆ ನಿಖರವಾಗಿ ನಿರೂಪಿಸೋದು ಮುಖ್ಯ ಅಂತ ವಿವರಿಸುತ್ತಿದ್ದರು. ಅದಕ್ಕೆ ಉದಾಹರಣೆಯಾಗಿ, 1950ರ ದಶಕದಲ್ಲಿ ಜಬ್ಬಲಪುರದಲ್ಲಿ ನಡೆದ ಒಂದು ಕೋಮುಗಲಭೆ ಮತ್ತು ಅದನ್ನು ಶಮನಗೊಳಿಸುವಲ್ಲಿ ಪತ್ರಕರ್ತರೊಬ್ಬರು ವಹಿಸಿದ ಪಾತ್ರವನ್ನು ವಿವರಿಸಿದರು. ತೀಸ್ತಾ ದೀದಿ ಮಾತಿನಲ್ಲಿ ಸ್ವಲ್ಪ ತೊದಲು. ಒಮ್ಮೊಮ್ಮೆ 'ಳ' ಕ್ಕೆ 'ಲ' ಅನ್ನೋ ತೊದಲು. ಪ್ರೇಕ್ಷಕರ ಕೊನೆ ಸಾಲಿನಲ್ಲಿ ಕೂತು ಟಿಪ್ಪಣಿ ಮಾಡ್ಕೊಳ್ತಿದ್ದ ನನಗೆ, ಅವರ ಮಾತಿನಲ್ಲಿ ಆ ಧೀಮಂತ ಪತ್ರಕರ್ತನ ಹೆಸರು ಸ್ಪಷ್ಟವಾಗಿ ಗೊತ್ತಾಗಲಿಲ್ಲ. ಸಭೆಯ ನಂತರ ದೀದಿ ಹತ್ತಿರ ಹೋಗಿ "ತೀಸ್ತಾಜೀ ಆ ಪತ್ರಕರ್ತರ ಹೆಸರೇನು?" ಅಂದೆ. ಅದಕ್ಕೆ ಅವರು "ತೋಲ್ಪೆ" ಅಂದರು. "ತೋಲ್ಪೆ? ಯಾನೆ ತೋಳ್ಪೆ?" ಅಂತ ಕೇಳಿದೆ. 'ಹಾಂ..ಹಾಂ ತೋಲ್ಪೆ!' ಅಂದ್ರು ನಾನು "ತೋಳ್ಪೆ" ಅಂದೆ. ಅವರು "ಹಾಂ! ವಹೀ" ಅಂತ ಸ್ಕೂಲ್ ಹುಡುಗಿಯ ಹಾಗೆ ನಕ್ಕರು ಕಣ್ರಿ. ಮಾತಲ್ಲಿ ತೊದಲು, ಆದರೆ ನಿಖರವಾಗಿ ನಿನ್ನೆದೆಗೆ ನಾಟಿಸದೆ ಬಿಡೆ ಅನ್ನೋ ದೀದಿಯ ಸಂಕಲ್ಪವೂ ಎದೆಯಲ್ಲಿ ನೆಟ್ಟು ಕೂತಿದೆ.

ಈಗ್ಯಾಕೆ ಈ ಎಷ್ಟ ಫಿಜೂಲ್ 'ಮಾತಿನ ಮಾತು' ಎತ್ತವ್ನೆ ಅಂತ ಸಿಟ್ಟಾಗ್ಬೇಡಿ ಬುದ್ಧಿ. ವಿಷಯ ಇದೆ. ಮೊನ್ನೆ ಮಜ್ಲಿಸ್-ಏ-ಮುತ್ತೇಹದ್-ಇಸ್ಲಾಮಿ(ಎಂ.ಐ.ಎಂ.)ಯ ಅಕ್ಬರುದ್ದೀನ್ ಒವೈಸಿ ಆಂಧ್ರದ ಆದಿಲಾಬಾದಿನಲ್ಲಿ 'ಬಡಿದೆಬ್ಬಿಸಿ' 'ಕಿಚ್ಚಿಟ್ಟೋ' ಭಾಷಣ ಮಾಡಿದ್ದ. ಆ ಭಾಷಣ ಭಾರಿ ಸುದ್ಧಿಯಾಗಿ 'ಕೋಮು ದ್ವೇಷ ಹರಡೊ ಅಪರಾಧ'ದ ಆರೋಪ ಹೊತ್ತು ಜೈಲು ಸೇರಿದ್ದ. ಇದನ್ನೆಲ್ಲ ಪೇಪರಲ್ಲಿ ಓದಿದ್ದೆ ಸಾರ್. (ಪಾರ್ವತೀಶ ಹೋದ್ವಾರ ಬರದವ್ರ) ಈ ಹೊತ್ತಿಗೆ ನನ್ನ 'ಬೆಸ್ಟ್ ಸ್ನೇಹಿತರು' ಆ ಒವೈಸಿ ಭಾಷಣದ ವೆಬ್ ಕೊಂಡಿ ಕಳಿಸಿ "ಕೇಳ್ರಿ! ಆ ವಯ್ಯ ಹೆಂಗೆ ಯಾಮಾರ್ಸೋ ಹಂಗೆ ಮಾತಾಡವ್ನೆ! ಅವನ ಉದ್ದೇಶವನ್ನ ನಾನು ವಿರೋಧಿಸ್ತೇನೆ. ಆದ್ರೆ ಆ ವಯ್ಯನ ಮಾತಿನ ಮೋಡಿ ನೋಡ್ರಿ!" ಅಂತ ಹೇಳಿದ್ರು. ಈ ನನ್ನ 'ಬೆಸ್ಟ್ ಸ್ನೇಹಿತರು' 'ಬಲು ಸೂಕ್ಷ್ಮ' ಬುದ್ಧಿಯವ್ರು ಹೌದು. ಅವರು ಪ್ರಪಂಚದ ವಿದ್ಯಮಾನಗಳನ್ನು ಒಂಚೂರು ವಕ್ರದಲ್ಲಿ ನೋಡ್ತ ನಾವು ಕಾಣಲಾರದ್ದನ್ನು ಎತ್ತಿ ತೋರಿಸ್ತಾರೆ. ನಿಮ್ಗೆ ಅವ್ರ ಹೆಸರು ಹೇಳಿದ್ರೆ 'ಬಗೆದು ಸಿಗಿದುಬಿಡ್ತೇನೆ' ಅನ್ನೋ ಎಲೆಮರೆಯ ಕಾಯಿ ಕಣ್ರಿ ಅವ್ರು. ಇರ್ಲಿ ಈ ಎಲ್ಲ ಅವರ ಗುಣ ವಿಶೇಷಗಳನ್ನೂ ಸಂಕ್ಷಿಪ್ತಗೊಳಿಸಿ ನಾನು ಅವರನ್ನ 'ಬಿ.ಎಸ್.' ಅಂತೀನಿ. ಬಿ.ಎಸ್. ಕಳಿಸಿದ ಕೊಂಡಿ ಹಿಡಿದು ಆ ಯಪ್ಪನ ಭಾಷಣ ಕೇಳಿದೆ. ನಿಜಕ್ಕೂ ಆತ ಮಾತಿನ ಮೋಡಿಗಾರ ಕಣ್ರಿ! ಆತನ ಮಾತಿನಲ್ಲಿ ಬಡ ಮುಸಲ್ಮಾನರನ್ನು 'ಬಡಿದೆಬ್ಬಿಸುವ' ಕಟ್ಟಿದೆ. ಆತನ ಭಾಷಣದ ಒಟ್ಟು ಸಾರಾಂಶದಲ್ಲಿ ಹೀಗಿದೆ: ಮೊದಲು, ಪ್ರಪಂಚದಾದ್ಯಂತ ಮುಸಲ್ಮಾನರ ಮೇಲೆ ಹಲ್ಲೆಯಾಗ್ತಿರೋದಕ್ಕೆ ನಮ್ಮ ನಡುವೆ ಇರೊ ಗುಂಪುಗಾರಿಕೆ-ಪರಸ್ಪರ ವೈಷಮ್ಯಗಳೇ ಕಾರಣ ಅಂತಾನೆ; ವೈರಿಗಳು ನಮ್ಮ ನಮ್ಮೊಳಗೇ ಭೇದ ತಂದಿಟ್ಟು ನಮ್ಮನ್ನು ನಿಶಕ್ತರನ್ನಾಗಿಸಿ ಹೊಡೆಯುತ್ತಿದ್ದಾರೆ ಎಂದು ಸೋದಾಹರಣವಾಗಿ ವಿವರಿಸುತ್ತಾನೆ. ಜಗತ್ತಿನಾದ್ಯಂತ 'ಮುಸಲ್ಮಾನರು' ಇರುವ ದೇಶಗಳ ಮೇಲೆ ನಡೆಯುತ್ತಿರುವ ಬಲಾಢ್ಯ ದೇಶಗಳ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಘಟನೆಗಳ ಸಹಿತ ನಿರೂಪಿಸಿ, 'ಹೀಗೆಲ್ಲಾ ಯಾಕಾಗ್ತಿದೆ?' ಅಂತ ಕೇಳ್ತಾನೆ. ಈಗ ಗೇರ್ ಬದಲಾಯಿಸಿ "ಅಲ್ಲಾಹು ನಮ್ಮನ್ನು ದೂರ ಮಾಡಿರೋದೇ ಇದಕ್ಕೆ ಕಾರಣ. ಅಲ್ಲಾಹು ನಮ್ಮನ್ನು ದೂರ ಮಾಡಿರೋದ್ಯಾಕೆ? ನಾವು ಐದು ಹೊತ್ತು ನಮಾಜ್ ಮಾಡ್ತಿಲ್ಲ, ಕಲಮ್ ಓದುತ್ತ ಇಲ್ಲ, ನಮ್ಮ ಕುರಾನಿನಲ್ಲಿ ಭೋದಿಸಿರುವ ಹಾಗೆ ದೀನದಲಿತರ ಸೇವೆ ಮಾಡದೆ ಕರ್ತವ್ಯ ಮೂಢರಾಗಿದ್ದೇವೆ. ಮತ್ತೆ ನಾವು ಚಾಚೂತಪ್ಪದೆ ನಿಯಮಾನುಸಾರ ಅಲ್ಲಾಹುವಿನಲ್ಲಿ ಮೊರೆ ಹೋದರೆ, ದೇವರಿಗೆ ಹತ್ತಿರದವರಾದರೆ ನಾವು ವೈರಿಯನ್ನು ಮಣಿಸ ಬಲ್ಲೆವು" ಅಂತಾನೆ. ಗೇರ್ ಬದಲಾಯಿಸಿಸ್ತಾನೆ. "ಇಷ್ಟು ದೊಡ್ಡ ದೇಶದಲ್ಲಿ ಕೇವಲ 25 ಕೋಟಿ (?!) ಜನಸಂಖ್ಯೆ ಇರೋ ನಾವು ಏನು ಮಾಡ್ಲಿಕ್ಕೆ ಆಗ್ತದೆ ಅಂತ ಕೆಲವರು ಅಸಹಾಯಕ ಮಾತುಗಳನ್ನಾಡ್ತಾರೆ..." ಅಂತ ಹೇಳಿ 'ಕರ್ಬಲ ಯುದ್ಧ', ಮಧ್ಯಯುಗದಲ್ಲಿ ನಡೆದ 'ಧರ್ಮ ಯುದ್ಧ' (ಕ್ರುಸೇಡ್), ಹಿಂದೂಸ್ತಾನಕ್ಕೆ ದಂಡೆತ್ತಿ ಬಂದ ಮುಸಲ್ಮಾನ ಅರಸರ ಜೈತ್ರಯಾತ್ರೆಗಳನ್ನು ಅತ್ಯಂತ ನಾಟಕೀಯವಾಗಿ ಕಥಿಸಿ ಬ್ರೇಕ್ ಹಾಕಿ ಕೇಳುತ್ತಾನೆ- "ಹೀಗೆ ಜಗದೇಕವೀರರಾದ ಮುಸಲ್ಮಾನ ದಂಡಿನ ಬಲ ಎಷ್ಟಿತ್ತು? ಒಬ್ಬ ಮುಸಲ್ಮಾನ ವೀರ ಒಂದು ಲಕ್ಷ ವೈರಿಗಳನ್ನು ಎದುರು ಹಾಕಿಕೊಂಡು ಮಣಿಸಿದ... ಹೇಗೆ ಅಂತೀರಾ? ಅವರು ಧರ್ಮನಿಷ್ಠ ಮುಸಲ್ಮಾನರಾಗಿದ್ದು ಅಲ್ಲಾಹುವಿನ ಪ್ರೀತಿಪಾತ್ರರಾಗಿದ್ದರು..." ಗೇರ್ ಬದ್ಲಾಯಿಸಿ ಹಿಂದೂಸ್ತಾನದಲ್ಲಿ ನಡಿತೀರೋ ಕೋಮುಗಲಭೆಗಳಲ್ಲಿ ಮುಸಲ್ಮಾನರು ಯಾವ ಬಗೆಯ ಹಿಂಸೆ ಅನುಭವಿಸ್ತಾ ಇದ್ದಾರೆ ಅಂತ ಅಕ್ಬರುದ್ದೀನ್, ನಮ್ಮ ಮುಂಬೈ ರೀಲುರಂಗೀಲ ದುನಿಯಾದ ಅತಿ ನಾಟಕೀಯ ಚಿತ್ರಕತೆಗಳನ್ನು ಮೀರಿಸುವ ಕಥನಗಳ ಮೂಲಕ ನಿರೂಪಿಸುತ್ತಾನೆ. "ಹಿಂದೂಸ್ತಾನ್ ಕೀ ಛಪ್ಪೆ ಛಪ್ಪೇ ಮೇಂ ಹಮ್ನೆ ಹಮಾರ ಹುಕುಮತ್ ಖಯಂ ಕಿಯೇ ತೇ... ಲಾಲ್ ಖಿಲಾ ಉಸ್ಕಿ ನಿಶಾನಿ ಹೈಂ, ತಾಜ್ ಮಹಲ್ ಉಸ್ಕಿ ನಿಶಾನಿ ಹೈಂ, ಕುತೂಬ್ ಮಿನಾರ್, ಚಾರ್ ಮಿನಾರ್ ಕೇ ಚಾರೋ ಮಿನಾರ್, ಬಿಜಾಪೂರ್ ಕೇ ಇಮಾರತ್, ಗೋಲ್ಕೊಂಡ ಖಿಲಾ.... ಹಿಂದೂಸ್ತಾನ್ ಕೇ ಛಪ್ಪೆ ಛಪ್ಪೆ ಮೇ ಹಮ್ನೆ ಹುಕುಮತ್ ಖಯಂ ಕಿಯೇ ತೇ...." (ಛಪ್ಪೆ ಛಪ್ಪೇ-ಮೂಲು ಮೂಲೆ, ಹುಕುಮತ್-ಆಧಿಪತ್ಯ ನಿಶಾನಿ-ಪ್ರತೀಕ, ಖಯಂ ಕಿಯೇ ತೇ-ಸ್ಥಾಪಿಸಿದ್ದೆವು) ಅಂತ ವೀರಾವೇಶದಲ್ಲಿ ಡೈಲಾಗ್ ಹೊಡೆದು, ಅರೆಕ್ಷಣ ಮೌನ ವಹಿಸಿ, ಚಪ್ಪಾಳೆ, 'ಅಕ್ಬರುದ್ದೀನ್ ಜಿಂದಾಬಾದ್, ಎಂಐಎಂ ಜಿಂದಾಬಾದ್..' ಘೋಷಣೆಗಳಿಗೆ ಜಾಗ ಕೊಟ್ಟು, ಮತ್ತೆ ಟಾಪ್ ಗೇರಿಗೆ ಹೋಗಿ "ಅರೇ ಅಕ್ಬರ್ ಜಿಂದಾಬಾದ್ ನಾರಾ ಛೋಡೋ, ಲಾ ಇಲಾಹಿ ಇಲ್ಲಲ್ಲಾ ಮಹಮ್ಮದುಲ್ ರಸೂಲಲ್ಲಾ... ಅಲ್ಲಾ ಕಾ ನಾಮ್ ಲೋ, ಅಲ್ಲಾ ಕಾ ನಾಮ್ ಲೋ... ಜೋ ಅಲ್ಲಾ ನೇ ಹಮ್ ಸೇ ರೂಟಾ ಹೈಂ ಉಸ್ಕೋ ಮನಾಲೋ.." (ರೂಟಾ ಹೈಂ-ಮುನಿಸಿಕೊಳ್ಳೋದು) ಅಂತ ಧ್ವನಿ ಎತ್ತರಿಸಿ ಹೇಳ್ತಾನೆ ನೋಡಿ! ಇಡೀ ಜನ ಸಮೂಹ ಸ್ತಂಭೀಭೂತವಾಗಿ ನಿಂತು ಕೇಳ್ತದೆ. ಆವನು ಮನಕ್ಕೆ ನುಗ್ಗಿ ಕಿಚ್ಚುಹಚ್ಚೋ ಮಾತಿನ ಮೋಡಿಗಾರ!

ಆದರೆ ಈ ಬಗೆಯಲ್ಲಿ 'ಮನಕ್ಕೆ ನುಗ್ಗಿ ಕಿಚ್ಚುಹಚ್ಚೋ ಮಾತಿನ ಮೋಡಿಗಾರ' ಈ ಹಿಂದೂಸ್ತಾನದಲ್ಲಿ ಇವನೊಬ್ಬನೇ ಅಲ್ಲ, ನರೇಂದ್ರ ಮೋದಿ, ಪ್ರವೀಣ್ ತೊಗಾಡಿಯ, ದಿವಂಗತ ಬಾಳ್ ಠಾಕ್ರೆ, ಎಲ್.ಕೆ.ಅಡ್ವಾನಿ, ಪ್ರಮೋದ್ ಮುತಾಲಿಕ್, ಜಗದೀಶ ಕಾರಂತ-ಸಾಲು ಸಾಲಾಗಿದ್ದಾರೆ! .... ಅಕ್ಬರನೊಬ್ಬನೇ ಜೈಲಿಗೆ ಹೋಗಿದ್ದಾನೆ..... ಮೋದಿ ಗದ್ದುಗೆ ಹಿಡಿದಿದ್ದಾನೆ... ಠಾಕ್ರೆ 'ಮುಂಬೈಗೆ ಬೆಂಕಿ ಹಚ್ಚಿ ಉರಿಸಿ' ಜಾಗ ಖಾಲಿ ಮಾಡಿದರೂ ರಾಜಮರ್ಯಾದೆಯ ಅಂತಿಮ ಸಂಸ್ಕಾರ ಪಡೆದಿದ್ದಾನೆ... ಬಾಕಿಯವರ ಬಾಯಿಗೆ ಯಾವ ಲಗಾಮಿಲ್ಲದೆ ಹಿಂದೂಸ್ತಾನದ ಊರೂರುಗಳಲ್ಲಿ ಕಿಚ್ಚು ಹಚ್ಚಿದರೂ ಪೊಲೀಸರು ಬಾಯಲ್ಲಿ ಬೊಟ್ಟಿಟ್ಟುಕೊಂಡಿರ್ತಾರೆ..... ಇಡೀ ದೇಶವೇ ಸೆರೆಮನೆಯಾಗಿದೆ!

ಈ ಬಗೆಯ ಮಾತಿನ ಮೋಡಿಯ ವಕ್ರತೆಯ ಕಡೆ ನನ್ನ ಗಮನ ಸೆಳೆದ ಬಿ.ಎಸ್., ಇದಕ್ಕೆ ಸಂಬಂಧಿಸಿದ ಮತ್ತೊಂದು ಕುತೂಹಲದ ಸಂಗತಿಯ ಕಡೆಗೂ ನನ್ನ ಗಮನ ಸೆಳೆದರು. ಅವರು ನಿನ್ನೆಯಷ್ಟೇ ಭಾರತದ ಖ್ಯಾತ ಜ್ಞಾನಸಂಪನ್ನ ಪತ್ರಿಕೆ 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯ ಈ ವಾರದ ಸಂಚಿಕೆಯಲ್ಲಿ, ಅಕ್ಬರುದ್ದೀನ್ ಒವೈಸಿ ಭಾಷಣ ಪ್ರಸಂಗ ಕುರಿತು ಬರೆದಿರುವ ಸಂಪಾದಕೀಯವನ್ನು ಕಳಿಸಿಕೊಟ್ಟರು (**http://www.epw.in/editorials/fifteen-minutes-infamy.html**). ಚೆನ್ನಾಗಿದೆ. ಜಾಣಜಾಣೆಯರೆಲ್ಲ ಅಗತ್ಯ ಓದಿ. ಆ ಸಂಪಾದಕೀಯದಲ್ಲಿರುವ ಒಂದು ಮಾಹಿತಿ ತಟ್ಟನೆ ಗಮನ ಸೆಳೆಯಿತು. ಅದೇನೆಂದರೆ: ಹೈದರಾಬಾದಿಗೆ ಮಾತ್ರ ಸೀಮಿತವಾಗಿರುವ ಈ ಎಂ.ಐ.ಎಂ.ನ ಹುಟ್ಟಿಗೆ, ಕಾಂಗ್ರೆಸ್ ಸೇರಿದ ಹಾಗೆ ಎಲ್ಲ ಉಳ್ಳವರ ಪರವಾದ ಅಧಿಕಾರಸ್ಥರು ಕುಮ್ಮಕ್ಕು ನೀಡಿದರು. ಕಾರಣ: ಭೂಹೀನ ರೈತರನ್ನು ಸಂಘಟಿಸಿ, ಉಳ್ಳವರಿಗೆ ಸೆಡ್ಡು ಹೊಡೆದು ತೆಲಂಗಾಣ ರೈತ ಹೋರಾಟ ನಡೆಸಿ, ಭಾರತದ ಸೇನೆಯ ಕ್ರೂರ ದಬ್ಬಾಳಿಕೆಯಿಂದ ನಲುಗಿದರೂ, ಜಾತಿ-ಮತಾತೀತವಾಗಿ ಬಹುಸಂಖ್ಯಾತ ಬಡ ಜನಸಮೂಹದ ಮನಗೆದ್ದಿದ್ದ ಕಮ್ಯುನಿಸ್ಟರ ಜನಪ್ರಿಯತೆಯನ್ನು ಜಾತಿ-ಮತ ಭೇದ ತಂದಿಕ್ಕಿ ಮುರಿದು ಮುಕ್ಕುವ ಕೇಡಿ ರಾಜಕೀಯ!

ಜಗತ್ತಿಗೆ ಫ್ಯಾಸಿಸ್ಟ್ ರಾಜಕೀಯವನ್ನು ಕಲಿಸಿದ ಮುಸ್ಸಲೋನಿ ಹೇಗೆ ಮಾತನಾಡುತ್ತಿದ್ದನೋ ನಾನರಿಯೆ. ಆದರೆ ಆ ರಾಜಕೀಯವನ್ನು ಭಯಾನಕವಾಗಿ ಮುಂದುವರೆಸಿದ ಹಿಟ್ಲರನ ಭಾಷಣಗಳು ರೇನಿ ರೆಸೆಂತಾಲಳ ಸಾಕ್ಷ್ಯಚಿತ್ರಗಳಲ್ಲಿ ದೊರಕುತ್ತವೆ. ರೆಸೆಂತಾಲಳ 'ಟ್ರೈಂಫ್ ಆಫ್ ದಿ ವಿಲ್' ಯಹೂದಿಗಳ ನರಮೇಧ ಯೋಜನೆಗೆ ನಾಂದಿಯಾದ, ಜರ್ಮನಿಯ ನಾಝಿ ಪಕ್ಷದ ನ್ಯುರೆಂಬರ್ಗ್ ಸಮಾವೇಶವನ್ನು ಮೆಚ್ಚುಗೆಯಿಂದ ನಿರೂಪಿಸುವ ಚಿತ್ರ. ಅದರಲ್ಲಿ ಯಹೂದಿ ನರಮೇಧ ಯೋಜನೆ ಯಾಕೆ ಅನಿವಾರ್ಯ ಎಂದು ವಿವರಿಸುವ ಹಿಟ್ಲರನ 'ಫೈನಲ್ ಸಲ್ಯುಶನ್' ಭಾಷಣವಿದೆ. ಮೋದಿ, ಅಕ್ಬರುದ್ದೀನ್‌ಗಳು ಕಲಿತಿರುವುದು ಆ ಭಾಷಣದ ಕಿಚ್ಚುಹಚ್ಚೋ ಮಾತಿನ ಮೋಡಿಯಿಂದಲೇ ಅಂತ ನನ್ನ ವಾದ. ಚಾರ್ಲಿ ಚಾಪ್ಲಿನ್ ತನ್ನ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರದ ಕೊನೆಯಲ್ಲಿ ಬರುವ ಭಾಷಣದ ದೃಶ್ಯವನ್ನು 'ಫೈನಲ್ ಸಲ್ಯುಶನ್' ಭಾಷಣವನ್ನು ಬುಡಮೇಲು ಮಾಡುವ ಬಗೆಯಲ್ಲಿ ಕಟ್ಟಿದ್ದಾನೆ. ಆ ಭಾಷಣದಲ್ಲಿ ಚಾರ್ಲಿ ಆರ್ತನಾಗಿ, ಪ್ರೀತಿ ಕರುಣೆಗಳಲ್ಲಿ ನೆನೆದಿರುವ ಧ್ವನಿಯಲ್ಲಿ, ತನ್ನ ಪ್ರೇಯಸಿಯನ್ನು ಉದ್ದೇಶಿಸಿ ಮಾತನಾಡುವಂತೆ, ಹಿಂಸೆಯನ್ನು ತೊರೆದ ಸಮತಾವಾದಿ ಸಮಾಜಕ್ಕೆ ಮನಸ್ಸು ಬಿಚ್ಚಿ ಎಂದು ಮನತಟ್ಟುವಂತೆ ಒತ್ತಾಯಿಸುತ್ತಾನೆ. ಹೂಂ.. ಮನಕ್ಕೆ ನುಗ್ಗಿ ಕಿಚ್ಚುಹಚ್ಚೋ ಹಿಟ್ಲರನ ಮಾತಿನ ಎದುರು ಮನಸ್ಸನ್ನು ತೆರೆಯಿರಿ ಎಂದು ಬೇಡೋ ಚಾರ್ಲಿಯ ಎದೆ ಕದ ತಟ್ಟುವ ಮಾತು... ಹೂಂ ಈ ಮಾತಿನ ಮಾತಿಗೆ ನಾನಂತೂ ಬಿ.ಎಸ್.ಗೆ ಥ್ಯಾಂಕ್ಸ್ ಕಣ್ರಿ ಅಂತೀನಿ. ಎಲ್ಲರೂ ಚಾರ್ಲಿಗೆ ಬಡಾ ಸಲಾಂ ಹೇಳೋಣ.

● ಕೆ. ಫಣಿರಾಜ್





ದೊಡ್ಡ ಸ್ವಾಮಿ, ಮರಿಸ್ವಾಮಿ ಮಾಡ್ಯೋಗಿ ಮಠ ಉಳಿಸಿದ್ರು!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಆದಿ ಚುಂಚನಗಿರಿ ಸ್ವಾಮಿಗಳಿಗೆ ಬಹಳ ದಿನಿಂದಲೂ ಆರೋಗ್ಯ ಸರಿಯಿಲ್ಲ ಎಂಬ ಸುದ್ದಿ ಇತ್ತು. ರೂ ಎಂದಾದರೊಂದು ದಿನ ಚುಂಚನಗಿರಿ ಲೆಯಿಂದ ಒಂದು ಆಘಾತಕರ ಸುದ್ದಿ ನಿರೀಕ್ಷಿಸಿದ್ದವರಿಗೆ ಗೂ ಸ್ವಾಮಿಗಳು ತೀರಿಕೊಂಡ ಸುದ್ದಿ ಅಪ್ಪಳಿಸಿತ್ತು. ರೆ ಕಣ್ಣೀರಿಗೆ ಬದಲು ಅವರ ಗುಣಗಾನ ನಡೆದಿತ್ತು.

"ನೀನು ಚುಂಚನಗಿರಿ ಸ್ವಾಮಿಯ ನೋಡಿದ್ದೇನೊ ವ?" ಎಂದ ಉಗ್ರಿ.

"ಅದ್ಯಾವಾಗ್ಲೊ ಒಂದು ಸತಿ ನೋಡಿದ್ದೆ. ಅದೇನು ವು ಅಂತಿ. ಅಂಥಾ ಲಕ್ಷಣವಾದ ಸ್ವಾಮಿಯ ವರೆಗೂ ನೋಡಲಿಲ್ಲ."

"ಓ, ಅಂಗರೆ ಹರೇವುದಲ್ಲಿ ನೋಡಿದ್ದಿ ನೀನು."

"ಈಗ್ಲು ಅಂಗೆ ಇದ್ರು ಕಂಡ್ಯ. ಕಾಯ್ಲ ಅಂತ ಅಂದ್ರುವೆ ಚೂರು ಕರಗಿರಲಿಲ್ಲ" ಎಂದಳು ಜುಮ್ಮಿ.

"ಅವುರಿಗಿದ್ದದ್ದು ಕರಗೊ ಅಂತ ಕಾಯಲ ಅಲ್ಲ ಕ್ಕೆ ಹಾರ್ಟು ಪ್ರಾಬ್ಲಮ್ಮಿತ್ತು, ಸುಗರು. ಜ್ವತಿಗೆ ಇನ್ನ ನೂ ಕಾಯ್ಲ ಇದ್ವು. ಸ್ವಾಮಿ ವಿವೇಕಾನಂದನಿಗೆ ನೊಂದು ಕಾಯಲ ಇದ್ರೂ ನೋಡಕ್ಕೆ ಯಂಗಿದ್ದ. ಅದೇ ನಮ್ಮ ಸ್ವಾಮಿಗಳೂ ಸರೀಳದಲ್ಲಿ ಕಾಯ್ಲ ಮಡಿಕಂಡು ವಾಗಿದ್ರು" ಎಂದ ವಾಟಿಸ್ಸೆ.

"ಮುಂದೆ ಮಠದ ಕತೆ ಹೇಳಯ್ಯಾ" ಎಂದ ಸೀರ ತೋಚದವನಂತೆ ಚಿಂತಾಕ್ರಾಂತನಾದ.

"ಹೆದರುಬ್ಯಾಡ ಚಿಗಪ್ಪ. ಸ್ವಾಮಿಗಳು ತಮ್ಮ ತ್ತರಾಧಿಕಾರಿಯ ತಾವೇ ತಯಾರು ಮಾಡಿಬುಟ್ಟು ೀದ್ರು. ಅದ್ಕೆ ಯಾರೂ ಚಕಾರ ಎತ್ತದಂಗೆ ನಿರ್ಮಲಾನಂದ ಮಿಯ ಅನಾಮತ್ತ ಪೀಠದ ಮ್ಯಾಲೆ ಕುಂಡಿಸಿದ್ರು."

"ನೀರುಮಲಾನಂದ ಸ್ವಾಮಿ ಯಂಗೆ? ಪರವಾಗಿಲ್ಲವೆ?"

"ಗುಡ್ ಪರಸನ್ನು ಚಿಗಪ್ಪ. ಫಾರಿನ್ನಿಗ್ಯಲ್ಲ ಹೋಗಿ ಕಂಡು ಬಂದವುರೆ. ಮುಂದೆ ಮಠ ಯಂಗೆ ನ್ಯಡುಸಬೇಕು ದ ದೊಡ್ಡ ಸ್ವಾಮಿ ಜೊತೆ ಇದ್ದಕಂಡು ನೋಡಿಕಂಡವುರೆ. ಡ್ಡ ಸ್ವಾಮಿತರ ಇವುರು ದೊಡ್ಡ ಗಂಟಲಲ್ಲಿ ತಾಡದಿಲ್ಲ. ತೂಕವಾಗಿರದರಿಂದ ಯಲ್ಲಾ ರ್ಟಿಯವರೂ ಸುಮ್ಮನಾದ್ರು."

"ಯಲ್ಲಾ ಪಾರ್ಟಿಗಳು ಅಂದ್ರೆ ಯಾರ್ಲ?"

"ಈಗ ಚುಂಚನಗಿರಿ ಮಠ ಮದ್ದುತರ ಇಲ್ಲ. ಆಗ ಗ್ರೆಸ್ ಪಾರ್ಟಿ ಮಠದ ತರ ಇತ್ತು. ಕ್ರಮೇಣ ತಾಪಾರ್ಟಿ ಜನ ಅಲ್ಲಿಗೋಗಕ್ಕೆ ಸುರು ಮಾಡಿದ್ರು. ಆ ತರ ಬಿ.ಜೆ.ಪಿ.ಗಳು ಎಂಟ್ರಿ ಕೊಟ್ರು. ದೊಡ್ಡ ಸ್ವಾಮಿ ವುರನ್ನಲ್ಲ ಚನ್ನಾಗೇ ಬಳಸಿಗಂಡು, ಯಲ್ಲಾರತ್ರನೂ ನ್ನಗಿದ್ರು. ಆದುವೆ ಸ್ವಾಮಿಗಳೋದ ಮ್ಯಾಲೆ ಮೂರೂ ರ್ಟಿ ಜನ ಮಠ ಕೈಗೆ ತಗಳಕ್ಕೆ ಅಂತ ಕಾದಿದ್ರು."

"ಯಾರ್‍ಯಾರು?"

"ಕಾಂಗ್ರೆಸ್ ಕಡೆಯಿಂದ ಡಿ.ಕೆ.ಶಿವಕುಮಾರ, ರಾಮೇಗೌಡ ಇಂತವೇ ವಸಿ ಜನ ತಯಾರಾಗಿದ್ರು. ದಿಂದ ಕುಮಾರಸ್ವಾಮಿ, ಬಾಲಕಿಷ್ಣ, ಚೆಲುವ, ಚೆನ್ನಿಗ ಅಂತ ಒಂದಿಷ್ಟು ಜನ. ಇನ್ನ ಬಿ.ಜೆ.ಪಿಯಿಂದ ಅಶೋಕ್ ಅನ್ನೊ ಮುಸಂಡಿ ಟೀಮು. ಹಿಂಗೆ ಯಲ್ಲಾ ರಡಿಯಾಗಿದ್ರು. ಅದೂ ಅಲ್ದೆ ತಮಗೆ ಬೇಕಾದ ಸ್ವಾಮಿನೂ ತಯಾರು ಮಾಡಿಕೊಂಡು ಕುಂತಿದ್ರು. ಇದ ಸ್ವಾಮಿಗಳು ತಿಳಕಂಡು ಉಪಾಯುದಲ್ಲಿ ನಿರ್ಮಲಾನಂದನ್ನ ಕರಿಸಿಕಂಡು, ಟ್ರೈನಿಂಗ್‌ಕೊಟ್ಟು, ಡ್ರೈವಿಂಗ್ ಕಲಿಸಿ, ಸ್ಟೇರಿಂಗ್ ಕೊಟ್ಟು



ವಂಟೋದ್ರು. ಈಗ ಯಾರೂ ಮಾತಾಡಂಗಿಲ್ಲ."

"ಏಟೆ ಆಗ್ಲಿ ಸ್ವಾಮಿ ಅಲವೇನ್ಲ ಅವುನು. ಈ ನನ್ನ ಮಕ್ಕಳು ಯಂಥೋರು ಅಂತ ತಿಳಕಂಡೆ ಮಾಡಿ ಹೋಗ್ಯವ್ರುನೆ" ಎಂದ ಕಾಳಮಾವ.

"ನಿಜ ದೊಡ್ಡಪ್ಪ, ನಮ್ಮ ಸ್ವಾಮಿ ಬರಿ ಆಸ್ತಿ ಮಾಡಿದ್ರೆ ವರುತು ಅದ ಉಳಿಸಿಗಳಕ್ಕೆ ಜನ ತಯಾರು ಮಾಡಿಲ್ಲ ಅಂತ ತಿಳಕಂಡಿದ್ದೆ ನಾನು. ಆದ್ರೆ ಅದ್ನ ಮಾಡಿಬುಟ್ಟು ಮಠ ಉಳಿಸಿದ್ರು."

"ಅವುರ್‍ಯಾರೊ ಸೇಕರ ಸ್ವಾಮಿ ಅನ್ನೋರು ಆಯ್ತರೆ ಅಂದಿದ್ರಲ್ಲಾ" ಎಂದಳು ಜುಮ್ಮಿ.

"ಹೇಳಿದ್ನಲ್ಲಕ್ಕ, ಶೇಖರಸ್ವಾಮಿ ಆಗಿದ್ರೆ ಮಠದಲ್ಲಿ ಅಧಿಕೃತವಾಗಿ ಮೂರು ಪಾರ್ಟಿ ಇರವು. ಶೇಖರ್‌ಸ್ವಾಮಿ ರಾಜಕಾರಣಕ್ಕೆ ಹೇಳಿ ಮಾಡಿಸಿದಂಗಿದ್ದರಂತೆ. ಆದ್ರು ಅವುರಾಗಕ್ಕೆ ಅವುಕಾಸಾಗಲಿಲ್ಲ. ಯಾಕಂದ್ರೆ ದೊಡ್ಡ ಸ್ವಾಮಿಗಳೆ ಉತ್ತರಾಧಿಕಾರಿ ಆಯ್ಕೆ ಮಾಡಿಹೋದ್ರತ್ತಗೆ."

"ಈ ನಮ್ಮ ಸ್ವಾಮಿ ಎದ್ರಿಗೆ ದ್ಯಾವೇಗೌಡ ಬ್ಯಾರೆ ಸ್ವಾಮಿ ಮಾಡಕ್ಕೆ ಅಂತ ಹೋಗಿದ್ದ ಅಲ್ಲವೆ" ಎಂದ ಸೀರ.

"ಅವರು ಕೆಂಗೇರಿ ಚಂದ್ರಶೇಖರ ಸ್ವಾಮಿ ಚಿಗಪ್ಪ, ಚುಂಚನಗಿರಿ ಸ್ವಾಮಿ ಎದ್ರಿಗೆ ಆ ಸ್ವಾಮಿಯ ಎತ್ತಿಕಟ್ಟಿ ನಿಲ್ಲಸಕ್ಕೆ ನೋಡಿದ್ರು. ಆ ಸ್ವಾಮಿ ಏನು ಮಾಡಿದ್ರೂ ಕಾಲನೆ ಕೊಡ್ಲಿಲ್ಲ, ಮುದಿ ಎತ್ತ ಎತ್ತಿ ನಿಲ್ಸಿದಂಗಾಯ್ತು. ಎತ್ತಿ ಎತ್ತಿ ಸಾಕಾಗಿ, ಕೈ ಬುಟ್ಟು ಸುಮ್ಮನಾದರತ್ತಗೆ."

"ಅದ್ಯಾಕೆತ್ತಿಕಟ್ಟಕ್ಕೆ ಹೋಗಿದ್ದಾ?"

"ಅದೂ ಹಲವಾರ ತರ ರೂಮರ್‍ರವೆ ದೊಡ್ಡಪ್ಪ, ಸಾಮಾನ್ಯವಾಗಿ ರಾಜಕಾರಣಿಗಳು ಹೊಡದ ದುಡ್ಡ ಮಠದಲ್ಲಿಡತರಂತೆ. ಪರೆಗ್‌ಜಾಂಪಲ್, ಇಂದ್ರಾಗಾಂಧಿ, ರಾಜೀವ್‌ಗಾಂಧಿ ಇವುರ್‍ಯಲ್ಲಾ ಶೃಂಗೇರಿ ಮಠದಲ್ಲಿ ದುಡ್ಡ ಮಡಗಿದ್ರಂತೆ. ದೇವರಾಜ ಅರಸು ಹರಿಹರಪುರದ ಮಠದಲ್ಲಿ ಇಟ್ಟಿದ್ರಂತೆ. ಅದೇ ತರ ನಮ್ಮ ದ್ಯಾವೇಗೌಡ್ರು ಪ್ರಧಾನಿಯಾಗಿದ್ದಾಗ, ಅದರಲ್ಲೂ ಅಧಿಕಾರ ಬುಡೋ ಟೈಮಲ್ಲಿ ಸುಮಾರು ಪೈಲಿಗೆ ಸಯಿನು ಮಾಡುವಾಗ ಸೂಟುಕೇಸುಗಟ್ಲೆ ದುಡ್ಡು ಬಂತಂತೆ. ಅದ ಕೊಟಗಳಿಸಿ ಚುಂಚನಗಿರಿಲಿ ಮಡಗಿಸಿದ್ರಂತೆ. ಪ್ರಧಾನಿ ಪಟ್ಟದಿಂದ ಇಳದ ಮ್ಯಾಲೆ ಬಂದು ಕೇಳಿದ್ರೆ ನಮ್ಮ ಸ್ವಾಮಿ ಬಾಲ ಅಲ್ಲಾಡಿಸಿದ್ರಂತೆ. 'ಯಾಕೆ ಏನಾಯ್ತು' ಅಂದಾಗ, 'ಮಠದ ಅಭಿವೃದ್ಧಿಗೆ ಬಳಸಿದೆ' ಅಂದ್ರಂತೆ. ಗಿಂಟ ಕೊಡವಿ ಕೊಂಡ ದ್ಯಾವೇಗೌಡ್ರು 'ನಿನ್ನೆದ್ರಿಗೆ ಬ್ಯಾರೆ ಸ್ವಾಮಿನೆ ತಯಾರು ಮಾಡಿ ಅವುರ್ನೆ ನಿಜವಾದ ಜನಾಂಗದ ಸ್ವಾಮಿಯಾಗಂಗೆ ಮಾಡ್ತಿನಿ' ಅಂತ ಹೋದನಂತೆ. ಹೋಗಿ ಚಂದ್ರಶೇಖರ ಸ್ವಾಮಿಯ ಏಟು ಪುಸಲಾಸಿದ್ರು ಆಗ್ಲಿಲ್ಲ, ಸುಮ್ಮನಾದ ಅತ್ತಗೆ."

"ದುಡ್ಡ ಮನೇಲೆ ಮಡಿಕಳಕ್ಕಾಯ್ತಿರಲ್ಲಿಲ್ಲವೆ?"

"ಮಡಿಕಬವುದಿತ್ತು, ನಿಮ್ಮ ಮನೆಲಿ ಇರೋವಷ್ಟು ಬಂದೋಬಸ್ತಾದ ಪೆಟ್ಟಿಗೆ ದ್ಯಾವೇಗೌಡ್ರು ಮನೆಲಿರಲಿಲ್ಲ."

"ಅಣಕಸಬ್ಯಾಡ, ಸರಿಯಾಗೇಳ್ಳ."

"ಕೋಟ್ಯಾಂತರ ರುಪಾಯಿ ದುಡ್ಡ ಮನೆಲಿಟಗಳಕ್ಕಾಗದಿಲ್ಲ. ಬ್ಯಾಂಕಲ್ಲಿ ಮಡಗಿದ್ರೆ ಸರಕಾರಕ್ಕೆ ಗೊತ್ತಾಗಿ ಇನಕಂಟ್ಯಾಕ್ಸ್ ಕಟ್ಟಬೇಕಾಯ್ತದೆ. ಆದಾಯದ ಮೂಲನೂ ಹೇಳಬೇಕಾಯ್ತದೆ. ಸಮಂದಿಕರ ಮನೇಲಿ ಇಟ್ರೆ ಬಂಗಾರಪ್ಪನಂಗೆ ಬರಿಕೈ ಆಗಬೇಕಾಯ್ತದೆ. ಮನೆಲ್ಲಿಟಗಂಡ್ರೆ ಲೋಕಾಯುಕ್ತರು ಬಂದು ರೈಡ್ ಮಾಡಿ ಹೊತಗಂಡೋಯ್ತರೆ. ಅದ್ಕೆ ಮಠ ಅನ್ನೊ ಹುತ್ತದಲ್ಲಿಟ್ರೆ ಅಲ್ಲಿರೊ ಸರ್ಪ ಕಾವಲು ಕಾದು, ಹೋದಾಗ್ಯಲ್ಲ ಕೊಡ್ತದೆ. ನಮ್ಮ ಎಡೂರಪ್ಪನೂ ಸುತ್ತೂರು, ಸಿರಿಗೆರೆ, ಸಿದ್ದಗಂಗೆಲ್ಯಲ್ಲ ಮಡಗ್ಯವ್ರುನೆ ಅಂತ ಸುದ್ದಿ ಅದೆ ಕಣಕ್ಕ."

"ಅಂಗರೆ ಮೂರತ ಮಡಗಿದ್ದನೆ?"

"ಊ. ಸಿರಿಗೆರೆ, ಸುತ್ತೂರು ಕೈಕೊಟ್ರೆ ಸಿದ್ದಗಂಗೆದಾರ ಸಿಗಲಿ ಅಂತ ಇಟ್ಟಿರಬಹುದು. ಯಾರ ಕಂಡಿದ್ದರವ್ವ. ಮಾತ್ರ ಭ್ರಷ್ಟ ರಾಜಕಾರಣಿಗಳು ಮಠದಲ್ಲಿ ದುಡ್ಡಿಡದು ನಿಜವಂತೆ."

"ಚುಂಚನಗಿರಿ ಸ್ವಾಮಿಯಂಗೆ ಕೈಕೊಟ್ರೆ ಯಾರಿಡಕ್ಕೊದರೂ?"

"ಇದೇನೊ ಉಗ್ರಿ ಹಿಂಗಂತಿ. ಸ್ವಾಮಿಗಳೇನು ತಗಂಡೋದರೇನೊ. ಜನಗಳ ದುಡ್ಡ ಜನಗಳಿಗೇ ಖರ್ಚು ಮಾಡಿಬುಟ್ಟು ಹೋದರಲ್ಲೊ. ಇಡೀ ದೇಸದಲ್ಲಿ ಇಷ್ಟು ಕಡಿಮೆ ಅವಧಿಲಿ ಇಂತ ಮಠ ಕಟ್ಟಿದೋರು ಯಾರಿದ್ದರು ತೋರೊ."

"ಇಲ್ಲ ಬುಡು. ನಾನೆ ಎಸೆಸೆಲ್ಸಿ ಓದುವಾಗ ಜವುರನಳ್ಳಿತ್ರ ಏನಿತ್ತೂ? ಬೆಂಗಾಡಪ್ಪ, ಓತಿಕ್ಯಾತ ಮಟ್ಟೆ ಇಕ್ಕೊ ಜಾಗ. ಇವತ್ತಲ್ಲಿ ಆಸುಪತ್ರೆ, ಮೆಡಿಕಲ್ ಕಾಲೇಜು, ಇಸ್ಕೂಲ್‌ಗಳು ಒಂದೆ, ಯರಡೆ, ಬರಗಾಲ ಬಿದ್ದು ಹಾಳಾಗಿದ್ದ ಜಾಗವ ಸ್ವರ್ಗ ಮಾಡಿಬುಟ್ಟೊದ್ರು."

"ಆ ಸ್ವರ್ಗದ ಜಾಗದಲ್ಲಿ ಆ ಕಡೆ ಒಂದಿಷ್ಟು ನರಕನೂ ಮಾಡಿ ಹೋದ್ರು ಕಣೊ ಉಗ್ರಿ."


"ಅದ್ಯಾವುದಪ್ಪ ನಾನು ಕಾಣದಂಗೆ."

"ಜವುರನಳ್ಳಿ ಮೆಡಿಕಲ್ ಕಾಲೇಜಿಗೆ ರೈತರು ಅಗ್ಗವಾಗಿ ತಮ್ಮ ಜಮೀನು ಬುಟ್ಟುಕೊಟ್ರು. ಆಗ ಅವುರ ಮಕ್ಕಳಿಗೆ ಒಂದು ಕೆಲಸ ಕೊಡಿ ಅಂದ್ರು. ಸ್ವಾಮಿಗಳು ಆಯ್ತು ಅಂದ್ರು. ಏನು ಕ್ಯಲಸ ಅಂತೀ? ಆಸುಪತ್ರೆ ಕ್ಯಲಸ ದಿನಕ್ಕೆ ಹದುನಾರು ಗಂಟೆ ಕ್ಯಲಸ. ತಿಂಗಳಿಗೆ ಆರುನೂರ್‍ರುಪಾಯಿ ಸಂಬಳ. ಸಂಬಳ ಸಾಲದಿಲ್ಲ ಅಂತ ರೈತರ ಮಕ್ಕಳು ಚಪ್ಪರ ಹಾಯ್ಕಂಡು ಸ್ಟ್ರೈಕ್ ಮಾಡಿದ್ರು. ಚಪ್ಪರಕ್ಕೆ ಅಂತ ನೆಟ್ಟಿದ್ದ ದಡಿಗಳು ಚಿಗತಗಂಡು ಮರಾದ್ರೂ ಅವುರ ಬೇಡಿಕೆ ಈಡೇರಲಿಲ್ಲ. ಒಬ್ಬೊಬ್ಬರೇ ಖಾಲಿಯಾದ್ರು. ಚತುಷ್ಪಥ ರಸ್ತೆ ಬಂದು ಆ ಪ್ರತಿಭಟನೆ ಜಾಗ ರಸ್ತೆ ಆಯ್ತು. ಪಾಪ ಆ ರೈತರ ಮಕ್ಕಳು ಯತ್ತಗೋದ್ರೊ. ಅದೊಂದು ವಿಷಯದಲ್ಲಿ ಸ್ವಾಮಿಗಳು ಕರುಣೆ ತೋರಬವುದಿತ್ತು."

"ಸ್ವಾಮಿ ಆದೋರು ಮನುಸ್ರೆ ಅಲ್ಲವೆ?"

"ಎಜಾಟ್ಲೆ ಕರಟ್!?" ■

ವ್ಯಕ್ತಿ ಮತ್ತು ಕುಟುಂಬ




ಇದೆಲ್ಲ ಹೇಗೆ ನೆನಪಿರುತ್ತದೆ ನೋಡಿ. ನಾನೊಮ್ಮೆ ರಾತ್ರಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ತಣ್ಣಗೆ ಗಾಳಿಯನ್ನು ಕೆನ್ನೆಗೆ ಬಿಟ್ಟುಕೊಳ್ಳುವ ಆಸೆಯಿಂದ ಪಕ್ಕದಲ್ಲಿದ್ದ ಕಿಟಕಿಯ ಗಾಜನ್ನು ಕೊಂಚ ಸರಿಸಿದೆ, ಗಾಳಿಯೇನೋ ಬಂತು. ಆದರೆ ಜನ "ಕಿಟಕಿ ಮುಚ್ಚಿ, ಮುಚ್ಚಿ" ಎಂದು ಗೊಣಗತೊಡಗಿದರು. ಇನ್ನೊಮ್ಮೆ ವೀಡಿಯೋ ಹಾಕಿದ ಬಸ್, ಎಲ್ಲರೂ ಆ ಸಿನಿಮಾ ನೋಡಿ ಆನಂದಿಸುತ್ತಿದ್ದಾಗ ನಾನು ಚಡಪಡಿಸತೊಡಗಿದೆ. ಇತ್ತೀಚೆಗೆ ನನ್ನನ್ನು ಕಿತಗೊಳಿಸಿದ್ದು ಸಣ್ಣ ವಿಷಯ. ಅವರಿಬ್ಬರೂ ಮಹಾ ಸುಖಜೀವಿಗಳಂತೆ, ಆದರ್ಶ ಸಂಸಾರಿಗಳಂತೆ ಕಾಣುತ್ತಿದ್ದರು. ದರೆ ಅವರಿಬ್ಬರಿಗೂ ಇದ್ದಕ್ಕಿದ್ದಂತೆ ಜಗಳವಾಯಿತು. ಗಂಡನಿಗೆ ಫ್ಯಾನ್ ಇಷ್ಟ. ಚಳಿಗಾಲದಲ್ಲೂ ಸೆಖೆಯಿಂದ ವರುತ್ತಿದ್ದ ಆತ ಫ್ಯಾನ್‌ಗೆ ತೀರಾ ಹತ್ತಿರ ಕೂತು ಗಾಳಿಯನ್ನು ಆನಂದಿಸುತ್ತಿದ್ದ. ಆ ಗಾಳಿ, ಫ್ಯಾನ್ ಶಬ್ದ ಕೇಳಿ ಲಿರೋಸಿದ ಹುಡುಗಿ ಒಂದು ದಿನ ಸಿಟ್ಟಿನಿಂದ ಆಕ್ಷೇಪಿಸಿದಳು. ಆದರೆ ಆಕೆ ಗೊರಕೆ ಹೊಡೆಯುವಾಕೆ ಮತ್ತು ವಳು ಗೊಣಗಿಕೊಳ್ಳುತ್ತಿದ್ದ ಹಿಂದಿ ಹಾಡುಗಳು ಅವನಿಗೆ ಇಷ್ಟವಾಗುತ್ತಿರಲಿಲ್ಲ. ಎಲ್ಲಕ್ಕಿಂತ ಮುಖ್ಯ ಈತನ ಫ್ಯಾನ್ ಂಗಾತಿಯನ್ನು ರೇಗಿಸಲು ಬೇಕೆಂತಲೇ ಹಾಕಿದಂತಿತ್ತು; ಆಕೆಯ ಹಾಡು ಕೂಡ ಅಷ್ಟೆ. ಆದರೆ ಗೊರಕೆಯ ಬಗ್ಗೆ ನು ಮಾಡಬೇಕು?

ಸಹಬಾಳ್ವೆಯ ಕಷ್ಟ ನಾನಾ ರೂಪ ಪಡೆಯಬಲ್ಲದು. ಅನುಮಾನ ಶುರುವಾದರೆ ಅದು ಬೆಳೆಯುತ್ತಾ ಹೋಗುತ್ತದೆ; ಲ್ಲಿ ಕಮಲಾ ಹಾಸನ್, ಲಿಯೋ, ಮಾಧುರಿ ದೀಕ್ಷಿತ್ ತಲೆಹಾಕುತ್ತಾರೆ.- ಎಲ್ಲಕ್ಕಿಂತ ಹೆಚ್ಚಾಗಿ ಇದೆಲ್ಲದರಿಂದ ಮುಕ್ತನಾಗುವ, ಏಕಾಂಗಿಯಾಗಿ ಕೆಲವು ಕ್ಷಣ ಕಳೆಯುವ ಆಸೆ ಉಲ್ಬಣಗೊಳ್ಳುತ್ತದೆ. ಹಾಗೆಂದು ಒಬ್ಬನೇ ಇರುತ್ತೀ ನ್ನೋಣ. ಅದು ಸಂತ ಮತ್ತು ಅವಧೂತನಿಗೆ ಮಾತ್ರ ಸಾಧ್ಯ. ಮಾತಾಡಲು, ಜೊತೆಗಿರಲು ಯಾರಾದರೂ ಬೇಕೆನ್ನಿಸುತ್ತದೆ; ಯಾರಾದರೂ ಆದರೆ ಆಗುವುದಿಲ್ಲ, ಇಂಥವರೇ ಬೇಕು.

ಏಕಾಂತ ಮತ್ತು ಸಹಬಾಳ್ವೆ, ಖಾಸಗಿ ಕ್ಷಣಗಳು ಮತ್ತು ಒಟ್ಟಾಗಿರುವ ದಿನಗಳು- ಎರಡಕ್ಕೂ ಕಾತರಿಸುವ ನುಷ್ಯ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಲೇ ಇದ್ದಾನೆ. ಕುಟುಂಬ ನಿರಂತರವೆನ್ನಿಸಿ ಕ್ಲಬ್‌ಗೆ ಸೇರುತ್ತಾನೆ; ದು ತೀರಾ ಸಾರ್ವಜನಿಕ ಅನ್ನಿಸಿ ಒಬ್ಬಿಬ್ಬರು ಗೆಳೆಯರೊಂದಿಗೆ ಇರುತ್ತಾನೆ. ಆದರೆ ದುಃಖ ಇದ್ದೇ ಇರುತ್ತದೆ. ಅದು ಕಾಂತದಲ್ಲಿನ ದುಃಖ, ಹಾಗೆಯೇ ಸಹಬಾಳ್ವೆಯ ದುಗುಡ...



ಲಿಯೋ!



"ಲಿಯೋ! ಲಿಯೋ!" ಕೂಗು ಎಲ್ಲೆಲ್ಲೂ ಪ್ರತಿಧ್ವನಿಗೊಳ್ಳುತ್ತಿದೆ; ಜೋಶುವಾ ಕ್ವಿಟ್ನರ್ ಎಂಬ ತಾಯಿ "ಈ ಲಿಯೋನಾರ್ಡೋ ದಿ ಕ್ಯಾಪ್ರಿಯೋ ಮನೆ ಹಾಳಾಗ!" ಎಂದು ಅರ್ಧ ಹೊಟ್ಟೆಕಿಚ್ಚು ಅರ್ಧ ಕಿರಿಕಿರಿಯಿಂದ ಶಪಿಸುತ್ತಾಳೆ. ಏನು ಮಾಡುವುದು? ಆ ತಾಯಿಯ ಇಬ್ಬರು ಹೆಣ್ಣುಮಕ್ಕಳು ಇಡೀ ಹತ್ತು ಗಂಟೆ ಲಿಯೋ ದಿ ಕ್ಯಾಪ್ರಿಯೋ ಮ್ಯಾಗಜೀನ್‌ಗಳಲ್ಲಿ ತಲೆ ತೂರಿಸಿಕೊಂಡು ಕೂತಿರುತ್ತಾರೆ; "ವೆಬ್‌ಸೈಟ್ ಕಂಪ್ಯೂಟರ್‌ನಲ್ಲಿ ಲಿಯೋ ಬಗ್ಗೆ ಬಂದಿರುವುದನ್ನು ಹುಡುಕಿಕೊಡು!" ಎಂದು ತಾಯಿಗೆ ದುಂಬಾಲು ಬೀಳುತ್ತಾರೆ. ಒಬ್ಬಳು, "ಪ್ಲೇಗರ್ಲ್ ಮ್ಯಾಗಜೀನ್‌ನವರು ಲಿಯೋನ ಬೆತ್ತಲೆ ಫೋಟೋ ಹಾಕ್ತಾರಂತೆ!" ಎಂದೊಡನೆ ಇನ್ನೊಬ್ಬಳು, "ಪ್ರತಿಭಟಿಸಿ ಬರೆಯೋಣ" ಅನ್ನುತ್ತಾಳೆ. "ಪ್ರತಿಭಟನೆ ಅಂದರೆ ಬೇಡ ಅಂತ ಅಲ್ವೆ?" ಎಂದು ಮೊದಲನೆಯವಳು ಹೇಳಿದರೆ ಇನ್ನೊಬ್ಬಳು, "ಅದೇನಾದ್ರೂ ಇರಲಿ, ಪ್ರತಿಭಟಿಸೋಣ!" ಅಂತಾಳೆ.

ಲಿಯೋನ ಜೀವನಚರಿತ್ರೆ, ಚಿತ್ರಗಳು, ಸ್ಟಿಕರ್‌ಗಳು, ಹಾಡುಗಳು, ಜೋಕ್‌ಗಳು.... ಲಿಯೋ ಇಲ್ಲದೆ ಬದುಕೇ ಇಲ್ಲ. ಲಿಯೋ ಎಂಬ ಸಮುದ್ರದಲ್ಲಿ ಹುಡುಗಿಯರ ಜಗತ್ತು ಮುಳುಗಿಹೋಗ್ತಿದೆ. ಜಗತ್ತಿನ ಬೇರೆ ಹೀರೋಗಳು, ಕ್ರೀಡಾಪಟುಗಳು, ಬುಲ್‌ಫೈಟರ್‌ಗಳು ಮಂಕಾಗಿ ಗ್ರಹಣ ಹಿಡಿದವರಂತೆ ಕೂತಿದ್ದಾರೆ. ಕೇವಲ ಆರು ತಿಂಗಳ ಹಿಂದೆ ರಾಜಕುಮಾರಿ ಡಯಾನ ಬಗ್ಗೆ ಕುಣಿದಾಡಿದ ಜನರ ಮನಸ್ಸಿನಲ್ಲಿ ತಾವು ಮಾಡುತ್ತಿರುವುದು ತಪ್ಪೇನೋ ಎಂಬ ಅಳುಕು ಇತ್ತು, ಲಿಯೋನಾರ್ಡೋ ಬಗ್ಗೆ ಹಾಗಲ್ಲ... ಆತ ಇಪ್ಪತ್ತೊಂದನೆ ಶತಮಾನಕ್ಕೆ ಹುಡುಗಿಯರನ್ನು ಕರೆದೊಯ್ಯುತ್ತಿರುವ ಹೊಸದಾಗಿ ಪ್ರೇಮಿ; ಮುಪ್ಪು, ಸಾವು, ರೋಗ ಯಾವುದೂ ಇಲ್ಲದ ಪರಿಶುದ್ಧ ಯೌವನಿಗ. ಈ ಲಿಯೋ ಎದುರು ಹೊಸದಾಗಿ ಮದುವೆಯಾದ ಹುಡುಗ ಹೆಂಡತಿಯ ಪಕ್ಕದಲ್ಲಿ ಕೀಳರಿಮೆಯಿಂದ ನಿಟ್ಟುಸಿರು ಬಿಡುತ್ತಾನೆ; ಕನ್ನಡದ ನಟರು ಹಿಂದಿಯ ತರುಣ ಹುಡುಗಿಯ ಜೊತೆ ನರ್ತಿಸುವಾಗ ತಾವು ತಾತಂದಿರು ಎಂದುಕೊಂಡು ಮುಗುಡಗೊಳ್ಳುತ್ತಾರೆ; ಖಾನ್‌ಗಳೆಲ್ಲ ಖಾನಾವಳಿಯ ಸೇವಕರಂತೆ ಕಾಣುತ್ತಿದ್ದಾರೆ.

ಇಲ್ಲಿಯ ಬೆಂಕಿ ಸೃಷ್ಟಿಸುವಂತೆಯೇ ಮನುಷ್ಯರ ಮನಸ್ಸು ಕಾಲವನ್ನು, ಕಾಮವನ್ನು ಸೃಷ್ಟಿಸುತ್ತದೆ; ಕಾಮದಹನವನ್ನು ಕೂಡ. ಎಳೆಯ ಹೃದಯಗಳನ್ನು ಲಯಗೊಳಿಸುತ್ತದೆ. ಲಿಯೋ ಇತ್ತೀಚಿನ ಬೆಂಕಿ. ಮುಳುಗುತ್ತಿರುವ ಈ ಶತಮಾನದಿಂದ ಯುವ ಕನಸುಗಳನ್ನು ಮುಂದಿನ ಶತಮಾನಕ್ಕಾಗಿ ರಕ್ಷಿಸುವ ಲೈಫ್‌ಬೋಟ್....

• ಮೇ 13, 1998

ಟಿಪ್ಪು ಸುಲ್ತಾನ್ ಅನ್ನೋದೆ ಅನಿಷ್ಟ!

ಅಣಕ




• ಎಚ್.ಎಲ್.ಕೇಶವಮೂರ್ತಿ

ಆರವತ್ತಾಲ್ಕು ವಿದ್ಯೆಗಳಲ್ಲಿ ಎರಡು ಮಾತ್ರ ಇವರಿಗೆ ಇದ್ದ ಹಾಗಿಲ್ಲ, ಸ್ವಂತ ಬುದ್ಧಿ ಇಲ್ಲ, ಹೇಳಿದ ಮಾತು ಕೇಳಲ್ಲ, ಸುಖಾಸುಮ್ಮನೆ ಅಪಪ್ರಚಾರ ಮಾಡುತ್ತವೆ. ಟಿಪ್ಪು ಸುಲ್ತಾನ್ ಹೆಸರು ಕೇಳಿದ ತಕ್ಷಣ ಬಲಪಂಥೀಯರು ಚೇಳು ಕುಟುಕಿದಂತೆ ಆಡುತ್ತಾರೆ ಅನ್ನುತ್ತಾರೆ. ಅವರ ಅಂತರಾಳದ ನೋವಿನ ಅರಿವು ಇವರಿಗಿಲ್ಲ, ಚರಿತ್ರೆ ಪುಟ ತಿರುಗಿಸಿ ನೋಡಿ. ಸಂಜಯ್ ಖಾನ್ 'ಟಿಪ್ಪುವಿನ ಖಡ್ಗ' ಸೀರಿಯಲ್ ಮಾಡ್ತೀನಿ ಅಂತ ಹೊರಟ. ಏನಾಯಿತು ಅವನ ಕಥೆ? ದೂರ ಹೋಗಬೇಕಿಲ್ಲ. ಇಲ್ಲೇ ಆದದ್ದು ನೋಡಿ. ಮೈಸೂರು ಹುಲಿ ಸೀರಿಯಲ್ ತಗೀತಿದೀನಿ ಅನ್ನೊ ಹುಮ್ಮಿನಲ್ಲಿ ಮೈಸೂರಿಗೇ ಬಂದ. ಎಲ್ಲಾ ಆಣಿ ಮಾಡಿಕೊಂಡ. ಮುಂದೇನಾಯಿತು? ಸ್ಟುಡಿಯೋಗೆ ಬೆಂಕಿ ಬಿತ್ತು! ಮೈಸೂರ ಹುಲಿ, ಅವನ ಖಡ್ಗ ಎರಡೂ ಅನಿಷ್ಟಗಳು ಜೊತೆ ಸೇರಿದ್ದವು. ಮೈಸೂರಿಗರ ಪುಣ್ಯ. ಇಡೀ ನಗರವೇ ಭಸ್ಮ ಆಗಲಿಲ್ಲ, ಧಾರಾವಾಹಿ ಬಿಡುಗಡೆ ಆದರೆ ಇನ್ನೆಂತಹ ಅನಾಹುತ ಕಾದಿದೆಯೋ ಎಂದು ದೇಶಪ್ರೇಮಿಗಳು ದಿಗಿಲುಬಿದ್ದರು. ತಡೆ ಆಜ್ಞೆ ತಂದರು. ಆಗಬಹುದಾದ ಅನಾಹುತದಿಂದ ದೇಶವನ್ನು ಪಾರು ಮಾಡಿದರು!

ಇದೊಂದು ಆಯಿತಲ್ಲ, ಇನ್ನೊಂದು ನಿದರ್ಶನ ನೋಡಿ. ಪಾಪ ವಿಜಯ ಮಲ್ಯ ಸಾಹೇಬರು ದಿಲ್‌ದಾರ್ ಮನುಷ್ಯ ಅಲ್ಲವಾ. ಪಡ್ಡೆ ಹುಡುಗಿಯರ ಸಂಗಡ ಮೋಜು ಮಸ್ತಿ ಮಾಡಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದರು. ಇಂಗ್ಲೆಂಡಿನಲ್ಲಿದ್ದ 'ಟಿಪ್ಪು ಖಡ್ಗ'ವನ್ನು ಕೊಂಡು ತಂದರು. ಎಲ್ಲೋ ಇದ್ದ ಮಾರಿಯನ್ನು ಮನೆಗೆ ತಂದ ಹಾಗೆ ಆಯಿತು. ದುರಾದೃಷ್ಟ ಬೆನ್ನು ಹತ್ತಿತು. ಕೈ ಹಾಕಿದ ಕಡೆ ಎಲ್ಲ ಲುಕ್ಸಾನು. ಕಿಂಗ್ ಫಿಷರ್ ಏರ್‌ಲೈನ್ಸ್ ಕೊಂಡುಕೊಂಡರು. ಸಿಬ್ಬಂದಿಗೆ ಸಂಬಳ ಕೊಡುವುದೂ ದುಸ್ತರ ಆಯಿತು. ಎಷ್ಟು ದೇವರಿಗೆ ಏನು ಹರಕೆ ಹೊತ್ತರೂ, ದೇಗುಲಕ್ಕೆ ಚಿನ್ನದ ಬಾಗಿಲನ್ನೇ ಮಾಡಿಸಿಕೊಟ್ಟರೂ ಖಡ್ಗದ ಕಾಟ ತಪ್ಪಲಿಲ್ಲ! ಏನೋ ಅವರು ಮಾಡಿದ ಪೂರ್ವಾರ್ಜಿತ ಪುಣ್ಯ. ಮೋಜು ಮಸ್ತಿಗೇನೂ ಕುಂದು ಬಂದಿಲ್ಲ, ಇದೇ ಸಮಾಧಾನದ ಸಂಗತಿ!

ಟಿಪ್ಪು ಸುಲ್ತಾನ್ ಅನ್ನುವ ಹೆಸರೇ ಅನಿಷ್ಟ ಸೂಚಕ. ಅದಕ್ಕೆ ಸಂಬಂಧಿಸಿದಂತೆ ಏನನ್ನೂ ಮಾಡಬಾರದು. ಹಾಗೆ




ಮಾಡಿದರೆ ದೇಶಕ್ಕೆ ಅಪಾಯ ಕಟ್ಟಿಟ್ಟಬುತ್ತಿ ಎಂದು ಅದಕ್ಕೆ ಅವಕಾಶ ಕೊಡದಂತೆ ಹೋರಾಡುವ ಒಂದು ಪಡೆಯೇ ಇರುವುದು ನಮ್ಮ ಸೌಭಾಗ್ಯವೇ ಸರಿ. ಯಾರಯಾರ ಮಾತನ್ನೋ ಕೇಳಿ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಈ ಅನಿಷ್ಟದ ಹೆಸರಿನಲ್ಲಿ ಸಂಶೋಧನಾ ಕೇಂದ್ರ ತೆರೀತೀನಿ ಅಂತ ಹೊರಟರು. ಹೀಗೆ ಮಾಡುವುದರಿಂದ ರಾಷ್ಟ್ರಕ್ಕೆ ಅಪಾಯ ತಪ್ಪಿದ್ದಲ್ಲ, ಇದನ್ನು ಮಾಡಬಾರದು ಅಂತ ವಿರೋಧ ಮಾಡಿದವರು ಯಾರು ಅಂತೀರಿ? ಚೇಳು ಕುಟುಕಿದಂತೆ ಆಡ್ತವೆ ಅಂತ ಬೇಜವಾಬ್ದಾರಿ ಮಾತನಾಡುತ್ತವಲ್ಲ ಅವಲ್ಲ ಕಣ್ರೀ. ಅವರು ದೇಶಪ್ರೇಮಿಗಳು!

ನೋಡ್ರಪಾ ನಿಮ್ಮ ಅಂಗೈಯಲ್ಲೇ ಇಂತಹ ಹುಣ್ಣು ಎದ್ದದೆ, ಇದಕ್ಕೆ ಕನ್ನಡಿ ಯಾಕೆ ಬೇಕು ಅಂದರೂ ಕೇಳೊಲ್ಲರು. ಕನ್ನಡಿ ಹುಡುಕಿಕೊಂಡು ಹೋಯ್ತವೆ. ಇವಕ್ಕೆ ಬುದ್ಧಿಯಂತೂ ಬರುವ ಹಾಗೆ ಕಾಣೆ. ಇರುಳೇ ಕಂಡ ಬಾವಿಗೆ ಹಗಲು ಬೀಳ್ತವೆ. ಟಿಪ್ಪು ಸುಲ್ತಾನ್ ಅಲ್ಪಸಂಖ್ಯಾತರ ವಿಶ್ವವಿದ್ಯಾನಿಲಯ ತೆರೀತೀವಿ ಅಂತ ಯಾವ್ದೋನೋ ಹೇಳ್ದ ಅಂತ ಥಕಥೈ ಅಂತ ಕುಣೀತ ಬಿದ್ದವೆ. 'ಇದು ಯಾಕ್ರಪಾ ಹಿಂಗೆ ಆಡ್ತಿದೀರಿ' ಅಂದರೆ 'ಸಾಚಾರ್ ಸಮಿತಿ ವರದಿಯಲ್ಲಿ ಮುಸಲ್ಮಾನರು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳಲ್ಲಿ ಬಲೇ ಹಿಂದೆ ಬಿದ್ದವ್ರೆ ಅಂತ ಅದೆ. ಈ ಲೋಪ ಸರಿ ಮಾಡಕೆ ಮೊದಲ ಹೆಜ್ಜೆ ಇದು' ಅಂತ ಏನೇನೋ ಕಾಗಕ್ಕ ಗುಬ್ಬಕ್ಕನ ಕತೆ ಕಟ್ತವೆ. 'ಬ್ಯಾಡ ಕಣ್ರಪಾ. ಆ ಹೆಸರೇ ದುರ್ದೆಸೆ ತರ್ತದೆ' ಅಂದರೂ ಕೇಳೊಲ್ಲರು. 'ಅವನು ರಾಷ್ಟ್ರಪ್ರೇಮಿ, ಜಾತ್ಯತೀತನಾಗಿದ್ದ. ಆಡಳಿತದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದ, ಕ್ಷಿಪಣೀನೂ ಹಾರಿಸಿದ್ದ' ಅಂತೆಲ್ಲ ಏನೋ ಅವನ ಕಾಲದಲ್ಲೇ ಇದ್ದು ಕಣ್ಣಾರೆ ಕಂಡವರ ತರಹ ಕಗ್ಗ ಹೊಸೀತಾವೆ. ಅಲ್ಲ ಮಾತಿಗೇಳ್ತೀನಿ. ಸಂಶೋಧಕ ಚಿದಾನಂದಮೂರ್ತಿ, ಸರಸ್ವತಿ ಸನ್ಮಾನ್ ಸಾಹಿತಿ ಭೈರಪ್ಪನವರಿಗಿಂತ ಇವರು ದೊಡ್ಡೋರ? ತಿಳಿದೋರ? ಅಂತಹವರೇ ಅವನು ಹಂಗಲ್ಲಪ್ಪ ಇದ್ದದ್ದು ಹಿಂಗೆ ಎಂದು ಹೇಳಿದರೂ ಉಡಾಯಿಸಿ ಮಾತನಾಡ್ತವೆ. ಅವರೇನು ಆಧಾರ ಇಲ್ಲದೆ ಈ ಮಾತು ಹೇಳಿಲ್ಲ, ಕೊಡಗು, ಮಲಬಾರುಗಳಲ್ಲಿ ಹಿಂದೂಗಳನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿದ್ದಕ್ಕೆ ದಾಖಲೆ ತೋರಿಸಿದ್ದಾರೆ.

ಕೊಡಗಿನಲ್ಲಿ ಒಂದೇ ಸಲಕ್ಕೆ ಎಪ್ಪತ್ತೊಂದು ಸಾವಿರ ಹಿಂದೂಗಳ ಮತಾಂತರ ಮಾಡಲಾಯಿತಂತೆ. ಎಂತಹ ಕ್ರೂರಿ ಅಲ್ಲವಾ. ಇದನ್ನು ಹೇಳಿದರೆ 'ಹದಿನೆಂಟನೆ ಶತಮಾನದಲ್ಲಿ ಇಡೀ ಕೊಡಗಿನಲ್ಲಿ ಅಷ್ಟು ಜನ ಇರಲೇ ಇಲ್ಲ' ಅಂತ ಯಾವ್ಯಾವುದೋ ಅಂಕಿಅಂಶ ಕೊಡುತ್ತವೆ. 'ಇದು ನಿಜವೇ ಆಗಿದ್ದರೆ ಕೊಡಗಿನಲ್ಲಿ ಇವತ್ತು ಹಿಂದೂಗಳೇ ಇರುತ್ತಿರಲಿಲ್ಲ, ಮುಸಲ್ಮಾನರೇ ತುಂಬಿರುತ್ತಿದ್ದರು' ಅಂತ ನಗಾಡ್ತವೆ. ಇವುಗಳ ಮಾತ ನಂಬಿದರೆ ಚಿದಾನಂದ ಮೂರ್ತಿಗಳು, ಭೈರಪ್ಪನವರು ಸುಳ್ಳು ಹೇಳುತ್ತಿದ್ದಾರೆ ಎಂದ ಹಾಗಾಗುತ್ತದೆ. ಸರಸ್ವತೀ ಪುತ್ರರು ಹಾಗೆ ಹೇಳಲು ಸಾಧ್ಯವೇ ಇಲ್ಲ. ಪ್ರಾಯಶಃ ಟಿಪ್ಪು ಮತಾಂತರ ಮಾಡಿದ್ದು ನಿಜ. ನಂತರ ಯಾವ ಕಾಲದಲ್ಲೋ ಮತ್ತೆ ಅವರು ಇಸ್ಲಾಂ ಧರ್ಮದಿಂದ ಹಿಂದೂ ಧರ್ಮಕ್ಕೆ ಮತಾಂತರ ಆಗಿರಬಹುದು ಎಂದರೂ ಒಪ್ಪಲೊಲ್ಲರು. 'ಅಲ್ಲ ಕಣ್ರೀ ದಾಖಲೇನೆ ಬಿಡುಗಡೆ ಮಾಡಿದ್ದಾರಲ್ರೀ' ಎಂದರೆ ಏನಂತಾರೆ ಗೊತ್ತ? 'ಈಗ ಬಿಡುಗಡೆ ಮಾಡಿದ್ದಾರಲ್ಲ ದಾಖಲೆ. ಅವೆಲ್ಲ ಬೊಗಳೆ. ಆದರೂ ಮಾಧ್ಯಮಗಳಲ್ಲಿ ದಾಖಲಾಗುತ್ತವೆ. ಇಂತಹ ದಿವಸ, ಇಂತಹ ಪುಣ್ಯರು, ಇವನ್ನು ಬಿಡುಗಡೆ ಮಾಡಿದರು ಎನ್ನುವುದು ಮುಂದಿನ ಚಿದಾನಂದಮೂರ್ತಿ, ಭೈರಪ್ಪಗಳಿಗೆ ಒಂದು ಅಧಿಕೃತ ದಾಖಲೆಯಾಗುತ್ತದೆ' ಎಂದು ಮುಂತಾಗಿ ಪಂಡಿತರು ಬಿಡುಗಡೆ ಮಾಡಿದ ದಾಖಲೆಗಳನ್ನೇ ಅಲ್ಲಗಳೆಯುತ್ತವೆ!

'ನಿಮ್ಮ ಮಾತಿಗೇ ಬರುತ್ತೀನಿ. ಆಂಧ್ರ ಪ್ರದೇಶದ ಆದು ಯಾವುದೋ ಶಾಸಕ ಹಿಂದೂಗಳನ್ನು ಹಿಗ್ಗಾಮುಗ್ಗಾ ಬೈದಿದ್ದು ನಿಜ ತಾನೆ?' ಅಂದರೆ 'ಹೂಂ' ಅಂತಾವೆ. 'ಅವನು ಉಸ್ಮಾನಿಯಾ ಯೂನಿವರ್ಸಿಟಿ ಪ್ರಾಡೆಕ್ಟ್ ಅಲ್ವಾ' ಅಂದರೆ 'ಹೌದು' ಅಂತಾವೆ. 'ಅವನು ಭಯೋತ್ಪಾದಕ ಅನ್ನೋದನ್ನಾದರೂ ಒಪ್ತೀರಾ' ಅಂದರೆ 'ಒಪ್ತೀವಿ' ಅಂತವೆ. 'ಉಸ್ಮಾನಿಯಾ ಯೂನಿವರ್ಸಿಟಿ ಭಯೋತ್ಪಾದಕರ ಉತ್ಪಾದನಾ ಕೇಂದ್ರ ಆದಂಗೆ ಟಿಪ್ಪು ಅಲ್ಪಸಂಖ್ಯಾತರ ಯೂನಿವರ್ಸಿಟೀನೂ ಆಗುತ್ತಲ್ವಾ' ಅಂದರೆ, 'ತಲೆ ಕೆಟ್ಟೋರು ಹೇಳೋ ಮಾತಿದು' ಅಂತಾವೆ. ಇದೇನ್ರಿ ಹಿಂಗಂತೀರಿ ಅಂದರೆ 'ಕರ್ನಲ್

ಭಾರತ ಮಾತೆ ಕಾಣೆಯಾಗಿದ್ದಾಳೆ



ದೆಹಲಿಯಲ್ಲಿ ಅಮಾನುಷ ಅತ್ಯಾಚಾರ ಪ್ರಕರಣ ನಡೆಯಿತು. ಇದೊಂದು ಹಾದಿ ತಪ್ಪಿದ ದುರುಳರ ಕುಕೃತ್ಯವಾದರೆ, ಸಾಮಾಜಿಕ ಜವಾಬ್ದಾರಿಯುಳ್ಳ ಮುಖಂಡರೆಂದೆನಿಸಿಕೊಂಡ ಮೋಹನ್ ಭಾಗವತ್, ಕೈಲಾಸ್ ವಿಜಯ್ ವರ್ಗೀಯಾ, ಅಸಾರಾಮ್ ಬಾಪುರಂತಹ ವ್ಯಕ್ತಿಗಳು ಆಡಿರುವ ಕೀಳು ಮನಸ್ಥಿತಿಯ ಮಾತುಗಳು ಯಾವ ಆ ಅತ್ಯಾಚಾರಿ ಮನಸ್ಥಿತಿಗಿಂತಲೂ ಕಡಿಮೆಯಿರಲಿಲ್ಲ.

ದೆಹಲಿ ಪ್ರಕರಣವನ್ನು ನೆಪವನ್ನಾಗಿಸಿಕೊಂಡು ಭಾಗವತನೆಂಬ ಸಂಘ ಪರಿವಾರಿ ತನ್ನ ಭಾಗವತಿಕೆಯ ಅಪಸ್ವರವನ್ನು ಹೊರಹಾಕಿದ್ದಾನೆ. ಒಂದು ಹೆಣ್ಣಿನ ಶೀಲವನ್ನು ಕುರಿತದ್ದಾಗಿದ್ದರೆ ಇನ್ನೊಂದು ಪಾಶ್ಚಾತ್ಯ ಸಂಸ್ಕೃತಿಯ ಬಗ್ಗೆ, ಭಾರತ ಪಾಶ್ಚಾತ್ಯೀಕರಣಗೊಂಡು ಇಂಡಿಯವಾಗಿದ್ದೇ ಎಲ್ಲಾ ಅನಾಚಾರಗಳಿಗೂ ಮೂಲ ಎನ್ನುವುದು ಈತನ ಸಂಶೋಧನೆ. ಆದರೆ ಅಂಕಿಅಂಶಗಳು ತೋರುವ ವಾಸ್ತವದ ಚಿತ್ರಣ ಬೇರೆಯದೇ ಕಥೆಯನ್ನು ಹೇಳುತ್ತದೆ. ಇವನಂಥವರ ಪ್ರಕಾರ ಪಾಶ್ಚಾತ್ಯರು ನೀತಿ ನಡವಳಿಕೆ ಇಲ್ಲದ ಸಂಸ್ಕೃತಿ ಹೀನರು. (ಸನಾತನ ಎನ್ನುವ ದರಿದ್ರ ಸಂಸ್ಥೆಯೊಂದು ಪ್ರತಿ ಡಿಸೆಂಬರ್‌ನಲ್ಲಿ ಹಚ್ಚುವ ಭಿತ್ತಿ ಪತ್ರ ಇದನ್ನೇ ಹೇಳುತ್ತದೆ. ಜನವರಿ 1 ಹೊಸವರ್ಷ ಶುಭಾಷಯ ಹೇಳಬೇಡಿ ಇದು ಅನೀತಿಯ ಸಂಸ್ಕೃತಿ ಎಂದು ಕತ್ತೆ ಮೇಲೆ ಕುಳಿತ ಚಿತ್ರವನ್ನು ಪಾಶ್ಚಾತ್ಯ ಸಂಸ್ಕೃತಿ ಎಂದು ಚಿತ್ರಿಸುತ್ತದೆ).

ಇಂಗ್ಲಿಷ್ ಚಲನಚಿತ್ರಗಳಲ್ಲಿ ತೋರುವುದನ್ನೇ ಪಾಶ್ಚಾತ್ಯ ಸಂಸ್ಕೃತಿ ಎಂದು ಇವರೆಲ್ಲ ಭಾವಿಸಿದಂತಿದೆ. ಕರಾವಳಿಯ ಹಿರಿಯ ಲೇಖಕಿಯೊಬ್ಬರ ದಿವಂಗತ ಪತಿ ಸಂಘಪರಿವಾರದಲ್ಲಿ ಪ್ರಮುಖರಾಗಿದ್ದವರು. ಅವರ ಮಕ್ಕಳು ಅಮೆರಿಕಾದಲ್ಲಿರುವ ಕಾರಣ ಅಲ್ಲಿ ಈ ಜೋಡಿ ಹೋಗಿ ಇದ್ದೂ ಬಂದಿದೆ. ಒಮ್ಮೆ ಇವರು ಆಡಿದ ಮಾತು ಈಗಲೂ ನೆನಪಿದೆ. "ಪಾಶ್ಚಾತ್ಯ ಸಂಸ್ಕೃತಿಯನ್ನು ಟೀಕಿಸುವುದು ಸರಿಯಲ್ಲ, ಅವರಿಂದ ನಾವುಗಳೂ ಕಲಿಯುವಂತಾದ್ದು ಬೇಕಾದಷ್ಟಿದೆ" ಎಂದಿದ್ದರವರು. ಪಾಶ್ಚಾತ್ಯರಲ್ಲಿ ಮುಕ್ತತೆ ಇರುವುದು ಹೌದಾದರೂ ಅವರು ನಮ್ಮಂತೆ ದುರಾಚಾರಿಗಳಲ್ಲ.

ಕೆಲವು ವರ್ಷಗಳ ಹಿಂದೆ 'ದಿ ವೀಕ್'ನ ಪತ್ರಿಕೆಯಲ್ಲಿ ಆಸ್ಟ್ರೇಲಿಯನ್ ಮಹಿಳೆಯೊಬ್ಬರು "ನನ್ನ ಭಾರತದ ಪ್ರವಾಸದುದ್ದಕ್ಕೂ ಜನ ನನ್ನನ್ನು ಹಸಿದ ಅತೃಪ್ತ ಕಣ್ಣುಗಳಿಂದ ನೋಡುತ್ತಿದ್ದರು" ಎಂದು ಬರೆದಿದ್ದರು. ಫ್ರೀ ಸ್ಟೈಲ್ ಬಟ್ಟೆ ತೊಡುವ ವಿದೇಶಿಗರನ್ನಾಗಲೀ ಗೌರವಯುತವಾಗಿ ಬಟೆ ತೊಟ್ಟ ನಮ್ಮದೇ ಒಣಿಯ ಹೆಣ್ಣನ್ನಾಗಲೀ ನಮ್ಮ ಜನ ಯಾವರೀತಿ ತಿಂದು ಹಾಕುವಂತೆ ನೋಡುತ್ತಾರೆಂಬುದನ್ನು ಹೊಸದಾಗಿ ವಿವರಿಸಬೇಕಾಗಿಲ್ಲ, ಎಲ್ಲರೂ ಹೀಗಿಲ್ಲದಿದ್ದರೂ ಹೆಣ್ಣು ಇರುವುದೇ ಮಜಾ ತೆಗೆದುಕೊಳ್ಳುವುದಕ್ಕೆ ಹಾಗು ಏನು ಮಾಡಿದರೂ ನಡೆಯುತ್ತೆ ಎನ್ನುವ ಉಡಾಫೆತನವೇ ಇಂತಹ ಮನಸ್ಥಿತಿ ಸಮಾಜದಲ್ಲಿ ಬೆಳೆಯಲು ಕಾರಣ.

ಭಾಗವತ್ ಮತ್ತು ಅಸಾರಾಂ ತರಹದ ಜನರ ಮನಸ್ಸಿಗೆ ಮೌಢ್ಯದ ಮುಸುಕು ಕವಿದಿದ್ದರೆ ಏನು ತಾನೆ ಮಾಡಲಾದೀತು?

ಉಪೇಂದ್ರನ ಒಂದು ಚಿತ್ರದಲ್ಲಿ ಮಾರ್ಮಿಕವಾದ ಒಂದು ಸಂಭಾಷಣೆಯಿದೆ. "ಇಂಡಿಯಾಸ್ ಕಲ್ಚರ್ ಈಸ್ ಗ್ರೇಟ್... ದಟ್ ಈಸ್ ಗ್ರೇಟ್... ದಿಸ್ ಈಸ್ ಗ್ರೇಟ್...." ಎಂದು ದಾರಿಯುದ್ದಕ್ಕೂ ಬಡಬಡಿಸುತ್ತಾ ಬರುವ ಆತ ಕೊನೆಗೆ "ಬಟ್... ಇಂಡಿಯನ್ಸ್ ಆರ್ ನಾಟ್ ಗ್ರೇಟ್.." ಎಂದು ಇದೇ ಅತ್ಯಾಚಾರಕ್ಕೆ ಹವಣಿಸುವ ಗುಂಪನ್ನು ಕುರಿತು



ಹೇಳುತ್ತಾನೆ. ಹೆಣ್ಣು ಗಂಡಿನ ಕಣ್ಗಾವಲಿನಲ್ಲೇ ಇರಬೇಕು ಎನ್ನುವ ಭಾಗವತ್, ಅಸಾರಾಮ್ ರಂತವರಿಂದ ಭಾರತದ ನಾರಿಯರು ಬೇರೆ ಏನನ್ನು ತಾನೇ ನಿರೀಕ್ಷಿಸಿ ಯಾರು?

ಭಾಗವತ್ ಹೇಳುವ ಪಾಶ್ಚಾತ್ಯ ಪ್ರಭಾವವಿರದ ಭಾರತದಲ್ಲಿ ಸುತ್ತಾಡಿದರೆ ಹೆಣ್ಣಿಗಿರುವ ಸ್ಥಾನ ಎಂತದೆಂಬುದನ್ನು ರೂಢಿ ಮಾತುಗಳಿಂದಲೇ ಅರ್ಥೈಸಿಕೊಳ್ಳಬಹುದು. ಮೇಲ್ಜಾತಿಗಳ, ಪಾಳೇಗಾರ ಮನಸ್ಸುಗಳ ದಬ್ಬಾಳಿಕೆ ಒತ್ತಟ್ಟಿಗಿರಲಿ, ಭಾರತದಾದ್ಯಂತ ಬಳಕೆಯಲ್ಲಿರುವ ಗಂಡಸರ ಸಹಜ ಬೈಗುಳಗಳಲ್ಲಿ ಸಂಬಂಧವಿಲ್ಲದಿದ್ದರೂ ಹೆಣ್ಣನ್ನೇ ಗುರಿಯನ್ನಾಗಿಸಲಾಗಿದೆ. ಬೋ.. ಮಗ, ಸೂ.. ಮಗ ಕ್ಕಿಂತಲೂ ಹಿಂದಿ ಪ್ರದೇಶದ ಬೈಗುಳಗಳು ಇನ್ನಷ್ಟು ಅಸಹ್ಯವಾದುದು (ಮಾದರ್... ಬಹನ್.... ಗಳು).

ಅಷ್ಟೇ ಯಾಕೆ ನಾವೆಲ್ಲ ಅಸಹ್ಯವಲ್ಲ ಎಂದು ತಿಳಿದಿರುವ ಹಿಂದಿಯ "ಸಾಲಾ" ಎನ್ನುವ ಸಾಮಾನ್ಯ ಬೈಗುಳದ ಹಿಂದೆ ಒಂದು ಇತಿಹಾಸವೇ ಇದೆ. ಈ ಸಾಲಾ ಎಂದರೆ ಕನ್ನಡದಲ್ಲಿ ಬಾವನೆಂಟನೆಂದರ್ಥ. ಅಂದರೆ ಮೂಲತಃ ನಾವು ಬೈಯ್ಯುವ ವ್ಯಕ್ತಿಯು ಸಹೋದರಿಯೊಂದಿಗೆ ನಮ್ಮನ್ನು ಸಂಬಂಧಿಸಿಕೊಂಡು ಹೇಳುವ ತುಚ್ಛ ಮಾತಿದು. ಹಿಂದೆ ವೈಶ್ಯಾವಾಟಿಕೆಯಲ್ಲಿ ತೊಡಗಿದ್ದ ಪಂಗಡಗಳಲ್ಲಿ ಅಲ್ಲಿನ ಹೆಣ್ಣುಗಳಿಗೆ ವಿಟರನ್ನು ಹೊಂದಿಸುವಂತ ಕೆಲಸವನ್ನು ಹೆಣ್ಣಿನ ಸಹೋದರರೇ ಮಾಡುತ್ತಿದ್ದರು. ಈ 'ಮುಕ್ತ' ಅಥವಾ ಸಾರ್ವಜನಿಕ ಬಾವ ನೆಂಟಸ್ತಿಕೆಯೇ 'ಸಾಲಾ' ಬೈಗಳು ಪದವಾಗಿ ಬಳಕೆಯಾಗಲು ಕಾರಣ ಎನ್ನಲಾಗಿದೆ. ಇದು ಸ್ತ್ರೀಯರನ್ನು ದೇವೀ ಎಂದು ಆರಾಧಿಸುವ ದೇಶದ ಜನರ ಮನಸ್ಥಿತಿಯ ನೈಜ ಚಿತ್ರಣ.

ಶಕ್ತಿ-ದೇವಿಯ ಹೆಸರಲ್ಲಿ ಸ್ತ್ರೀಯರನ್ನು ಗೌರವಿಸುವ ಮುಖವಾಡವನ್ನು ಹೊತ್ತು ಅನಾಚಾರಗಳನ್ನು ಮುಂದುವರೆಸಲು ಮನುವಾದಿಗಳು ಹವಣಿಸುತ್ತಿರುವುದಕ್ಕೆ ಭಾಗವತನ 'ಮಹಿಳೆಯರು ಮನೆಯೊಳಗಿದ್ದರೇನೇ ಚೆಂದ' ಹಾಗು ಮಧ್ಯ ಪ್ರದೇಶದ ಬಿಜೆಪಿ ಸಚಿವನ 'ಲಕ್ಷ್ಮಣ ರೇಖೆ'ಯ ಹೇಳಿಕೆಗಳೇ ಸಾಕ್ಷಿ. ಕರ್ನಾಟಕದಲ್ಲಿ ಸಂಘ ಪರಿವಾರದ ಕೈಗೆ ರಾಜ್ಯದ ಆಡಳಿತ ಪರೋಕ್ಷವಾಗಿ ಬಂದಮೇಲೆ ಮಹಿಳೆಯರ ಮೇಲಿನ ಹಲ್ಲೆ ಅತ್ಯಾಚಾರಗಳು ಹೆಚ್ಚಾಗಿರುವ ಅವರ ಈ ಸಿದ್ಧಾಂತವನ್ನೇ ಎತ್ತಿ ತೋರಿಸುತ್ತಿದೆ. ಇವುಗಳಿಗೆ ಪೂರಕವಾಗಿ ನಮ್ಮ ಕುಲಗೆಟ್ಟ ಪೊಲೀಸ್ ವ್ಯವಸ್ಥೆಯೂ ಸ್ತ್ರೀಯರಿಗೆ ಕರಾಳವಾಗಿ ಪರಿಣಮಿಸಿರುವುದು ಅಲ್ಲಗಳೆಯಲಾಗದ ಸತ್ಯ.

ಇಂಥಾಲದ ಪೊಲೀಸರು ಅತ್ಯಾಚಾರಕ್ಕೊಳಗಾದ ಯುವತಿಯ ಹೇಳಿಕೆಯನ್ನು ದಾಖಲಿಸುವ ನೆಪದಲ್ಲಿ ಐದು

ಪುರೋಹಿತ್, ಸಾಧ್ವಿ ರೀತಾಂಬರ ಓದಿದ ವಿಶ್ವವಿದ್ಯಾಲಯದವರೆಲ್ಲ ಇವರ ಹಾಗೇ ಕೇಸರಿ ಭಯೋತ್ಪಾದಕರಾಗಿದ್ದಾರಾ? ಅಷ್ಟೇ ಯಾಕೆ, ಮೈಸೂರು ವಿಶ್ವವಿದ್ಯಾಲಯದಲ್ಲಿ ಓದಿದವರೆಲ್ಲ ಭೈರಪ್ಪ, ಸದಾನಂದಮೂರ್ತಿ ಆಗಿದ್ದಾರಾ? ಪ್ರಮೋದ್ ಮುತಾಲಿಕ್ ಓದಿದ್ದು ಎಷ್ಟೋ, ಎಲ್ಲೋ ಗೊತ್ತಿಲ್ಲ, ಆ ಶಾಲಾಕಾಲೇಜಿನ ಮಕ್ಕಳೆಲ್ಲ ಇವರ ಹಾಗೇ ಮಾನವ ದ್ವೇಷಿಗಳಾಗಿದ್ದಾರಾ' ಅಂತ ಏನೇನೋ ಹೇಳ್ತಾ ಕುಂತ್ಕಳ್ತವಲ್ರೀ....!

ಎಂಥ ಪದ ಬಳಸ್ತಾರೆ ನೋಡಿ. ಅನಿಷ್ಟ ಹೆಸರಿಗೆ ಪ್ರಾಧಾನ್ಯತೆ ಬೇಡ. ನೀಡಿದರೆ ದೇಶಕ್ಕೇ ಆಪತ್ತು ಅನ್ನುವ ದೇಶಪ್ರೇಮಿಗಳು ಇವರಿಗೆ ಮಾನವ ದ್ವೇಷಿಗಳಂತೆ! 'ಇದು ಯಾಕ್ರೀ ಹೀಗಂತೀರಿ? ಸುಸಂಸ್ಕೃತ ವ್ಯಕ್ತಿಗಳಿಗೆ ಹೀಗೆ ಹೇಳಬಹುದೇನ್ರಿ' ಅಂತ ಏನಾದರೂ ಕೇಳಿದರೆ 'ಇನ್ನೇನು ಮಾನವಪ್ರೇಮಿ ಅನ್ನಬೇಕೇನ್ರಿ? ಬಲಪಂಥೀಯ ರಾಜಕೀಯ ಅಡಗಿದೆ ಕಣ್ರೀ ಇದರಲ್ಲಿ, ಹಿಂದೂ ಮುಸಲ್ಮಾನರ ನಡುವೆ ತಂರುಕು ಉಂಟುಮಾಡಿ ಹಿಂದೂಗಳ ಮತ ದೋಚಿಕೊಳ್ಳಬೇಕು ಎನ್ನುವ ಕೋಮುವಾದಿ ಧೋರಣೆ ಇದಲ್ಲವೇನ್ರಿ?' ಅನ್ನುತ್ತವ್ರೋ ಏನೋ!

ಅಯ್ಯಂಗಾರ್‌ಗೆ ದೀಪಾವಳಿ ಇಲ್ಲ!

ಟಿಪ್ಪು ಸುಲ್ತಾನ್ ಆಡಳಿತ ನಡೆಸುತ್ತಿದ್ದ ಕಾಲ. ಆಗ ಒಂದು ಘಟನೆ ನಡೆಯಿತು.

ರೈತರ ಭೂಮಿಗೆ ನೀರು ಒದಗಿಸಲು ಶ್ರೀರಂಗಪಟ್ಟಣದ ಬಳಿ ಇರುವ ಕರಿಘಟ್ಟದಲ್ಲಿ ನಾಲೆ ತೋಡಿಸುತ್ತಿದ್ದ ಇಬ್ಬರು ಇಂಜಿನಿಯರ್‌ಗಳು ಅದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಅವರಿಬ್ಬರೂ ಮೇಲುಕೋಟೆ ಅಯ್ಯಂಗಾರ್‌ಗಳು.

ಯಧುವಂಶದ ಅರಸರು ಮತ್ತೆ ರಾಜ್ಯವನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ಅದಕ್ಕಾಗಿ ಗೂಢಚಾರರನ್ನು ಬಿಟ್ಟು ಮಾಹಿತಿ ಸಂಗ್ರಹಿಸುತ್ತಿದ್ದರು. ಮಾಹಿತಿದಾರರಲ್ಲಿ ಈ ಇಂಜಿನಿಯರುಗಳೂ ಇದ್ದರು.

ಈ ಸಂಗತಿ ಟಿಪ್ಪುವಿಗೆ ತಿಳಿಯಿತು. ತನ್ನ ಅನ್ನ ಉಣ್ಣುತ್ತಾ ತನಗೇ ದ್ರೋಹ ಬಗೆಯುತ್ತಿರುವ ಅಧಮರ ನಡೆ ಸಿಟ್ಟು ತರಿಸಿತು. ಕೋಪೋದ್ರಿಕ್ತನಾದ ಅವನು ಇಬ್ಬರು ಇಂಜಿನಿಯರುಗಳನ್ನೂ ಎಳೆದು ತರಿಸಿದ. ಆನೆ ಕಾಲಿಗೆ ಅವರನ್ನು ಕಟ್ಟಿ ಬೀದಿಯಲ್ಲಿ ಎಳೆಸಿದ. ಅವರು ಕೊನೆಯುಸಿರೆಳೆಯುವವರೆಗೂ ಅದು ನಿಲ್ಲಲಿಲ್ಲ.


ಅವತ್ತು ದೀಪಾವಳಿ ಹಬ್ಬ!

ಎಂದೇ ಈಗಲೂ ಮೇಲುಕೋಟೆ ಅಯ್ಯಂಗಾರರು ದೀಪಾವಳಿ ಹಬ್ಬ ಆಚರಿಸುವುದಿಲ್ಲ!

ತಲ್ಲಣಗಳ ಸಮೀಕರಿಸಿದ ಸುದರ್ಶನ್

ಖ್ಯಾತ ಛಾಯಾಗ್ರಾಹಕ ಎಸ್.ರಾಮಚಂದ್ರ ಐತಾಳ್ ಅವರು ನಿಧನ ಹೊಂದಿ ಎರಡು ವರ್ಷಗಳಾಗುತ್ತ ಬಂದಿವೆ. ಅವರ ಸಹೋದರಿಯ ಮಗ ಸುದರ್ಶನ್ ಮೊನ್ನೆ ಅವರ ನಿರ್ದೇಶನದ 'ತಲ್ಲಣ' ಎಂಬ ಚಿತ್ರವನ್ನು ಆತ್ಮೀಯರಿಗಾಗಿ ಪ್ರದರ್ಶಿಸಿ ತನ್ನ ಸೋದರ ಮಾವನಿಗೆ ವಿಶೇಷ ರೀತಿಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ವಿಶೇಷವೆಂದರೆ ಈ ಸುದರ್ಶನ್ ಕಳೆದ ಹಲವಾರು ವರ್ಷಗಳಿಂದ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಯಾವುದೋ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೂ ಕೈತುಂಬ ಸಂಬಳ ಸಿಗುವ ಕೆಲಸದಲ್ಲಿದ್ದರೂ



ಅವರಿಗೆ ಚಿತ್ರರಂಗದ ಬಗ್ಗೆ ಇರುವ ವ್ಯಾಮೋಹ. ಅಂತಹ ವ್ಯಾಮೋಹವನ್ನು ಅವರಲ್ಲಿ ಹುಟ್ಟಿಸಿದ್ದು ಅವರ ಸೋದರ ಮಾವ ರಾಮಚಂದ್ರರಂತೆ. ಹೀಗಾಗಿ ಕೆಲವು ವರ್ಷಗಳ ಹಿಂದೆ ತಾಯ್ನಾಡಿಗೆ ಬಂದಾಗ ಸುದರ್ಶನ್ 'ಮುಖಾಮುಖಿ' ಎಂಬ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿ ವಾಪಸ್ ಆಸ್ಟ್ರೇಲಿಯಾಕ್ಕೆ ಮರಳಿದ್ದರು.

ಈ ಬಾರಿ ನೋಡುಗರ ಹೃದಯವನ್ನು ತಲ್ಲಣಿಸುವಂತೆ ಮಾಡುವ 'ತಲ್ಲಣ' ಎಂಬ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿ ಸುದರ್ಶನ್ ಮತ್ತೆ ಆಸ್ಟ್ರೇಲಿಯಾಗೆ ವಾಪಸಾಗಿದ್ದಾರೆ. ಬಹುತೇಕ ರಂಗಭೂಮಿ ಕಲಾವಿದರನ್ನೇ ತಾರಾಗಣದಲ್ಲಿ ಸೇರಿಸಿಕೊಂಡಿರುವ ಸುದರ್ಶನ್ ತನ್ನ ನವಿರಾದ ನಿರೂಪಣೆಯಿಂದ ಎಲ್ಲರ ಮನಸ್ಸು ಗೆಲ್ಲುವ ಚಿತ್ರ ನೀಡಿದ್ದಾರೆ. ಚಿತ್ರದ ಪ್ರಮುಖ ಪಾತ್ರದಲ್ಲಿ ರಂಗಭೂಮಿ ಮತ್ತು ಸಿನಿಮಾ ನಟ ಶ್ರೀಧರ್ ಹಾಗೂ ರಂಗಭೂಮಿ ಕಲಾವಿದೆ ನಿರ್ಮಲಾ ತಮ್ಮ ತಮ್ಮ ಪಾತ್ರಕ್ಕೆ ಜೀವ ತುಂಬಿ ಚಿತ್ರದ ಯಶಸ್ಸಿಗೆ ಕಾರಣರಾಗಿದ್ದಾರೆ.

ಕೆಲ್ಸದಾಕೆ ತನ್ನ ಮಗುವನ್ನು ಕಳೆದುಕೊಂಡಾಗ ಮತ್ತು ಆ ಮಗು ವೇಶ್ಯಾವಾಟಿಕೆಗೆ ಸೇರಿರಬಹುದು ಎಂಬ ಸುದ್ದಿ ತಿಳಿದಾಗ ಆಕೆಗಾಗುವ ತಲ್ಲಣ ಒಂದು ಕಡೆಯಾದರೆ, ಈಗಿನ ಕಾಲದ ಹುಡುಗರು ಸ್ವಹಿತಾಸಕ್ತಿಗಾಗಿ ಬಲವಂತವಾಗಿ ತಮ್ಮ ಹೆಂಡತಿಗೆ ಗರ್ಭಪಾತ ಮಾಡಿಸಿದಾಗ ಆಕೆಯ ತಂದೆತಾಯಿಗಾಗುವ ತಲ್ಲಣ ಇನ್ನೊಂದೆಡೆ... ಇವೆರಡನ್ನೂ ಸಮೀಕರಿಸಿ ನಿರ್ದೇಶಕ ಸುದರ್ಶನ್ ನಿಜಕ್ಕೂ ಮನಮುಟ್ಟುವಂತಹ ಚಿತ್ರವನ್ನು ನಿರೂಪಿಸಿದ್ದಾರೆ.

ಯಾವುದೋ ಓಬಿರಾಯನ ಕಾಲದ ಕಥಾವಸ್ತುವನ್ನು ತೆಗೆದುಕೊಂಡು ನಮ್ಮ ಬುದ್ಧಿಜೀವಿಗಳು ನಿರ್ದೇಶಿಸುವ ಕಲಾತ್ಮಕ ಚಿತ್ರಗಳಿಗಿಂತ ಈ ಸಮಕಾಲೀನ ಕಥಾವಸ್ತುವಿನ ಚಿತ್ರ ಮನಮುಟ್ಟುತ್ತದೆ ಎಂಬುದು ಮಾತ್ರ ನಿಜ.

ರಮ್ಯಾ-ರಾಗಿಣಿ ಶಿವು ಜೊತೆಗೆ ಇಲ್ಲ!



ಡಿ. ರಾಜೇಂದ್ರಬಾಬು ನಿರ್ದೇಶನದ 'ಆರ್ಯನ್' ಎಂಬ ಚಿತ್ರದಲ್ಲಿ ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಲಿದ್ದು, ಅವರ ಜೊತೆಗೆ ಇದೇ ಮೊದಲ ಬಾರಿಗೆ ರಮ್ಯಾ ಮತ್ತು ರಾಗಿಣಿ ಜೊತೆಯಾಗಿ ನಟಿಸಲಿದ್ದಾರೆ ಎಂಬ ಸುದ್ದಿಯೂ ತೇಲಿಬಂದಿತ್ತು.

ಈ ಸುದ್ದಿಯಲ್ಲಿ ಎರಡು ವಿಶೇಷ ಥ್ರಿಲ್‌ಗಳಿದ್ದವು. ಮೊದಲನೆಯದಾಗಿ ರಮ್ಯ ಕಳೆದ 11 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ನಂಬರ್ 1 ನಾಯಕಿಯಾಗಿ ಮೆರೆಯುತ್ತಿದ್ದರೂ ಆಕೆ ಇನ್ನೂ ಶಿವಣ್ಣನ ಜೊತೆ ನಟಿಸಿಲ್ಲ. ಹೀಗಾಗಿ ಶಿವಣ್ಣ-ರಮ್ಯ ಜೋಡಿ ಅವರ ಅಭಿಮಾನಿಗಳ ಪಾಲಿಗೆ ಒಂದು ರೀತಿಯ ಖುಷಿಯನ್ನು ನೀಡಿತ್ತು. ಎರಡನೆಯದಾಗಿ ರಮ್ಯ ಮತ್ತು ರಾಗಿಣಿ ನಡುವೆ ಒಂದು ತರಹದ ಪೈಪೋಟಿ ನಡೆಯುತ್ತಿರುವುದು. ಇವರಿಬ್ಬರ ನಡುವೆ ಯಾವತ್ತೂ ಜಗಳ ನಡೆಯದಿದ್ದರೂ ಇವರಿಬ್ಬರು ಎಂದೂ ಸ್ನೇಹಿತೆಯರಂತೆ ಬಹಿರಂಗವಾಗಿ ಕಾಣಿಸಿಕೊಂಡಿದ್ದು ಇಲ್ಲ. ಹೀಗಾಗಿ ಗಾಂಧಿನಗರದಲ್ಲಿ 'ರಮ್ಯಾ ಮತ್ತು ರಾಗಿಣಿ ನಡುವೆ ಅಷ್ಟೇನೂ ಸಂಬಂಧ ಚೆನ್ನಾಗಿಲ್ಲ' ಎಂಬ ಗುಸುಗುಸು ಸುದ್ದಿ ಆಗಾಗ ಕೇಳಿಬರುತ್ತಲೇ ಇರುತ್ತದೆ. ಅದಕ್ಕೆ ಪೂರಕವಾಗಿ ಇವರಿಬ್ಬರೂ ಪರಸ್ಪರ ಪತ್ರಿಕಾ ಹೇಳಿಕೆಗಳನ್ನೂ ಕೊಡುತ್ತಿರುತ್ತಾರೆ. ಈ ಕಾರಣದಿಂದ ರಮ್ಯ ಮತ್ತು ರಾಗಿಣಿ ಕೂಡ ಒಂದೇ ಚಿತ್ರದಲ್ಲಿ ಒಟ್ಟಿಗೆ ಕಾಣಿಸುತ್ತಿರುವ ಸುದ್ದಿಯೂ ಅವರವರ ಅಭಿಮಾನಿಗಳ ಪಾಲಿಗೆ ಥ್ರಿಲ್ ನೀಡಿತ್ತು. ಈ ಹಿಂದೆ ಕವಿತಾ ಲಂಕೇಶ್ ನಿರ್ದೇಶನದ 'ತನನಂ ತನನಂ' ಎಂಬ ಚಿತ್ರದಲ್ಲಿ ರಕ್ಷಿತಾ ಮತ್ತು ರಮ್ಯ ಒಟ್ಟಿಗೆ ನಟಿಸಿದ್ದು ಆ ಸಂದರ್ಭದಲ್ಲಿ ಭಾರೀ ದೊಡ್ಡ ಸುದ್ದಿಯಾಗಿತ್ತು.

ಆದರೆ ಈಗ ನಿರ್ದೇಶಕ ಡಿ.ರಾಜೇಂದ್ರಬಾಬು ಅವರ ಪ್ರಕಾರ ರಮ್ಯ ಮತ್ತು ರಾಗಿಣಿ ಈ ಚಿತ್ರದಲ್ಲಿ ನಟಿಸುವುದಿಲ್ಲವಂತೆ. "ಈ ಚಿತ್ರ ಒಬ್ಬ ಮಹಿಳಾ ಅಥ್ಲೀಟ್ ಸುತ್ತ ಹೆಣೆದ ಕಥಾವಸ್ತುವನ್ನು ಹೊಂದಿದೆ. ಇವರಿಬ್ಬರಿಗೂ ಅಂತಹ ಮಹಿಳಾ ಅಥ್ಲೀಟ್‌ನ ಮೈಕಟ್ಟು ಇಲ್ಲ. ಈ ಕಾರಣದಿಂದಾಗಿ ಅವರನ್ನು ಚಿತ್ರಕ್ಕೆ ಆಯ್ಕೆ ಮಾಡುವ ಸಾಧ್ಯತೆ ಕಡಿಮೆ. ಈ ಪಾತ್ರದ ವಿಷಯದಲ್ಲಿ ನಾನು ರಾಜಿಯಾಗುವುದೇ ಇಲ್ಲ. ಹೀಗಾಗಿ ಸಹಜವಾಗಿ ಒಬ್ಬ ಅಥ್ಲೀಟ್ ತರಹ ಕಾಣಿಸುವ ಮತ್ತು ಮೈಕಟ್ಟನ್ನು ಹೊಂದಿರುವ ನಾಯಕಿಯ ತಲಾಶ್ ನಡೆಸುತ್ತಿದ್ದೇನೆ" ಎಂದಿದ್ದಾರೆ ನಿರ್ದೇಶಕ ಬಾಬು.

ಅಲ್ಲಿಗೆ ಶಿವಣ್ಣ-ರಮ್ಯ ಹಾಗೆಯೇ ರಮ್ಯ-ರಾಗಿಣಿ ಮುಖಾಮುಖಿಯಾಗುವ ಕ್ಷಣಕ್ಕಾಗಿ ಅವರೆಲ್ಲರ ಅಭಿಮಾನಿಗಳು ಇನ್ನಷ್ಟು ಕಾಲ ಕಾಯಬೇಕಿದೆ.

● ಶೆಣೈ

...ಸಗಳ ಕಾಲ ಜೈಲಿನಲ್ಲಿಟ್ಟಿದ್ದರು. ಪಾಟಿಯಾಲದ ಸಂತ್ರಸ್ತ ಯುವತಿಯೊಬ್ಬಳು ಪೊಲೀಸರ ಕಿರುಕುಳ ತಾಳಲಾರದೇ ಆತ್ಮಹತ್ಯೆಗೆ ಶರಣಾದಳು. ಧರ್ಮಸ್ಥಳದಲ್ಲಿ ಸೌಜನ್ಯಾ ಕೇಸಲ್ಲಿ ಅತ್ಯಾಚಾರವನ್ನು ಮರೆಸಿ ಕೇವಲ ಕೊಲೆಯನ್ನಷ್ಟೇ ಮುಂದಾಲೋಚನೆಯಿಂದ ದಾಖಲಿಸಲಾಯ್ತು. ಬೆಂಗಳೂರಿನಲ್ಲಿ ಅತ್ಯಾಚಾರಕ್ಕೊಳಗಾದ ಕುಟುಂಬಕ್ಕೆ ರಕ್ಷಣೆ ಕೊಡುವ ಬದಲು ...ನೆಯವರನ್ನೇ ಬೆದರಿಸಲಾಯ್ತು... ಇಂತಹ ಸಹಸ್ರಾರು ಹೊಲ ಮೇಯುವ ಬೇಲಿಗಳು ಮತ್ತು ಭಾಗವತ್‌ನಂತಹ ಸುಸಂಸ್ಕೃತರು ತುಂಬಿರುವ ಭವ್ಯ ಭಾರತದಲ್ಲಿ ಹೆಣ್ಣಾಗಿ ಕೇವಲ ಪ್ರದರ್ಶನಕ್ಕಷ್ಟೇ ಸೀಮಿತಗೊಳಿಸಲ್ಪಟ್ಟ ಭಾರತ ಮಾತೆಗೆಲ್ಲಿಯ ...ಕ್ತಿ? ಎಲ್ಲಿಯ ನೆಲೆ? ಆಕೆ ಇಲ್ಲಿಗಿಂತ ಸುರಕ್ಷಿತವಾದ ಯಾವುದೋ ಪರದೇಶಕ್ಕೆ ಪರಾರಿಯಾಗಿ (ಕಮಲ್ ಹಾಸನ್‌ನ 'ಇಂಡಿಯನ್' ಫಿಲಂನ ಹೀರೋ ಕೊನೆಗೆ ಮಾಡಿದಂತೆ) ...ಸ್ಸ್ ಆಗಿರುವ ಸಾಧ್ಯತೆಯೇ ಹೆಚ್ಚು. ಭಾರತ ಮಾತೆ ...ರಳಬೇಕಾದರೆ ಭಾಗವತ್, ಅಸಾರಾಮ್, ಕೈಲಾಸನಂತವರು ...ಲಗಬೇಕು. ಇದು ಸಾಧ್ಯವೇ?

- ಶಶಿ ಪುತ್ತೂರು, ದಕ

ಅಕ್ಬರುದ್ದೀನ್ ಒವೈಸಿಯನ್ನು ಎಲ್ಲರೂ ಖಂಡಿಸಬೇಕು



ಅಕ್ಬರುದ್ದೀನ್ ಒವೈಸಿ ಬಗ್ಗೆ ನಿಮ್ಮ ಪತ್ರಿಕೆಯ ...ಯುವೇನು ಎಂಬುದನ್ನು ಪಾರ್ವತೀಶ ಅವರು ...ಯಾರು ಈ ಒವೈಸಿ, ಜನವರಿ 23, 2013 ಸಂಚಿಕೆ) ಸ್ಪಷ್ಟಪಡಿಸಿದ್ದಾರೆ. ಅಕ್ಬರುದ್ದೀನ್ ಎಲ್ಲಾ ಕೋಮುವಾದಿಗಳಂತೆ ಒಂದು ಸಮುದಾಯದ ವಿರುದ್ಧ ಮುಸ್ಲಿಂರನ್ನು ಛೂಬಿಡಲು ಹವಣಿಸಿರು...ದು ಖಂಡನೀಯವಾಗಿದೆ.

ವಾಸ್ತವವಾಗಿ ಎಲ್ಲ ಹಿಂದೂಗಳೂ ಪ್ರವೀಣ್ ತೊಗಾಡಿಯಾ, ಪ್ರಮೋದ್ ಮುತಾಲಿಕ್, ಬಾಳ್ ...ಕ್ರೆ, ಎಲ್.ಕೆ. ಆಡ್ವಾನಿ, ನರೇಂದ್ರ ಮೋದಿಗಳಂತೆ ...ಸಾವಾದಿ ಗಳಲ್ಲ, ಅಕ್ಬರುದ್ದೀನ್ ತರಹದ ಕೋಮುವಾದಿ ...ಗೆ ಇದು ಹೊಳೆಯದಿರುವುದು ದುರದೃಷ್ಟಕರವಾಗಿದೆ. ...ಸ್ಲಿಮರು ಒಕ್ಕೊರಲಿನಿಂದ ಅಕ್ಬರುದ್ದೀನ್ ಒವೈಸಿಯನ್ನು ...ಡಿಸಬೇಕಿದೆ.

- ಮೊಹಮ್ಮದ್ ಅಶ್ರಫ್, ಗುಲ್ಬರ್ಗ

ಅತ್ಯಾಚಾರಕ್ಕೆ ಶೀಲ ಎಂಬ 'ಟ್ಯಾಗ್' ಯಾಕೆ?

ಈ ವಾರದ ಕಂಡಹಾಗೆ (ಮಗಳು ಬದುಕಬೇಕೆಂಬುದು ನನ್ನ ಆಸೆಯಾಗಿತ್ತು - ಜನವರಿ 23, 2013 ಸಂಚಿಕೆ) ಓದಿದಾಗ ಕಣ್ಣೀರ ಹೊರತು ಇನ್ಯಾವ ಪ್ರತಿಕ್ರಿಯೆಯೂ ವ್ಯಕ್ತವಾಗುವುದು ಸಾಧ್ಯವಿಲ್ಲ. ಕಣ್ಣು ಮಂಜಾಗಿದೆ. ಮನಸ್ಸು ಭಾರವಾಗಿದೆ. ದೆಹಲಿ ಯುವತಿಯ ಸಾವಿಗೆ ಯಾರೆಲ್ಲ ಕಾರಣ ಎನ್ನುವುದು ಆಕಾಶದಷ್ಟೇ ಸ್ಪಷ್ಟವಾಗಿದೆ. ಸಂವೇದನೆ ಇಲ್ಲದ ಸಮಾಜ, ಪುರುಷನ ಅಹಂ, ಸಂಪ್ರದಾಯ, ಪೊಲೀಸರು, ಇತ್ಯಾದಿ, ಇತ್ಯಾದಿ... ಅವರೆಲ್ಲರ ಬಗ್ಗೆ ರೋಷ ಉಕ್ಕುತ್ತೆ. ಆದರೆ ಯುವತಿಯ ನೋವು ಅರ್ಥವಾಗಬೇಕಾದರೆ ಆ ರೋಷವನ್ನು ಬದಿಗೆ ಸರಿಸಿ ಮೌನವಾಗಿ ಕಣ್ಣೀರಿಡಬೇಕು. ಅತ್ಯಾಚಾರಕ್ಕೆ ಒಳಗಾದವರಿಗೆ ಶೀಲದ 'tag' ತೆಗೆಯುವ ತನಕ ಹೆಣ್ಣು ಮಕ್ಕಳಿಗೆ ನೆಮ್ಮದಿ ಇಲ್ಲ.

ಮಕದಮ್ ಮೊಯಿದ್ದೀನ್ ಹೆಲೆನ್ ಎಂಬ ನಟಿ ಹೀರೋಯಿನ್ ಆಗಿದ್ದ 'ಛ ಛ ಛ' ಎಂಬ ಹಳೆಯ ಚಿತ್ರದಲ್ಲಿ ಇಕ್ಬಾಲ್ ಖುರೇಷಿ ಅವರ ಸಂಗೀತವಿದ್ದ 'ಏಕ್ ಚಮೇಲಿ ಕೆ ಮಂಢ್ವೆ ತಲೆ, ದೋಬದನ್ ಪ್ಯಾರ್ ಕೆ ಆಗ್ ಮೇ ಜಲ್ ಗಯಾ' ಎಂಬ ಸುಂದರ ಪ್ರೇಮಗೀತೆಯನ್ನು ಬರೆದಿದ್ದರು. ಜೀವನೋತ್ಸಾಹದ ಈ ಹೋರಾಟಗಾರ್ತಿಯ ಪ್ರೀತಿಯ ಸಂವೇದನೆಯೂ ಅಷ್ಟೇ ಸಲೀಸಾಗಿತ್ತು.

ಫಣಿರಾಜ್ ಅಂದಂತೆ ಬದುಕಲು ದೇಹದ ಆ ದೃಢಮನಸ್ಕ ಮಹಿಳೆಯ ಘನತೆಗೆ ನನ್ನ ಹೃದಯ ತುಂಬಿದ ಸಲಾಮ್.

ಇನ್ನು ಆ ದುರುಳರು ಹಾಳಾಗಲಿ... ಮಹಿಳೆಯ ನೋವು ತಿನ್ನುವ ಸಹನೆಯಲ್ಲಿ ಒಂದು ಅಂಶ ಇದ್ದರೂ ಅವರು ಮನುಷ್ಯರಾಗಿರುತ್ತಿದ್ದರು. ಒಂದು ಪತ್ರಿಕೆ ಹೀಗೇ ಮನಸ್ಸು ಮಿಡಿದರೆ ಸಾಕು. ಅದೆಷ್ಟೋ ಮನಸ್ಸುಗಳು ಒಳ್ಳೆಯದನ್ನೇ ಉಸಿರಾಡುತ್ತವೆ. ಪತ್ರಿಕೆಗೂ ಸಲಾಮ್.

-ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ಮಲ್ಲಿಗೆ ಲೇಖನ ಅರ್ಥಗರ್ಭಿತವಾಗಿತ್ತು

ಅತ್ಯಾಚಾರದ ಘಟನೆಗಳಿಗೆ ಜಾತಿಕಾರಣದ ಪರಿಣಾಮವನ್ನು ಹಾಗು ಮಹಿಳೆ ಸ್ವತಃ ಒಂದು ಸರಕು ಆಗಿರುವ ಬಗ್ಗೆ ಅರ್ಥಗರ್ಭಿತವಾಗಿ ಮಲ್ಲಿಗೆ ಅವರ ಲೇಖನ (ಅತ್ಯಾಚಾರದ ಹಿಂದೆ 'ಅಧಿಕಾರ ಇದೆ, ಇಡೀ ವ್ಯವಸ್ಥೆ ಇದೆ - ಜನವರಿ 23, 2013 ಸಂಚಿಕೆ) ಚಿತ್ರಿಸಿದೆ. ಅತ್ಯಾಚಾರದ ಹಿಂದೆ ಮಹಿಳೆಯ ಉಡುಪು, ನಡತೆಗಿಂತ ಅಧಿಕಾರ ಮತ್ತು ವ್ಯವಸ್ಥೆ ಇರುವುದರಲ್ಲಿ ಎರಡು ಮಾತಿಲ್ಲ. ಹರಿಯಾಣ ರಾಜ್ಯದಲ್ಲಿ 90ರಷ್ಟು ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ.

ಮಹಿಳೆಯರ ರಕ್ಷಣೆ ಬಗ್ಗೆ ಜನಸಮುದಾಯ ಮತ್ತು ಸರ್ಕಾರ ಗಂಭೀರವಾಗಿ ಯೋಚಿಸಬೇಕಿದೆ. ಮಹಿಳೆಯ ಕೌಟುಂಬಿಕ, ಸಾಮಾಜಿಕ, ಸ್ವಾತಂತ್ರ್ಯ ಸ್ಥಿತಿಗತಿಗಳ ಬಗ್ಗೆ ಬರೆದಿರುವ ಮಲ್ಲಿಗೆ ಅವರಿಗೆ ಧನ್ಯವಾದಗಳು.

- ಸರೋವರ ಬೆಂಕಿಕೆರೆ, ಎಸ್‌ಎಂಎಸ್ ಮೂಲಕ

ಅನ್ನಪೂರ್ಣ ಬಗ್ಗೆ ಗೌರಿ ಬರೆದ ಲೇಖನ ಅತ್ಯುತ್ತಮವಾಗಿತ್ತು.

- ಡಾ.ವಿ.ಎಸ್.ಶ್ರೀಧರ, ಎಸ್‌ಎಂಎಸ್ ಮೂಲಕ

ರಾಜಶೇಖರರ ಲೇಖನ ಕಣ್ಣು ತೆರೆಸುವಂತಿತ್ತು

ಪತ್ರಿಕೆಯ ಜನವರಿ 9, 2013 ಸಂಚಿಕೆಯಲ್ಲಿ ಪ್ರಕಟವಾದ ಜಿ.ರಾಜಶೇಖರ ಅವರ 'ಅತ್ಯಾಚಾರವೇ ರಾಜನೀತಿ ಆದಾಗ' ಲೇಖನವು ಅದ್ಭುತವಾಗಿತ್ತು. ಅದರ ಸಾವಿರಾರು ಪ್ರತಿಗಳನ್ನು ಮುದ್ರಿಸಿ ಕರ್ನಾಟಕ ರಾಜ್ಯದಾದ್ಯಂತ ಹಂಚಬೇಕು. ಅದು ಅಷ್ಟು ವಿಚಾರಪೂರ್ಣ ಹಾಗೂ ಸತ್ಯವನ್ನು ಹೊರಹಾಕುವ, ಪೂರ್ವಗ್ರಹಪೀಡಿತರ ಕಣ್ಣು ತೆರೆಯಿಸುವ ಲೇಖನವಾಗಿದೆ. ಲೇಖಕರಿಗೆ ಧನ್ಯವಾದಗಳು.

ಅದೇ ಸಂಚಿಕೆಯಲ್ಲಿ ಪ್ರಕಟಗೊಂಡ ಇಬ್ಬರು ಶ್ರೀಲಂಕಾದ ಕವಿಗಳ ಕವಿತೆಗಳು ಆ ದೇಶದಲ್ಲಿ ಬುದ್ಧನ ಮೇಲೆ ನಡೆಯುತ್ತಿರುವ ಹಿಂಸೆಗೆ ಕನ್ನಡಿಯಾಗಿದೆ.

- ಜೆ.ಎ. ಹಿರೇಮಠ, ವಕೀಲರು, ಹಾವೇರಿ

ರೋಶನಾರ ನೆನಪಿಗೆ ಥ್ಯಾಂಕ್ಸ್

ರೋಶನಾರ ಅನ್ನಪೂರ್ಣ ಅವರ ಮುಗುಚಿದ ಬದುಕಿನ ಕಲಾ ಗುರುತುಗಳು ಪತ್ರಿಕೆಯ ಪುಟಗಳಲ್ಲಿ (ಕಂಡಹಾಗೆ - ಸಂಗೀತಮಯ ಬದುಕಿನಲ್ಲಿ ಅಪಸ್ವರ - ಜನವರಿ 16, 2013 ಸಂಚಿಕೆ) ಮೈದಳೆದು ಮನ ಕಾಡುತ್ತಿವೆ.

- ಸೈಫ್ ಜಾನ್ಸೆ, ಕೊಟ್ಟೂರು



ನನ್ನ ಫೇವರೆಟ್ 'ಕಟ್ಟೆ ಪುರಾಣ

'ಬಯಲು ಸೀಮೆ ಕಟ್ಟೆ ಪುರಾಣ' ನಂ.1 ವಿಡಂಬನಾತ್ಮಕ ಅಂಕಣವಾಗಿದೆ.

ಬಿ.ಚಂದ್ರೇಗೌಡರಿಗೆ ಶುಭಾಶಯಗಳು. ಇಷ್ಟೂ ವರ್ಷಗಳಿಂದ ಪ್ರತಿ ವಾರ ತಪ್ಪದೆ 'ಕಟ್ಟೆ ಪುರಾಣ'ವನ್ನು ಓದುತ್ತಿದ್ದೇನೆ. ನಾನು ಚಂದ್ರೇಗೌಡರ ದೊಡ್ಡ ಅಭಿಮಾನಿ.

ಕಾಳಮಾವ, ಸೀರ, ಉಗ್ರಿ, ಜುಮ್ಮಿ, ವಾಟೆಸ್ಸೆ ನಮ್ಮವರೇ ಆಗಿದ್ದಾರೆ. ನಾವು ಉಗಿಯಬೇಕು ಎಂದು ಮನಸ್ಸಿನಲ್ಲಿ ಅಂದುಕೊಳ್ಳುವವರನ್ನು ಮೇಲಿನವರ ಮುಖಾಂತರ ಚಂದ್ರೇಗೌಡರು ಉಗಿಸುತ್ತಿದ್ದಾರೆ. ಅವರ ಭಾಷೆಯೇ ಒಂದು ಚೆನ್ನ.

ನಮ್ಮ ದಾವಣಗೆರೆಯವರೊಬ್ಬರು 'ಕಟ್ಟೆ ಪುರಾಣ'ವನ್ನು ನಕಲಿ ಮಾಡುತ್ತಿದ್ದಾರೆ. ಅದನ್ನು ಓದಿದಾಗ ಅಯ್ಯೋ ಎನಿಸುತ್ತದೆ.

- ಗುರು ಜಗಳೂರು, ಹರಿಹರ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 30-01-2013 RNI No. KARKAN2005/14648

ಚಂದ್ರುಗೆ ಇಷ್ಟವಾಗದ ಮೇಘನಾಳ ರಂಪಾಟ!





'ಚಾರ್‌ಮಿನಾರ್' ಚಿತ್ರದ ನಾಯಕಿ ಮೇಘನಾ ಈಗ ಸುದ್ದಿಯ ಕೇಂದ್ರಬಿಂದುವಾಗಿದ್ದಾರೆ.

ವಿಷಯವಿಷ್ಟು: ಆರ್.ಚಂದ್ರು ನಿರ್ದೇಶನದ 'ಚಾರ್‌ಮಿನಾರ್' ಚಿತ್ರದಲ್ಲಿ ಈಕೆ 'ನೆನಪಿರಲಿ' ಖ್ಯಾತಿಯ ಪ್ರೇಮ್ ಜೊತೆ ನಾಯಕಿಯಾಗಿ ನಟಿಸಿದ್ದಾರೆ. ಮೊನ್ನೆ ಆ ಚಿತ್ರದ ತನ್ನ ಪಾತ್ರಕ್ಕೆ ಆಕೆ ಕಂಠದಾನ ಮಾಡಿದನಂತರ ಅದು ನಿರ್ದೇಶಕ ಚಂದ್ರುಗೆ ಇಷ್ಟವಾಗಿಲ್ಲದ ಕಾರಣ ಅವರು ಕಂಠದಾನ ಕಲಾವಿದೆ ದೀಪು ಕೈಯಲ್ಲಿ ಪುನಃ ಮಾಡಿಸಿದರಂತೆ. ಇಷ್ಟಕ್ಕೆ ಮೇಘನಾ ಕೋಪಗೊಂಡು ತನ್ನ ಫೇಸ್‌ಬುಕ್‌ನಲ್ಲಿ ರಂಪ ಎಬ್ಬಿಸಿದ್ದಾಳೆ. ನಿರ್ದೇಶಕ ಚಂದ್ರು ಅವರು ತನ್ನಿಂದ ಕಂಠದಾನ ಮಾಡಿಸಿದ ನಂತರವೂ ಬೇರೆಯವರಿಂದ ಕಂಠದಾನ ಮಾಡಿಸಿದ್ದಾರೆ, ಆ ಮೂಲಕ ಅವರು ನನಗೆ ಅವಮಾನ ಮಾಡಿದ್ದಾರೆ, ಇದು ಪ್ರೊಫೆಷನಲ್ ಎಥಿಕ್ಸ್ ಅಲ್ಲ ಎಂಬಿತ್ಯಾದಿ ಯಾಗಿ ಬರೆದಿದ್ದಾಳೆ. ಆ ಕೂಡಲೇ ಆಕೆಯ ಗೆಳೆಯ-ಗೆಳತಿಯರು ನಿರ್ದೇಶಕ ಚಂದ್ರು ಮಾಡಿದ್ದು ಸರಿಯಲ್ಲ ಎಂದು ಯದ್ವಾತದ್ವಾ ಬೈದು ತಮ್ಮ ಬಾಲಿಷಬುದ್ಧಿಯನ್ನು ತೋರಿಸಿಕೊಂಡಿದ್ದಾರೆ.

ಮೇಘನಾಳ ಈ ರಂಪಾಟ ಗೊತ್ತಾದನಂತರ ನಿರ್ದೇಶಕ ಚಂದ್ರು "ಈ ಹುಡುಗಿಯನ್ನು ನಾಯಕಿಯಾಗಿ ನಾನು ಆರಿಸಿಕೊಂಡು ತಪ್ಪು ಮಾಡಿದ್ದೇನೆ. ನಾನು ಈಕೆಯನ್ನು ಹಾಕಬಾರದಿತ್ತು" ಎಂದು ತಮ್ಮ ಆತ್ಮೀಯರ ಮುಂದೆ ಹೇಳಿದ್ದಾರೆ. ಅಷ್ಟೇ ಅಲ್ಲ "ಈ ಚಿತ್ರದ ಬಿಡುಗಡೆ ಸಂದರ್ಭದಲ್ಲಿ ಈಕೆಯನ್ನು ನಾನು ಪ್ರಚಾರಕ್ಕೆ ಬಳಸಿಕೊಳ್ಳುವುದಿಲ್ಲ, ಆಕೆಯ ಮುಖವನ್ನು ನೋಡಲೂ ನಾನು ಇಷ್ಟಪಡುವುದಿಲ್ಲ" ಎಂದು ಆರ್ಭಟಿಸಿದ್ದಾರೆ.



ಇತ್ತೀಚೆಗೆ ಕನ್ನಡದ ನಾಯಕಿಯರು ಈ ರೀತಿ ಸಾಮಾಜಿಕ ಸಂಪರ್ಕ ತಾಣಗಳಲ್ಲಿ ತಮಗೆ ಇಷ್ಟಬಂದಂತೆ ಬರೆಯುತ್ತ ವಿವಾದವನ್ನು ಮೈಮೇಲೆ ಎಳೆದುಕೊಳ್ಳುವುದು ಮಾಮೂಲಿಯಾಗಿದೆ. ಇನ್ನೂ ನೆಟ್ಟಗೆ ಒಂದು ಚಿತ್ರದಲ್ಲೂ ನಾಯಕಿಯಾಗಿ ಕಾಣಿಸಿಕೊಳ್ಳದಿರುವ ಮೇಘನಾ ನಿರ್ದೇಶಕ ಚಂದ್ರು ಬಗ್ಗೆ ಈ ರೀತಿ ಬಹಿರಂಗವಾಗಿ ಅಪಸ್ವರ ಎತ್ತಿರುವುದು ಖಂಡಿತವಾಗಿಯೂ ಸರಿಯಾದ ಕ್ರಮವಲ್ಲ, ಏಕೆಂದರೆ ಒಬ್ಬ ನಿರ್ದೇಶಕನಿಗೆ ತನ್ನ ಕಲ್ಪನೆಯ ಪಾತ್ರಕ್ಕೆ ಸರಿಹೊಂದುವಂತಹ ಕಂಠವನ್ನು ಬಳಸಿಕೊಳ್ಳುವಂತಹ ಹಕ್ಕು ಇದ್ದೇ ಇರುತ್ತದೆ ಎಂಬ ಕನಿಷ್ಠ ಪರಿಜ್ಞಾನವೂ ಮೇಘನಾಳಿಗೆ ಇಲ್ಲ. ಸಾಮಾನ್ಯವಾಗಿ ಒಬ್ಬ ಜನಪ್ರಿಯ ನಾಯಕ ಅಥವಾ ನಾಯಕಿಯ ಕಂಠವನ್ನು ಬದಲಾಯಿಸಬೇಕಾದರೆ ನಿರ್ದೇಶಕರು ಖಂಡಿತವಾಗಿಯೂ ಅಂತಹ ಕಲಾವಿದರ ಅನುಮತಿ ಪಡೆಯಬೇಕಾಗುತ್ತದೆ. ಆದರೆ ಮೊದಲ ಬಾರಿಗೆ ನಾಯಕಿಯಾಗುತ್ತಿರುವ ಮೇಘನಾ ಸ್ವಲ್ಪ ತಾಳ್ಮೆಯಿಂದ ವರ್ತಿಸಿದ್ದರೆ ಆಕೆಗೇ ಒಳ್ಳೆಯದಾಗುತ್ತಿತ್ತು. ಬಹುಶಃ ಇಂತಹ ಸಣ್ಣಪುಟ್ಟ ಕಿರಿಕ್‌ಗಳಿಗಾಗಿಯೇ ನಮ್ಮ ನಿರ್ದೇಶಕರು ಕನ್ನಡದ ನಟಿಯರನ್ನು ದೂರವಿಡುತ್ತಿದ್ದಾರೋ ಎಂಬ ಗುಮಾನಿಯೂ ಹುಟ್ಟುತ್ತದೆ.



ಕಿಚ್ಚನ ದಶಾವತಾರ



ಈಗಾಗಲೇ ಕನ್ನಡ ಚಿತ್ರರಂಗದಲ್ಲಿ ನಾಯಕ ನಟನಾಗಿ ದೊಡ್ಡ ಹೆಸರು ಮಾಡಿರುವ ಸುದೀಪ್ ತೆಲುಗಿನ 'ಈಗ' ಚಿತ್ರದ ಮುಖಾಂತರ ಖಳನಾಯಕನಾಗಿ ದೇಶಾದ್ಯಂತ ಮನ್ನಣೆ ಪಡೆದದ್ದು ಎಲ್ಲರಿಗೂ ಗೊತ್ತಿದೆ. ಸುದೀಪ್ ತನ್ನ ಕ್ರಿಕೆಟ್ ಆಟದ ಮುಖಾಂತರವೂ ಚಿತ್ರರಸಿಕರ ಮತ್ತು ಕ್ರಿಕೆಟ್ ಅಭಿಮಾನಿಗಳ ಹೃದಯವನ್ನು ಏಕಕಾಲದಲ್ಲಿ ಗೆದ್ದಿರುವ ಕಲಾವಿದ. ಈಗ ಇದೇ ಸುದೀಪ್‌ರನ್ನು ಮಾಡೆಲಿಂಗ್ ಮತ್ತು ಜಾಹೀರಾತು ಕ್ಷೇತ್ರಗಳು ಕೈಬೀಸಿ ಕರೆಯುತ್ತಿವೆ.


ಸುದೀಪ್ ಈಗಾಗಲೇ ಕೆಲವು ಪ್ರಮುಖ ಕಂಪನಿಗಳ ರೂಪದರ್ಶಿಯಾಗಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಎಲ್ಲಾ ದಿನಪತ್ರಿಕೆಗಳು ಒಂದು ಒಡವೆ ಕಂಪನಿಯ ಜಾಹೀರಾತಿನಲ್ಲಿ ಸುದೀಪ್ ಇರುವ ಮುಖಪುಟವನ್ನು ಹೊದ್ದುಕೊಂಡೇ ಮನೆಮನೆಗಳಿಗೆ ಬಂದಿದ್ದವು. ಇದೇ ಹೊತ್ತಿನಲ್ಲಿ ಸುದೀಪ್ ದೊಡ್ಡ ಪ್ರಮಾಣದಲ್ಲಿ ಕಿರುತೆರೆಗೂ ಪಾದಾರ್ಪಣೆ ಮಾಡುವ ಸುದ್ದಿ ಕೇಳಿಬರುತ್ತಿದೆ.

ಈ ಟಿವಿ ಚಾನೆಲ್‌ನವರು ಇನ್ನೆರಡು ತಿಂಗಳಲ್ಲೇ ಆರಂಭಿಸಲಿರುವ ಬಿಗ್ ಬಾಸ್ ಕಾರ್ಯಕ್ರಮವನ್ನು ನಾಯಕ ಸುದೀಪ್ ನಿರೂಪಿಸಲಿದ್ದಾರೆ ಎಂಬ ಸುದ್ದಿ ಗಾಂಧಿನಗರದಲ್ಲಿ ದಟ್ಟವಾಗಿ ಹಬ್ಬಿದೆ. ಈ ಕಾರ್ಯಕ್ರಮವನ್ನು ಮುಂಬೈನ ಒಂದು ದೊಡ್ಡ ಮನೆಯಲ್ಲಿ ಚಿತ್ರೀಕರಿಸಲಾಗುತ್ತದೆಯಂತೆ. ಆ ಕಾರ್ಯಕ್ರಮದ ನಿರೂಪಕರಾಗಿ ಪ್ರತಿ ವಾರವೂ ಸುದೀಪ್ ಬೆಂಗಳೂರಿನಿಂದ ಮುಂಬೈಗೆ ಹಾರಿಹೋಗಲು ಒಪ್ಪಿಕೊಂಡಿದ್ದಾರಂತೆ. ಅದಕ್ಕೊಂದು ಸುದೀಪ್ ಅತ್ಯಂತ ದುಬಾರಿ ಸಂಭಾವನೆಯನ್ನೂ ಕೊಡಲು ಆ ಚಾನೆಲ್‌ನವರು ಒಪ್ಪಿದ್ದಾರಂತೆ. ಮಾತ್ರವಲ್ಲ, ವಾರಕ್ಕೊಮ್ಮೆ ಸುದೀಪ್ ಎಕ್ಸಿಕ್ಯೂಟಿವ್ ಕ್ಲಾಸ್‌ನಲ್ಲಿ ಮುಂಬೈಗೆ ಹೋಗಿ, ಪಂಚತಾರಾ ಹೋಟೇಲ್‌ನಲ್ಲಿ ತಂಗಿ ಮತ್ತೆ ವಾಪಸ್ ಬರುವ ಖರ್ಚುವೆಚ್ಚವನ್ನೆಲ್ಲ ಚಾನೆಲ್‌ನವರೇ ಭರಿಸುತ್ತಾರಂತೆ. ಇದೆಲ್ಲದರ ಅರ್ಥ ಸುದೀಪ್‌ಗೆ ಕಿರುತೆರೆಯಲ್ಲೂ ದೊಡ್ಡ ಬೇಡಿಕೆಯಿದೆ.

ಹೀಗೆ ನಾಯಕ, ಖಳನಾಯಕ, ಕ್ರಿಕೆಟ್ ಆಟಗಾರ ಮತ್ತು ಟಿವಿ ನಿರೂಪಕನ ಅವತಾರಗಳಲ್ಲಿ ಸುದೀಪ್ ಕಾಣಿಸಿಕೊಳ್ಳುತ್ತಿರುವುದು ಅಚ್ಚರಿ ಮೂಡಿಸುವಂತಿದೆ...

ಲಕ್ಕಿ ಹಿಂದೆ ವರದನಾಯಕ

ಹೊಸ ವರ್ಷದ ಆರಂಭದಲ್ಲಿ ನಡೆಯಬಹುದಾಗಿದ್ದ ಒಂದು ಮಿನಿ ತಾರಾಸಮರ ಎಲ್ಲರ ನಿರೀಕ್ಷೆಯನ್ನು ಮೀರಿ ತಲೆಕೆಳಗಾಗಿದೆ. ಎಲ್ಲವೂ ನಿರೀಕ್ಷಿಸಿದ್ದಂತೆ ಆಗಿದ್ದರೆ ಹೊಸ ವರ್ಷದ ಮೊದಲ ವಾರದಲ್ಲಿ ಶಿವರಾಜ್‌ಕುಮಾರ್ ನಟಿಸಿರುವ 'ಲಕ್ಕಿ' ಮತ್ತು ಸುದೀಪ್ ನಟನೆಯ 'ವರದನಾಯಕ' ಚಿತ್ರಗಳು ಒಂದೇ ದಿನ ಬಿಡುಗಡೆಯಾಗಬೇಕಿತ್ತು. ಆದರೆ ಮೊದಲವಾರ ಈ ಚಿತ್ರಗಳು ಬಿಡುಗಡೆಯಾಗಲಿಲ್ಲ. ಆಗ ಎರಡನೇ ವಾರದಲ್ಲಿ ಈ ಚಿತ್ರಗಳು ಮುಖಾಮುಖಿ ಆಗುವುದು ಎಂಬ ಮಾತು ಕೇಳಿಬಂದಿತ್ತು. ಆದರೆ ಎರಡನೇ ವಾರವೂ ಗಾಂಧಿನಗರದ ಜನ ನಿರೀಕ್ಷಿಸಿದ್ದ ಈ ಮಿನಿ ತಾರಾಸಮರ ಸಂಭವಿಸಲಿಲ್ಲ. ಕೊನೆಗೆ ಜನವರಿ 18 ರಂದು ಅಂದರೆ 3ನೇ ಶುಕ್ರವಾರ ಇವೆರಡೂ ಚಿತ್ರಗಳು ಒಟ್ಟಿಗೆ ಬಿಡುಗಡೆ ಯಾಗುತ್ತವೆ ಎಂದು ಕೆಲವರು ಲೆಕ್ಕಹಾಕಿದ್ದರು.



ಈ ಮಧ್ಯೆ 'ವಿಚಿತ್ರ ಆದರೂ ಸತ್ಯ' ಎಂಬಂತಹ ಒಂದು ಘಟನೆ ಸಂಭವಿಸಿತು. ಅದೇನೆಂದರೆ 'ಲಕ್ಕಿ' ಮತ್ತು 'ವರದ ನಾಯಕ' ಚಿತ್ರದ ನಿರ್ಮಾಪಕರು ಯಾವುದೇ ಮಧ್ಯವರ್ತಿಗಳ ಸಹಾಯ ವಿಲ್ಲದೆ ಒಬ್ಬರೇ ಕುಳಿತು ಈ ವಿಷಯದ ಬಗ್ಗೆ ಗಂಭೀರವಾಗಿ ಚರ್ಚಿಸಿ ಎಲ್ಲವನ್ನೂ ಬಗೆಹರಿಸಿರುವುದು. ಇವರಿಬ್ಬರು ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಜನವರಿ 18ರಂದು 'ಲಕ್ಕಿ' ಚಿತ್ರ ಬಿಡುಗಡೆಯಾಗುತ್ತದೆ. ಅದಾದ ಒಂದು ವಾರದ ನಂತರ ಸುದೀಪ್, ಚಿರಂಜೀವಿ ಸರ್ಜ ನಟಿಸಿರುವ 'ವರದನಾಯಕ' ಚಿತ್ರ ಬಿಡುಗಡೆಯಾಗಲಿದೆ. ಅಂದಹಾಗೆ, ಇವೆರಡು ಚಿತ್ರಗಳ ನಿರ್ಮಾಪಕರು ಕುಳಿತು ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತೆ ಐಡಿಯಾ ನೀಡಿದ್ದೇ ಶಿವರಾಜ್‌ಕುಮಾರ್ ಮತ್ತು ಸುದೀಪ್. ಇವರಿಬ್ಬರ ಆದೇಶದಂತೆಯೇ ನಿರ್ಮಾಪಕರು ಪರಸ್ಪರ ಚರ್ಚಿಸಿ ಒಂದು ತೀರ್ಮಾನ ಕೈಗೊಂಡಿರುವುದು ಎಲ್ಲರಿಗೂ ಸಂತೋಷ ಮತ್ತು ನೆಮ್ಮದಿಯನ್ನು ನೀಡಿದೆ. ಅಷ್ಟೇ ಅಲ್ಲ, ಇತ್ತೀಚೆಗೆ ಶಿವರಾಜ್‌ಕುಮಾರ್ ಮತ್ತು ಸುದೀಪ್ ನಡುವೆ ಉಂಟಾಗಿದ್ದ ಮನಸ್ತಾಪ ಈಗ ನಿಧಾನವಾಗಿ ಕರಗಲಾರಂಭಿಸುತ್ತಿದೆ ಎಂಬುದನ್ನೂ ಈ ಪ್ರಕರಣ ಸಾಬೀತುಪಡಿಸುತ್ತಿರುವುದು ಮತ್ತೊಂದು ಸಂತೋಷದ ವಿಷಯ.


ಸಿನಿಮಾರಂಗದ ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶಕ್ಕೆಂದೇ ಇರುವ ಛೇಂಬರ್ ಮತ್ತು ನಿರ್ಮಾಪಕರ ಸಂಘ 'ಲಕ್ಕಿ' ಮತ್ತು 'ವರದನಾಯಕ' ಚಿತ್ರಗಳ ನಡುವಿನ ಸಮಸ್ಯೆಗೆ ಆ ಸಿನಿಮಾಗಳ ನಿರ್ಮಾಪಕರೇ ಪರಿಹಾರವನ್ನು ಕಂಡುಕೊಂಡಿರುವುದನ್ನು ನೋಡಿ ಆಶ್ಚರ್ಯಚಕಿತವಾಗಿವೆ. ಇಂತಹ ಒಂದು ಆರೋಗ್ಯಪೂರ್ಣ ವಾತಾವರಣ ಕನ್ನಡ ಚಿತ್ರರಂಗಕ್ಕೆ ತೀರಾ ಅಗತ್ಯ ಎಂಬುದನ್ನು ಇವೆರಡು ಚಿತ್ರಗಳ ನಿರ್ಮಾಪಕರು ಮತ್ತು ನಾಯಕ ನಟರು ಅರ್ಥಮಾಡಿಕೊಂಡು ಕಾರ್ಯವೆಸಗಿರುವುದು ಮೆಚ್ಚಬೇಕಾದದ್ದು.

● ಶೆಣೈ

ಕ್ರೇಜಿಸ್ಟಾರ್‌ನ ಕ್ರೇಜಿ ಕೆಲಸಗಳು

ಇದು ಕ್ರೇಜಿಸ್ಟಾರ್ ರವಿಚಂದ್ರನ್ ಅವರ ಕ್ರೇಜೋ? ಸಿನಿಮಾ ಬಗೆಗಿನ ಅದಮ್ಯ ಪ್ರೀತಿಯೋ? ಅಥವಾ ಅವರಿಗೆ ತಮ್ಮ ಮಗ ಮನೋರಂಜನ್ ಬಗ್ಗೆ ಇರುವ ಪುತ್ರವ್ಯಾಮೋಹವೋ ಗೊತ್ತಿಲ್ಲ. ಅದನ್ನು ನೀವೇ ನಿರ್ಧರಿಸಿ. ರವಿಚಂದ್ರನ್ ಮೊನ್ನೆ ಡಿಸೆಂಬರ್ 31 ರಂದು ಸಿನಿಮಾರಂಗದ ಇತರೆ ನಾಯಕ-ನಾಯಕಿಯರಿಗಿಂತ ವಿಭಿನ್ನವಾಗಿ ಹೊಸ ವರ್ಷದ ಆಗಮನವನ್ನು ಆಚರಿಸಿದರಂತೆ. ಹೇಗೂ ಅವರು 'ಗುಂಡು ಪ್ರಿಯ' ಅಲ್ಲದ ಕಾರಣ ಯಾರೂ ಅವರನ್ನು ತಮ್ಮ ನ್ಯೂ ಇಯರ್ ಪಾರ್ಟಿಗೆ ಕರೆದಿರಲಿಲ್ಲ. ಅದರ ಬಗ್ಗೆ ತಲೆಕೊಡಿಸಿಕೊಳ್ಳದ ರವಿಚಂದ್ರ ಅವತ್ತು ಸಂಜೆ ತಮ್ಮ ಮನೆಯಲ್ಲಿ ಒಂದು ಹಾಡನ್ನು ಸಂಯೋಜಿಸುತ್ತಾ ಕುಳಿತಿದ್ದರಂತೆ. ಅದರ ಬೆನ್ನಿಗೇ ಅದರ ಸಾಹಿತ್ಯವನ್ನೂ ರಚಿಸಿದರಂತೆ. ಆ ಈ ಹಾಡಿನ ರಾಗ ಮತ್ತು ಸಾಹಿತ್ಯ ಅವರಿಗೆ ಎಷ್ಟು ಇಷ್ಟವಾಯಿತೆಂದರೆ ಕೂಡಲೆ ಹಿನ್ನೆಲೆ ಗಾಯಕಿಯರನ್ನು ಕರೆಸಿ ಆ ಹಾಡಿನ ರೆಕಾರ್ಡಿಂಗ್‌ಅನ್ನು ಮಾಡಿ ಮುಗಿಸಿದರಂತೆ. ಇಷ್ಟೆಲ್ಲ ಮಾಡಿಮುಗಿಸುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆ ಐವತ್ತೈದು ನಿಮಿಷ ಆಗುತ್ತದೆ. ಅಂದರೆ ಹೊಸ ವರ್ಷವನ್ನು ಸ್ವಾಗತಿಸಲು ಕೇವಲ ಐದು ನಿಮಿಷ ಬಾಕಿ ಇತ್ತು.

ಆ ಕೂಡಲೇ ಮನೆಯಲ್ಲಿ ತನ್ನ ಕೊಠಡಿಯಲ್ಲಿ ಮಲಗಿದ್ದ ಮಗ ಮನೋರಂಜನ್‌ನನ್ನು ಎದ್ದೇಳಿಸಿ ತಮ್ಮ ಮನೆಯ ಮೇಲುಗಡೆ ಇರುವ ಸ್ಟುಡಿಯೋಗೆ ಅವನನ್ನು ಕರೆದುಕೊಂಡು ಹೋಗಿ ಸರಿಯಾಗಿ 12 ಗಂಟೆಗೆ ಆ ಹಾಡನ್ನು ಮಗನ ಕೈಗಿತ್ತು ಅದನ್ನು ಪ್ಲೇ ಮಾಡಿಸಿದರಂತೆ. ಈ ವರ್ಷ ತಾನು ನಾಯಕನಾಗಿ ನಟಿಸಲಿರುವ ಚಿತ್ರದ ಹಾಡು ಇದು ಎಂದು ಮನೋರಂಜನ್‌ಗೆ ಅಪ್ಪ ರವಿಚಂದ್ರನ್ ಹೇಳಿದನಂತರವೇ ಗೊತ್ತಾಗಿದ್ದಂತೆ. ಇದು ತಮ್ಮ ಮಗನಿಗೆ ರವಿಚಂದ್ರನ್ ಹೊಸ ವರ್ಷದ ದಿನದಂದು ನೀಡಿದ ವಿಶೇಷವಾದ ಉಡುಗೊರೆ. ಈ ಹಾಡನ್ನು ಸ್ವೀಕರಿಸಿದ ಮನೋರಂಜನ್ ತನ್ನ ಕೊಠಡಿಗೆ ವಾಪಸ್ ಹೋಗಿ ಅದನ್ನು ಬೆಳಗಿನಜಾವದ ತನಕ ಕೇಳುತ್ತಾ ಕುಳಿತುಕೊಂಡನಂತೆ. ಈಗ ನೀವೇ ಹೇಳಿ, ರವಿಚಂದ್ರನ್‌ರ ಇಂತಹ ಕೆಲಸಗಳು ನಿಜಕ್ಕೂ ಕ್ರೇಜಿಯಲ್ಲವೇ? ಈ ಬಗ್ಗೆ ಅವರನ್ನು ಪ್ರಶ್ನಿಸಿದರೆ ಅವರು ಹೇಳಿದ್ದು "ನಾನು ಇದನ್ನು ಉದ್ದೇಶಪೂರ್ವಕವಾಗಿ ಅಥವಾ ಪ್ಲ್ಯಾನ್ ಪ್ರಕಾರವಾಗಿ ಮಾಡಿದ್ದೇ ಅಲ್ಲ, ರಾಗಸಂಯೋಜನೆ ಚೆನ್ನಾಗಿ ಮೂಡಿಬಂತು. ಅದರ ಬೆನ್ನಲ್ಲೇ ಸಾಹಿತ್ಯವೂ ಕೂಡಿಬಂತು. ಅದಾದನಂತರವೇ ಇದನ್ನು ನನ್ನ ಮಗನಿಗೆ ಹೊಸ ವರ್ಷದ ಉಡುಗೊರೆಯಾಗಿ ಕೊಡಬೇಕೆಂಬ ಐಡಿಯಾ ಹೊಳೆಯಿತು" ಎಂದು ಪ್ರಾಮಾಣಿಕವಾಗಿ ಹೇಳುತ್ತಾರೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com